ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಬೆಂಗಳೂರು

ಭಾನುವಾರ, 17 ಮೇ 2026

ಸಂಪುಟ 33, ಸಂಚಿಕೆ 196, ಪುಟಗಳು 12+4

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

RNI: 58231/94

REG No.KA/BG GPO/2532/2021-23

hosadigantha.com

epaper.hosadigantha.com

Hosadigantha Digital



ಶಾಲೆಗಳಲ್ಲಿ ಪ್ರತಿದಿನ ನಾಡಗೀತೆ ಕಡ್ಡಾಯ: ಸರ್ಕಾರ ಆದೇಶ

02

ಬೆಳ್ಳಿಗೆ ಕೇಂದ್ರದ ನಿರ್ಬಂಧ: ಆಮದು ಮೇಲೆ ಮಿತಿ



03

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಕೃತ್ತಿಕೆ

ದಿನದ ಮಾತು

ಕುಲೀನನಿಗೂ, ಅಕುಲೀನನಿಗೂ, ಅಂತ್ಯಜನಿಗೂ ಒಳ್ಳೆಯ ನಡವಳಿಕೆಯಿಂದಲ್ಲದೆ ನಿಶ್ಚಲವಾದ ಸೌಖ್ಯ ಸಾಧ್ಯವಿಲ್ಲ.

▲ ಸಮಯ ಪರೀಕ್ಷೆ

ನೆನೆದವರ ಮನದಲ್ಲಿ...

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ಸಿಬಿಎಸ್‌ಇ: 9ನೇ ತರಗತಿಗೆ ತ್ರಿಭಾಷೆ ಕಡ್ಡಾಯ

▸ ಪುಟ ೫

ಐಸಿಸ್ ಕಮಾಂಡರ್ ಹತ್ಯೆ

▸ ಪುಟ ೫

ಟ್ರಂಪ್: ಚೀನಾ ನೆನಪಿನ ಬುತ್ತಿ ಕಸದ ಬುಟ್ಟಿಗೆ!

▸ ಪುಟ ೫

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ: ಉಪನ್ಯಾಸಕಿ ಬಂಧನ

▸ ಪುಟ ೫

ಮಧ್ಯಸ್ಥಿಕೆ ತೀರ್ಪಿಗೆ ಯಾವುದೇ ಮನ್ನಣೆ ಇಲ್ಲ

▸ ಪುಟ ೫

ಟಿಎಂಸಿ ಸಂಸದ ಅಭಿಷೇಕ್ ವಿರುದ್ಧ ಎಫ್‌ಐಆರ್

▸ ಪುಟ ೫

ಭೋಜಶಾಲಾದಲ್ಲಿ ಭಕ್ತರಿಂದ ಪೂಜೆ

▸ ಪುಟ ೫

ಇಸ್ರೇಲ್ ದಾಳಿ: ಹಮಾಸ್ ವಿಂಗ್ ಕಮಾಂಡರ್ ವಧೆ

▸ ಪುಟ ೫

ಹಿಜ್ಬುಲ್ ಶಂಕಿತನ ಆಸ್ತಿ ವಶಪಡಿಸಿದ ಪೊಲೀಸ್

▸ ಪುಟ ೫



ಇದು ಭೋಜಶಾಲಾ ದೇಗುಲ: ಹೈ ಐತಿಹಾಸಿಕ ತೀರ್ಪು

• ಪುಟ ೫

ಸುದ್ದಿ ಸಮಗ್ರ

ತ್ವರಿತಗತಿ, ಶ್ರೇಷ್ಠತೆಯ ಪರಿವರ್ತನೆ ನಮ್ಮ ಗುರಿ | ಸಂಪನ್ನ ಭಾರತದ ಯಾನದಲ್ಲಿ ಪಾಲ್ಗೊಳ್ಳಿ: ಭಾರತೀಯ ಸಮುದಾಯಕ್ಕೆ ಮೋದಿ ಕರೆ

ಅಸೀಮ ಕನಸಿನ ಭಾರತ



ಜಗತ್ತಿನ ಬೆಳವಣಿಗೆಯ ಇಂಜಿನ್ ಆಗುವ ಆಶಯ

ಭಾರತದ ಯುವಶಕ್ತಿಯಿಂದು ಬಾನಂಗಳ ಸ್ಪರ್ಶಿಸಲು ತವಕಿಸುತ್ತಿದೆ. ಮುಖ್ಯವಾಗಿ ಭಾರತದ ಸ್ಟಾರ್ಟ್‌ಅಪ್ ವ್ಯವಸ್ಥೆ ಅತ್ಯಂತ ಬಲಿಷ್ಠವಾಗುತ್ತಿರೋದು ಯುವಶಕ್ತಿಯ ಉನ್ನತ ಆಕಾಂಕ್ಷೆಗಳ ಹಿಂದಿನ ಪ್ರೇರಣೆಯಾಗಿದೆ. ನಾವಿಂದು ಜಗತ್ತಿನಲ್ಲೇ ತೃತೀಯ ಬೃಹತ್ ಸ್ಟಾರ್ಟ್‌ಅಪ್ ವ್ಯವಸ್ಥೆ ಹೊಂದಿದ ರಾಷ್ಟ್ರವಾಗಿದ್ದೇವೆ. ಭಾರತದ ಆಕಾಂಕ್ಷೆಗಳಿಂದು ಕೇವಲ ಗಡಿಗಳಿಗೆ ಸೀಮಿತವಲ್ಲ, ಬದಲಾಗಿ ಒಲಿಂಪಿಕ್ಸ್‌ಗೆ ಆತಿಥೇಯ ವಹಿಸಲು ಭಾರತ ಬಯಸುತ್ತಿದೆ. ಜಾಗತಿಕ ಉತ್ಪಾದನಾ ಕೇಂದ್ರವಾಗಲು ಆಶಿಸಿದೆ. ಹಸಿರು ಇಂಧನ ರಂಗದಲ್ಲಿ ಜಾಗತಿಕ ನಾಯಕನಾಗಲು ಮುಂದಾಗಿದೆ ಮತ್ತು ಜಗತ್ತಿನ ಪ್ರಗತಿ-ಬೆಳವಣಿಗೆಯ ಇಂಜಿನ್ ಆಗಿ ರೂಪುಗೊಳ್ಳುವ ಉನ್ನತ ಗುರಿ ಹೊಂದಿದೆ ಎಂದು ವಿವರಿಸಿದರು.

• **ಹೇಗ್ (ನೆದರ್‌ಲ್ಯಾಂಡ್ಸ್):** ಭಾರತವು ಬೃಹತ್ ಕನಸುಗಳನ್ನು ಕಾಣುತ್ತಿದೆ. ಭಾರತದ ಯುವಶಕ್ತಿ ಗಗನ ಸ್ಪರ್ಶಿಸಲು ಹಾತೊರೆದಿದೆ. ತುಂಬು ಅವಕಾಶಗಳ ನಾಡಾಗಿರುವ ಭಾರತವು ಅಭೂತಪೂರ್ವ ಪರಿವರ್ತನೆಗಳಿಗೆ ಸಾಕ್ಷಿಯಾಗುತ್ತಿದೆ ಮತ್ತು ದೇಶದ ಆಕಾಂಕ್ಷೆಗಳು ಗಡಿಗಳಿಗೆ ಸೀಮಿತವಾಗುಳಿದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ತಮ್ಮ ಪಂಚ ರಾಷ್ಟ್ರ ಪ್ರವಾಸದಲ್ಲಿ ನೆದರ್‌ಲ್ಯಾಂಡ್ಸ್‌ನ ಹೇಗ್‌ನಲ್ಲಿ ಭಾರತೀಯ ಸಮುದಾಯವನ್ನುದ್ದೇಶಿಸಿ ಹೆಮ್ಮೆ ವ್ಯಕ್ತಪಡಿಸಿದ್ದಾರೆ.

ಮೋದಿ ಪಂಚ ರಾಷ್ಟ್ರ ಪ್ರವಾಸ

21ನೇ ಶತಮಾನದ ಭಾರತವು ತುಂಬು ಸದವಕಾಶಗಳ ನೆಲೆವೀಡಾಗಿದೆ. ತಂತ್ರಜ್ಞಾನದಲ್ಲೂ ಮುಂದು, ಮಾನವೀಯತೆಯಲ್ಲೂ ಮುಂದಿದೆ. ಭಾರತವು ತನ್ನ ಪ್ರಾಚೀನ ಪರಂಪರೆ ಸಂರಕ್ಷಿಸಿಕೊಂಡು ಆಧುನಿಕತೆಯತ್ತ ದಾಪುಗಾಲಿಕ್ಕುತ್ತಿದೆ. ಹಾಗಾಗಿ ಭಾರತದಲ್ಲಿರುವ ನಿಮ್ಮ ಪೂರ್ವಜರ ಗ್ರಾಮಗಳ ಜತೆ ಬಾಂಧವ್ಯ ಬೆಸೆದುಕೊಂಡು, ಸಂಪನ್ನ ಭಾರತದ ಯಾನದಲ್ಲಿ ಪಾಲ್ಗೊಳ್ಳಲು ತಮಗಿದು ಸಕಾಲವೆಂದು ಭಾರತೀಯ ಸಂಜಾತರನ್ನು ಉದ್ದೇಶಿಸಿದ ತಮ್ಮ 40 ನಿಮಿಷಗಳ ಭಾಷಣದಲ್ಲಿ ಪ್ರಧಾನಿ ಮೋದಿ ಕರೆನೀಡಿದ್ದಾರೆ.

ಹೂಡಿಕೆ ಮಾಡಲು ಕರೆ: ಭಾರತದೊಂದಿಗಿನ ಸಹಕಾರ ಕೊಂಡಿಯನ್ನು ಸಾಧ್ಯವಾದಷ್ಟು ಬಲಪಡಿಸುವಂತೆ ಅಥವಾ ಭಾರತದಲ್ಲಿ ಹೂಡಿಕೆ ಹೂಡಲು ಮುಂಬರುವಂತೆ ನೆದರ್‌ಲ್ಯಾಂಡ್‌ನಲ್ಲಿರುವ ಭಾರತದ ಎಲ್ಲಾ ಸ್ನೇಹಿತರನ್ನು ಪ್ರಧಾನಿ ಮೋದಿ ಕೋರಿದರು. ➡ ಪುಟ 9

ಸಹಜ ಗೇಟ್‌ವೇ

ಭಾರತೀಯ ಉದ್ದಿಮೆಗಳಿಗೆ ಯುರೋಪ್ ಪ್ರವೇಶಕ್ಕೆ ನೆದರ್‌ಲ್ಯಾಂಡ್ಸ್ ಸಹಜ ಗೇಟ್‌ವೇ ಆಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಪ್ರಧಾನಿ ಮೋದಿ, ಪ್ರಸ್ತುತ ಯಾನದಲ್ಲಿ ಭಾರತೀಯ ಸಮುದಾಯ ವಿಶ್ವಾಸಾರ್ಹ ಸೇತುವಾಗಿ ಸೇವೆ ಸಲ್ಲಿಸಬಹುದಾಗಿದೆ ಎಂದು ಕರೆಯಿತ್ತರು.

ಪ್ರಧಾನಿ ಮೋದಿ ಸ್ವಾಗತಕ್ಕೆ ಗರ್ಬಾ ನೃತ್ಯ ಪ್ರದರ್ಶನ

• **ಹೇಗ್ (ನೆದರ್‌ಲ್ಯಾಂಡ್):** ಭಾರತದ ಮೋದಿ ಶನಿವಾರ ನೆದರ್‌ಲ್ಯಾಂಡ್ ತಲುಪಿದ್ದು, ಇಲ್ಲಿನ ಭಾರತೀಯ ಸಮುದಾಯ ಮೋದಿ ಅವರನ್ನು ಸಾಂಪ್ರದಾಯಿಕ ನೃತ್ಯ ಪ್ರದರ್ಶನಗಳೊಂದಿಗೆ ಆತ್ಮೀಯತೆಯಿಂದ ಸ್ವಾಗತಿಸಿತು. ➡ ಪುಟ 9

ವಿಶೇಷ ಕ್ಷಣದಲ್ಲೇ ಭೇಟಿ

ಭಾರತ-ಯುರೋಪ್ ಒಕ್ಕೂಟ ನಡುವಣ ಮುಕ್ತ ವ್ಯಾಪಾರ ಒಪ್ಪಂದವು, ವ್ಯಾಪಾರ ಮತ್ತು ಹೂಡಿಕೆ ಬಾಂಧವ್ಯಗಳಿಗೆ ನವ ಆಯಾಮ ನೀಡಿರುವ ಕ್ಷಣಗಳಲ್ಲೇ, ನೆದರ್‌ಲ್ಯಾಂಡ್‌ಗೆ ಭೇಟಿ ನೀಡುವ ಅವಕಾಶ ತನಗೆ ಲಭಿಸಿದೆ. ತನ್ನ ಭೇಟಿ ಸೆಮಿಕಂಡಕ್ಟರ್‌ಗಳು, ಜಲ ನಿರ್ವಹಣೆ, ಶುದ್ಧ ಇಂಧನ, ಆವಿಷ್ಕಾರ ರಂಗಗಳಲ್ಲಿ ಸಹಕಾರವನ್ನು ಗಾಢಗೊಳಿಸುವ ಅವಕಾಶ ತೆರೆಯುವ ನಂಬಿಕೆಯಿದೆ ಎಂದು ಪ್ರಧಾನಿ ಮೋದಿ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ➡ ಪುಟ 9

ನನ್ನ ಇ-ಖಾತಾ, ನನ್ನ ಹಕ್ಕು ಕಾರ್ಯಕ್ರಮ ಚುರುಕುಗೊಳಿಸಿದ ಉಪ ಮುಖ್ಯಮಂತ್ರಿ

ಅಭಿಯಾನಕ್ಕೆ ಭಾರೀ ಜನಸ್ಪಂದನೆ: ಡಿಕೆಶಿ

- ಪ್ರತಿ ಶನಿವಾರ ನಡೆಯಲಿದೆ ನನ್ನ ಇ-ಖಾತೆ ಅಭಿಯಾನ
- ಮೊದಲ ಶನಿವಾರ 5 ಪಾಲಿಕೆಯಿಂದ 52 ಸ್ಥಳಗಳಲ್ಲಿ ಅಭಿಯಾನ
- ಬಿ ಟು ಎ ಖಾತಾಕ್ಕೆ 100 ದಿನ ರಿಯಾಯಿತಿ

• **ಬೆಂಗಳೂರು:** ನನ್ನ ಇ-ಖಾತಾ, ನನ್ನ ಹಕ್ಕು ಅಭಿಯಾನದಿಂದ ಬೆಂಗಳೂರಿನ ಸಾರ್ವಜನಿಕರು ಒಂದೇ ಒಂದು ರೂಪಾಯಿ ಲಂಚ ನೀಡದೆ ತಮ್ಮ ಆಸ್ತಿಗಳನ್ನು ಬಿ ಖಾತೆಯಿಂದ ಎ ಖಾತೆಗೆ ಪರಿವರ್ತನೆ ಹಾಗೂ ಮನೆ ಬಾಗಿಲಲ್ಲೇ ಇ-ಖಾತೆ ಪಡೆಯುವ ಮಹತ್ವದ ಅಭಿಯಾನಕ್ಕೆ ಅಭೂತಪೂರ್ವ ಬೆಂಬಲ ದೊರೆತಿದೆ.



ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ಐದು ನಗರದ ಪಾಲಿಕೆ ವ್ಯಾಪ್ತಿಯಲ್ಲಿ ಆರಂಭವಾದ ನನ್ನ ಇ-ಖಾತಾ, ನನ್ನ ಹಕ್ಕು ಅಭಿಯಾನಕ್ಕೆ ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಹೊರಮಾವು ಬಳಿಯ (ನ್ಯಾಷನಲ್ ಪಬ್ಲಿಕ್ ಸ್ಕೂಲ್) ಅಭಿಯಾನ ಕೇಂದ್ರಕ್ಕೆ ಶನಿವಾರ ಭೇಟಿ ನೀಡಿದ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು, ನಗರದ ಏಳು ಲಕ್ಷ ಜನರಿಗೆ ಉಪಯೋಗವಾಗುವ ಮಹತ್ವದ ಯೋಜನೆಯಾಗಿದೆ. ಬೆಂಗಳೂರು ನಿವಾಸಿಗಳು, ಅರ್ಜಿದಾರರು ಈ ಅಭಿಯಾನದಿಂದ ಖುಷಿಯಾಗಿದ್ದಾರೆಂದು ಹೇಳಿದರು.

ಖಾತೆ ದಾಖಲೆಯಲ್ಲಿ ಫೋಟೋ ಸಹ ಇರಲಿದೆ. ಯಾರಾದರೂ ನಕಲಿ ದಾಖಲೆಗಳನ್ನು ನೀಡಿ ಖಾತೆ ಮಾಡಿಸಿಕೊಂಡರೆ ಅದನ್ನು ರದ್ದು ಮಾಡುವ ವ್ಯವಸ್ಥೆಯೂ ಇದೆ. ➡ ಪುಟ 9



ನಮ್ಮ ಕೆಲಸಕ್ಕೆ ಕೇಂದ್ರ ಸರ್ಕಾರ ಶ್ಲಾಘನೆ

ಸಾರ್ವಜನಿಕರು ಯಾರಿಗೂ ಒಂದೇ ಒಂದು ರೂಪಾಯಿ ಲಂಚ ನೀಡಬಾರದು. ಅಧಿಕಾರಿಗಳಿಗೆ ಸೇರಿದಂತೆ ಯಾವ ಪಕ್ಷದವರಿಗೂ ಲಂಚ ಕೊಡಬಾರದು. ಸರ್ಕಾರಿ ಭೂಮಿಗಳನ್ನು ಮಂಜೂರು ಮಾಡಲು ಸಾಧ್ಯವಿಲ್ಲ, ನಾವು ಇಡೀ ದೇಶದಲ್ಲಿಯೇ ಮಾದರಿಯಾಗಿದ್ದೇವೆ. ಕೇಂದ್ರ ಸರ್ಕಾರವು ನಮಗೆ ಒಳ್ಳೆ ಕೆಲಸ ಮಾಡುತ್ತಿದ್ದೀರಿ ಎಂದು ಶ್ಲಾಘಿಸಿದೆ. ಆರನೇ ಗ್ಯಾರಂಟಿಯಾಗಿ ಭೂಮಿ ಗ್ಯಾರಂಟಿ ನೀಡುತ್ತಿದ್ದೇವೆ. ನೀವು ತೆಗೆದುಕೊಂಡ ನಿವೇಶನ ಅಂದು ಕಡಿಮೆ ಬೆಲೆಯದ್ದಾಗಿದ್ದರೆ ಖಾತೆ ಬದಲಾವಣೆಯಿಂದ ಆಸ್ತಿ ಬೆಲೆ ಹೆಚ್ಚಳವಾಗಲಿದೆ ಎಂದು ಶಿವಕುಮಾರ್ ತಿಳಿಸಿದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್

ರಾಜ್ಯಕ್ಕೆ ಹೆಚ್ಚುವರಿ 1,122 ವೈದ್ಯ ಸೀಟು

• **ಬೆಂಗಳೂರು:** ರಾಜ್ಯದಲ್ಲಿ ಮೆಡಿಕಲ್ ಸೀಟು ಲಭ್ಯತೆ ಹೆಚ್ಚಾಗಿದ್ದು, ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಲು ಬಯಸುವವರಿಗೆ ಸುವರ್ಣ ಅವಕಾಶ ಲಭಿಸಲಿದೆ. ರಾಜ್ಯಕ್ಕೆ ಹೆಚ್ಚುವರಿ 1,122 ಸೀಟುಗಳು ದೊರೆಯಲಿವೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ತಿಳಿಸಿದರು. ವಿಕಾಸಸೌಧದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ರಾಜ್ಯ ವೈದ್ಯಕೀಯ ಕ್ಷೇತ್ರದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ. ರಾಜ್ಯಕ್ಕೆ ದೊರೆತಿರುವ ಹೆಚ್ಚುವರಿ ಸೀಟುಗಳು ಕೊಪ್ಪಳ, ಗದಗ, ಚಾಮರಾಜನಗರ, ಕಾರವಾರ ಸೇರಿ ಇತರೆ ಜಿಲ್ಲೆಗಳಿಗೆ ದೊರೆಯಲಿದೆ ಎಂದು ತಿಳಿಸಿದರು.

ಪದವಿಪೂರ್ವ ಸೀಟುಗಳಿಗೆ ಕೇಂದ್ರ ಸರ್ಕಾರದಿಂದ 495 ಕೋಟಿ ರೂ. ಅನುದಾನ ಸಿಗಲಿದೆ. ಅದೇ ರೀತಿ ಸ್ನಾತಕೋತ್ತರ ವೈದ್ಯಕೀಯ ಸೀಟುಗಳಿಗೆ 541 ಕೋಟಿ ರೂ. ಅನುದಾನ ಸಿಗಲಿದೆ ಎಂದು ಡಾ. ಪಾಟೀಲ್ ವಿವರಿಸಿದರು. ➡ ಪುಟ 9



ಸೀಟ್‌ಗಳ ವಿವರ

- ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜು (ಖಾಸಗಿ, ಡೀಮ್ಡ್ ಸೇರಿ) - 72
- ಲಭ್ಯವಿರುವ ಯುಜಿ ಸೀಟುಗಳು - 13,945
- ಪಿಜಿ ಸೀಟುಗಳು - 7,727

ಪ್ರಧಾನಿ ಮೋದಿ ಕರೆಗೆ ಓಗೊಟ್ಟ ಬಿಜೆಪಿ ರಾಜ್ಯಾಧ್ಯಕ್ಷ

ಮೆಟ್ರೋದಲ್ಲಿ ಪ್ರಯಾಣಿಸಿದ ಬಿವೈವಿ

• **ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರ ಮಿತವ್ಯಯ ಕರೆಗೆ ಓಗೊಟ್ಟು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಶನಿವಾರ ತಮ್ಮ ವಾಹನ ಬಿಟ್ಟು ಮೆಜೆಸ್ಟಿಕ್‌ನಿಂದ ಕೆಂಗೇರಿವರೆಗೆ ಮೆಟ್ರೋ ಮೂಲಕ ತೆರಳಿದರು.

ಈ ವೇಳೆ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಮಿತವ್ಯಯಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನತೆಗೆ ಕರೆ ನೀಡಿರುವುದಕ್ಕೆ ಪ್ರತಿಯೊಬ್ಬರೂ ಸ್ಪಂದಿಸಬೇಕಾಗಿದೆ. ವಿರೋಧಪಕ್ಷಗಳು ಇದರಲ್ಲಿ ಯಾವುದೇ ರಾಜಕೀಯವನ್ನು ತರಬಾರದು. ರಾಜ್ಯದ ಬಿಜೆಪಿ ಅಧ್ಯಕ್ಷನಾಗಿ ನಾನೂ ಸಾರ್ವಜನಿಕ ಸಾರಿಗೆ ಬಳಸಲು ಮುಂದಾಗಿದ್ದೇನೆ ಎಂದು ತಿಳಿಸಿದರು. ಅಮೆರಿಕ, ಇರಾನ್ ಹಾಗೂ ಇಸ್ರೇಲ್ ಯುದ್ಧದಿಂದಾಗಿ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಎಲ್ಲರಿಗೂ ತಿಳಿದಿದೆ. ಭಾರತವೂ ಸೇರಿದಂತೆ ಇಡೀ ಜಗತ್ತು ಸಂಕಷ್ಟಕ್ಕೆ ಸಿಲುಕಿದೆ. ಆದ್ದರಿಂದ ಪ್ರತಿಯೊಬ್ಬರೂ ಮಿತವ್ಯಯ ಬಗ್ಗೆ ಯೋಚಿಸಬೇಕಾಗಿದೆ. ➡ ಪುಟ 9




ರೈಲು, ಬಸ್ ಪಯಾಣಕ್ಕೆ ಆದ್ಯತೆ: ಸಚಿವ ಸೋಮಣ್ಣ

• ಪುಟ 9

ಜನಸಂಖ್ಯೆ ಹೆಚ್ಚಳಕ್ಕೆ ಆಂಧ್ರ ಹೊಸ ತಂತ್ರ

• **ಅಮರಾವತಿ:** ಜನಸಂಖ್ಯೆ ಕುಸಿತದ ಆತಂಕ ಎದುರಿಸುತ್ತಿರುವ ಆಂಧ್ರ ಪ್ರದೇಶ, ಇದೀಗ ಜನನ ಪ್ರಮಾಣ ಹೆಚ್ಚಿಸಲು ನಗದು ಪ್ರೋತ್ಸಾಹದ ದಾರಿ ಹಿಡಿದಿದೆ. ರಾಜ್ಯದಲ್ಲಿ ಮೂರನೇ ಮಗುವಿಗೆ 30 ಸಾವಿರ ರೂ. ಹಾಗೂ ನಾಲ್ಕನೇ ಮಗುವಿಗೆ 40 ಸಾವಿರ ರೂ. ಪ್ರೋತ್ಸಾಹಧನ ನೀಡಲಾಗುವುದು ಎಂದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಘೋಷಿಸಿದ್ದಾರೆ. ಶ್ರೀಕಾಕುಳಂ ಜಿಲ್ಲೆಯ ನರಸನ್ನಪೇಟೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, 'ಜನಸಂಖ್ಯೆ ನಿಯಂತ್ರಣದ ಕಾಲ ಮುಗಿದಿದೆ. ➡ ಪುಟ 9

3ನೇ ಮಗುವಿಗೆ 30 ಸಾವಿರ, 4 ಮಗುವಿಗೆ 40 ಸಾವಿರ ರೂ. ಪ್ರೋತ್ಸಾಹ: ಸಿಎಂ ನಾಯ್ಡು ಘೋಷಣೆ



ನಮ್ಮ ತಂಟೆಗೆ ಬಂದರೆ ಪಾಕ್ ಅಸ್ತಿತ್ವವೇ ನಾಶ

• **ಹೊಸದಿಲ್ಲಿ:** ಭಾರತ ವಿರುದ್ಧ ಭಯೋತ್ಪಾದನೆಗೆ ನಿರಂತರ ಬೆಂಬಲ ನೀಡುವುದೇ ಷಡ್ಯಂತ್ರವಾದಲ್ಲಿ, ಭೂಗೋಳ ಅಥವಾ ಇತಿಹಾಸದ ಭಾಗವಾಗಿ ಉಳಿಯಬೇಕೋ ಬೇಡವೋ ಎಂಬುದನ್ನೂ ಪಾಕಿಸ್ತಾನ ಅಗತ್ಯವಾಗಿ ತೀರ್ಮಾನಿಸಬೇಕಾಗುತ್ತದೆ ಎಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಪಾಕ್‌ಗೆ ತಮ್ಮ ತೀಕ್ಷ್ಣ ಎಚ್ಚರಿಕೆಯನ್ನು ಪುನರುಚ್ಚರಿಸಿದ್ದಾರೆ.



ಉಗ್ರ ಪೋಷಕ ಪಾಕಿಸ್ತಾನಕ್ಕೆ ಜ.ಉಪೇಂದ್ರ ದ್ವಿವೇದಿ ತೀಕ್ಷ್ಣ ಎಚ್ಚರಿಕೆ

ಆಪರೇಷನ್ ಸಿಂದೂರ್‌ನ ಅನಿವಾರ್ಯತೆ ಸೃಜಿಸಿದಂತಹ ಸನ್ನಿವೇಶಗಳು ಮರುಕಳಿಸಿದಲ್ಲಿ, ಭಾರತೀಯ ಸೇನೆ ಅದ್ಯಾವ ರೀತಿ ಪ್ರತಿಕ್ರಿಯಿಸಲಿದೆ ಎಂಬ ಸುದ್ದಿಗಾರರ ಪ್ರಶ್ನೆಗೆ, ಸೇನಾ ಮುಖ್ಯಸ್ಥ ಜ.ದ್ವಿವೇದಿ ಈ ರೀತಿ ಪ್ರತ್ಯುತ್ತರಿಸಿದ್ದಾರೆ.

ಕಳೆದ ವರ್ಷದ ಆಪರೇಷನ್ ಸಿಂದೂರ್ ನಂತರದಲ್ಲಿ ಭಾರತದ ಮಿಲಿಟರಿ ಪಡೆ ಪಾಕ್‌ಗೆ ಸಾರ್ವಜನಿಕವಾಗಿ ನೀಡಿರುವ ಅತ್ಯಂತ ಕಟು ಎಚ್ಚರಿಕೆ ಇದಾಗಿದೆ. ಹಾಗೆಂದು ಭಾರತೀಯ ಸೇನೆ ಪಾಕ್‌ಗೆ ಎಚ್ಚರಿಕೆ ನೀಡುತ್ತಿರುವುದು ಇದು ಹೊಸತಲ್ಲ ಅಥವಾ ಮೊದಲಲ್ಲ. ಪಾಕಿಸ್ತಾನ ಭಾರತದ ವಿರುದ್ಧ ಭಯೋತ್ಪಾದನೆಗೆ ಬೆಂಬಲ ಮುಂದುವರಿಸಿದಲ್ಲಿ, ಭಾರತದ ಸಶಸ್ತ್ರಪಡೆಗಳು ಆಪರೇಷನ್ ಸಿಂದೂರ್ 1.0ನಲ್ಲಿ ಮೆರೆದಂತಹ ಸಂಯಮ ಸಮಾನ ತಾಳ್ಮೆಯನ್ನು ಖಂಡಿತ ತೋರುವುದಿಲ್ಲ. ➡ ಪುಟ 9

ಎನ್‌ಸಿಬಿ ವಶಕ್ಕೆ ₹182 ಕೋಟಿ ಜಿಹಾದಿ ಡ್ರಗ್

• **ಹೊಸದಿಲ್ಲಿ:** ಅಂತಾರಾಷ್ಟ್ರೀಯ ಮಾದಕದ್ರವ್ಯ ಜಾಲವೊಂದು ಒಳಗೊಂಡಿರುವ 182 ಕೋಟಿ ರೂ. ಮೌಲ್ಯದ 227.7 ಕೆ.ಜಿ. ಕೇಪ್ ಟೇಗೊನ್ ಹೆಸರಿನ ಜಿಹಾದಿ ಡ್ರಗ್ ಅನ್ನು ನಾರ್ಕೋಟಿಕ್ಸ್ ನಿಯಂತ್ರಣ ಸಂಸ್ಥೆ (ಎನ್‌ಸಿಬಿ) ವಶಪಡಿಸಿರುವುದಾಗಿ ಕೇಂದ್ರ ಗೃಹ ಇಲಾಖೆ (ಎಂಎಚ್‌ಎ) ಶನಿವಾರ ಘೋಷಿಸಿದೆ.

227 ಕೆ.ಜಿ. ಕೇಪ್‌ಟೇಗೊನ್ ವಶಪಡಿಸಿದ ಎನ್‌ಸಿಬಿ, ವಿದೇಶಿ ಪ್ರಜೆ ಬಂಧನ

ಕೇಪ್‌ಟೇಗೊನ್ ಮಾದಕದ್ರವ್ಯದ ಮೊದಲ ಕನ್ಸೈನ್‌ಮೆಂಟ್ ಅನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದ ಗೃಹ ಇಲಾಖೆಯ ಸಾಧನೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಭಾರತ ಪ್ರವೇಶಿಸುವ ಅಥವಾ ಭಾರತ ಗಡಿ ಬಳಸಿಕೊಂಡು ಸಾಗಣೆ ಮಾಡುವ ಪ್ರತಿ ಗ್ರಾಂ ಮಾದಕ ದ್ರವ್ಯವನ್ನೂ ನಾವು ವಶಪಡಿಸುತ್ತೇವೆಂದು ಪುನರುಚ್ಚರಿಸುತ್ತೇನೆ. ➡ ಪುಟ 9

ಏನಿದು ಕೇಪ್‌ಟೇಗೊನ್?



ಇದು ಫಿನೆಥಿಲಿನ್ ಎಂಬ ಸಿಂಥೆಟಿಕ್ ಮಾದಕ ದ್ರವ್ಯವಾಗಿದೆ. ಕೇಪ್‌ಟೇಗೊನ್ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದುಕೊಂಡಿದೆ. 1960ರಿಂದ ಇದನ್ನು ಮಧ್ಯಪ್ರಾಚ್ಯದ ಸಂಘರ್ಷ ಭರಿತ ಪ್ರದೇಶಗಳಲ್ಲಿ ಭಯೋತ್ಪಾದನೆ, ಅಪಹರಣ, ಅತ್ಯಾಚಾರ, ದೌರ್ಜನ್ಯ ಪ್ರಕರಣಗಳಲ್ಲಿ ಬಳಸುತ್ತಾರೆ. ನಿರಂತರ ಆರೋಪಗಳ ನಂತರ ಜಿಹಾದಿ ಡ್ರಗ್ ಎಂಬ ಹೆಸರನ್ನು ಪಡೆಯಿತು. ➡ ಪುಟ 9

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,90,000 (2,90,000) ಅಪರಂಜಿ ಚಿನ್ನ: 1,57,910 (1,57,910) ಆಭರಣ ಚಿನ್ನ: 1,44,750 (1,44,750) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ, (ಆವರಣದಲ್ಲಿ ಹಿಂದಿನ ದಿನದ ದರ)

$1 = ₹95.71

ಸಾರಿಗೆ ನೌಕರರ ಹಿಂಬಾಕಿ ಮೊತ್ತ ಬಿಡುಗಡೆ

• **ಬೆಂಗಳೂರು:** ನಾಲ್ಕು ಸಾರಿಗೆ ನಿಗಮಗಳ ಅಧಿಕಾರಿ/ನೌಕರರ ಹಿಂಬಾಕಿ ಮೊತ್ತದಲ್ಲಿ ಮೊದಲ ಕಂತಿನ 450 ಕೋಟಿ ರೂ. ಅನ್ನು ರಾಜ್ಯ ಸರ್ಕಾರವು ಬಿಡುಗಡೆಗೊಳಿಸಿದ್ದು, ಇವುಗಳ ಪೈಕಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ 137.24 ಕೋಟಿ ರೂ.ಜಮೆಯಾಗಿದೆ.

ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಅಧಿಕಾರಿ/ನೌಕರರಿಗೆ 2021ಜ.1 ರಿಂದ 2023 ಫೆ.28ರವರೆಗೆ ಒಟ್ಟು 26 ತಿಂಗಳ ಹಿಂಬಾಕಿ ಮೊತ್ತ 1271.92 ಕೋಟಿ ರೂ. ಪಾವತಿಸಲು ಅನುಮೋದನೆ ನೀಡಿ ಆದೇಶಿಸಲಾಗಿದೆ. ಇವುಗಳ ಪೈಕಿ ಪ್ರಸ್ತುತ ಮೊದಲ ಕಂತಿನ 450 ಕೋಟಿ ರೂ.ಬಿಡುಗಡೆಗೊಳಿಸಿದ್ದು, ಇದರಲ್ಲಿ ಬಿಎಂಟಿಸಿಗೆ 137.24 ಕೋಟಿ ರೂ.ಮಂಜೂರಾಗಿವೆ.

ಈ ಅನುದಾನದಡಿ 2021 ಜ.1ರಿಂದ 2021 ನ.30 ರವರೆಗೆ 11 ತಿಂಗಳ ಹಿಂಬಾಕಿ ಮೊತ್ತ ಪಾವತಿಸುವ ಸಂಬಂಧ ಕೆಲ ಕ್ರಮ ಕೈಗೊಳ್ಳಲಾಗಿದೆ. ಅದರಲ್ಲೂ ಪ್ರಮುಖವಾಗಿ ಸಂಸ್ಥೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ 11 ತಿಂಗಳ ವೇತನ ಪರಿಷ್ಕರಣೆಯ ಹಿಂಬಾಕಿ ಮೊತ್ತವನ್ನು ಶನಿವಾರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗಿದೆ. 2021 ಜ.1 ರಿಂದ 2021 ನ.30ರ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿ ಸೇವಾ ವಿಮುಕ್ತರಾದ (ನಿವೃತ್ತಿ/ಸ್ವಯಂ ನಿವೃತ್ತಿ/ವಜಾ/ಮರಣ/ರಾಜೀನಾಮೆ ಸೇರಿದಂತೆ) ಅರ್ಹ ಅಧಿಕಾರಿ/ನೌಕರರಿಗೆ ಹಿಂಬಾಕಿ ಮೊತ್ತವನ್ನು ಮೇ 21 ರಂದು ಪಾವತಿಸಲಾಗುವುದು. ಇದೇ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿ ಅಂತರ ನಿಗಮ/ಸಂಸ್ಥೆಗಳಿಗೆ ವರ್ಗಾವಣೆಗೊಂಡ ಅಧಿಕಾರಿ/ನೌಕರರ ಹಿಂಬಾಕಿ ಮೊತ್ತವನ್ನು ಮೇ 22 ರಂದು ಸಂಬಂಧಿತ ನಿಗಮ/ಸಂಸ್ಥೆಗಳಿಗೆ ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ಸಂಸ್ಥೆಯ ಅಧಿಕಾರಿ ಹಾಗೂ ನೌಕರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ಆದೇಶದಂತೆ ಅಗತ್ಯ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳಲಾಗಿದೆ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಕುಮಾರ್. ಕೆ.ಬಿ ತಿಳಿಸಿದ್ದಾರೆ.



ತುಮಕೂರಿನಲ್ಲಿ ಮೇ 19ರಂದು ನಡೆಯಲಿರುವ ಮೂರು ವರ್ಷದ ಪ್ರಗತಿಯತ್ತ ಕರ್ನಾಟಕ ಸಾಧನಾ ಸೇವೆಯ ಸಮರ್ಪಣೆ ಕಾರ್ಯಕ್ರಮಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಶನಿವಾರ ಬೆಂಗಳೂರಿನ ಸದಾಶಿವನಗರದ ನಿವಾಸದಲ್ಲಿ ಭೇಟಿ ಮಾಡಿದ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು ಅಧಿಕೃತವಾಗಿ ಆಹ್ವಾನಿಸಿದರು.

ವಂಚನೆ ಪ್ರಕರಣ: ಶಿವಾನಂದ ನೀಲಣ್ಣವರ ಸೆರೆ

• **ಬೆಳಗಾವಿ:** ಬೆಳಗಾವಿಯಲ್ಲಿ ಅನಧಿಕೃತ ಬಡ್ಡಿ ಹಾಗೂ ಹೂಡಿಕೆ ವ್ಯವಹಾರ ನಡೆಸಿದ ಆರೋಪದ ಮೇಲೆ ಶಿವಂ ಅಸೋಸಿಯೇಟ್ಸ್ ಮಾಲೀಕ ಶಿವಾನಂದ ನೀಲಣ್ಣವರನ್ನು ಅಧಿಕಾರಿಗಳು ಬಂಧಿಸಿದ್ದಾರೆ.

ಮೊದಲ ಹಂತದ ತನಿಖೆಯಲ್ಲೇ ರೂ.50 ಕೋಟಿಗೂ ಅಧಿಕ ಅಕ್ರಮ ವ್ಯವಹಾರ ನಡೆದಿರುವುದು ಪತ್ತೆಯಾಗಿದ್ದು, ಪ್ರಕರಣವನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿದೆ. ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮಾಹಿತಿ ನೀಡಿದಂತೆ, ಸುಮಾರು 35 ಸಾವಿರಕ್ಕೂ ಹೆಚ್ಚು ಜನರು ಶಿವಂ ಅಸೋಸಿಯೇಟ್ಸ್ ಮೂಲಕ ಹಣ ಹೂಡಿಕೆ ಮಾಡಿದ್ದಾರೆ. ಕರ್ನಾಟಕದ ವಿವಿಧ ಜಿಲ್ಲೆಗಳ ಜೊತೆಗೆ ಮಹಾರಾಷ್ಟ್ರ, ಆಂಧ್ರಪ್ರದೇಶ ಹಾಗೂ ತೆಲಂಗಾಣದಲ್ಲಿಯೂ ಈ ಜಾಲ ವಿಸ್ತರಿಸಿರುವ ಮಾಹಿತಿ ಲಭ್ಯವಾಗಿದೆ.

ಶೇ.36ರಷ್ಟು ಬಡ್ಡಿ ಆಮಿಷ: ರೂ.1 ಲಕ್ಷ ಠೇವಣಿ ಇಟ್ಟರೆ ಮಾಸಿಕ ಶೇ.36ರಷ್ಟು ಬಡ್ಡಿ ನೀಡುವುದಾಗಿ ಪತ್ರಿಕಾ ಜಾಹೀರಾತುಗಳ ಮೂಲಕ ಜನರನ್ನು ಆಕರ್ಷಿಸಲಾಗಿತ್ತು. ಹೆಚ್ಚಿನ ಲಾಭದ ಆಸೆಯಿಂದ ಸಾವಿರಾರು ಜನರು ಹಣ ಹೂಡಿಕೆ ಮಾಡಿದ್ದು, ಒಟ್ಟು ಠೇವಣಿಯ ಮೊತ್ತ ಸಾವಿರಾರು ಕೋಟಿಗಳಲ್ಲಿರಬಹುದು ಎಂದು ಶಂಕಿಸಲಾಗಿದೆ.

ದಾಳಿ ವೇಳೆ ಪತ್ತೆಯಾದ ದಾಖಲೆಗಳು: ಜಿಲ್ಲಾಧಿಕಾರಿ ಕಚೇರಿಯಲ್ಲಿ ಕೆಪಿಐಡಿ ಬಡ್ಸ್ ಆ್ಯಕ್ಟ್ ಅಡಿಯಲ್ಲಿ ವಿಶೇಷ ತನಿಖಾ ಶಾಖೆ ತೆರೆಯಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ವಿಡಿಯೋಗಳು ಮತ್ತು ಮಾರುಕಟ್ಟೆ ಇಂಟಲಿಜೆನ್ಸ್ ಆಧರಿಸಿ ಶಿವಂ ಅಸೋಸಿಯೇಟ್ಸ್ ಕಚೇರಿ ಹಾಗೂ ಮನೆ ಮೇಲೆ ದಾಳಿ ನಡೆಸಲಾಗಿದೆ. ಅಧಿಕಾರಿಗಳ ಪ್ರಕಾರ ಪ್ರತಿ ತಿಂಗಳು ಒಂದೇ ಖಾತೆಯಿಂದ ರೂ.300ರಿಂದ ರೂ. 400 ಕೋಟಿ ವ್ಯವಹಾರ ನಡೆದಿದೆ. ಯಾವುದೇ ಆರ್‌ಬಿಐ ಅಥವಾ ಸಹಕಾರ ಸಂಘ ನಿಯಮಗಳನ್ನು ಪಾಲಿಸಲಾಗಿಲ್ಲ, ದೊಡ್ಡ ಪ್ರಮಾಣದ ಹಣಕಾಸು ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸ್ವಚ್ಛತಾ ಕಾರ್ಯಕ್ರಮ ರದ್ದು: ಮೇ 17ರಂದು ಬೆಳಗಾವಿಯಲ್ಲಿ 25 ಸಾವಿರ ಜನರನ್ನು ಸೇರಿಸಿ ಸ್ವಚ್ಛತಾ ಕಾರ್ಯಕ್ರಮ ಆಯೋಜಿಸಲಾಗಿತ್ತು. ನಗರಾದ್ಯಂತ ಕಟೌಟ್ ಮತ್ತು ಪೋಸ್ಟರ್‌ಗಳು ಹಾಕಲಾಗಿದ್ದವು. ತನಿಖೆ ಆರಂಭವಾದ ಬಳಿಕ ಪಾಲಿಕೆ ಅಧಿಕಾರಿಗಳು ಕಾರ್ಯಕ್ರಮ ರದ್ದುಪಡಿಸಿ ಎಲ್ಲಾ ಪೋಸ್ಟರ್ ತೆರವುಗೊಳಿಸಿದರು.

ಸಿಡಿಲಿಗೆ ಮಹಿಳೆ, 2 ಹಸು ಸಾವು

• **ಪಿರಿಯಾಪಟ್ಟಣ:** ಸಿಡಿಲು ಬಡಿದು ಓರ್ವ ಮಹಿಳೆ ಹಾಗೂ ಎರಡು ಹಸುಗಳು ಸ್ಥಳದಲ್ಲೇ ಮೃತಪಟ್ಟಿದ್ದು, ಅಸ್ವಸ್ಥಗೊಂಡ ಮಹಿಳೆಯನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ. ತಾಲೂಕಿನ ಸತ್ಯಗಾಲ ಗ್ರಾಮದ ನಿವಾಸಿ ವಿನೋದಾ(36 ವರ್ಷ) ಮೃತಪಟ್ಟ ದುರ್ದೈವಿ. ಶನಿವಾರ ಸಂಜೆ ಜಮೀನಿನಲ್ಲಿ ಹಸುಗಳನ್ನು ಮೇಯಿಸುತ್ತಿದ್ದ ಸಂದರ್ಭದಲ್ಲಿ ಸಿಡಿಲಿಗೆ ಅಸ್ವಸ್ಥಗೊಂಡ ಮಹಿಳೆಯನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ. ಮೃತರ ದೇಹವನ್ನು ಪಟ್ಟಣದ ಸಾರ್ವಜನಿಕ ಶವಾಗಾರದಲ್ಲಿ ಇರಿಸಲಾಗಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ದೇವಸ್ಥಾನ, ಮಠ, ಮಂದಿರ ಮತ್ತು ಧಾರ್ಮಿಕ ಕೇಂದ್ರಗಳಲ್ಲಿ ನಡೆಯುವ ಬ್ರಹ್ಮಕಲಶದಂತಹ ಕಾರ್ಯಕ್ರಮಗಳ ಮೂಲಕ ಹಿಂದೂ ಸಮಾಜವನ್ನು ಒಗ್ಗೂಡಿಸುವ ಕಾರ್ಯವಾಗಬೇಕಾಗಿದೆ – ವೈ.ಭರತ್ ಶೆಟ್ಟಿ
– ಕಣ್ಣುಗಳು ಎರಡಾದರೂ ದೃಷ್ಟಿ ಒಂದೇ, ಬೆರಳುಗಳು ಐದಾಗಿದ್ದರೂ ಕೈ ಒಂದೇ, ರಾಜ್ಯಗಳು ಬೇರೆ ಬೇರೆಯಾಗಿದ್ದರೂ ನಮ್ಮೆಲ್ಲರ ದೇಶ ಒಂದೇ ಆಗಿದೆ. ಹಾಗೆಯೇ ನಮ್ಮ ಜಾತಿ, ರೀತಿ, ಪಕ್ಷಗಳು ಬೇರೆ ಬೇರೆಯಾಗಿದ್ದರೂ ಧರ್ಮ ಒಂದೇ ಆಗಿದೆ ಎಂಬುದನ್ನು ನೆನಪಿಸುವ ಏಕೈಕ ಜಾಗವೆಂದರೆ ಧಾರ್ಮಿಕ ಕೇಂದ್ರಗಳು!

ದಿನ ಭವಿಷ್ಯ

ಮೇಷ ಆಪ್ತರ ಜತೆ ಭಿನ್ನಾಭಿಪ್ರಾಯ ಸಂಭವ. ಎದುರಾಡಬೇಡಿ. ಸಹನೆ ಕಾಯ್ದುಕೊಳ್ಳಿ. ಹಣದ ಹರಿವಿಗೆ ತಡೆ ಒದಗೀತು. ಖರ್ಚು ಕಡಿಮೆ ಮಾಡಿ.

ವೃಷಭ ತೃಪ್ತಿಕರ ಬೆಳವಣಿಗೆ. ಸಂಘಟಿತ ಕಾರ್ಯದಲ್ಲಿ ಸಫಲತೆ. ಇತರರಿಗೆ ಕೊಟ್ಟ ಹಣ ಮರಳಿ ಸಿಗಲಿದೆ. ಪ್ರೀತಿಪಾತ್ರರ ಜತೆ ಜಗಳವಾಡದಿರಿ.

ಮಿಥುನ ನಿಮಗೆ ಒದಗಿ ಬರುವ ಅವಕಾಶ ಚೆನ್ನಾಗಿ ಬಳಸಿಕೊಳ್ಳಿ. ದೀರ್ಘಾವಧಿ ಯೋಜನೆ ಪೂರ್ಣ ಆಗಲಿದೆ. ನಿಮ್ಮ ನಿರ್ಧಾರಕ್ಕೆ ಸಂಗಾತಿ ಬೆಂಬಲ.

ಕಟಕ ನಿಮ್ಮ ನಡೆನುಡಿ ಎಲ್ಲರ ಗಮನ ಸೆಳೆಯಲಿದೆ. ವೃತ್ತಿಯಲ್ಲಿ ಸಫಲತೆ. ಪ್ರೀತಿಯ ವಿಷಯದಲ್ಲಿ ನಿರಾಶೆ ಉಂಟಾದೀತು. ದೇಹಾಲಸ್ಯ ಸಂಭವ.

ಸಿಂಹ ಎಲ್ಲರ ಜತೆಗಿನ ಸಂಬಂಧ ಚೆನ್ನಾಗಿಡಿ. ಕೆಡುಕು ಮಾತು ಬಿಡಿ. ಸಂಗಾತಿ ಜತೆಗೆ ಸಾಮರಸ್ಯ ಕಾಯ್ದುಕೊಳ್ಳಿ. ಮಕ್ಕಳ ಸಾಧನೆಯಿಂದ ತೃಪ್ತಿ.

ಕನ್ಯಾ ನಿಮ್ಮ ನಿಕಟರ ಜತೆ ಸಂಬಂಧ ಹಾಳು ಮಾಡೀತು. ಕೆಲವರು ನಿಮ್ಮ ಒಳ್ಳೆತನ ದುರುಪಯೋಗ ಮಾಡುವರು. ಖರೀದಿ ಉತ್ಸಾಹ, ಧನವ್ಯಯ.

ತುಲಾ ಕೆಲಸದಲ್ಲಿ ಹೆಚ್ಚು ಪರಿಶ್ರಮ ಬೇಕಾಗುವುದು. ಹಣ ಹೂಡಿಕೆಯಿಂದ ಲಾಭ ಸಿಗಲಿದೆ. ನಿಮಗೆ ಕೇಡು ಬಯಸುವವರ ಕುರಿತಂತೆ ಒಂದು ಕಣ್ಣಿಡಿ.

ವೃಶ್ಚಿಕ ಕಠಿಣ ಪರಿಶ್ರಮದ ಫಲ ಸಿಗಲಿದೆ. ಉದ್ಯೋಗ ಹುಡುಕುವವರಿಗೆ ಶುಭಸುದ್ದಿ. ಕೌಟುಂಬಿಕ ಉದ್ವಿಗ್ನತೆ ನಿವಾರಣೆ. ಹೂಡಿಕೆಯಿಂದ ಲಾಭ.

ಧನು ನಿಮ್ಮಿಷ್ಟದವರ ಪ್ರೀತಿ ಗಳಿಸುವ ಯತ್ನ ಸಫಲ. ಹಾಗೆಂದು ನಿಮ್ಮ ಕರ್ತವ್ಯ ಮರೆಯಬೇಡಿ. ಕೆಲಸ ಪೂರೈಸಲು ಗಮನ ಕೊಡಿ. ಬಂಧುಗಳ ಕಿರಿಕಿರಿ.

ಮಕರ ನಿಮ್ಮ ನಡೆನುಡಿಯಿಂದ ಆಕರ್ಷಣೆಯ ಕೇಂದ್ರವಾಗುವಿರಿ. ಖಾಸಗಿ ಮತ್ತು ವೃತ್ತಿ ಬದುಕು ತೃಪ್ತಿಕರ. ಅಜೀರ್ಣದ ಸಮಸ್ಯೆ ಹೊಟ್ಟೆ ಕೆಡಿಸೀತು.

ಕುಂಭ ಅಧಿಕ ಕೆಲಸದಿಂದ ಆರೋಗ್ಯ ಕೆಡಬಹುದು. ಆದಾಯದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪೂರಕ ಬೆಳವಣಿಗೆ. ನಿಮ್ಮ ಮಾತಿಗೆ ಬೆಲೆ ಸಿಗಲಿದೆ.

ಮೀನ ಅನಗತ್ಯ ವಸ್ತು ಖರೀದಿಯಿಂದ ಧನವ್ಯಯ. ಬಿಕ್ಕಟ್ಟಿಗೆ ಸಂಬಂಧಿಸಿ ಯುಕ್ತ ಸಲಹೆ ಬಂದರೆ ಸ್ವೀಕರಿಸಿ. ಹಠ ಸ್ವಭಾವ ತೋರದಿರಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30
ಅದೃಷ್ಟ ಸಂಖ್ಯೆ : 7,0,2,5

ಕೇಂದ್ರ ರಕ್ಷಣಾ ಸಚಿವರಿಗೆ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಪತ್ರ

ಎಎಂಸಿಎ ರಾಜ್ಯದಲ್ಲೇ ಸ್ಥಾಪಿಸಿ

• **ಬೆಂಗಳೂರು:** ರಕ್ಷಣಾ ಇಲಾಖೆಯ ಅಡಿಯಲ್ಲಿರುವ ಏರೋನಾಟಿಕಲ್ ಡೆವಲಪ್ಮೆಂಟ್ ಏಜೆನ್ಸಿ (ಎಡಿಎ) ಸ್ಥಾಪಿಸಲು ಉದ್ದೇಶಿಸಿರುವ ಮಧ್ಯಮಸ್ತರದ ಸುಧಾರಿತ ಯುದ್ಧವಿಮಾನ (ಅಡ್ವಾನ್ಸ್ಡ್ ಮೀಡಿಯಂ ಕಾಂಬ್ಯಾಟ್ ಏರ್ ಕ್ರಾಫ್ಟ್ (ಎಎಂಸಿಎ) ನಿರ್ಮಾಣದ ಕ್ಯಾಂಪಸ್ಸನ್ನು ಕರ್ನಾಟಕದಲ್ಲೇ ಸ್ಥಾಪಿಸಬೇಕು ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಕೇಂದ್ರ ರಕ್ಷಣಾ ಸಚಿವರಿಗೆ ಪತ್ರ ಬರೆಸಿದ್ದಾರೆ.



ಎಎಂಸಿಎ ಯೋಜನೆಗೆ ಸಂಬಂಧಿಸಿದಂತೆ ನಾವು ರಕ್ಷಣಾ ಸಚಿವಾಲಯ ಮತ್ತು ಎಡಿಎ ಜತೆ ನಿಕಟವಾಗಿ ಕೆಲಸ ಮಾಡಲು ಸಿದ್ಧರಿದ್ದೇವೆ.
■ **ಎಂ.ಬಿ.ಪಾಟೀಲ,** ಕೈಗಾರಿಕಾ ಸಚಿವ

ಈ ಕುರಿತು ರಾಜನಾಥ್ ಸಿಂಗ್ ಅವರಿಗೆ ಪತ್ರ ಬರೆದಿರುವ ಸಚಿವರು, ಕ್ಯಾಂಪಸ್ ಸ್ಥಾಪನೆಗೆ ಅಗತ್ಯವಿರುವ 650 ಎಕರೆ ಭೂಮಿಯನ್ನು ಕೊಡಲು ರಾಜ್ಯ ಸರಕಾರ ಸಿದ್ಧವಿದೆ. ಈ ಯೋಜನೆಯು ರಾಜ್ಯದಲ್ಲೇ ಜಾರಿಗೆ ಬರುವುದು ದೇಶದ ಭದ್ರತೆಯ ದೃಷ್ಟಿಯಿಂದ ಅತ್ಯಂತ ಸೂಕ್ತವಾಗಿದೆ ಎಂದು ಸಚಿವ ಎಂ.ಬಿ. ಪಾಟೀಲ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಎಎಂಸಿಎ ಸ್ಥಾವರ ಸ್ಥಾಪನೆಗೆ ರಾಜ್ಯ ಸೂಕ್ತವಾಗಿದೆ: ದೇಶದ ವೈಮಾಂತರಿಕ್ಷ ಮತ್ತು ರಕ್ಷಣಾ ಉದ್ಯಮ ವಲಯಕ್ಕೆ ರಾಜ್ಯವು ಶೇ.65ರಷ್ಟು ಕೊಡುಗೆ ನೀಡುತ್ತಿದೆ. ಉದ್ದೇಶಿತ ಸಂಸ್ಥೆಗೆ ಆರಂಭದಲ್ಲಿ ಬೇಕಿರುವ 300 ಎಕರೆ (ಯುದ್ಧ ವಿಮಾನ ನಿರ್ಮಾಣ) ಮತ್ತು ಭವಿಷ್ಯದ ದೃಷ್ಟಿಯಿಂದ ಅಗತ್ಯವಿರುವ 350 ಎಕರೆ (ರನ್ ವೇ ನಿರ್ಮಾಣ) ಸ್ಥಳವನ್ನು ಕೂಡಲೇ ಒದಗಿಸಲು ಯಾವುದೇ ತೊಂದರೆ ಇಲ್ಲ. ವೈಮಾಂತರಿಕ್ಷ ಮತ್ತು ರಕ್ಷಣಾ ವಲಯಕ್ಕೆ ಸೇರಿದ ಎಚ್‌ಎಎಲ್, ಇಸ್ರೋ, ಎನ್‌ಎಎಲ್, ಡಿಆರ್‌ಡಿಒ, ಡಿಎಆರ್‌ಇ, ಜಿಟಿಆರ್‌ಇ, ಎಡಿಇ, ಬಿಇಎಂಎಲ್ ಮತ್ತು ಬಿಇಎಲ್ ಮುಂತಾದವೆಲ್ಲ ಬೆಂಗಳೂರಿನಲ್ಲಿವೆ. ಹೀಗಾಗಿ ಎಎಂಸಿಎ ಸ್ಥಾವರ ಸ್ಥಾಪನೆಗೆ ಬೆಂಗಳೂರು ಅಥವಾ ಸುತ್ತಮುತ್ತಲಿನ ಸ್ಥಳಗಳು ಹೇಳಿಮಾಡಿಸಿದಂತಿವೆ ಎಂದು ವಿವರಿಸಿದ್ದಾರೆ.

ಈ ಸ್ಥಾವರವನ್ನು ಸ್ಥಾಪಿಸಲಿರುವ ಎಡಿಎ ಕೇಂದ್ರ ಕಚೇರಿ ಕೂಡ ಬೆಂಗಳೂರಿನಲ್ಲೇ ಇದೆ. ಇದನ್ನು ಕೇಂದ್ರ ಸರಕಾರ ಪರಿಗಣಿಸಬೇಕು. ಇನ್ನೊಂದೆಡೆ, ಟಾಟಾ ಸಮೂಹದವರು ವೇಮಗಲ್‌ನಲ್ಲಿ ಹೆಲಿಕಾಪ್ಟರ್ ಜೋಡಣಾ ಘಟಕ ಸ್ಥಾಪಿಸಿದ್ದಾರೆ. ಜಗದ್ವಿಖ್ಯಾತ ಏರ್ ಬಸ್ ಮತ್ತು ಬೋಯಿಂಗ್ ಕಂಪನಿಗಳು ಕೂಡ ತಮ್ಮ ಬೃಹತ್ ಎಂಜಿನಿಯರಿಂಗ್ ಮತ್ತು ಆರ್ ಆ್ಯಂಡ್ ಡಿ ಘಟಕಗಳನ್ನು ರಾಜ್ಯದಲ್ಲಿ ಹೊಂದಿವೆ. ಇವುಗಳಿಗೆ ಪೂರಕವಾಗಿ ಎರಡು ಸಾವಿರಕ್ಕೂ ಹೆಚ್ಚು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ನಮ್ಮಲ್ಲಿ ಸಕ್ರಿಯವಾಗಿವೆ ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.

ರಾಜ್ಯವು ಪ್ರತ್ಯೇಕ ವೈಮಾಂತರಿಕ್ಷ ಮತ್ತು ರಕ್ಷಣಾ ನೀತಿಯನ್ನು ಹೊಂದಿದ್ದು, ಐದು ಕಡೆಗಳಲ್ಲಿ ಏರೋಸ್ಪೇಸ್ ಹಬ್‌ಗಳನ್ನು ಅಭಿವೃದ್ಧಿ ಪಡಿಸುತ್ತಿದೆ. ಈ ನೀತಿಯಡಿ 6 ಬಿಲಿಯನ್ ಡಾಲರ್ ಬಂಡವಾಳ ಹೂಡಿಕೆ ಆಕರ್ಷಿಸುವ ಗುರಿ ಇದ್ದು, 2027ರ ಕೊನೆಯ ಹೊತ್ತಿಗೆ 70 ಸಾವಿರ ಉದ್ಯೋಗಗಳನ್ನು ಸೃಷ್ಟಿಸಲಾಗುವುದು.

ನಮ್ಮ ತಂಟೆಗೆ ಬಂದರೆ ಪಾಕಿಸ್ತಾನ ಅಸ್ತಿತ್ವವೇ ನಾಶ

ಪುಟ 1➡ ಭಾರತ ವಿರುದ್ಧ ಭಯೋತ್ಪಾದನೆ ಪ್ರಾಯೋಜಿಸುತ್ತಿರುವ ಪಾಕಿಸ್ತಾನ, ವಿಶ್ವದ ಭೂಪಟದಲ್ಲಿ ತಾನು ಉಳಿಯಬೇಕೋ ಬೇಡವೋ ಎಂದು ಚಿಂತನೆ ನಡೆಸುವಷ್ಟರ ಮಟ್ಟಿನ ಆಘಾತಕಾರಿ ಹೊಡೆತವನ್ನು ಸೇನೆ ಪಾಕ್‌ಗೆ ನೀಡಲಿದೆ ಎಂದು ಜ.ದ್ವಿವೇದಿ ಕಳೆದ ಅಕ್ಟೋಬರ್‌ನಲ್ಲಿ ಗುಡುಗಿದ್ದರು.

ನಿರ್ಣಾಯಕ ಪ್ರತ್ಯುತ್ತರ: ಗುಜರಾತ್ ಮತ್ತು ಪಾಕ್‌ನ ಸಿಂಧ್ ಪ್ರಾಂತ್ಯ ನಡುವಣ ಜೌಗುಭೂಮಿ ಸರ್‌ಕ್ರೀಕ್ ಬಳಿ ಪಾಕಿಸ್ತಾನದ ಮಿಲಿಟರಿ ಮೂಲಸೌಕರ್ಯಗಳು ದಿನೇ ದಿನೇ ಬೆಳೆಯುತ್ತಿರುವ ಬಗ್ಗೆ ರಕ್ಷಣಾ ಸಚಿವ ರಾಜನಾಥ ಸಿಂಗ್ ಕಳವಳ ವ್ಯಕ್ತಪಡಿಸಿರುವ ಬೆನ್ನಲ್ಲೇ, ಜ.ದ್ವಿವೇದಿ ಪಾಕ್‌ನ ದುಷ್ಟಪ್ರವೃತ್ತಿಗೆ ಸಿಡಿಲಿನಂತಹ ಎಚ್ಚರಿಕೆ ನೀಡಿದ್ದಾರೆ. ಸುದೀರ್ಘ ವರ್ಷಗಳಿಂದ ಮಾತುಕತೆ ಯತ್ನಗಳು ಮುಂದುವರಿದಿರುವ ಹೊರತೂ ಪಾಕಿಸ್ತಾನ ಗಡಿ ವಿವಾದ ಜೀವಂತ ಕಾಯ್ದುಕೊಳ್ಳಲು ಶ್ರಮಿಸುತ್ತಿದೆ ಮತ್ತು ಪಾಕಿಸ್ತಾನದ ಉದ್ದೇಶವಾದರೂ ಏನೆಂದು ರಕ್ಷಣಾ ಸಚಿವ ಸಿಂಗ್ ಪ್ರಶ್ನಿಸಿದ್ದರು.

ಸರ್‌ಕ್ರೀಕ್‌ನಲ್ಲಿ ಪಾಕ್ ಯಾವುದೇ ದುಸ್ಸಾಹಸಕ್ಕಿಳಿದದ್ದೇ ಆದಲ್ಲಿ ಭಾರತ ಅತ್ಯಂತ ನಿರ್ಣಾಯಕ ಪ್ರತ್ಯುತ್ತರವೀಯಲಿದೆ ಎಂದು ಸಚಿವರು ಪಾಕ್‌ಗೆ ಎಚ್ಚರಿಕೆ ನೀಡಿದ್ದರು. ಸೇನೆ, ಗಡಿ ಭದ್ರತಾ ಪಡೆ ಗಡಿಗಳನ್ನು ಅತ್ಯಂತ ಸನ್ನದ್ಧ ಸ್ಥಿತಿಯಲ್ಲಿ ಕಾಯುತ್ತಿವೆ ಎಂದು ಸಚಿವರು ಎಚ್ಚರಿಸಿದ್ದರು.

ಕಳೆದ ವರ್ಷ ಏ.22ರ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಅನ್ಯಾಯವಾಗಿ ಬಲಿಯಾದ ಭಾರತೀಯ ಪ್ರವಾಸಿಗರ ಸಾವಿಗೆ ನ್ಯಾಯ ನೀಡುವನ್ನಯ, ಭಾರತದ ಸೇನಾ ಪಡೆ ಮೇ 7ರಂದು ಆಪರೇಶನ್ ಸಿಂದೂರ್ ನಡೆಸಿತ್ತು ಮತ್ತು ಆರಂಭಿಕ ಹಂತದಲ್ಲಿ ಪಾಕ್ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿದ್ದ 9 ಭಯೋತ್ಪಾದಕ ನೆಲೆಗಳನ್ನು ಧ್ವಂಸಗೊಳಿಸಿತ್ತು. ಮೊದಲ ಹಂತದಲ್ಲಿ ಪಾಕ್‌ನ ಮಿಲಿಟರಿ ಸೌಕರ್ಯಗಳ ಮೇಲೆ ಭಾರತೀಯ ಸೇನಾಪಡೆ ದಾಳಿ ನಡೆಸಿರಲಿಲ್ಲ. ಸಂಘರ್ಷ ನಿಲ್ಲಿಸುವಂತೆ ಪಾಕಿಸ್ತಾನ ಗೋಗರೆದ ಹಿನ್ನೆಲೆಯಲ್ಲಿ, ಮೇ 10ರಂದು ಭಾರತ ಕದನ ವಿರಾಮ ಘೋಷಿಸಿ ಸಂಘರ್ಷ ಅಂತ್ಯಗೊಳಿಸಿತ್ತು.

ಎನ್‌ಸಿಬಿ ವಶಕ್ಕೆ ₹182 ಕೋಟಿ ಜಿಹಾದಿ ಡ್ರಗ್

ಪುಟ 1➡ ನಮ್ಮ ಎನ್‌ಸಿಬಿ ಅಧಿಕಾರಿಗಳ ಧೈರ್ಯವನ್ನು ನಾನು ಪ್ರಶಂಸಿಸುತ್ತೇನೆ ಎಂದು ಗೃಹ ಸಚಿವ ಅಮಿತ್ ಶಾ ಹೊಗಳಿದ್ದಾರೆ. ಕೇಪ್‌ಟೇಗೊನ್ ಮಾದಕದ್ರವ್ಯ ಸಾಗಣೆಗೆ ಭಾರತವನ್ನು ಸಾಗಣೆ ಮಾರ್ಗವನ್ನಾಗಿ ಬಳಸಲಾಗುತ್ತಿದೆ ಎಂಬ ವಿದೇಶಿ ಮಾದಕದ್ರವ್ಯ ವಿರೋಧಿ ಸಂಸ್ಥೆಯೊಂದರ ರಹಸ್ಯ ಮಾಹಿತಿ ಸ್ವೀಕರಿಸಿದ ಎನ್‌ಸಿಬಿ ರೇಜ್‌ಪಿಲ್ ಕಾರ್ಯಾಚರಣೆ ನಡೆಸಿದ್ದು, ಭಾರೀ ಮಾದಕದ್ರವ್ಯ ವಶಪಡಿಸಲಾಗಿದೆ.

ಚಪಾತಿ ಮೇಕರ್‌ನಲ್ಲಿ 31.5 ಕೆಜಿ ಮಾದಕದ್ರವ್ಯ ವಶ: ಮೇ 11ರಂದು ದಿಲ್ಲಿಯ ನೆಬ್ ಸರಾಯ್‌ನ ಮನೆಯೊಂದರ ಮೇಲೆ ಎನ್‌ಸಿಬಿ ಅಧಿಕಾರಿಗಳು ದಾಳಿ ನಡೆಸಿದ್ದು, 31.5 ಕೆ.ಜಿ. ಕೇಪ್‌ಟೇಗೊನ್ ಮಾತ್ರೆಗಳನ್ನು ವಶಪಡಿಸಿತ್ತು. ಚಪಾತಿಮೇಕರ್‌ನೊಳಗೆ ಮಾದಕದ್ರವ್ಯ ಮಾತ್ರೆಗಳನ್ನಿಟ್ಟು ಸೌದಿ ಅರೇಬಿಯಾದ ಜೆಡ್ಡಾಗೆ ರಫ್ತು ಮಾಡುವ ಉದ್ದೇಶವಿತ್ತು. ಪ್ರವಾಸಿ ವೀಸಾದಲ್ಲಿ 2024ರ ನ.14ರಂದು ಭಾರತ ಪ್ರವೇಶಿಸಿದ್ದ ಸಿರಿಯಾ ಪ್ರಜೆ ಈ ಮನೆ ಬಾಡಿಗೆಗೆ ಪಡೆದಿದ್ದ. ಆತನ ವೀಸಾ ಅವಧಿ 2025ರ ಜ.12ಕ್ಕೆ ಕೊನೆಗೊಂಡಿತ್ತು ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ.

ಏನಿದು ಕೇಪ್‌ಟೇಗೊನ್?

ಪುಟ 1➡ ಕೇಪ್‌ಟೇಗೊನ್ ಸೇವನೆ ಪರಿಣಾಮ ಕೋಪ ಮತ್ತು ಹತಾಶೆ, ಆಕ್ರಮಣಕಾರಿ ಸ್ವಭಾವ ಮತ್ತು ಅಪಾಯ ಎದುರಿಸುವಲ್ಲ ಮನಸ್ಥಿತಿ ಮತ್ತು ಒತ್ತಡದಲ್ಲೂ ಯುದ್ಧ ಚಟುವಟಿಕೆ ನಡೆಸುವಲ್ಲ ಕೃತಕ ಬಲ ನೀಡುತ್ತದೆ ಎಂದು ತಿಳಿದುಬಂದಿದೆ.

ಮಾದಕದ್ರವ್ಯ ಮುಕ್ತ ಭಾರತ: ಮಾದಕದ್ರವ್ಯ ಮುಕ್ತ ಭಾರತ ನಿರ್ಮಾಣಕ್ಕೆ ಮೋದಿ ಸರ್ಕಾರ ಕಟಿಬದ್ಧವಾಗಿದೆ. ಆಪರೇಷನ್ ರೇಜ್‌ಪಿಲ್ ಮಾದಕದ್ರವ್ಯ ವಿರೋಧಿ ಕಾರ್ಯಾಚರಣೆಯನ್ನು ನಡೆಸಿದ ಎನ್‌ಸಿಬಿ, 182 ಕೋಟಿ ರೂ. ಮೌಲ್ಯದ ಜಿಹಾದಿ ಡ್ರಗ್ ಹೆಸರಿನ ಕೇಪ್‌ಟೇಗೊನ್ ಮೊದಲ ರವಾನೆಯನ್ನು ವಶಪಡಿಸಿದ್ದಾರೆ ಎಂದು ಶಾ ಘೋಷಿಸಿದ್ದಾರೆ.

ಶೂನ್ಯ ಸಹಿಷ್ಣುತೆ: ಮಧ್ಯಪ್ರಾಚ್ಯಕ್ಕೆ ಸಾಗಿಸಲಾಗುತ್ತಿದ್ದ ಮಾದಕದ್ರವ್ಯ ಸಾಗಣೆಯನ್ನು ಪತ್ತೆಹಚ್ಚಿದ್ದಲ್ಲದೆ, ವಿದೇಶಿ ಪ್ರಜೆಯನ್ನು ಬಂಧಿಸಿರುವುದು, ಮಾದಕವಸ್ತುಗಳ ವಿರುದ್ಧ ನಮ್ಮ ಸರ್ಕಾರದ ಶೂನ್ಯ ಸಹಿಷ್ಣುತೆಗೆ ಉದಾಹರಣೆಗಳಾಗಿವೆ ಎಂದು ಶಾ ಹೇಳಿದ್ದಾರೆ.

ಅಭಿಯಾನಕ್ಕೆ ಭಾರೀ ಜನಸ್ಪಂದನೆ: ಡಿಕೆಶಿ

ಪುಟ 1➡ ನಿಗದಿತ ನಂಬರ್ ನೀಡಿದ ತಕ್ಷಣ 2004ರ ನಂತರದ ಎಲ್ಲಾ ದಾಖಲೆಗಳು ದೊರೆಯುತ್ತವೆ. ಸಬ್ ರಿಜಿಸ್ಟ್ರಾರ್ ಕಚೇರಿಗೆ ಲಿಂಕ್ ಮಾಡಲಾಗಿದೆ. ಅರ್ಹ ಮಾಲೀಕರಿಗೆ ಖಾತೆ ಮಾಡಿಕೊಡಲಾಗುವುದು ಎಂದು ಹೇಳಿದರು.

ಪ್ರತಿ ಶನಿವಾರ ನನ್ನ ಇ- ಖಾತೆ ಅಭಿಯಾನ: ಆಸ್ತಿ ಮೌಲ್ಯಗಳನ್ನು ಹೆಚ್ಚಳ ಮಾಡಲು ಬಿ ಖಾತೆಯಿಂದ ಎ ಖಾತೆಗೆ ಪರಿವರ್ತನೆ ಮಾಡಿಕೊಡಲಾಗುತ್ತಿದೆ. ಇದು ಐತಿಹಾಸಿಕ ತೀರ್ಮಾನ. ಇದರಿಂದ ಬ್ಯಾಂಕ್‌ನಲ್ಲಿ ಸಾಲ ಪಡೆಯಬಹುದು ಹಾಗೂ ಇತರೆ ಸೌಲಭ್ಯಗಳನ್ನು ನಿಮ್ಮದಾಗಿಸಿಕೊಳ್ಳಬಹುದು. ಬೆಂಗಳೂರಿನಲ್ಲಿರುವ 23 ಲಕ್ಷ ಆಸ್ತಿಗಳಲ್ಲಿ 16 ಲಕ್ಷ ಎ ಖಾತೆಗಳಿದ್ದರೆ 7 ಲಕ್ಷ ಬಿ ಖಾತೆಗಳಿವೆ. ಕೆಳ ಮಟ್ಟದ ಅಧಿಕಾರಿಗಳು ಖಾತೆ ವಿಚಾರವಾಗಿ ಲಂಚ ಪಡೆದು ಕಿರುಕುಳ ನೀಡುತ್ತಿದ್ದರು ಎನ್ನುವುದು ನನ್ನ ಗಮನಕ್ಕೆ ಬಂದಿತ್ತು. ಆದಕ್ಕಾಗಿ ಪ್ರತಿ ಶನಿವಾರ ಅಭಿಯಾನ ನಡೆಸಲಾಗುವುದು ಎಂದು ತಿಳಿಸಿದರು.

100 ದಿನ ರಿಯಾಯಿತಿ: ನಿಮ್ಮ ಆಸ್ತಿ ದಾಖಲೆಗಳಲ್ಲಿ ತೊಂದರೆಯಿದ್ದರೆ ಅಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಲಿದ್ದಾರೆ. ನಿಮ್ಮ ಆಸ್ತಿಗಳಿಗೆ ಗುರುತಿನ ಸಂಖ್ಯೆ ನೀಡಲಾಗಿರುತ್ತದೆ. ಇದನ್ನು ಬಳಸಿಕೊಂಡು ತಪ್ಪಿರುವ ದಾಖಲೆಗಳನ್ನು ಸರಿ ಮಾಡಲಾಗುವುದು. ನಿಮ್ಮ ಆಸ್ತಿ ಮೌಲ್ಯದ ಶೇ.5ರಷ್ಟು ಮೊತ್ತವನ್ನು ಕಟ್ಟಬೇಕಿತ್ತು. ಆದರೆ 100 ದಿನಗಳ ಕಾಲ ರಿಯಾಯಿತಿ ನೀಡಿದ್ದು ಶೇ.2ರಷ್ಟು ಶುಲ್ಕ ಪಾವತಿ ಮಾಡುವ ಅವಕಾಶ ಕಲ್ಪಿಸಲಾಗಿದೆ.



ದಲ್ಲಾಳಿಗಳನ್ನು ದೂರ ಇಡಬೇಕು. ಯಾವ ಅಧಿಕಾರಿ ಲಂಚ ಕೇಳಿದರೂ ದೂರು ನೀಡುವ ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ನಿರ್ದಿಷ್ಟ ದೂರವಾಣಿ ಸಂಖ್ಯೆ ನೀಡಲಾಗುವುದು. ಲಂಚ ಕೇಳಿದರೆ ದೂರು ನೀಡಬಹುದು. ಅಂತಹವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು.
■ **ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

ಇದು ಸಾರ್ವಜನಿಕರಿಗೆ ಸುವರ್ಣಾವಕಾಶ. ನಿಮ್ಮ ಖಾತೆಯನ್ನು ನಾವೇ ಫೈಲ್ ರೂಪದಲ್ಲಿಯೇ ನೀಡುತ್ತೇವೆ. ಅದರಲ್ಲಿ ನಿಮ್ಮ ಹಾಗೂ ಮನೆಯ ಫೋಟೋ ಇರುತ್ತದೆ. ಆನ್‌ಲೈನ್ ಮೂಲಕವೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಯಾರೂ ಇದನ್ನು ನಕಲು ಮಾಡಲು ಸಾಧ್ಯವಿಲ್ಲ ಎಂದು ಮಾಹಿತಿ ನೀಡಿದರು.

ಮೆಟ್ರೋದಲ್ಲಿ ಪ್ರಯಾಣಿಸಿದ ಬಿ.ವೈ.ವಿಜಯೇಂದ್ರ

ಪುಟ 1➡ ಪ್ರಧಾನಿಯವರು ಕರೆ ನೀಡಿರುವಾಗ ಎಲ್ಲರೂ ಬೆಂಬಲಿಸಬೇಕು. ಖಾಸಗಿ ವಾಹನಗಳನ್ನು ಬಳಸುವ ಬದಲು ಬಸ್, ಮೆಟ್ರೋ, ರೈಲು ಮುಂತಾದ ಸಾರ್ವಜನಿಕ ಸಾರಿಗೆ ಬಳಸಬೇಕು ಕರೆನೀಡಿದರು. ತೈಲ ಬೆಲೆ ಏರಿಕೆ ಯಾಕೆ ಆಗುತ್ತಿದೆ ಎಂದು ವಿರೋಧ ಪಕ್ಷ ಕಾಂಗ್ರೆಸ್ ಮುಖಂಡರಿಗೆ ಗೊತ್ತಿಲ್ಲವೇ, ಒಂದು ವೇಳೆ ರಾಜೀನಾಮೆ ನೀಡುವುದಿದ್ದರೆ ಎರಡು ವರ್ಷಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಜೀನಾಮೆ ಕೊಡಬೇಕಿತ್ತು. ಏಕೆಂದರೆ ಅವರು ಅಷ್ಟು ಬೆಲೆ ಏರಿಕೆ ಮಾಡಿದ್ದಾರೆ. ತೈಲದ ಮೇಲೆ ತೆರಿಗೆಯನ್ನು ನಾಲ್ಕೈದು ಬಾರಿ ಏರಿಕೆ ಮಾಡಿದ್ದಾರೆ ಎಂದು ಹೇಳಿದರು.

ರೈಲು, ಬಸ್ ಪ್ರಯಾಣಕ್ಕೆ ಆದ್ಯತೆ: ಸೋಮಣ್ಣ

• **ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರ ಮನವಿಯಂತೆ ನಾನೂ ರೈಲು, ಬಸ್‌ನಲ್ಲಿ ಓಡಾಡ್ತೇನೆ. ಎಲ್ಲೆಲ್ಲಿ ಅವಶ್ಯಕತೆ, ಅನುಕೂಲ ಇದೆಯೋ ಅಲ್ಲೆಲ್ಲ ರೈಲು ಮೂಲಕ ಪ್ರಯಾಣ ಮಾಡುತ್ತೇನೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.



ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು, ಹುಬ್ಬಳ್ಳಿ, ತುಮಕೂರು ಮತ್ತಿತರ ಕಡೆ ರೈಲಿನಲ್ಲೇ ಹೋಗುತ್ತೇನೆ ಎಂದು ಹೇಳಿದ್ದಾರೆ. ಈಗಾಗಲೇ ವಾಹನಗಳ ಬಳಕೆ ಕಡಿಮೆ ಮಾಡಿದ್ದೇನೆ. ಸಿಬ್ಬಂದಿ ಬಳಕೆ ಕಡಿಮೆ ಮಾಡಿದ್ದೇನೆ. ದುಂದುವೆಚ್ಚ ಏನೂ ಮಾಡಲ್ಲ. ರಾಜ್ಯದಲ್ಲಿ ಸರ್ಕಾರ ಒಂದು ಎಸ್ಕಾರ್ಟ್ ವಾಹನ ಕೊಟ್ಟಿದೆ. ದೆಹಲಿಗೆ ರೈಲಿನಲ್ಲಿ ಹೋಗಲು ಆಗಲ್ಲ, ಫ್ಲೈಟ್ ಅನಿವಾರ್ಯ. ಸ್ಥಳೀಯವಾಗಿ ರೈಲು ಪ್ರಯಾಣಕ್ಕೆ ಆದ್ಯತೆ ಕೊಡುತ್ತೇನೆ ಎಂದರು. ಜನರು ದುಂದುವೆಚ್ಚ ಕಡಿಮೆ ಮಾಡಬೇಕು. ರಾಜ್ಯ ಸರ್ಕಾರ ದರ ಏರಿಕೆ ಮಾಡಿ ಜನರ ಮೇಲೆ ದೊಡ್ಡ ಹೊರೆಯನ್ನೇ ಹೊರಿಸಿದೆ ಎಂದು ಹೇಳಿದರು.

ರಾಜ್ಯಕ್ಕೆ ಹೆಚ್ಚುವರಿ 1,122 ವೈದ್ಯ ಸೀಟು

ಪುಟ 1➡ ಕೇಂದ್ರ ಮತ್ತು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯು ಮೇ 15ರಂದು ಅಂತಿಮ ಮುದ್ರೆ ಹಾಕಿದೆ. ಒಟ್ಟಾರೆಯಾಗಿ ರಾಜ್ಯಕ್ಕೆ 1,090 ಕೋಟಿ ರೂ. ದೊರೆಯಲಿದೆ ಎಂದು ಹೇಳಿದರು. ಒಂದು ಸಾವಿರ ಮೆಡಿಕಲ್ ಸೀಟ್ ರಾಜ್ಯವೊಂದಕ್ಕೆ ಸಿಕ್ಕಿರುವುದು ದಾಖಲೆಯಾಗಿದೆ. ಕರ್ನಾಟಕದ ಸಾಧನೆಗೆ ಇದು ಪೂರಕವಾದ ಸಾಕ್ಷಿಯಾಗಿದೆ ಎಂದು ಡಾ. ಪಾಟೀಲ್ ಹೇಳಿದರು. ವೈದ್ಯ ಕ್ಷೇತ್ರದಲ್ಲಿ ಸಾಧನೆ ಮಾಡುವವರಿಗೆ ಅತಿ ಹೆಚ್ಚು ಸಾಧನೆ ಮಾಡಲು ಕರ್ನಾಟಕದಲ್ಲಿ ಈಗ ವಿಪುಲ ಅವಕಾಶಗಳು ದೊರೆತಂತಾಗುತ್ತದೆ. ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಡಾ. ಶರಣಪ್ರಕಾಶ ಪಾಟೀಲ್ ಸಲಹೆ ನೀಡಿದರು.

ಕೋರ್ಟ್ ನಿರ್ದೇಶನದಲ್ಲಿ ನೀಟ್ ತನಿಖೆಯಾಗಲಿ

• **ಬೆಂಗಳೂರು:** ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಇಡೀ ವಿದ್ಯಾರ್ಥಿ ಸಮೂಹಕ್ಕೆ ಮಾಡಿರುವ ಬಹುದೊಡ್ಡ ಅನ್ಯಾಯವಾಗಿದೆ. ವೈದ್ಯರಾಗಬೇಕು ಎಂಬ ಸಾವಿರಾರು ಕನಸುಗಳನ್ನು ಹೊತ್ತ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕೇಂದ್ರ ಸರ್ಕಾರ ಕೊಳ್ಳಿ ಇಟ್ಟಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ಟೀಕಿಸಿದ್ದಾರೆ. ನೀಟ್ ಬದಲು ಕರ್ನಾಟಕದಲ್ಲಿರುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಅತ್ಯುತ್ತಮ ಮಾದರಿಯಾಗಿದೆ. ಇದನ್ನು ಅಳವಡಿಸಿಕೊಂಡರೆ ಉತ್ತಮ. ಈ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದ್ದೇವೆ. ಆದರೂ ಕೇಂದ್ರ ಸರ್ಕಾರ ಗಮನಹರಿಸಿಲ್ಲ ಎಂದರು. ಪ್ರತಿ ವರ್ಷವೂ ನೀಟ್ ವೇಳೆ ಗೊಂದಲಗಳು ಆಗುತ್ತಲೇ ಇವೆ. ಈ ಬಾರಿ ಆಗಿರುವ ಅನಾಹುತಕ್ಕೆ ಸಂಬಂಧಪಟ್ಟ ಸಚಿವರು ರಾಜೀನಾಮೆ ನೀಡಬೇಕು. ನ್ಯಾಯಾಲಯದ ನಿರ್ದೇಶದಲ್ಲಿಯೇ ತನಿಖೆ ನಡೆಯಬೇಕು ಎಂದು ಡಾ. ಪಾಟೀಲ್ ಆಗ್ರಹಿಸಿದರು.

ಮಹೇಶ್ ಬಾಬುಗೆ ಪಿಎಚ್‌ಡಿ

• **ಬೆಂಗಳೂರು:** ಬಳ್ಳಾರಿ ಜಿಲ್ಲೆಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ಕೆಎಎಸ್ ಅಧಿಕಾರಿ ಮಹೇಶ್ ಬಾಬು ಎನ್. ಅವರಿಗೆ ಅನ್ವಯಿಕ ಭೂ –ವಿಜ್ಞಾನ ವಿಷಯದಲ್ಲಿ ಡಾಕ್ಟರ್ ಆಫ್ ಫಿಲಾಸಫಿ (ಪಿ.ಎಚ್‌ಡಿ) ಪದವಿಯನ್ನು ಪ್ರಧಾನ ಮಾಡಿದೆ. ಈ ಪದವಿಯು ಭಾರತದ ಪೂರ್ವ ಧಾರವಾಡ ಕ್ರೇಟನ್‌ನ ಹಟ್ಟಿ–ಮಸ್ಕಿ ಭಾಗದ ಸಿಸ್ಟ್‌ಬೆಲ್ಟ್ ಪ್ರದೇಶದ ಅರೆ–ಶುಷ್ಕ ಪ್ರದೇಶದಲ್ಲಿ ಜಲ ಸಂಪನ್ಮೂಲ ಅಭಿವೃದ್ಧಿಯ ಭೌಗೋಳಿಕ ವಿಶ್ಲೇಷಣೆ ಎಂಬ ಅವರ ಸಂಶೋಧನ ಪ್ರಬಂಧದ ಮನ್ನಣೆಯಾಗಿ ನೀಡಲಾಗಿದೆ. ಈ ಸಂಶೋಧನೆಯನ್ನು ಅನ್ವಯಿಕ ಭೂ–ವಿಜ್ಞಾನ ವಿಭಾಗದ ಅಧ್ಯಕ್ಷ ಡಾ.ಬಸವರಾಜ್ ಹಟ್ಟಿ ಅವರ ಮಾರ್ಗದರ್ಶನದಲ್ಲಿ ನಡೆಸಲಾಯಿತು. ತಮ್ಮ ಸಂಶೋಧನಾ ಅವಧಿಯಲ್ಲಿ ಮಹೇಶ್‌ಬಾಬು ಎನ್. ಅವರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಗೋಷ್ಠಿಗಳು ಹಾಗೂ ಸಹಪಾಠ ವಿಮರ್ಶಿತ ನಿಯತಕಾಲಿಕೆಗಳಲ್ಲಿ ಹಲವಾರು ಸಂಶೋಧನಾ ಪ್ರಬಂಧಗಳನ್ನು ಪ್ರಸ್ತುತಪಡಿಸಿದ್ದಾರೆ ಮತ್ತು ಪ್ರಕಟಿಸಿದ್ದಾರೆ.



ಅಸೀಮ ಕನಸಿನ ಭಾರತ

ಪುಟ 1➡ ಇದರಿಂದ ಭಾರತದ ಸಾಮರ್ಥ್ಯ ವರ್ಧಿಸುವುದಲ್ಲದೆ, ತಮಗೆ ಹೂಡಿಕೆ ಮೇಲೆ ಲಭಿಸುವ ಆದಾಯ ಕೂಡ ಅತ್ಯಧಿಕವಾಗುವುದು ಮತ್ತು ಇದು ಮೋದಿ ಗ್ಯಾರಂಟಿ ಎಂದು ಪ್ರಧಾನಿ ಮೋದಿ ಅಲ್ಲಿದ್ದ ಜನಸ್ತೋಮದ ಮೆಚ್ಚುಗೆಯ ಕರತಾಡನದ ಮಧ್ಯೆ ಘೋಷಿಸಿದರು.

ಪ್ರಯತ್ನಗಳೂ ಅಸೀಮ: ಇಂದಿನ ಭಾರತವು ಬೃಹತ್ತಾದ ಕನಸುಗಳನ್ನು ಕಾಣುತ್ತಿದೆ. ದೇಶವಿಂದು ಏನು ಹೇಳುತ್ತಿದೆಯೆಂದರೆ, ನಾವು ಕೇವಲ ಪರಿವರ್ತನೆ ಬಯಸುತ್ತಿಲ್ಲ, ಶ್ರೇಷ್ಠತೆಯನ್ನು ಬಯಸುತ್ತೇವೆ. ಬರೀ ಶ್ರೇಷ್ಠತೆಯಲ್ಲ, ತ್ವರಿತಗತಿಯನ್ನೂ ಆಶಿಸುತ್ತಿದ್ದೇವೆ. ಹಾಗಾಗಿ ಭಾರತದಲ್ಲಿ ಆಶೋತ್ತರಗಳು ಅಸೀಮವಿರುವಾಗ ಪ್ರಯತ್ನಗಳೂ ಮೇರೆಮೀರುತ್ತಿವೆ ಎಂದು ಪ್ರಧಾನಿ ಮೋದಿ ಬಣ್ಣಿಸಿದರು.

ಚಾರಿತ್ರಿಕ ಚಂದ್ರಯಾನ ಮಿಷನ್: ಭಾರತ ಪ್ರಸಕ್ತ ಅಭೂತಪೂರ್ವ ಪರಿವರ್ತನೆಗಳಿಗೆ ಸಾಕ್ಷಿಯಾಗುತ್ತಿದೆ. ಭಾರತದ ಆತಿಥೇಯದಲ್ಲಿ ಜಗತ್ತಿನ ಬೃಹತ್ ಮತ್ತು ಅತ್ಯಂತ ಯಶಸ್ವೀ ಎಐ ಶೃಂಗಸಭೆ ಈಚೆಗಷ್ಟೇ ಸಂಪನ್ನಗೊಂಡಿದೆ. ಇದಕ್ಕೆ ಮುನ್ನ ಜಿ 20 ಶೃಂಗಸಭೆಯನ್ನು ಭಾರತ ಯಶಸ್ವೀ ಆಯೋಜಿಸಿದೆ. ಹಾಗೆಂದು ಇದು ಕೇವಲ ಒಮ್ಮೆಯಷ್ಟೆ ನಡೆಯುವ ಕಾರ್ಯಕ್ರಮವಲ್ಲ, ಇಂತಹ ಕಾರ್ಯಕ್ರಮಗಳೀಗ ಇಂದಿನ ಭಾರತದ ನಿರಂತರ ಲಕ್ಷಣವಾಗಿದೆ. ಯಾರೂ ಇದುವರೆಗೂ ಕಾಲಿಡದ ಚಂದ್ರನ ದೂರದ ಭಾಗ ಅಥವಾ ಕತ್ತಲೆ ಅಂಗಣಕ್ಕೆ 2023ರಲ್ಲಿ, ನಮ್ಮ ಬಾಹ್ಯಾಕಾಶ ವಿಜ್ಞಾನಿಗಳು ಪದಾರ್ಪಿಸಿ, ಭಾರತದ ತ್ರಿವರ್ಣ ಧ್ವಜವನ್ನಲ್ಲಿ ನೆಟ್ಟಿದ್ದಾರೆ. ಈ ಮೂಲಕ ಭಾರತವು ಅಭೂತಪೂರ್ವ ಚರಿತ್ರೆ ಸೃಷ್ಟಿಸಿದೆ ಎಂದು ಪ್ರಧಾನಿ ಮೋದಿ ಬಾಹ್ಯಾಕಾಶ ರಂಗದಲ್ಲಿ ಭಾರತೀಯರ ಸಾಧನೆ ಕೊಂಡಾಡಿದರು.

125 ಮೀರಿದೆ ಯೂನಿಕಾರ್ನ್: 2014ರಲ್ಲಿ ಭಾರತದಲ್ಲಿದ್ದುದು ಬರೀ ನಾಲ್ಕು ಯೂನಿಕಾರ್ನ್‌ಗಳು. ಇಂದೀಗ ಸಕ್ರಿಯ ಯೂನಿಕಾರ್ನ್‌ಗಳ ಸಂಖ್ಯೆ 125 ಮೀರಿದೆ. ಎಐ, ರಕ್ಷಣಾರಂಗ, ಬಾಹ್ಯಾಕಾಶ ರಂಗಗಳಲ್ಲಿ ನಮ್ಮ ಸ್ಟಾರ್ಟ್‌ಅಪ್‌ಗಳು ಗಮನಾರ್ಹ ಕೆಲಸ ಮಾಡುತ್ತಿವೆ. ಸಂಶೋಧನೆ ಮತ್ತು ಆವಿಷ್ಕಾರಗಳ ಪ್ರಸ್ತುತ ಸಂಸ್ಕೃತಿ ದಿನೇದಿನೆ ವಿಸ್ತೃತಗೊಳ್ಳುತ್ತಿದೆ. ಅಶೋತ್ತರಪೂರ್ವಕ ಭಾರತದ ಯಾನವು ಅದರ ಪ್ರಜಾಸತ್ತೆಯ ಬಲವರ್ಧಿಸುತ್ತಿದೆ ಎಂದು ಹಲವು ವಲಯಗಳಲ್ಲಿನ ಈಚಿನ ವಿಧಾನಸಭಾ ಚುನಾವಣೆಗಳನ್ನು ಉಲ್ಲೇಖಿಸಿದರು.

ಪ.ಬಂಗಾಳ, ಕೇರಳ, ತಮಿಳುನಾಡು ಮತ್ತು ಪುದುಚೇರಿಯಲ್ಲಿ 80ರಿಂದ 90ಶೇಕಡಾ ಮತದಾನವಾಗಿದೆ. ಮಹಿಳೆಯರ ಪಾಲ್ಗೊಳ್ಳುವಿಕೆ ಗಮನಾರ್ಹವಾಗಿ ಹೆಚ್ಚಿದೆ. ಪ್ರತಿ ರಾಜ್ಯದಲ್ಲೂ ಇದೇ ಟ್ರೆಂಡ್ ಗೋಚರಿಸಿದೆ. ಇಂದಿನ ಭಾರತದ ಮತದಾರರು ತುಂಬ ಪ್ರಜ್ಞಾವಂತರು. ಪ್ರತಿ ವರ್ಷವೂ ಮತದಾನದ ದಾಖಲೆ ಮುರಿಯುತ್ತಿರುವುದು ಹೆಮ್ಮೆಯ ಸಂಗತಿ ಎಂದು ಪ್ರಧಾನಿ ಮೋದಿ ನೆಮ್ಮದಿ ವ್ಯಕ್ತಪಡಿಸಿದರು.

ಪ್ರಧಾನಿ ಮೋದಿ ಸ್ವಾಗತಕ್ಕೆ ಗರ್ಬಾ ನೃತ್ಯ ಪ್ರದರ್ಶನ

ಪುಟ 1➡ ಭಾರತೀಯ ಸಮುದಾಯದ ಹಲವು ನೃತ್ಯ ಕಲಾವಿದರು ಪ್ರಧಾನಿ ಮೋದಿ ಉಳಿದುಕೊಂಡಿದ್ದ ಹೋಟೆಲ್‌ನ ಹೊರಭಾಗದಲ್ಲಿ ಸಾಂಸ್ಕೃತಿಕ ಮತ್ತು ಶಾಸ್ತ್ರೀಯ ನೃತ್ಯಗಳನ್ನು ಪ್ರದರ್ಶಿಸಿದರು ಮತ್ತು ಪಿಎಂ ಮೋದಿ ಜತೆ ಸಂವಾದ ನಡೆಸುವ ಅವಕಾಶ ಸಿಕ್ಕಿದ ಬಗ್ಗೆ ತುಂಬ ಧನ್ಯತೆ ವ್ಯಕ್ತಪಡಿಸಿದರು. ಗರ್ಬಾ ನೃತ್ಯ ಪ್ರದರ್ಶನ ಮಾಡಿ ಪ್ರಧಾನಿ ಮೋದಿ ಅವರನ್ನು ಸ್ವಾಗತಿಸಿದ ಕಲಾ ತಂಡದಲ್ಲಿದ್ದ ಕಲಾವಿದ ಗೌತಮ್, ಪ್ರಧಾನಿ ಮೋದಿ ಅವರೊಂದಿಗೆ ಮಾತನಾಡಲು ನಮಗೆಲ್ಲ ಅವಕಾಶ ದೊರೆಯಿತು. ತುಂಬ ಖುಷಿಯಾಯಿತು ಎಂದು ಹರ್ಷ ವ್ಯಕ್ತಪಡಿಸಿದ್ದಾರೆ. ಇದೊಂದು ಅದ್ಭುತ ಅನುಭವ ಎಂದು ಕಲಾವಿದೆ ರೀಮಾ ಖುಷಿ ವ್ಯಕ್ತಪಡಿಸಿದ್ದಾರೆ.

ವಿಶೇಷ ಕ್ಷಣದಲ್ಲೇ ಭೇಟಿ

ಪುಟ 1➡ ಡಚ್ ಪ್ರಧಾನಿ ರೋಬ್ ಜೆತೆನ್ ಜತೆ ದ್ವಿಪಕ್ಷೀಯ ಮಾತುಕತೆ ನಡೆಸಲಿರುವ ಪ್ರಧಾನಿ ಮೋದಿ, ದೊರೆ ವಿಲಿಯಂ ಅಲೆಕ್ಸಾಂಡರ್ ಮತ್ತು ಮಹಾರಾಣಿ ಮ್ಯಾಕ್ಸಿಮಾರನ್ನು ಭೇಟಿಯಾಗುವರು. ಸಮುದಾಯ ಕಾರ್ಯಕ್ರಮವೊಂದನ್ನುದ್ದೇಶಿಸಿ ಪ್ರಧಾನಿ ಮೋದಿ ಭಾಷಣ ಮಾಡುವ ನಿರೀಕ್ಷೆಯಿದೆ.

ಜನಸಂಖ್ಯೆ ಹೆಚ್ಚಳಕ್ಕೆ ಆಂಧ್ರ ಹೊಸ ತಂತ್ರ

ಪುಟ 1➡ ಈಗ ಜನನ ಪ್ರಮಾಣ ಹೆಚ್ಚಿಸುವುದು ಅಗತ್ಯವಾಗಿದೆ' ಎಂದು ಹೇಳಿದರು. ಈ ಯೋಜನೆಯ ಸಂಪೂರ್ಣ ಮಾರ್ಗಸೂಚಿಗಳನ್ನು ಒಂದು ತಿಂಗಳೊಳಗೆ ಪ್ರಕಟಿಸುವುದಾಗಿ ಸರ್ಕಾರ ತಿಳಿಸಿದೆ.

ಈ ಹಿಂದೆ ಎರಡನೇ ಮಗುವಿಗೆ 25 ಸಾವಿರ ರೂ. ಪ್ರೋತ್ಸಾಹಧನ ನೀಡುವ ಪ್ರಸ್ತಾವವನ್ನೂ ಸರ್ಕಾರ ಮುಂದಿಟ್ಟಿತ್ತು. ಆದರೆ ಬಳಿಕ ಸರ್ಕಾರ ಮೂರನೇ ಹಾಗೂ ನಾಲ್ಕನೇ ಮಗುವಿನತ್ತ ಹೆಚ್ಚು ಒತ್ತು ನೀಡುವ ನಿರ್ಧಾರ ಕೈಗೊಂಡಿದೆ.

ಜನಸಂಖ್ಯೆ ಸಮತೋಲನಕ್ಕೆ ಹೊಡೆತ: ಜನನ ಪ್ರಮಾಣ ಕುಸಿತದ ಬಗ್ಗೆ ಆತಂಕ ವ್ಯಕ್ತಪಡಿಸಿದ ನಾಯ್ಡು, 'ಆದಾಯ ಹೆಚ್ಚಾದಂತೆ ಕೆಲ ದಂಪತಿಗಳು ಒಂದೇ ಮಗುವಿಗೆ ಸೀಮಿತರಾಗುತ್ತಿದ್ದಾರೆ. ಕೆಲವರು ಗಂಡು ಮಗು ಆಗದಿದ್ದರೆ ಮಾತ್ರ ಎರಡನೇ ಮಗುವಿನ ಬಗ್ಗೆ ಯೋಚಿಸುತ್ತಿದ್ದಾರೆ. ಇದು ಭವಿಷ್ಯದಲ್ಲಿ ರಾಜ್ಯದ ಜನಸಂಖ್ಯೆ ಸಮತೋಲನಕ್ಕೆ ಹೊಡೆತ ನೀಡಬಹುದು' ಎಂದು ಹೇಳಿದರು.

ರಾಜ್ಯದಲ್ಲಿ ಟೋಟಲ್ ಫರ್ಟಿಲಿಟಿ ರೇಟ್(ಟಿಎಫ್‌ಆರ್) ಕನಿಷ್ಠ 2.1 ಮಟ್ಟದಲ್ಲಿರಬೇಕು ಎಂದು ಹೇಳಿದ ಅವರು, ಜನಸಂಖ್ಯೆ ಕುಸಿತ ಮತ್ತು ವೃದ್ಧರ ಸಂಖ್ಯೆ ಹೆಚ್ಚಳದಿಂದ ಹಲವು ದೇಶಗಳ ಆರ್ಥಿಕತೆ ಸಂಕಷ್ಟಕ್ಕೀಡಾಗಿದೆ ಎಂದು ಎಚ್ಚರಿಸಿದರು. 'ಮಕ್ಕಳು ಹೊರೆ ಅಲ್ಲ, ಸಂಪತ್ತು' ಎಂಬ ಸಂದೇಶವನ್ನೂ ಅವರು ನೀಡಿದರು.

ಇದಕ್ಕೂ ಮುನ್ನ ಸರ್ಕಾರದ ಮಟ್ಟದಲ್ಲಿ ನಡೆದ ಚರ್ಚೆಗಳಲ್ಲಿ ಮೂರನೇ ಮತ್ತು ನಾಲ್ಕನೇ ಮಗುವಿಗೆ ನಗದು ಪ್ರೋತ್ಸಾಹದ ಜೊತೆಗೆ ಪೌಷ್ಟಿಕ ಆಹಾರ ಸಹಾಯ ನೀಡುವ ಪ್ರಸ್ತಾವವೂ ಚರ್ಚೆಗೆ ಬಂದಿತ್ತು. ತಾಯಿಯ ಖಾತೆಗೆ ನೇರ ಹಣ ಜಮೆ, ಎನ್‌ಟಿಆರ್ ಬೇಬಿ ಕಿಟ್, ತಿಂಗಳಿಗೆ ಸಿರಿಧಾನ್ಯ ವಿತರಣೆ ಮೊದಲಾದ ಅಂಶಗಳೂ ಪ್ರಸ್ತಾಪಗೊಂಡಿದ್ದವು.

ಅರ್ಹ ಮತದಾರರ ಹೆಸರು ರದ್ದಾಗಲ್ಲ: ಆರ್.ಅಶೋಕ

• **ಬೆಂಗಳೂರು:** ಪ್ರತಿ ಬೂತ್‌ನಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಏಜೆಂಟ್ ಇರುವಾಗ ಅರ್ಹ, ನಿಜವಾದ ಮತದಾರರ ಹೆಸರು ರದ್ದಾಗಲು ಸಾಧ್ಯವೇ ಇಲ್ಲ ಎಂದು ವಿಪಕ್ಷ ನಾಯಕ ಆರ್. ಅಶೋಕ ಹೇಳಿದರು.



ವಿಧಾನಸೌಧದಲ್ಲಿ ಶನಿವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಮಹದೇವಪುರ, ಚಿಕ್ಕಮಗಳೂರು, ಕೊಡಗು ಕಾಫಿ ಎಸ್ಟೇಟ್‌ಗಳಲ್ಲಿ ಸಾವಿರಾರು ಬಾಂಗ್ಲಾ ದೇಶೀಯರಿದ್ದಾರೆ. ಇದಕ್ಕೆ ಎಸ್‌ಐಆರ್ ಅಂತ್ಯ ಹಾಡಲಿದೆ. ಗುರುತಿನ ಚೀಟಿ ಇರುವವರು ಭಯ ಪಡಬೇಕಿಲ್ಲ ಎಂದರು. ಕರ್ನಾಟಕದಲ್ಲಿ 10 ಲಕ್ಷಕ್ಕೂ ಅಧಿಕ ಬಾಂಗ್ಲಾ ಪ್ರಜೆಗಳಿದ್ದಾರೆ. ಇಲ್ಲ ಎಂದು ಯಾರಾದರೂ ಸವಾಲು ಹಾಕಿದರೆ ನಾನೇ ಅವರನ್ನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಇತ್ತೀಚೆಗೆ ಪೊಲೀಸ್ ಆಯುಕ್ತರು 65 ಲಕ್ಷ ರೂ. ಖರ್ಚು ಮಾಡಿ 250 ಬಾಂಗ್ಲಾ ದೇಶದವರನ್ನು ವಿಮಾನದಲ್ಲಿ ಕಳುಹಿಸಿ ಗಡಿವರೆಗೆ ಬಿಟ್ಟು ಬಂದಿದ್ದಾರೆ ಎಂದು ತಿಳಿಸಿದರು. ಪಶ್ಚಿಮ ಬಂಗಾಳದಲ್ಲಿ ಹೆಸರು ರದ್ದಾದವರಲ್ಲಿ ಹೆಚ್ಚು ಹಿಂದೂಗಳಿದ್ದಾರೆ. ಇದರ ವಿರುದ್ಧ ಹಿಂದೂ ಸಂಘಟನೆಗಳು ಹಾಗೂ ಬಿಜೆಪಿ ಪ್ರತಿಭಟಿಸಿಲ್ಲ, ರಾಜ್ಯದಲ್ಲಿ 10 ಲಕ್ಷ ಬಾಂಗ್ಲಾ ನಿವಾಸಿಗಳಿಗೆ ಗುರುತಿನ ಚೀಟಿ ಕೊಟ್ಟಿದ್ದು, ಅವರನ್ನು ಕಳುಹಿಸಬಾರದೆಂದು ಕಾಂಗ್ರೆಸ್ ಬಯಸುತ್ತಿದೆ ಎಂದರು.

ತೈಲ ದರ ಶೇ.3 ರಷ್ಟು ಏರಿಕೆ: ಕಳೆದ 49 ತಿಂಗಳಿಂದ ಪ್ರಧಾನಿ ಮೋದಿ ತೈಲ ದರ ಏರಿಸಿಲ್ಲ, ಯುದ್ಧದ ವಾತಾವರಣ ಇರುವುದರಿಂದ ಪೆಟ್ರೋಲ್, ಡೀಸೆಲ್ ದರ ಏರಿಕೆಯಾಗಿದೆ. ಕಾಂಗ್ರೆಸ್ ಪ್ರಕಾರ, ಇಡೀ ಜಗತ್ತಿನಲ್ಲಿ ಭಾರತದಲ್ಲಿ ಮಾತ್ರ ತೈಲ ದರ ಏರಿಕೆಯಾಗಿದೆ. ಮಲೇಷಿಯಾದಲ್ಲಿ ಶೇ.71 ರಷ್ಟು, ಪಾಕಿಸ್ತಾನದಲ್ಲಿ ಶೇ.44 ರಷ್ಟು, ಯುಎಇನಲ್ಲಿ ಶೇ.86 ರಷ್ಟು, ಯುಎಸ್‌ನಲ್ಲಿ ಶೇ.48 ರಷ್ಟು, ಶ್ರೀಲಂಕಾದಲ್ಲಿ ಶೇ.41ರಷ್ಟು ನೇಪಾಳದಲ್ಲಿ ಶೇ.51 ರಷ್ಟು ಏರಿಕೆಯಾಗಿದೆ. ಆದರೆ ಭಾರತದಲ್ಲಿ ಅತಿ ಕಡಿಮೆ ಎಂದರೆ ಶೇ.3 ರಷ್ಟು ಏರಿಕೆಯಾಗಿದೆ ಎಂದು ವಿವರಿಸಿದರು.

ಸಿಎಂಗೆ ಆಹ್ವಾನ



ತುಮಕೂರಿನಲ್ಲಿ ಮೇ 19ರಂದು ನಡೆಯಲಿರುವ ಮೂರು ವರ್ಷದ ಪ್ರಗತಿಯತ್ತ ಕರ್ನಾಟಕ ಸಾಧನಾ ಸೇವೆಯ ಸಮರ್ಪಣೆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶನಿವಾರ ಬೆಂಗಳೂರಿನ ಕಾವೇರಿ ನಿವಾಸದಲ್ಲಿ ಭೇಟಿ ಮಾಡಿದ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು ಅಧಿಕೃತವಾಗಿ ಆಹ್ವಾನಿಸಿದರು.

ಮೇ23ಕ್ಕೆ ಸಿಎಂ ಭೂಮಿಪೂಜೆ

• **ಆನೇಕಲ್:** ತಾಲೂಕಿನ ಇಂಡ್ಲವಾಡಿಯ ಸೂರ್ಯಸಿಟಿ 4ನೇ ಹಂತದಲ್ಲಿ 75 ಎಕರೆಯಲ್ಲಿ ಸುಸಜ್ಜಿತ ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣವಾಗಲಿದ್ದು, ಮೇ 23ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭೂಮಿ ಪೂಜೆ ನೆರವೇರಿಸಲಿದ್ದಾರೆ ಎಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದರು.



ಸೂರ್ಯಸಿಟಿಯಲ್ಲಿ ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣ

ಪಟ್ಟಣದಲ್ಲಿ ಸ್ಥಳ ಪರಿಶೀಲನೆ ಮಾಡಿ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಕ್ರೀಡಾಂಗಣದ ಭೂಮಿ ಪೂಜೆಗೆ ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ಜಾವಗಲ್ ಶ್ರೀನಾಥ್, ಜಿ. ವಿಶ್ವನಾಥ್ ಸೇರಿದಂತೆ ಕ್ರಿಕೆಟ್ ದಿಗ್ಗಜರು ಆಗಮಿಸಲಿದ್ದಾರೆಂದು ತಿಳಿಸಿದರು.

ಆನೇಕಲ್ ತಾಲೂಕಿನ ಇಂಡ್ಲವಾಡಿ ಸಮೀಪ ನಿರ್ಮಾಣವಾಗುತ್ತಿರುವ 4ನೇ ಹಂತದ ಸೂರ್ಯ ಸಿಟಿ ಬಡಾವಣೆಯಲ್ಲಿ 1241 ಕೋಟಿ ರೂ. ವೆಚ್ಚದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ಉದ್ಘಾಟನೆ ಆಗುತ್ತಿದೆ. ಸುಮಾರು 27 ಕ್ರೀಡೆಗಳಿಗೆ ಒಳಪಟ್ಟ ಕ್ರೀಡಾಂಗಣ ಇದಾಗಲಿದೆ ಎಂದು ಅವರು ಮಾಹಿತಿ ನೀಡಿದರು.

ನಿರ್ಮಾಣಕ್ಕೆ 8500 ಎಕರೆ ಭೂ ಸ್ವಾಧೀನ ಪಡೆಸಿಕೊಂಡು, ಅಲ್ಲಿ ದೇಶದಲ್ಲೆ ಎರಡನೇ ಅತಿದೊಡ್ಡ ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣವಾಗುತ್ತಿರುವುದು ಶ್ಲಾಘನೀಯ. ಮೇ 23ರಂದು ನಡೆಯುವ ಭೂಮಿ ಪೂಜೆಗೆ ತಾಲೂಕಿನ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಶಾಸಕ ಬಿ.ಶಿವಣ್ಣ ಮನವಿ ಮಾಡಿದರು. ಗೃಹ ಮಂಡಳಿಯ ಅಧ್ಯಕ್ಷ ಶಿವಲಿಂಗೇಗೌಡ, ಶಾಸಕ ಬಿ.ಶಿವಣ್ಣ, ವಸತಿ ಆಯುಕ್ತ ಕೆ.ಎ.ದಯಾನಂದ, ಇಂಡ್ಲವಾಡಿ ನಾಗರಾಜು, ಹರೀಶ್ ಗೌಡ, ಅಚ್ಯುತ್ ರಾಜ್, ಬಿಸಿಎಂ ಕೃಷ್ಣಮೂರ್ತಿ, ಪುಷ್ಪರಾಜು, ಕಾರ್ಯಪಾಲಕ ಅಭಿಯಂತರರಾದ ಶಂಭುಲಿಂಗ ಮತ್ತಿರರಿದ್ದರು.

ಕಿರುಸುದ್ದಿ

ನುಡಿದಂತೆ ನಡೆದ ಸರ್ಕಾರ: ಡಾ. ಶರಣಪ್ರಕಾಶ ಪಾಟೀಲ್

• **ಬೆಂಗಳೂರು:** ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೂರು ವರ್ಷದಲ್ಲಿ ನುಡಿದಂತೆ ನಡೆದಿದೆ. ಅದೇ ಕಾರಣಕ್ಕೆ ಸಾಧನ ಸಮಾವೇಶ ಮಾಡುತ್ತಿದ್ದೇವೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ತಿಳಿಸಿದ್ದಾರೆ. ಶನಿವಾರ ವಿಕಾಸಸೌಧದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ಸಾಧನಾ ಸಮಾವೇಶ ಎನ್ನುವುದು ನಮ್ಮ ಸಾಧನೆಗಳನ್ನು ಜನರಿಗೆ ತಿಳಿಸುವುದಕ್ಕೆ ಎಂದರು. ಪ್ರತಿಪಕ್ಷಗಳು ಈ ಬಗ್ಗೆ ಯಾವುದೇ ಟೀಕೆಗಳನ್ನು ಮಾಡುವ ಅವಶ್ಯಕತೆ ಇಲ್ಲ, ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದ ನಂತರವೂ ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂದರು.



ಚುನಾವಣೆಗೆ ಮುನ್ನ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳನ್ನು ಬಹುತೇಕ ಈಡೇರಿಸಲಾಗಿದೆ. ನಮ್ಮ ಸರ್ಕಾರ ಸಮರ್ಥ ಆಡಳಿತ ನೀಡಿದೆ. ಕಾಂಗ್ರೆಸ್ ಎಂದರೆ ನುಡಿದಂತೆ ನಡೆಯುವ ಪಕ್ಷ ಎಂಬುದು ಸಾಬೀತಾಗಿದೆ ಎಂದು ಡಾ. ಪಾಟೀಲ್ ತಿಳಿಸಿದರು. ತುಮಕೂರು ಸಮಾವೇಶದ ಬಳಿಕ ಕೆಲವು ಬದಲಾವಣೆ ಆಗಲಿದೆ ಎಂಬ ಚರ್ಚೆ ನಡೆಯುತ್ತಿದೆ. ಇದು ಹೈಕಮಾಂಡ್ಗೆ ಬಿಟ್ಟ ವಿಚಾರ. ಮೂರು ವರ್ಷದ ನಂತರ ಸಚಿವ ಸಂಪುಟದಲ್ಲಿ ಬದಲಾವಣೆ ಆಗೋದು ಸಹಜ ಎಂದರು. ನಮ್ಮ ಹೈಕಮಾಂಡ್ ಈ ಬಗ್ಗೆ ಸ್ಪಷ್ಟ ನಿರ್ಧಾರ ಕೈಗೊಳ್ಳುತ್ತದೆ. ಗೊಂದಲಗಳು ಯಾವುದೂ ಇಲ್ಲ, ಒಂದು ಸಣ್ಣಪುಟ್ಟ ಸಮಸ್ಯೆಗಳಿದ್ದರೆ ಅದನ್ನು ವರಿಷ್ಠರು ಬಗೆಹರಿಸುತ್ತಾರೆ ಎಂದು ಡಾ. ಶರಣಪ್ರಕಾಶ ಪಾಟೀಲ್ ಸ್ಪಷ್ಟಪಡಿಸಿದರು.

ಲಾಕರ್ ಸಮೇತ 70 ಲಕ್ಷ ಮೌಲ್ಯದ ಚಿನ್ನಾಭರಣ ಕಳ್ಳತನ

• **ಹಾವೇರಿ:** ಇತ್ತೀಚಿನ ದಿನಗಳಲ್ಲಿ ಬೆಳ್ಳಿ ಬಂಗಾರದ ಬೆಲೆ ಹೆಚ್ಚಾಗುತ್ತಿದ್ದಂತೆ ಜಿಲ್ಲೆಯ ಅಲ್ಲಲ್ಲಿ ಸರಗಳ್ಳತನ ಹೆಚ್ಚಿವೆ. ಆದರೆ, ಇದೀಗ ಹಾನಗಲ್ಲ ತಾಲೂಕಿನಲ್ಲಿ ಚಿನ್ನಾಭರಣದ ಅಂಗಡಿಗೆ ಕನ್ನ ಕೊರೆದಿರುವ ಕಳ್ಳರು, ಲಕ್ಷಾಂತರ ರೂಪಾಯಿ ಮೌಲ್ಯದ ಆಭರಣಗಳನ್ನು ಇಟ್ಟಿದ್ದ ಲಾಕರನ್ನೇ ಹೊತ್ತೊಯ್ದಿರುವುದು ಜಿಲ್ಲೆಯ ಜನರನ್ನು ಆತಂಕಕ್ಕೆ ಈಡು ಮಾಡಿದೆ. ಹಾನಗಲ್ಲ ತಾಲೂಕಿನ ಚಿಕ್ಕಾಂಶಿ ಹೊಸೂರಿನಲ್ಲಿರುವ ಶಾರದಾ ಜ್ಯುವೆಲರ್ಸ್ ಅಂಗಡಿಯಲ್ಲಿ ಭಾರೀ ಕಳ್ಳತನ ನಡೆದಿದ್ದು, ಕಳ್ಳರ ಕೈಚಳಕ ಕಂಡು ಸ್ಥಳೀಯರು ಬೆಚ್ಚಿ ಬಿದ್ದಿದ್ದಾರೆ. ಶುಕ್ರವಾರ ತಡರಾತ್ರಿ 1.30ರ ಸುಮಾರಿಗೆ ಕಳ್ಳತನ ನಡೆದಿರಬಹುದು ಎಂದು ಅಂದಾಜಿಸಲಾಗಿದೆ. ಬಂಗಾರದ ಅಂಗಡಿಗೆ ಅಳವಡಿಸಲಾಗಿದ್ದ ಎರಡು ಷಟರ್ಸ್ ಕಟ್ ಮಾಡಿ ಒಳನುಗ್ಗಿರುವ ಕಳ್ಳರು ಚಿನ್ನಾಭರಣ ಹಾಗೂ ಬೆಳ್ಳಿ ವಸ್ತುಗಳನ್ನಿಟ್ಟಿದ್ದ ಲಾಕರನ್ನೇ ಹೊತ್ತೊಯ್ದಿದ್ದಾರೆ. ಈ ಲಾಕರ್‌ನಲ್ಲಿ ಅಂದಾಜು 750ಗ್ರಾಂ ತೂಕದ ಬಂಗಾರದ ಆಭರಣಗಳು ಹಾಗೂ 3-4 ಕೆಜಿ ತೂಕದ ಬೆಳ್ಳಿ ವಸ್ತುಗಳು ಇದ್ದವು ಎನ್ನಲಾಗಿದೆ. ಘಟನಾ ಸ್ಥಳಕ್ಕೆ ಆಗಮಿಸಿದ ಬೆರಳಚ್ಚು ತಜ್ಞರು ಪರಿಶೀಲನೆ ನಡೆಸಿದ್ದು, ಶ್ವಾನದಳದ ತಂಡ ಕೂಡಾ ಶೋಧ ಕಾರ್ಯ ನಡೆಸಿದೆ. ಘಟನಾ ಸ್ಥಳಕ್ಕೆ ಎಸ್ಪಿ ಯಶೋಧಾ ವಂಟಿಗೋಡಿ, ಡಿಎಸ್ಪಿ, ಶಿಗ್ಗಾಂವ ಡಿವೈಎಸ್ಪಿ, ಹಾನಗಲ್ಲ ಸಿಪಿಐ, ಪಿಎಸ್‌ಐ ಸಂಪತ್‌ಕುಮಾರ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು. ಕಳ್ಳತನ ನಡೆದಿರುವ ಸ್ಥಳ ಹಾಗೂ ಸುತ್ತಮುತ್ತಲಿನ ಅಂಗಡಿಗಳಲ್ಲಿನ ಸಿಸಿ ಕ್ಯಾಮೆರಾ ಪರಿಶೀಲನೆ ನಡೆಸುತ್ತಿದ್ದು, ಇನ್ನಷ್ಟೇ ಕಳ್ಳರ ಜಾಡು ಪತ್ತೆಯಾಗಬೇಕಿದೆ. ಕಳೆದೆರಡು ದಿನಗಳ ಹಿಂದೆಯಷ್ಟೆ ಹಾನಗಲ್ಲ ತಾಲೂಕಿನ ಕಾಲ್ವೆಯಲ್ಲಾಪುರ, ಅರಳೇಶ್ವರ ಮತ್ತು ಬಾಳಂಬೀಡದಲ್ಲಿ ಮನೆ, ಅಂಗಡಿ ಕಳ್ಳತನ ನಡೆದ ಕುರಿತು ವರದಿಯಾಗಿದ್ದವು.

ಒಂದು ರಾಷ್ಟ್ರ ಒಂದು ಚುನಾವಣೆ ಪ್ರಸ್ತಾವನೆಯು ಅಧಿಕಾರ ಕೇಂದ್ರೀತ

ರಾಜಕೀಯಪ್ರೇರಿತ: ಡಿಕೆಶಿ

• **ಬೆಂಗಳೂರು:** ಕೇಂದ್ರ ಸರಕಾರದ ಉದ್ದೇಶಿತ ಒಂದು ರಾಷ್ಟ್ರ ಒಂದು ಚುನಾವಣೆ ಪ್ರಸ್ತಾವನೆಯು ಅಧಿಕಾರ ಕೇಂದ್ರೀತ, ರಾಜಕೀಯ ಪ್ರೇರಿತ ಯೋಜನೆಯಾಗಿದ್ದು, ರಾಜ್ಯಗಳನ್ನು ದುರ್ಬಳಗೊಳಿಸುವ ಮೂಲಕ ಒಕ್ಕೂಟ ವ್ಯವಸ್ಥೆಗೆ ತೀವ್ರ ಧಕ್ಕೆ ತರಲಿದೆ. ಇದೊಂದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ತರುವ ಅಪಾಯವಿದೆ. ಹೀಗಾಗಿ ನಾವು ಇದನ್ನು ವಿರೋಧಿಸಲಿದ್ದೇವೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ. ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಲೋಕ ಸಭೆಯ ಜಂಟಿ ಸಂಸದೀಯ ಅಧ್ಯಯನ ಸಮಿತಿಯು ಶನಿವಾರ ಆಯೋಜಿಸಿದ್ದ ಒಂದು ರಾಷ್ಟ್ರ ಒಂದು ಚುನಾವಣೆ ಕುರಿತ ಸಂವಾದದಲ್ಲಿ ಅವರು ಅಭಿಪ್ರಾಯ ಮಂಡಿಸಿದರು. ಇದೊಂದು ಕೇಂದ್ರದಲ್ಲಿ ಆಡಳಿತ ಚುಕ್ಕಾಣಿ ಹಿಡಿದಿರುವವರ ಅನುಕೂಲಕ್ಕೆ ತಕ್ಕಂತೆ ಹೆಣೆಯಲಾಗುತ್ತಿರುವ ಈ ಪ್ರಸ್ತಾವನೆಯನ್ನು ಕೆಪಿಸಿಸಿ ಅಧ್ಯಕ್ಷನಾಗಿ ಹಾಗೂ ಕರ್ನಾಟಕ ಸರಕಾರದ ಉಪಮುಖ್ಯಮಂತ್ರಿ ಆಗಿ ಸಾರಾಸಗಟಾಗಿ ತಿರಸ್ಕರಿಸುತ್ತೇನೆ ಎಂದು ಸ್ಪಷ್ಟಪಡಿಸಿದರು.

ವಿಧಾನಸಭೆಯ ನಿರ್ಣಯ ಓದಿದ ಡಿಸಿಎಂ: ಒಂದು ದೇಶ ಒಂದು ಚುನಾವಣೆ ವಿರೋಧಿಸಿ ಕರ್ನಾಟಕ ವಿಧಾನ ಸಭೆಯು ಈಗಾಗಲೇ ನಿರ್ಣಯವನ್ನೂ ಅಂಗೀಕರಿಸಿದೆ ಎಂದೂ ಹೇಳಿದರು. ಆ ನಿರ್ಣಯ ವನ್ನೂ ಸಭೆಯಲ್ಲಿ ಓದಿದರು. ಒಂದೊಮ್ಮೆ ರಾಜಕೀಯ ಅಸ್ಥಿರತೆ, ಅವಿಶ್ವಾಸ, ಬಹುಮತದ ಕೊರತೆಯಿಂದ ಒಂದು ಸರಕಾರ ಅರ್ಧಾವಧಿಯಲ್ಲೇ ಉರುಳಿ ಹೋದರೆ ಆಗ ಏನು ಮಾಡುವುದು? ಇದಕ್ಕೆ ಪರಿಹಾರ ಎಲ್ಲಿದೆ? ಎಂದು ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು. ಒಂದೊಂದು ರಾಜ್ಯದಲ್ಲಿ ಒಂದೊಂದು ಅವಧಿಗೆ ಚುನಾವಣೆ ನಡೆಯುತ್ತದೆ. ಕರ್ನಾಟಕದಲ್ಲಿ ಮೂರು ವರ್ಷಗಳ ಹಿಂದೆ ಆಗಿತ್ತು. ತಮಿಳುನಾಡು, ಕೇರಳದಲ್ಲಿ ಮೊನ್ನೆಯಷ್ಟೇ ಆಗಿದೆ. ಪಂಜಾಬ್, ತೆಲಂಗಾಣದಲ್ಲಿ ಬೇರೆ ಕಾಲದಲ್ಲಿ ಆಗಿದೆ. ವಿವಿಧ ಕಾಲಾವಧಿಯ ಈ ಚುನಾವಣೆಗಳನ್ನು ಸಮಯೀಕರಿಸುವುದು ಹೇಗೆ? ಎಂದು ಪ್ರಶ್ನಿಸಿದರು.

ಒಂದು ದೇಶ ಒಂದು ಚುನಾವಣೆ ಜಾರಿಗೆ ಬಿಜೆಪಿ ಮನವಿ



• **ಬೆಂಗಳೂರು:** ದೇಶದಲ್ಲಿ ಚುನಾವಣಾ ವೆಚ್ಚ ನಿಯಂತ್ರಣ, ಪಾರದರ್ಶಕ ಆಡಳಿತಕ್ಕಾಗಿ ಒಂದು ದೇಶ ಒಂದು ಚುನಾವಣೆ ತರುವುದು ಒಳ್ಳೆಯ ನಿರ್ಧಾರ ಇದಕ್ಕೆ ರಾಜ್ಯ ಬಿಜೆಪಿಯ ಸಂಪೂರ್ಣ ಸಹಮತವಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು. ಲೋಕಸಭಾ ಜಂಟಿ ಸಂಸದೀಯ ಸಮಿತಿಯು ಶನಿವಾರ ನಗರದ ತಾಜ್ ವೆಸ್ಟ್ ಎಂಡ್‌ನಲ್ಲಿ ಹಮ್ಮಿಕೊಂಡಿದ್ದ ಒಂದು ದೇಶ ಒಂದೇ ಚುನಾವಣೆ ಕುರಿತ ಸಾಂವಿಧಾನಿಕ ತಿದ್ದುಪಡಿ ವಿಚಾರದಲ್ಲಿ ರಾಜಕೀಯ ಪಕ್ಷಗಳ ಜತೆಗೆ ಸಮಿತಿಯು ಹಮ್ಮಿಕೊಂಡಿದ್ದ ಚರ್ಚೆಯಲ್ಲಿ ಭಾಗವಹಿಸಿ ಅಭಿಪ್ರಾಯ ವ್ಯಕ್ತಪಡಿಸಿದರು. ಭ್ರಷ್ಟಾಚಾರ ರಹಿತ, ಪಾರದರ್ಶಕ ಹಾಗೂ ಚುನಾವಣಾ ವೆಚ್ಚವನ್ನು ನಿಯಂತ್ರಣಕ್ಕಾಗಿ ಒಂದು ದೇಶ ಒಂದು ಚುನಾವಣೆ ಜಾರಿಗೆ ತರುವ ಅಗತ್ಯವಿದೆ. ಬಿಜೆಪಿಯೂ ಕೂಡಾ ಇದಕ್ಕೆ ಬೆಂಬಲ ವ್ಯಕ್ತಪಡಿಸುತ್ತದೆ ಎಂದು, ಆದಷ್ಟು ಬೇಗ ಒಂದು ದೇಶ-ಒಂದು ಚುನಾವಣೆ ಜಾರಿಗೆ ತರಬೇಕು ಎಂದು ವಿಜಯೇಂದ್ರ ಪ್ರತಿಪಾದಿಸಿದರು. ಅಲ್ಲದೇ, ರಾಜ್ಯ ಬಿಜೆಪಿ ವತಿಯಿಂದ ಮನವಿಯೂ ಸಲ್ಲಿಸಲಾಯಿತು. ಈ ಕುರಿತ ಚರ್ಚೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ, ಸಂಸದರಾದ ಪಿ.ಸಿ.ಮೋಹನ್, ಯದುವೀರ್ ಒಡೆಯರ್, ಡಾ. ಸಿ.ಎನ್. ಮಂಜುನಾಥ್, ಶಾಸಕರಾದ ಎಲ್.ರವಿ ಸುಬ್ರಹ್ಮಣ್ಯ, ಸುರೇಶ್ ಗೌಡ, ಜ್ಯೋತಿ ಗಣೇಶ್, ವಿಧಾನ ಪರಿಷತ್ ಸದಸ್ಯರಾದ ಕೆ.ಎಸ್.ನವೀನ್, ರಾಜ್ಯ ಪ್ರಧಾನ ಕಾರ್ಯದರ್ಶಿ ಸಂದೀಶ್ ರೆಡ್ಡಿ, ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್ ಉಪಸ್ಥಿತರಿದ್ದರು.

> ಇದು ಪ್ರಾದೇಶಿಕ ಪಕ್ಷಗಳು ಹಾಗೂ ಎದುರಾಳಿ ಪಕ್ಷಗಳ ಧ್ವನಿ ಅಡಗಿಸುವ ಹುನ್ನಾರವಾಗಿದೆ. ಈ ಪ್ರಸ್ತಾವನೆ ಬಗ್ಗೆ ಕರ್ನಾಟಕ ಸರಕಾರದ ಸಹಮತವಿಲ್ಲ, ನಮ್ಮ ಪಕ್ಷದ ರಾಷ್ಟ್ರೀಯ ಮುಖಂಡರ ಒಟ್ಟಾರೆ ನಿಲುವಿಗೆ ನಾವು ಬದ್ಧರಾಗಿದ್ದೇವೆ.
> ■ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಶಾಲೆಗಳಲ್ಲಿ ಪ್ರತಿದಿನ ನಾಡಗೀತೆ ಕಡ್ಡಾಯ

• **ಬೆಂಗಳೂರು:** ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಪ್ರತಿದಿನ ನಾಡಗೀತೆಯನ್ನು ಕಡ್ಡಾಯವಾಗಿ ಹಾಡುವಂತೆ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.



ಜಯ ಭಾರತ ಜನನಿಯ ತನುಜಾತೆ ನಾಡಗೀತೆಯ ಮೂಲಕ ವಿದ್ಯಾರ್ಥಿಗಳಲ್ಲಿ ರಾಜ್ಯಾಭಿಮಾನ, ದೇಶಭಕ್ತಿ ಹಾಗೂ ಸಾಂಸ್ಕೃತಿಕ ಅರಿವು ಬೆಳೆಸುವ ಉದ್ದೇಶ ದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಇಲಾಖೆ ತಿಳಿಸಿದೆ. ಸುತ್ತೋಲೆಯ ಪ್ರಕಾರ, ಪ್ರತಿದಿನ ಪ್ರಾರ್ಥನಾ ಸಮಯದಲ್ಲಿ ವಿದ್ಯಾರ್ಥಿಗಳು ನಾಡಗೀತೆಯನ್ನು ಸಾಮೂಹಿಕವಾಗಿ, ಲಯಬದ್ಧವಾಗಿ ಹಾಗೂ ಸರಿಯಾದ ಉಚ್ಚಾರಣೆಯೊಂದಿಗೆ ಹಾಡಬೇಕು. ಸಂಗೀತ ಶಿಕ್ಷಕರ ಮೂಲಕ ವಿದ್ಯಾರ್ಥಿಗಳಿಗೆ ಸರಿಯಾದ ಸ್ವರ, ಲಯದ ತರಬೇತಿ ನೀಡಲು ಸೂಚಿಸಲಾಗಿದೆ.

ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಕನ್ನಡ ರಾಜ್ಯೋತ್ಸವ ಸೇರಿದಂತೆ ರಾಷ್ಟ್ರೀಯ ಹಾಗೂ ನಾಡಹಬ್ಬಗಳ ಸಂದರ್ಭಗಳಲ್ಲಿ, ಶಾಲಾ ವಾರ್ಷಿಕೋತ್ಸವ ಮತ್ತು ಇತರ ರಾಜ್ಯಮಟ್ಟದ ಕಾರ್ಯಕ್ರಮಗಳಲ್ಲಿ ನಾಡಗೀತೆಯನ್ನು ಕಡ್ಡಾಯವಾಗಿ ಹಾಡಬೇಕು ಎಂದು ಇಲಾಖೆ ತಿಳಿಸಿದೆ. ನಾಡಗೀತೆಯ ಅರ್ಥ ಮತ್ತು ಮಹತ್ವವನ್ನು ಕನ್ನಡ ಭಾಷಾ ಶಿಕ್ಷಕರ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಇದರಿಂದ ವಿದ್ಯಾರ್ಥಿಗಳು ಅದರ ಭಾವಾರ್ಥವನ್ನು ಅರ್ಥಮಾಡಿಕೊಂಡು ಸ್ವಯಂಪ್ರೇರಣೆಯಿಂದ ಹಾಡಲು ಅನುಕೂಲವಾಗಲಿದೆ ಎಂದು ಹೇಳಲಾಗಿದೆ.

ಸುತ್ತೋಲೆಯ ಅನುಷ್ಠಾನವನ್ನು ಶಾಲಾ ಮುಖ್ಯೋಪಾಧ್ಯಾಯರು, ದೈಹಿಕ ಶಿಕ್ಷಕರು ಹಾಗೂ ಇತರ ಶಿಕ್ಷಕರು ನಿಯಮಿತ ವಾಗಿ ಪರಿಶೀಲಿಸಬೇಕು. ನಿಯಮಗಳನ್ನು ಪಾಲಿಸದಿದ್ದಲ್ಲಿ, ಸಂಬಂಧಿತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಇಲಾಖೆ ಎಚ್ಚರಿಸಿದೆ.

ಖಾಲಿ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಿ

ಬೆಂಗಳೂರು: ರಾಜ್ಯದ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ 2015ರ ಡಿ. 31 ರೊಳಗೆ ನಿಧನ, ನಿವೃತ್ತಿ, ರಾಜೀನಾಮೆ ಸೇರಿದಂತೆ ಇತರೆ ಕಾರಣಗಳಿಂದ ತೆರವಾದ ಖಾಲಿ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಶಾಲಾ ಶಿಕ್ಷಣ ಇಲಾಖೆ ಮಹತ್ವದ ಸುತ್ತೋಲೆ ಹೊರಡಿಸಿದೆ. ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಹೊರಡಿಸಿರುವ ಈ ಸುತ್ತೋಲೆಯಲ್ಲಿ, ಸರ್ಕಾರದ ಹಿಂದಿನ ಆದೇಶಗಳ ಅನ್ವಯ ಅರ್ಹ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶ ನೀಡಲಾಗಿದ್ದರೂ, ಅನೇಕ ಶಾಲಾ ಆಡಳಿತ ಮಂಡಳಿಗಳು ಇದುವರೆಗೆ ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲ.ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅಡ್ಡಿಯಾಗುತ್ತಿರುವುದಾಗಿ ಇಲಾಖೆ ತಿಳಿಸಿದೆ.

ಉಡುಪಿ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವ್ಯಂಗ್ಯ

ಕೇಂದ್ರದ ಆರ್ಥಿಕ ನೀತಿ ಸರಿಯಿಲ್ಲ

• **ಉಡುಪಿ:** ಜನರಿಗೆ ಹೇಳೋದಾಯ್ತು, ಇವರೇನು ಮಾಡಿದ್ದಾರೆ ಅದನ್ನು ಮೊದಲು ಹೇಳಲಿ ಎಂದು ಉಡುಪಿ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸವಾಲು ಹಾಕಿದ್ದಾರೆ.

ಉಡುಪಿಯಲ್ಲಿ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮೋದಿ ಅವರು ಚಪ್ಪಾಳೆ ಹೊಡೀರಿ ಅಂದ್ರೆ ಹೊಡೀತೇವೆ. ಪೆಟ್ರೋಲ್ ಡೀಸೆಲ್ ಜಾಸ್ತಿ ಬಳಸಬೇಡಿ ಅಂದ್ರೆ ನಾವು ಪಾಲಿಸುತ್ತೇವೆ. ಬಂಗಾರ ಖರೀದಿಸಬೇಡಿ ಎಂದರೆ ಬಿಡುತ್ತೇವೆ. ದೇಶಕ್ಕಾಗಿ ಇತಿ ಮಿತಿಯನ್ನು ಪಾಲಿಸೋಣ. ಆದರೆ ಇಂತಹ ಪರಿಸ್ಥಿತಿ ಆಗೋದಕ್ಕೆ ಕಾರಣ ಯಾರು? ಅದು ಮಾಡಿ ಇದು ಮಾಡಿ ಅನ್ನೋದೇ ಆಯ್ತು. ಆದರೆ ಇವರೇನು ಮಾಡ್ತಿದಾರೆ, ಮುಂಜಾಗ್ರತಾ ಕ್ರಮವಾಗಿ ಏನು ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎನ್ನೋದು ಬೇಕಲ್ವಾ ಎಂದು ಪ್ರಶ್ನಿಸಿದರು.



ಈಗ ಮೋದಿ ಬಂಗಾರ ಖರೀದಿ ಮಾಡಬೇಡಿ ಎನ್ನುತ್ತಿದ್ದಾರೆ. ಏನೇನೋ ಹೇಳುತ್ತ ಬಂದಿದ್ದಾರೆ. ಆದರೆ ಅಮೆರಿಕ ಯಾವ ರೀತಿ ನಮ್ಮ ಪ್ರಧಾನ ಮಂತ್ರಿಯನ್ನು ಕಂಟ್ರೋಲ್ ಮಾಡುತ್ತಿದೆ ಅಂತ ಮಾಧ್ಯಮದಲ್ಲೇ ನೋಡುತ್ತಿದ್ದೇವೆ. ಭಾರತದ ಬಗ್ಗೆ ಟ್ರಂಪ್ ಏನು ಹೇಳುತ್ತಿದ್ದಾರೆ ಗೊತ್ತಿಲ್ಲ. ಎಂದು ವ್ಯಂಗ್ಯವಾಡಿದರು. ಚುನಾವಣೆ ಮುಗಿದ ಕೂಡಲೇ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿದ್ದಾರೆ. ಇದು ಕಂಪ್ಲೀಟ್ ರಾಜಕಾರಣ. ಈಗೇನೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ಬೆಲೆ ಏರಿಕೆಯಾಗಿಲ್ಲ, ಮನಮೋಹನ್ ಸಿಂಗ್ ಸರ್ಕಾರ ಇದ್ದಾಗ ಕಚ್ಚಾ ತೈಲ ಬೆಲೆ ಎಷ್ಟು ಏರಿತ್ತು ಗೊತ್ತಿದೆ. ಅದ್ರೂ ಜನರಿಗೆ ಬರೆ ಹಾಕುವ ಕೆಲಸ ಮಾಡಿಲ್ಲ, ಈಗ ದಿಢೀರ್ ಆಗಿ 3 ರೂಪಾಯಿ ಬೆಲೆ ಏರಿಸಿ ಜನರ ಮೇಲೆ ಹೊರೆ ಹಾಕಿದ್ದಾರೆ ಎಂದು ಹೇಳಿದರು.

ಹಿಜಾಬ್ ವಿವಾದ ಕುರಿತ ಪ್ರಶ್ನೆಗೆ, ಶಿಕ್ಷಣದಲ್ಲಿ ರಾಜಕಾರಣ ಯಾವತ್ತೂ ಮಾಡಬಾರದು. ಮಕ್ಕಳು ಮುಗ್ಧರಿದ್ದಾರೆ, ಪಾಲಕರು ಕಲಿಯುವುದಕ್ಕೆಂದು ಶಾಲೆಗೆ ಕಳಿಸುತ್ತಾರೆ. ಈ ವಿಚಾರದಲ್ಲಿ ಹೆಚ್ಚು ಚರ್ಚೆ ಮಾಡದೆ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಒಳ್ಳೆಯ ವಾತಾವರಣ ಸೃಷ್ಟಿ ಮಾಡಬೇಕೆಂದು ಮಾತ್ರ ಹೇಳುತ್ತೇನೆ. ಅವರ ಭವಿಷ್ಯದ ಜೊತೆ ಚೆಲ್ಲಾಟ ಆಡಬಾರದು. ಹಿಜಾಬ್ ಅಥವಾ ಜನ್ನಾ ಯಾವುದೇ ವಿಚಾರದ ಬಗ್ಗೆ ನಾನು ಮಾತನಾಡುವುದಿಲ್ಲ, ಮಕ್ಕಳ ಭವಿಷ್ಯ ತಲೆಯಲ್ಲಿಟ್ಟು ರಾಜಕಾರಣ ಮಾಡಬೇಕು ಅಂತ ಹೇಳುತ್ತೇನೆ ಎಂದು ಪ್ರತಿಕ್ರಿಯಿಸಿದರು.

ಮುಖ್ಯಮಂತ್ರಿ ಬದಲಾವಣೆ, ಸಚಿವ ಸಂಪುಟದ ವಿಸ್ತರಣೆ ಬಗ್ಗೆ ಕೇಳಿದ ಪ್ರಶ್ನೆಗೆ, ಅದು ಎಲ್ಲವೂ ಪಕ್ಷದ ಹೈಕಮಾಂಡ್ ತೀರ್ಮಾನ. ನಾವು ಪಕ್ಷದ ಶಿಸ್ತಿನ ಸಿಪಾಯಿಗಳು. ನಾವೇನೂ ಪ್ರತಿಕ್ರಿಯೆ ನೀಡಲ್ಲ ಎಂದರು.

ಜೂ.1ಕ್ಕೆ ರಾಜ್ಯಾದ್ಯಂತ ಶಾಲೆ ಪ್ರಾರಂಭ

• **ಬೆಂಗಳೂರು:** ಮುಂಬರುವ ಜೂ.1ರಂದು ರಾಜ್ಯಾದ್ಯಂತ ಶಾಲಾ ಪ್ರಾರಂಭೋತ್ಸವ ವಿಜೃಂಭಣೆಯಿಂದ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿದ್ಯಾರ್ಥಿಗಳನ್ನು ಶಾಲೆಗೆ ಸ್ವಾಗತಿಸಲಿದ್ದಾರೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದರು.



ರಾಜ್ಯದ 46 ಸಾವಿರ ಸರ್ಕಾರಿ ಶಾಲೆಗಳ ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ಡಿಡಿಪಿಐ, ಡಿಡಿಪಿಯು, ಬಿಇಒ ಸೇರಿದಂತೆ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳನ್ನು ಉದ್ದೇಶಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮಹತ್ವದ ಸಭೆ ನಡೆಸಿದ ಸಚಿವರು, ಮುಖ್ಯಮಂತ್ರಿಗಳು ರಾಜ್ಯಾದ್ಯಂತ ಎಲ್ಲಾ ಶಾಲೆಗಳಲ್ಲಿ ಏಕಕಾಲದಲ್ಲಿ ನಡೆಯುವ ಮಹಾ ಪೋಷಕ-ಶಿಕ್ಷಕರ ಸಭೆಯನ್ನು ಉದ್ದೇಶಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ವಿದ್ಯಾರ್ಥಿಗಳು ಹಾಗೂ ಪೋಷಕರೊಂದಿಗೆ ನೇರ ಸಂವಾದ ನಡೆಸಲಿದ್ದಾರೆ ಎಂದು ಸಚಿವರು ಪ್ರಕಟಿಸಿದರು.

ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯನ್ನು ಗರಿಷ್ಠ ಮಟ್ಟಕ್ಕೆ ಏರಿಸುವುದು ಮೊದಲ ಆದ್ಯತೆಯಾಗಬೇಕು. ಅನುತ್ತೀರ್ಣರಾದ ವಿದ್ಯಾರ್ಥಿಗಳನ್ನು ಗುರುತಿಸಿ, ಜಾಗೃತಿ ಮೂಡಿಸಿ ಮರಳಿ ಶಾಲೆಗೆ ತರಬೇಕು ಎಂದರು.

ಬಿಸಿಯೂಟ ಯೋಜನೆ: ಶಾಲಾ ಬಿಸಿಯೂಟ ಯೋಜನೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸಬೇಕು. ಮಕ್ಕಳ ಆರೋಗ್ಯದ ದೃಷ್ಟಿಯಿಂದ ಇದರಲ್ಲಿ ಯಾವುದೇ ರೀತಿಯ ಲೋಪದೋಷಗಳಾಗದಂತೆ ಎಚ್ಚರವಹಿಸುವುದು ಕಡ್ಡಾಯ. ಜತೆಗೆ, ಶಾಲಾ ಪ್ರಾರಂಭದಲ್ಲೇ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಸಮವಸ್ತ್ರ ಸೇರಿದಂತೆ ಎಲ್ಲಾ ಅಗತ್ಯ ಸಾಮಗ್ರಿಗಳನ್ನು ಸಕಾಲದಲ್ಲಿ ವಿತರಿಸಬೇಕು ಎಂದು ತಿಳಿಸಿದರು.

ಶಿವಮೊಗ್ಗದಲ್ಲಿ ಕೆಪಿಎಸ್ ಶಾಲೆಗೆ ಶಂಕುಸ್ಥಾಪನೆ: ಶಾಲಾ ಪ್ರಾರಂಭೋತ್ಸವದ ಶುಭ ಸಂದರ್ಭದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಿವಮೊಗ್ಗದಲ್ಲಿ ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್) ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಹಾಗೆಯೇ, ರಾಜ್ಯಮಟ್ಟದಲ್ಲಿ ಶಿವಮೊಗ್ಗದಿಂದ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಅಡಿಗಲ್ಲು ಕಾರ್ಯಕ್ರಮವನ್ನು ನೆರವೇರಿಸಲಿದ್ದಾರೆ ಎಂದು ತಿಳಿಸಿದರು.

ಶಿಕ್ಷಕರಿಗೆ ಬದ್ಧತೆ ಇರಲಿ

ಎಸ್‌ಎಸ್‌ಎಲ್‌ಸಿ ಒಂದು ಅರ್ಹತಾ ಪರೀಕ್ಷೆಯಾಗಿದ್ದು, ಉನ್ನತ ಶಿಕ್ಷಣಕ್ಕೆ ಸೇತುವೆಯಂತಿದೆ. ವಿದ್ಯಾರ್ಥಿಗಳೇ ಕರ್ನಾಟಕದ ಮಾನವ ಸಂಪನ್ಮೂಲದ ಮೂಲಾಧಾರವಾಗಿದ್ದಾರೆ. ಹೀಗಾಗಿ, ಎಸ್‌ಎಸ್‌ಎಲ್‌ಸಿ ಫಲಿತಾಂಶದ ಸಂಪೂರ್ಣ ಸುಧಾರಣೆಗೆ ಪ್ರತಿಯೊಬ್ಬ ಶಿಕ್ಷಕರು ಬದ್ಧತೆಯಿಂದ ಕೆಲಸ ಮಾಡಬೇಕು ಎಂಬ ಮುಖ್ಯಮಂತ್ರಿಗಳ ಆಶಯವನ್ನು ಸಚಿವರು ಸಭೆಯಲ್ಲಿ ಪುನರುಚ್ಚರಿಸಿದರು.

ಎಸ್‌ಎಸ್‌ಎಸ್ ಕರ್ನಾಟಕ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ | ಶಾಸಕ ಮಹೇಶ ಟೆಂಗಿನಕಾಯಿ ಅಭಿಪ್ರಾಯ

ದೇಶದಲ್ಲಿ ಸನಾತನ ಧರ್ಮ ಉಳಿಸಿ, ಜನಜಾಗೃತಿ ಬೆಳೆಸಿ

• **ಹುಬ್ಬಳ್ಳಿ:** ಹಿಂದು ಧರ್ಮದ ಬಗ್ಗೆ ನಡೆಯುತ್ತಿರುವ ಅಪಪ್ರಚಾರ ಕುರಿತು ಜನರಲ್ಲಿ ಜಾಗೃತಿ ಮೂಡಿಸಬೇಕಿದೆ. ಸನಾತನ ಧರ್ಮವನ್ನು ಸಂಘಟಿಸುವ ಮೂಲಕ ಇನ್ನಷ್ಟು ಬೆಳೆಸಬೇಕಿದೆ ಎಂದು ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದರು.

ಶನಿವಾರ ವಿದ್ಯಾನಗರ ಶಿರೂರ ಪಾರ್ಕ್‌ನ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಶಬರಿಮಲೈ ಅಯ್ಯಪ್ಪ ಸೇವಾ ಸಮಾಜಂ (ಎಸ್‌ಎಎಸ್‌ಎಸ್) ಕರ್ನಾಟಕ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಉದ್ಘಾಟಿಸಿ ಮಾತನಾಡಿದರು. ಕರ್ನಾಟಕ ಹಾಗೂ ಕೇರಳ ರಾಜ್ಯಗಳ ನಡುವೆ ಅವಿನಾಭಾವ ಸಂಬಂಧವಿದೆ. ಅದಕ್ಕೆ ಕಾರಣ ಶಬರಿಮಲೈ ಅಯ್ಯಪ್ಪ ಸ್ವಾಮಿ. ಶಬರಿಮಲೈ ಅಯ್ಯಪ್ಪ ಸೇವಾ ಸಮಾಜಂ (ಎಸ್‌ಎಎಸ್‌ಎಸ್)ನ ಲಕ್ಷಾಂತರ ಜನರಿಗೆ ಅನ್ನಪ್ರಸಾದ ಮಾಡುತ್ತಿರುವುದು ಶ್ಲಾಘನೀಯ. ಅಯ್ಯಪ್ಪ ಸ್ವಾಮಿಗೆ ದೇಶದಲ್ಲಿ ಅಷ್ಟೇ ಅಲ್ಲ ವಿಶ್ವದಲ್ಲೂ ಭಕ್ತರು ಇದ್ದಾರೆ ಎಂದರು.

ಶ್ರೀರಾಮ ಸೇನಾ ರಾಷ್ಟ್ರಾಧ್ಯಕ್ಷ ಪ್ರಮೋದ ಮುತಾಲಿಕ್ ಮಾತನಾಡಿ, ಶಬರಿಮಲೈ ಬಗ್ಗೆ ಅಪಪ್ರಚಾರ, ಅವಮಾನ ಮಾಡುತ್ತ ಬರಲಾಗುತ್ತಿದೆ. ಇದನ್ನು



ಹೋಗಲಾಡಿಸಲು ಸಮಿತಿ ರಚನೆ ಅವಶ್ಯಕತೆ ಇತ್ತು. ಹಿಂದು ಸಮಾಜದ ಸುರಕ್ಷತೆ ಇಂದು ಬಹಳ ಅವಶ್ಯಕವಾಗಿದೆ ಎಂದರು. ಹಿಂದು ಧರ್ಮ ಮಠ, ಮಂದಿರಗಳಿಂದ ಉಳಿದಿದೆ. ಇವುಗಳಿಂದ ಸಮಾಜ ನಿರ್ಮಾಣವಾಗಿದೆ. ಇಸ್ಲಾಂ, ಕ್ರಿಶ್ಚಿಯನ್ ಹಾಗೂ ಕಮ್ಯುನಿಷ್ಟ ಮುಖ್ಯ ಉದ್ದೇಶ ಆಧ್ಯಾತ್ಮದ ಮೇಲೆ ದಾಳಿ ಮಾಡುವುದಾಗಿದೆ. ಸಂಸ್ಕೃತಿ ಹಾಗೂ ಪರಂಪರೆಯಿಂದ ಹಿಂದು ಧರ್ಮ ಸದೃಢವಾಗಿದ್ದು, ಅದನ್ನು ಸರ್ವನಾಶ ಮಾಡಲು ಹೊರಟಿದ್ದಾರೆ ಎಂದರು.

ದೇಶದ ಸಂಪ್ರದಾಯವಾದ ಗುರುಕುಲ ಪದ್ಧತಿ ಹೋಗಲಾಡಿಸಿ ಕಾನ್ವೆಂಟ್ ಶಾಲೆಗಳ ತಂದರು. ಮೂಲ ನಂಬಿಕೆ ಹಾಳು ಮಾಡುತ್ತಿದ್ದು, ಇದಕ್ಕೆ ನಾವೆಲ್ಲರೂ ಸಂಘಟಿತರಾಗುವ ಮೂಲಕ ಇವರ ವಿರುದ್ಧ ಹೋರಾಡಬೇಕಿದೆ ಎಂದು ಹೇಳಿದರು.

ಎಸ್‌ಎಎಸ್‌ಎಸ್ ರಾಷ್ಟ್ರೀಯ ಉಪಾಧ್ಯಕ್ಷ ಆನಂದ ವಾಮನ ನಾಯಕ್ ಗೋ ಪೂಜೆ ನೆರವೇರಿ ಸಿದರು. ಹಿರಿಯ ಮಾರ್ಗದರ್ಶಕ ಸೇತು ಮಾಧವನ್ ಧ್ವಜಾರೋಹಣ ನೆರವೇರಿಸಿದರು. ರಾಷ್ಟ್ರೀಯ ಅಧ್ಯಕ್ಷ ಎಸ್. ಜೆ.ಆರ್.ಕುಮಾರ ಅಧ್ಯಕ್ಷತೆ ವಹಿಸಿದ್ದರು. ದೇವಸ್ಥಾನದ ಧರ್ಮದರ್ಶಿ ಆನಂದ ಗುರುಸ್ವಾಮಿ ಸಾನ್ನಿಧ್ಯ ವಹಿಸಿದ್ದರು. ಮಾಜಿ ಮೇಯರ್ ವೀಣಾ ಬರದ್ವಾಡ, ರಾಷ್ಟ್ರೀಯ ಕಾರ್ಯಕಾರಿ ಟಿ.ಬಿ.ಶೇಖರ್, ಪ್ರಮುಖರಾದ ಎ.ಆರ್. ಮೋಹನ, ಸೆಲ್ವನ್ ಮುರುಘನ್, ಪ್ರಕಾಶ ಗಣಪತಿ ಪೈ, ಈರೋಡು ಎನ್. ರಾಜನ್, ದೊಡ್ಡಶಂಕರ, ವಿನೋದ, ಡಾ.ಎನ್.ಜಯರಾಂ ಇದ್ದರು.

ಭಕ್ತರಿಗೆ ಹೆಚ್ಚಿನ ಸೌಲಭ್ಯ

ಹಿಂದೆ ಶಬರಿಮಲೈಗೆ ಹೋಗಬೇಕಾದರೆ ಸಾಕಷ್ಟು ಸಮಸ್ಯೆ, ಅಸ್ವಚ್ಛತೆ ಕಾಡುತ್ತಿತ್ತು. ಅದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಸಮಾಜಂ ಜಾಗೃತಿ ಮೂಡಿಸುತ್ತಿದೆ. 10 ಲಕ್ಷಕ್ಕೂ ಹೆಚ್ಚು ಭಕ್ತರು ಶ್ರದ್ಧೆ, ಭಕ್ತಿಯಿಂದ ಭೇಟಿ ನೀಡುತ್ತಾರೆ. ಅವರಿಗೆ ಸೇವೆ ಒದಗಿಸುವುದು ಅಷ್ಟು ಸರಳ, ಸುಲಭದ ಕೆಲಸವಲ್ಲ. ಈಗ ಅಲ್ಲಿ ತುಂಬಾ ಬದಲಾವಣೆ ಆಗಿದೆ. ಸ್ವಚ್ಛತೆ ಕಾಪಾಡಲಾಗಿದೆ. ಭಕ್ತರಿಗೆ ಹೆಚ್ಚಿನ ಸೌಲಭ್ಯ, ಸವಲತ್ತು ಸೇವೆಗಳನ್ನು ನೀಡಲಾಗುತ್ತಿದೆ ಎಂದು ಅನ್ನದಾನ ಸಮಿತಿ ಸದಸ್ಯ ಹಾಗೂ ಉದ್ಯಮಿ ವಿಎಸ್‌ವಿ ಪ್ರಸಾದ ಹೇಳಿದರು.

ಸೌಲಭ್ಯಗಳು ಸಿಗುತ್ತಿಲ್ಲ

ಸಂಘಟನೆ ಸಶಕ್ತಗೊಳಿಸಲು ಚಿಂತನ ಮಂಥನ ನಡೆಸಲಾಗುತ್ತಿದೆ. ಶಬರಿಮಲೈ ಶ್ರದ್ಧಾ ಕೇಂದ್ರ. ಭಕ್ತಿ ಜೊತೆ ಶಕ್ತಿ ಅವಶ್ಯವಾಗಿದೆ. ಆದರೆ, ಹಿಂದು ವಿರೋಧಿಗಳ ಕಪಿಮುಷ್ಟಿಯಲ್ಲಿ ಹಿಂದೂ ಭಕ್ತರಿಗೆ ದೊರೆಯಬೇಕಾದ ಸವಲತ್ತು, ಸೌಲಭ್ಯಗಳು ಸಿಗುತ್ತಿಲ್ಲ. ಅವುಗಳ ಪಡೆಯುವ ನಿಟ್ಟಿನಲ್ಲಿ ಕೆಲಸ ಮಾಡಬೇಕಿದೆ. ಭಾರತೀಯ ಸಮಾಜ ಭಕ್ತಿ ಮತ್ತು ಶಕ್ತಿಗೆ ಸಮಾನ ಸ್ಥಾನ ನೀಡಲಾಗಿದೆ. ಭಕ್ತಿಯ ಪರಾಕಾಷ್ಠೆ ಹೊಂದಿದೆ. ದಕ್ಷಿಣ ಭಾರತದ ಬಹುತೇಕ ಜಿಲ್ಲೆಗಳಲ್ಲಿ ಸಾಸ್ ಸಂಘಟನೆ ಇದೆ. ಭಾರತವನ್ನು ಜಗತ್ತು ನಮ್ಮಲ್ಲಿನ ಪವಿತ್ರ ಕ್ಷೇತ್ರಗಳಿಂದ ಗುರುತಿಸಬೇಕು. ಭಾರತವು ಜಗತ್ತಿಗೆ ಪರಿಚಿತವಾಗಬೇಕು ಎಂದು ಎಸ್‌ಎಎಸ್‌ಎಸ್ ಕರ್ನಾಟಕ ರಾಜ್ಯ ಸಂಯೋಜಕ ಪಿ.ಎಸ್.ಪ್ರಕಾಶ ತಿಳಿಸಿದರು.

ನೀಟ್ 2026 ಅಕ್ರಮ: ಎಬಿವಿಪಿ ಪ್ರತಿಭಟನೆ

• **ಕಲಬುರಗಿ:** ನೀಟ್-ಯುಜಿ 2026 ಪರೀಕ್ಷೆಯಲ್ಲಿ ನಡೆದಿರುವ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ವಿವಿಧ ಪರೀಕ್ಷಾ ಅಕ್ರಮಗಳ ಕುರಿತು ಕೇಂದ್ರ ಸರ್ಕಾರ ನಿಷ್ಪಕ್ಷಪಾತ ತನಿಖೆ ನಡೆಸಿ, ಪರೀಕ್ಷಾ ಅಕ್ರಮ ವಿರೋಧಿ ವಿಶೇಷ ಕಠಿಣ ಕಾಯ್ದೆಯನ್ನು ಜಾರಿಗೆ ತರಬೇಕು ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಆಗ್ರಹಿಸಿದೆ.

ನಗರದ ಜಿಲ್ಲಾಧಿಕಾರಿ ಮೂಲಕ ಈ ಸಂಬಂಧ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಿದ ಎಬಿವಿಪಿ ಕಾರ್ಯಕರ್ತರು, ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯಕ್ಕೆ ಸಂಬಂಧಿಸಿದ ರಾಷ್ಟ್ರೀಯ ಮಟ್ಟದ ಪರೀಕ್ಷೆಗಳಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆ ಕಾಪಾಡುವುದು ಅತ್ಯಂತ ಅಗತ್ಯವಾಗಿದೆ ಎಂದು ತಿಳಿಸಿದರು. ಎಬಿವಿಪಿ ವಿಭಾಗ ಸಂಘಟನಾ ಕಾರ್ಯದರ್ಶಿ ಹೇಮಂತ ಅರಳಿ, ಮಹಾನಗರ ಕಾರ್ಯದರ್ಶಿ ಶರಣು ಪೂಜಾರಿ, ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಸಿದ್ದಲಿಂಗ ತಳವಾರ, ಮನೋಜ ಪಾಟೀಲ, ಶ್ರವಣ ಜಳಕಿ, ರಾಜಪ್ಪ, ಸಾವನ್ ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.

ಮಾನ್ಯ 1ನೇ ಅಪರ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ದೇವನಹಳ್ಳಿ,
ಪ್ರಿ.ಮಿಸ್. ಸಂ. 161 / 2026

[illegible]

ಸ್ವತ್ತು ಪ್ರಕಟಣೆ

[illegible]

ದಿನಾಂಕ: 14.05.2026ರಂದು ನೀಡಲಾಗಿದೆ.

[illegible]

PUBLIC NOTICE

BE IT KNOWN TO ALL that our client(s) intend(s) to purchase the below-mentioned Schedule Property from - **(1) Sri. T. M. Abdul Gani** and **(2) Sri. T. M. Abdul Jameel**, both being sons of **Sri. T. M. Abdul Rahman**, who claim to be the absolute owners, having purchased the same from – **(1) Smt. Asha Reddy**, **(2) Smt. Hema Reddi**, **(3) Smt. Prema Mohan Ranjan @ Prema Ranjan**, **(4) Smt. Raji Aneja**, and **(5) Sri. C.V. Krishna Mohan**, all being children of **Late Commander Sri. Calpakam Jagan Mohan** and **Smt. Calpakam Jalajakshi Mohan**, under a **Sale Deed dated 20-07-2028** which was registered as **Document No.HLS-1-02033-2018-19** of **Book-I** and stored in **CD No.HLSD164** in the **Office of the Senior Sub-Registrar, Shivajinagar (Ulsoor)**, Bangalore.

Any person(s) / institution(s) objecting to the proposed sale or asserting any manner of lawful / tenable right, title, interest or share over the said property or part thereof, is / are required to lodge their objections/claims preferably with photo-copies of documents based on which they object to the said sale or stake their claim, only by Speed Post with POD / Acknowledgment Due, so as to reach at the below-mentioned address within **15 (fifteen) days** from the date of this publication, failing which our client(s) shall proceed to purchase the said property as if there are no claims of any nature thereon, and all claims even if existing, shall be deemed to have been waived off/ abandoned. Any objections/claims received after the said period, or personal representation(s) or communication by any other mode shall not be entertained / considered under any circumstances, and shall not be binding on our client(s).

SCHEDULE PROPERTY

ALL THAT PIECE AND PARCEL of the immovable property bearing **Municipal No.32, PID No.92-32-32, E-PID No.5905998551** situated at **Benson Cross Road, Benson Town, Bangalore** in Bruhat Bangalore *Mahanagara* Palike **Old Ward No.92, New Ward No.63 (Jayamahal Ward)**, measuring:

EAST to WEST : 50 feet
NORTH to SOUTH : 98 feet 6 inches
Totally measuring about **4930 sq. feet** and bounded on the:
EAST by : Private Property bearing No.32/A;
WEST by : Private Property bearing No.31, Benson Cross Road belonging to Smt. Disawala;
NORTH by : Baiderahalli Lines;
SOUTH by : 35 feet road.

ABHAY KUMAR P. JAIN & V. RAMKUMAR, Advocates
LexJuris, No.202, PANCHARATHNA RACE-VIEW APARTMENTS
No.15/1, 6th Cross, Gandhinagar, BANGALORE- 560 009.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜನಿಯರ್ ರವರ ಕಾರ್ಯಾಲಯ ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ
ಕಛೇರಿ ದೂರವಾಣಿ: 08176-252749

ಟೆಂಡರ್ ಪ್ರಕಟಣೆ ಸಂಖ್ಯೆ: 05/2026-27 ದಿನಾಂಕ: 14-05-2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ ವ್ಯಾಪ್ತಿಯ ಅರಸೀಕೆರೆ ತಾಲ್ಲೋಕಿಗೆ 2025-26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ವಿಶೇಷ ಅನುದಾನದಡಿ ಅರಸೀಕೆರೆ ತಾಲ್ಲೂಕು, ಜಾವಗಲ್ ಹೋಬಳಿ ನೇರ್ಲಿಗೆ ಗ್ರಾಮ ಪಂಚಾಯಿತಿ ನೇರ್ಲಿಗೆ ಕೆರೆಕೋಡಿಯಿಂದ ತಿಮ್ಮನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ. ಹಾಗೂ ನೇರ್ಲಿಗೆ ಗ್ರಾಮದಿಂದ ಸಂಕೀಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಹಾಗೂ ಎಸ್.ಡಿಗ್ಗೇನಹಳ್ಳಿ ಗ್ರಾಮದಿಂದ ಸೋಂಪುರ ಗ್ರಾಮದವರೆಗೆ ರಸ್ತೆ ಅಭಿವೃದ್ಧಿ ಹಾಗೂ ನೇರ್ಲಿಗೆ ಗ್ರಾಮದ ಪುಂಡಗಿರಿ ಶ್ರೀ ರಂಗನಾಥಸ್ವಾಮಿ ದೇವಸ್ಥಾನದ ರಸ್ತೆ ಅಭಿವೃದ್ಧಿ ಹಾಗೂ ಅರಕೆರೆ ಗ್ರಾಮ ಪಂಚಾಯಿತಿ ಬೆಳವಳ್ಳಿ ಗ್ರಾಮದ ಪರಿಮಿತಿಯಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಅರಕೆರೆ ಗ್ರಾಮ ಪಂಚಾಯಿತಿ ಅರಕೆರೆ ಗ್ರಾಮದ ಪರಿಮಿತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಹಾಗೂ ಬಂದೂರು ಗ್ರಾಮ ಪಂಚಾಯಿತಿ ತಿರುಪತಿಹಳ್ಳಿ ಗ್ರಾಮದಿಂದ ಮಾದನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಹಾಗೂ ನೀಲಗಿರಿಕಾವಲು ಗ್ರಾಮದ ಪರಿಮಿತಿಯಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಬಂದೂರು ಗ್ರಾಮದಿಂದ ಬಕ್ಕಪ್ಪನಕೊಪ್ಪಲು ಗ್ರಾಮದವರೆಗೆ ರಸ್ತೆ ಅಭಿವೃದ್ಧಿ ಹಾಗೂ ಕೋಳಗುಂದ ಗ್ರಾಮ ಪಂಚಾಯಿತಿ ಮೊಸಳೆ ಗ್ರಾಮದ ಪರಿಮಿತಿಯಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಕೋಳಗುಂದ ಗ್ರಾಮದ ಪರಿಮಿತಿಯಲ್ಲಿ ಅಯ್ದುಭಾಗಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ RDPR/2026-27/RD/WORK_INDENT26681 ಟೆಂಡರ್ ಮೊತ್ತ ರೂ 176.56 ಲಕ್ಷಗಳಿಗೆ (ಜಿ.ಎಸ್.ಟಿ ಹೊರತುಪಡಿಸಿ) ಲೋಕೋಪಯೋಗಿ ಇಂಜನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್ರೋಲ್ ಮಾಡಿಸಿರುವ ಅರ್ಹ ಗುತ್ತಿಗೆದಾರರಿಂದ ಸ್ಪರ್ಧಾತ್ಮಕ ಟೆಂಡರನ್ನು KPPP ಅಂತರ್ಜಾಲದಲ್ಲಿ ದಿನಾಂಕ: 30-05-2026ರ ಸಂಜೆ 5.00ಘಂಟೆಯವರೆಗೆ ಟೆಂಡರ್ನ್ನು ನಿಗಧಿತ ನಮೂನೆಗಳನ್ನು https://kppp.karnataka.gov.in/kppp ನಲ್ಲಿ ಡೌನ್ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 30-05-2026ರ ಸಂಜೆ 5.00 ಗಂಟೆಯೊಳಗೆ ಅಪ್ಲೋಡ್ ಮಾಡತಕ್ಕದ್ದು. ದಿನಾಂಕ 29-05-2026 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 01-06-2026ರಂದು ಬೆಳಿಗ್ಗೆ 11.00ಗಂಟೆಗೆ ಗುತ್ತಿಗೆದಾರರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್ಡ್ ಅನುಮೋದನೆಯಾದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗಳ ವಿವರಗಳು KPPP ಅಂತರ್ಜಾಲದಲ್ಲಿ ಲಭ್ಯವಿರುತ್ತವೆ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡಲಾಗುವುದು ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/-ಕಾರ್ಯಪಾಲಕ ಇಂಜನಿಯರ್,
ಪ.ರಾಜ್. ಇಂ.ವಿಭಾಗ, ಚನ್ನರಾಯಪಟ್ಟಣ.

ವಾಸಾಸಂಇ/ಹಿಸನಿ/ಹಾಸನ/141/ಕೆಎಸ್ಎಂಸಿಎ/2026-27

ಲೋಕೋಪಯೋಗಿ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರವರ ಕಛೇರಿ, ಧಾರವಾಡ ವಿಭಾಗ, ಧಾರವಾಡ. ದೂ.: 0836-2747944, ಇ-ಮೇಲ್: eepwddha@gmail.com

ಕ್ರಸಂ: ಕಾನಿಇಂಧಾ/ಗುತ್ತಿಗೆ/ಪಿ.ವಿ.1/2026-27/771 ದಿನಾಂಕ: 15-05-2026

ಟೆಂಡರ್ ಪ್ರಕಟಣೆ

I.F.T – KW –1,2,3,4

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯು-1,2,3,4ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. (kppp.karnataka.gov.in) ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಕನಿಷ್ಠ ರೂ.2.28 ಲಕ್ಷಗಳಿಂದ ಗರಿಷ್ಠ ರೂ.625.00 ಲಕ್ಷಗಳ ವರೆಗೆ, 4059-80-051-0-29-386 ಇಲಾಖಾ ಕಟ್ಟಡಗಳ ನಿರ್ಮಾಣ, 8443 Deposit construction, 4059-80-051-0-60-132, 4059-80-051-0-60-423 (ಟಿ.ಎಸ್.ಪಿ), 4059-80-051-0-60-422 (ಎಸ್.ಸಿ.ಪಿ) ಸನ್ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆ, 2059-80-053-4-00-200 ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ, 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ, 5054 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಲೆಕ್ಕಶೀರ್ಷಿಕೆ ಅಡಿ ಬರುವ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಈ ಕೆಳಗಿನಂತಿದೆ.

1. Calender of Events: ಸಾಮಾನ್ಯ

1) PWD/2025-26/BD/WORK_INDENT29190/CALL-4 2) PWD/2025-26/SE1161 3) PWD/2026-27/RD/WORK_INDENT35487/CALL-2 4) PWD/2025-26/RD/WORK_INDENT35092/Call-3 5) PWD/2024-25/SE0244/CALL-3 6) PWD/2026-27/SE1189/Call-2 7) PWD/2025-26/BD/WORK_INDENT31543

1) ಪ್ರಿ-ಬಿಡ್/ಆಕ್ಷೇಪಣೆ-ಸಂದೇಹ ದಿನಾಂಕ: 25-05-2026 (ಬೆಳಿಗ್ಗೆ 12:30 ಗಂಟೆಯವರೆಗೆ) 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 26-05-2026 (ಸಾಯಂಕಾಲ 16:00 ಗಂಟೆಯವರೆಗೆ) 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27-05-2026 (ಸಾಯಂಕಾಲ 16:30 ಗಂಟೆಯ ನಂತರ) 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 29-05-2026 (ಸಾಯಂಕಾಲ 16:30 ಗಂಟೆಯ ನಂತರ)

2. Calender of Events: ಸಾಮಾನ್ಯ

8) PWD/2026-27/BD/WORK_INDENT35679 (Extension) 9) PWD/2026-27/IND0256 10) PWD/2026-27/IND0258 11) PWD/2026-27/BD/WORK_INDENT35403 12) PWD/2025-26/BD/WORK_INDENT34943/CALL-2
13) PWD/ 2025-26/BD/WORK_INDENT34990/CALL-2
14) PWD/2025-26/BD/ WORK_INDENT34272/Call-2

ಪ್ರವರ್ಗ-2ಎ

15) PWD/2025-26/RD/WORK_INDENT33456/CALL-2

ಪ್ರವರ್ಗ-1

16) PWD/2025-26/RD/WORK_INDENT33455/CALL-2

1) ಪ್ರಿ-ಬಿಡ್/ಆಕ್ಷೇಪಣೆ-ಸಂದೇಹ ದಿನಾಂಕ: 04-06-2026 (ಬೆಳಿಗ್ಗೆ 12:30 ಗಂಟೆಯವರೆಗೆ) 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 05-06-2026 (ಸಾಯಂಕಾಲ 16:00 ಗಂಟೆಯವರೆಗೆ) 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06-06-2026 (ಸಾಯಂಕಾಲ 16:30 ಗಂಟೆಯ ನಂತರ) 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 08-06-2026 (ಸಾಯಂಕಾಲ 16:30 ಗಂಟೆಯ ನಂತರ)

ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಅಂತರ್ಜಾಲ ವಿಳಾಸ http://www.kppp.karnataka.gov.in ದಲ್ಲಿ ಹಾಗೂ ಲೋಕೋಪಯೋಗಿ ಇಲಾಖೆ ಧಾರವಾಡ ವಿಭಾಗ ಕಚೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಒಂದು ವೇಳೆ ಟೆಂಡರ್ ತೆರೆಯುವ ದಿನಾಂಕದಂದು ರಜಾ ದಿನಗಳು ಬಂದಲ್ಲಿ ಕಚೇರಿಯ ಕೆಲಸದ ದಿನದಂದು ಟೆಂಡರ್ ತೆರೆಯಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ವಾಸಾಸಂಇ/ಧಾರವಾಡ/189/ವಾರ್ತಾಇಲಾಖೆ/2026-27

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಕೆಪಿಪಿ ಪೋರ್ಟ್‌ಲ್ ಟೆಂಡರ್ ಪ್ರಕಟಣೆ ಸಂಖ್ಯೆ:18/2025-26 ದಿನಾಂಕ: 02.03.2026,
ಕೆಪಿಪಿ ಪೋರ್ಟ್‌ಲ್ ಟೆಂಡರ್ ಪ್ರಕಟಣೆ ಸಂಖ್ಯೆ:18(1)/2025-26 ದಿನಾಂಕ: 19.04.2026

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯು- II ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಕೆಪಿಪಿ ಪೋರ್ಟ್‌ಲ್ ಏಕ & ದ್ವಿ ಲಕೋಟೆ ಪದ್ಧತಿಯಲ್ಲಿ ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಕೆಪಿಪಿ ಪೋರ್ಟ್‌ಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ (https://kppp.karnataka.gov.in) ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) kppportal ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿ ಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 19.05.2026 ರ 16.30 ರವರೆಗೆ. (2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 20.05.2026ರಂದು 4.35 ನಂತರ. (3) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): ಹಿಂದಿರುಗಿಸಲಾಗುವುದಿಲ್ಲ.**

ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:62/ಕೆಎಸ್ಎಂಸಿಎ/2026-27

ಕರ್ನಾಟಕ ಸರ್ಕಾರ
ಆಡಳಿತ ವೈದ್ಯಾಧಿಕಾರಿಗಳ ಕಛೇರಿ ತಾಲೂಕು ಆಸ್ಪತ್ರೆ, ಸಿದ್ದಾಪುರ, ಉತ್ತರ ಕನ್ನಡ ಜಿಲ್ಲೆ- 581355
E-Mail: mochcsdp@gmail.com Ph. No.

ಸಂಖ್ಯೆ: THS/E-TENDER/DRUGS/61/2025-26 ದಿನಾಂಕ: 15-05-2026

ರೀ ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯುರಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲೂಕಿನಲ್ಲಿ ಇರುವ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಗೆ ಪ್ರತಿ ದಿನ ಸ್ಥಳೀಯ ಹಾಗೂ ಸುತ್ತಮುತ್ತಲಿನ ತಾಲ್ಲೂಕಿನ ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಚಿಕಿತ್ಸೆಗೆ ಬರುತ್ತಿರುವುದರಿಂದ ಗುಣಮಟ್ಟದ ಹಾಗೂ ಸೂಕ್ತ ಚಿಕಿತ್ಸೆಯನ್ನು ಒದಗಿಸುವ ಸಲುವಾಗಿ ಸರ್ಕಾರಿ ಸಂಸ್ಥೆಗಳಿಂದ ಔಷಧಗಳು ಸರಬರಾಜು ಆಗದಿರುವ ಹಾಗೂ ಕಡಿಮೆ ಪ್ರಮಾಣದಲ್ಲಿ ಸರಬರಾಜು ಆದಂತಹ ಸಂದರ್ಭದಲ್ಲಿ ಅಗತ್ಯವಿರುವ ಔಷಧಗಳು & ವೈದ್ಯಕೀಯ ಸಾಮಾಗ್ರಿಗಳನ್ನು ಅವಶ್ಯಕತೆಗೆ ಅನುಗುಣವಾಗಿ ಸರಬರಾಜು ಮಾಡಲು ಕರ್ನಾಟಕ ಪಾರದರ್ಶಕ ಅಧಿನಿಯಮ 1999 ರಂತೆ ಇ-ಸಂಗ್ರಹಣೆ (E-Procurement) ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆದಾಗ ಕೇವಲ ಇಬ್ಬರು ಬಿಡ್ ಮಾಡಿ ಅದರಲ್ಲಿ ಒಬ್ಬರು ಡಾಕ್ಯುಮೆಂಟ್ಸ್ ಲಗತ್ತಿಸಿಲ್ಲದ ಕಾರಣ ತಿರಸ್ಕರಿಸಲಾಗಿದ್ದು ಒಬ್ಬರೇ ಇರುವ ಕಾರಣ ಮರು ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಸಂಸ್ಥೆಗಳು, ಟೆಂಡರ್‌ದಾರರು ಪೂರ್ಣ ವಿಳಾಸದೊಂದಿಗೆ ಇ-ಟೆಂಡರ್ ನಲ್ಲಿ ಭಾಗವಹಿಸಬಹುದು. ಟೆಂಡರ್ ನಮೂನೆ, ಇ.ಎಂ.ಡಿ ಮತ್ತು ಟೆಂಡರ್ ಮಾಹಿತಿಗಳಿಗಾಗಿ ವೆಬ್‌ಸೈಟ್ https://kppp.karnataka.gov.in ನಲ್ಲಿ ನೋಡಬಹುದಾಗಿದೆ.

1	ಟೆಂಡರ್ ಅಂದಾಜು ಮೌಲ್ಯ	ರೂ. 10,00,000/-
2	ಟೆಂಡರ್ ಇ.ಎಂ.ಡಿ ಮೌಲ್ಯ	ರೂ. 25,000/-
3	ಟೆಂಡರ್ ಅಪ್-ಲೋಡ್ ಮಾಡಲು ಪ್ರಾರಂಭ ದಿನಾಂಕ	15/05/2026
4	ಟೆಂಡರ್ ಅಪ್-ಲೋಡ್ ಮಾಡಲು ಕೊನೆಯ ದಿನಾಂಕ	25/05/2026
5	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	26/05/2026 4:00 PM
6	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	27/05/2026 4:00 PM
7	ಟೆಂಡರ್ ಅನುಮೋದನೆ ನಂತರ ಪಾವತಿಸಬೇಕಾದ ಭದ್ರತಾ ಠೇವಣಿ	25,000/-
8	ಟೆಂಡರ್ ತೆರೆಯುವ ಸ್ಥಳ	ಆಡಳಿತ ವೈದ್ಯಾಧಿಕಾರಿಗಳ ಕಛೇರಿ ತಾಲೂಕು ಆಸ್ಪತ್ರೆ, ಸಿದ್ದಾಪುರ, ಉತ್ತರ ಜಿಲ್ಲೆ-581355
9	ಇ-ಮೇಲ್ ವಿಳಾಸ	mochcsdp@gmail.com

ಸಹಿ/- ಆಡಳಿತ ವೈದ್ಯಾಧಿಕಾರಿಗಳು,
ತಾಲೂಕು ಆಸ್ಪತ್ರೆ, ಸಿದ್ದಾಪುರ, ಉತ್ತರ ಜಿಲ್ಲೆ-581355

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ,
ನಂ.02, ವಿಶ್ವೇಶ್ವರಯ್ಯ ನಾಲಾ ವಿಭಾಗ, ಮದ್ದೂರು,
ಜಿಲ್ಲೆ: ಮಂಡ್ಯ ಪಿನ್‌ಕೋಡ್-571428

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :01/2026-27 ದಿ:13.05.2026

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ : 01/2026-27 ದಿನಾಂಕ: 13.05.2026 ರಲ್ಲಿ ಒಟ್ಟು ಆರು ಸಂಖ್ಯೆಯ ಕಾಮಗಾರಿಗಳಿಗೆ (ಅಂದಾಜಿನ ಕನಿಷ್ಠ ಮೊತ್ತ 43.00 ಲಕ್ಷ & ಗರಿಷ್ಠ ಮೊತ್ತ 96.20 ಲಕ್ಷ) QCBS ರ ಅನ್ವಯ ಅರ್ಹ ಕೆಪಿಡಬ್ಲೂಡಿ ಗುತ್ತಿಗೆದಾರರು/ಏಜೆನ್ಸಿ ರವರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಟೆಂಡರ್‌ನ್ನು ತೆರೆಯುವ ದಿನಾಂಕ as per KPPP-portal ಮತ್ತು ಹೆಚ್ಚಿನ ವಿವರಗಳಿಗೆ http://kppp.karnataka.gov.in ನಲ್ಲಿ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ 08231-200282 ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/-ಕಾರ್ಯಪಾಲಕ ಇಂಜನಿಯರ್,
ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.02, ವಿ.ಸಿ.ವಿಭಾಗ,
ಮದ್ದೂರು

ವಾಸಾಸಂಇ/ಓಸಿ-ಮಂ/ಕೆಎಸ್ಎಂಸಿಎ/130/2026-27

(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:08/2026-27 ದಿನಾಂಕ:12.05.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಪಂಚಾಯತ್‌ರಾಜ್ ಇಂಜನಿಯರಿಂಗ್ ವಿಭಾಗ ಹಾಸನ ರವರು, ಅರಕಲಗೂಡು ಉಪ ವಿಭಾಗ ವ್ಯಾಪ್ತಿಯ 2025-26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ INDENT NO:(1) RDPR/2025-26/BD/WORK_INDENT25516/CALL-2 ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಇ-ಪ್ರೊಕ್ಯೂರ್‌ಮೆಂಟ್ ಅಡಿ KW-4 ರ ರೀತ್ಯಾ ಅಂತರ್ಜಾಲದಲ್ಲಿ ದಿ: 13.05.2026 ರಿಂದ ದಿ:20.05.2026ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:20.05.2026ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:18.05.2026 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ಪ್ರೀ-ಬಿಡ್ ಮೀಟಿಂಗನ್ನು ದಿನಾಂಕ:15.05.2026 ಬೆಳಗೆ 11.00 ಗಂಟೆಗೆ ಕಾರ್ಯಪಾಲಕ ಅಭಿಯಂತರರು,ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ,ಹಾಸನ ಕಛೇರಿಯಲ್ಲಿ ನಿಗಧಿ ಪಡಿಸಲಾಗಿದೆ. ದಿ:21.05.2026 ರಂದು ಸಂಜೆ 4.05 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/-ಕಾರ್ಯಪಾಲಕ ಇಂಜನಿಯರ್,
ಪ.ರಾಜ್.ಇಂ. ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/133/ಕೆಎಸ್ಎಂಸಿಎ/2026-27

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ
ಕಾರ್ಯಪಾಲಕ ಇಂಜನಿಯರ್‌ರವರ ಕಚೇರಿ,
ಪಂ.ರಾ.ಇಂ. ವಿಭಾಗ, ಕೆ.ಆರ್.ನಗರ

ಸಂಖ್ಯೆ: ಕಾಇಂ/ಪಂರಾಇಂವಿ/ಕೃರಾನ/ಎ.ಇ/ಟೆಂಡರ್/2026-27 ದಿನಾಂಕ : 12.05.2026

ಇ-ಪ್ರೊಕ್ಯೂರ್‌ಮೆಂಟ್ ರೀತ್ಯಾ ಟೆಂಡರ್ ಪ್ರಕಟಣೆ -ಸಂಖ್ಯೆ 02/2026-27 ದಿನಾಂಕ: 12.05.2026

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು K.W -1/K.W-2 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು G.O. No. FD 9 PCL 2004 Dt. 06-08-2005 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಂಜನಿಯರಿಂಗ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಪಂಚಾಯತ್‌ರಾಜ್ ಇಂಜನಿಯರಿಂಗ್ ವಿಭಾಗ, ಕೆ.ಆರ್.ನಗರ ರವರ ಪರವಾಗಿ ಈ ಕೆಳಗೆ ನಮೂದಿಸಿರುವ ವಿವಿಧ ಲೆಕ್ಕಶೀರ್ಷಿಕೆಯ ಯೋಜನೆಯಡಿ ಕಾಮಗಾರಿಯನ್ನು ಕೈಗೊಳ್ಳಲು https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. 1) ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಷೆಡ್ಯೂಲ್-ಬಿ ಅಪ್ ಲೋಡ್ (Upload) ಮಾಡುವ ಅಂದಾಜು ದಿ: 13.05.2026ರ ಬೆಳಿಗ್ಗೆ 10.30 ಗಂಟೆಯಿಂದ 2) ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಷೆಡ್ಯೂಲ್-ಬಿ ನಲ್ಲಿ ದರ ನಮೂದಿಸುವ ಕೊನೆಯ ದಿ: 29.05.2026ರ ಸಂಜೆ 5.00 ಗಂಟೆಯ ವರೆಗೆ. 3) ತಾಂತ್ರಿಕ ಬಿಡ್(ಕೆಡಬ್ಲ್ಯು-1,2) ತೆರೆಯುವ ದಿನಾಂಕ 30.05.2026 ರ ಸಂಜೆ 12.30 ಗಂಟೆಯಿಂದ. 4) ಆರ್ಥಿಕ ಬಿಡ್(ಕೆಡಬ್ಲ್ಯು-1,2) ತೆರೆಯುವ ದಿನಾಂಕ ತಾಂತ್ರಿಕವಾಗಿ ಅರ್ಹತೆಗೊಂಡ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು

ಕಾಮಗಾರಿಗಳ ವಿವರ

ತಾಲ್ಲೂಕು	ಹೆಚ್.ಡಿ.ಕೋಟೆ	ಸರಗೂರು	ಒಟ್ಟು
ಒಟ್ಟುಕಾಮಗಾರಿಗಳ ಸಂಖ್ಯೆ	12	03	15
ಸಾಮಾನ್ಯ	08	03	11
ಪ.ಜಾತಿ	02	0	02
ಪ.ಪಂಗಡ	0	0	0
ಪ್ರವರ್ಗ -1	01	0	01
ಪ್ರವರ್ಗ-2ಎ	01	0	01

ಆನ್ ಲೈನ್ ನಲ್ಲಿ ಮಾತ್ರ ನಿರ್ವಹಿಸಲಾಗುವುದು. ವಿವರಗಳಿಗೆ https://kppp.karnataka.gov.in ನಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ. ದೂರವಾಣಿ ಸಂಖ್ಯೆ 08223-262228.

ಸಹಿ/- ಕಾರ್ಯಪಾಲಕ ಇಂಜನಿಯರ್,
ಪಂಚಾಯತ್ ರಾಜ್ ತಾಂತ್ರಿಕ ವಿಭಾಗ, ಕೆ.ಆರ್.ನಗರ

DIPR/DOMYS/186/KSMCA/140/2026-27

ಕರ್ನಾಟಕ ಸರ್ಕಾರ
ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಶಿವಮೊಗ್ಗ:
ಡಿ.ದೇವರಾಜ ಅರಸು ಭವನ, ಬಾಲರಾಜ್ ಅರಸ್ ರಸ್ತೆ, ಕೆ.ಇ.ಬಿ ಸರ್ಕಲ್,
ಇ-ಮೇಲ್ : dobemshimoga@gmail.com ದೂ : (08182) 222129.

ಸಂ.ಜಿಹಿಂವಕ/ಎ-6/ಮಾ.ಸೇ.ಟೆಂಡರ್/ಸಿ.ಆರ್-29/2026-27 ದಿನಾಂಕ: 15.05.2026

ಟೆಂಡರ್ ಪ್ರಕಟಣೆ

2026-27ನೇ ಸಾಲಿಗೆ ಶಿವಮೊಗ್ಗ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸಲಾಗುತ್ತಿರುವ ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ಇಲಾಖೆ ವ್ಯಾಪ್ತಿಗೆ ಒಳಪಡುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ವಸತಿಶಾಲೆಗಳು/ಕಾಲೇಜುಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಗ್ರೂಪ್ "ಡಿ" ಮತ್ತು ಬೋಧಕೇತರ ಹುದ್ದೆಗಳಾದ ಪ್ರ.ದ.ಸ, ದ್ವಿ.ದ.ಸ, ಸ್ಟಾಫ್ ನರ್ಸ್, ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ ಹಾಗೂ ಡಿ ದರ್ಜೆ ಸಹಾಯಕ ಹುದ್ದೆಗಳಿಗೆ ಮತ್ತು ಜಿಲ್ಲೆಯ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಗಳಿಗೆ ಡಾಟಾ ಎಂಟ್ರಿ ಆಪರೇಟರ್ (ಗ್ರೇಡ್-2 ಹುದ್ದೆಗಳಿಗೆ ಮಾನವಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ.

ವೇಳಾಪಟ್ಟಿ : 1) ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ : ಸಂ/ಹಿಂವಕಇ/ಎ-6/ಮಾಸೇಟೆಂಡರ್/ಸಿಆರ್-29/2026-27 ದಿ: 15.05.2026. 2) ಟೆಂಡರ್‌ಗಿಟ್ಟ ಮೊತ್ತ: ರೂ. 1233.45 ಲಕ್ಷಗಳು. 3) ಇಎಂಡಿ ನಿಗಧಿಪಡಿಸಿರುವ ಮೊತ್ತ : ರೂ. 12.33 ಲಕ್ಷಗಳು. 4) ಇ-ಪೋರ್ಟಲ್ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ : ದಿ. 16.06.2026 ರಂದು ಸಂಜೆ 4.00 ಗಂಟೆಯೊಳಗೆ. 5) ಪ್ರಿ-ಬಿಡ್ ಸಭೆ ನಡೆಸುವ ದಿನಾಂಕ, ಸಮಯ ಮತ್ತು ಸ್ಥಳ : ದಿನಾಂಕ:25.05.2026 ರಂದು ಬೆಳಗ್ಗೆ 11.00 ಗಂಟೆಗೆ. ಜಿಲ್ಲಾ ಹಿಂ.ವ.ಕ.ಇಲಾಖೆ ಕಛೇರಿ, ಶಿವಮೊಗ್ಗ. 6) ಇ-ಪೋರ್ಟಲ್ ನಲ್ಲಿ ಟೆಂಡರ್ ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ & ಸಮಯ : ದಿನಾಂಕ 18.06.2026 ಬೆಳಗ್ಗೆ 11.00 ಗಂಟೆಗೆ. (ದಿನಾಂಕ ಮತ್ತು ಸಮಯ ಬದಲಾವಣೆಗೆ ಒಳಪಟ್ಟಿರುತ್ತದೆ. 7) ಇ-ಪೋರ್ಟಲ್ ನ ಟೆಂಡರ್ ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ : ನಂತರದಲ್ಲಿ ತಿಳಿಸಲಾಗುವುದು. 8) ಇ-ಪೋರ್ಟಲ್ ನ ಟೆಂಡರ್ ಆರ್ಥಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ : ನಂತರದಲ್ಲಿ ತಿಳಿಸಲಾಗುವುದು. 9) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : **Website: https://kppp.karnataka.gov.in** ಅಥವಾ ಜಿಲ್ಲಾ ಅಧಿಕಾರಿಗಳು, ಡಿ.ದೇವರಾಜ ಅರಸು ಭವನ, ಬಾಲರಾಜ್ ಅರಸ್ ರಸ್ತೆ ಕೆ.ಇ.ಬಿ ಸರ್ಕಲ್ ಶಿವಮೊಗ್ಗ **e-mail- dobcmshimoga@gmail.com** ದೂ : (08182) 222129.

ಸಹಿ/-
ಜಿಲ್ಲಾ ಅಧಿಕಾರಿಗಳು, ಹಿಂ.ವ.ಕ.ಇಲಾಖೆ, ಶಿವಮೊಗ್ಗ

ವಾ.ಕಾ.ಸಂ.ಇ./ಶಿ/ಜಾ.73.05/ವಾರ್ತಾಇಲಾಖೆ/2026-27

KRISHNA BHAGYA JALA NIGAM LIMITED
(A Government of Karnataka Undertaking)
Office of the Executive Engineer, KBJNL, IBC O&M Division-8, Zalaki- 586204. Tq:Indi,
Dist:Vijayapur. Email:eezalaki1@gmail.com

No: KBJNL/IBCDn-8/ZALAKI/DB/Tender-1/ERM SURVEY-NON SR/QTN/2026-27/77 Dated: 14.05.2026

INFORMATION QUOTATION THROUGH KPPP PORTAL FOR PREPARATION OF ESTIMATION ONLY

Information quotations regarding rates are invited for works under **Consultancy Services for preparation of PFR and other allied works for approval from CWC for the work of "Remodelling of IBC from Ch. 64.00 km to 172.00 Km Distributaries, Laterals and Sub-Laterals Including Structures there under,** FOR THE YEAR 2026-27 as per the standard norms of KBJNL by the undersigned on behalf of the Managing Director, KBJNL Bangalore from the registered consultant agencies/Contractors, Last date to receive information quotation is **26.05.2026 @ 4.30 PM,** Details of salient features can be obtained from this office.

(The blank Quotations can be obtained through website www.kppp.karnataka.gov.in and can be submitted through electronic tender box).

Name of Work : **Consultancy Services for preparation of PFR and other allied works for approval from CWC for the work of "Remodelling of IBC from Ch. 64.00 km to 172.00 Km Distributaries, Laterals and Sub-Laterals Including Structures there under.** [KBJNL/2026-27/PREQUAL_ TENDER_NUMBER_22]

Work consists of the following items.

Sl.No	Description of Items	Unit	Quantity	Rate (Excluding of GST)
1	Preparation of Pre-Feasibility Report (PFR) for IBC Ch: 64.00 to 172.00 Km as per the standard guidelines of CWC year 2017 and uploading the same in e-PAMS portal of CWC & Liaisoning with various Directorates viz,. for approval of PFR including attending meetings, Preparation of presentation and technical clarification to CWC offices etc., complete as directed by Engineer-in-Charge.	Job	1	
2	STAGE-1: Preparation of 10-daily computations of Crop Water Requirement (CWR) by estimating Reference Evapotranspiration (ETo) using recent 30 years climatological data influencing the command area & compiling the total water demand separately for Irrigation, domestic, industrial and power generation for following projects executed under Upper Krishna Project (UKP) Stage I including submission to CWC, New Delhi and providing technical clarification if any sought by CWC offices etc., complete as directed Engineer-in-Charge			
	Narayanapura Left Bank Canal (NLBC) - 47,223 Ha	Job	1	
	Shahpura Branch Canal (SBC) - 1,22,120 Ha	Job	1	
	Mudbal Branch Canal (MBC) - 51,000 Ha	Job	1	
	Jewargi Branch Canal (JBC) - 57,100 Ha	Job	1	
	Indi Branch Canal (IBC) - 1,31,260 Ha	Job	1	
	Almatti Left Bank Canal (ALBC) - 20,235 Ha	Job	1	
3	STAGE-2: Preparation of 10-daily computations of Crop Water Requirement (CWR) by estimating Reference Evapotranspiration (ETo) using recent 30 years climatological data influencing the command area & compiling the total water demand separately for Irrigation, domestic, industrial and power generation for following projects executed under Upper Krishna Project (UKP) Stage II including submission to CWC, New Delhi and providing technical clarification if any sought by CWC offices etc., complete as directed Engineer-in-Charge			
	Narayanapura Right Bank Canal (NRBC) - 84,000 Ha	Job	1	
	Almatti Right Bank Canal (ARBC) - 16,100 Ha	Job	1	
	Mulwad LIS (MLIS) - 30,850 Ha	Job	1	
	Rampur LIS (RLIS) - 20235 Ha	Job	1	
	Indi LIS (ILIS) - 41,900 Ha	Job	1	
	Narayanapura Right Bank Canal (NRBC) - 84,000 Ha	Job	1	
4	Prepartion of 10-daily Working Table for Almatti and Narayanapura Reservoirs considering the recent 30 years inflow,outflow & utilization data and assess the Combined Reservoir Performance & submission to CWC, New Delhi and providing technical clarification if any sought by CWC offices etc., complete as directed Engineer-in-Charge, complete as directed Engineer-in-Charge.	Job	1	

NOTE : 1] ಇ-ಪ್ರಾಕ್ಯೂರಮೆಂಟ್ http://kppp.karnataka.gov.in ವೆಬ್ಸೈಟನಲ್ಲಿರುವ ಕಾಮಗಾರಿಯ ಐಟಂಗಳಿಗೆ ಕೋಟೇಶನ ಸಲ್ಲಿಸುವ ದಿನಾಂಕ: 19.05.2026 ರಿಂದ 26.05.2026 ರ ಸಾಯಂಕಾಲ 4.30 ಗಂಟೆಯವರೆಗೆ ಸಲ್ಲಿಸುವದು. 2] ಭರ್ತಿಗೊಳಿಸಿದ ಕೋಟೇಶನ್ ಸಲ್ಲಿಸಲು ಕೊನೆಯ ದಿನಾಂಕ: 26.05.2026 ರಸಾಯಂಕಾಲ 4.30 ಘಂಟೆಯವರೆಗೆ. 3] ಕೋಟೇಶನ ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಇಂಶಾಕಾ, ನಿಮಪೋ, ವಿಭಾಗ ಸಂ:8, ಝಳಕಿ ಕಛೇರಿಯಲ್ಲಿ ದಿನಾಂಕ: 29.05.2026 ರ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು. 4] ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕ ಪರಿಗಣಿಸುವದು. ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಇಂಶಾಕಾ, ವಿಭಾಗ ಸಂ: 8, ಝಳಕಿ ಕಛೇರಿ ವೇಳೆಯಲ್ಲಿ ಪಡೆಯಬಹುದು ಅಥವಾ http://kppp.karnataka.gov.in ವೆಬ್ ಸೈಟ್ ನಿಂದ ಪಡೆಯಬಹುದು. 5] The Concerned agencies/firms should visit the site of Remodelling of IBC from Ch.64.00 km to 172.00 Km Distributaries, Laterals and Sub-Laterals Including Structures there under and preparation of PFR and other allied works for approval from CWC Hence,obtain the Technical Data from undersigned. The rates shall be quoted for Individual items. 6] Goods and Service Tax (GST) is excluded in the above amount and shall be payable as applicable. 7] All rights are reserved by the undersigned to accept or Reject the quotations.

Sd/- Executive Engineer,
KBJNL, IBC O&M Division-8, Zalaki.
Tq: Indi, Dist: Vijayapur

ವಾಸಾಸಂಇ/ವಿಜಯಪುರ/99/ಕೆಎಸ್ಎಂಸಿಎ/2026-27

ಜುಲೈ 1ರಿಂದ ಸಿಬಿಎಸ್‌ಇ ಹೊಸ ನಿಯಮ
ಇನ್ನು 9ನೇ ತರಗತಿಗೆ ತ್ರಿಭಾಷೆ ಕಡ್ಡಾಯ



ಪ್ರಮುಖ ಅಂಶಗಳು
- 2026 ಜುಲೈ 1ರಿಂದ ಜಾರಿ
- 9 ನೇ ತರಗತಿಗೆ ಮೂರು ಭಾಷೆ ಕಡ್ಡಾಯ
- ಕನಿಷ್ಠ ಎರಡು ಭಾರತೀಯ ಭಾಷೆಗಳು ಅನಿವಾರ್ಯ
- ಮೌಲ್ಯಮಾಪನ ಶಾಲಾ ಮಟ್ಟದಲ್ಲೇ
- ಮೂರನೇ ಭಾಷೆಗೆ ಬೋರ್ಡ್ ಪರೀಕ್ಷೆ ಇಲ್ಲ
- ಎರಡು ಭಾರತೀಯ ಭಾಷೆ ಓದುವುದು ಅನಿವಾರ್ಯ

ಹೊಸದಿಲ್ಲಿ: ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ 2020) ಅನುಷ್ಠಾನದ ಭಾಗವಾಗಿ ಸಿಬಿಎಸ್‌ಇ ಮಹತ್ವದ ಭಾಷಾ ನೀತಿ ಬದಲಾವಣೆಯನ್ನು ಘೋಷಿಸಿದೆ. 2026ರ ಜುಲೈ 1ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ಮೂರು ಭಾಷೆಗಳ ಅಧ್ಯಯನ ಕಡ್ಡಾಯವಾಗಲಿದೆ. ಈ ಮೂಲಕ ದೇಶಾದ್ಯಂತ ಸಿಬಿಎಸ್‌ಇ ಶಾಲೆಗಳಲ್ಲಿ ತ್ರಿಭಾಷಾ ಸೂತ್ರಕ್ಕೆ ಹೊಸ ರೂಪದಲ್ಲಿ ಚಾಲನೆ ಸಿಗುತ್ತಿದೆ.

ಹೊಸ ನಿಯಮದ ಪ್ರಕಾರ ವಿದ್ಯಾರ್ಥಿಗಳು ಆರ್1, ಆರ್2 ಮತ್ತು ಆರ್3 ಎಂದು ಗುರುತಿಸಲಾದ ಮೂರು ಭಾಷೆಗಳನ್ನು ಕಲಿಯಬೇಕು. ಈ ಮೂರರಲ್ಲಿ ಕನಿಷ್ಠ ಎರಡು ಭಾರತೀಯ ಭಾಷೆಗಳಿರಬೇಕು ಎಂದು ಸಿಬಿಎಸ್‌ಇ ಸ್ಪಷ್ಟಪಡಿಸಿದೆ. ವಿದೇಶಿ ಭಾಷೆಯನ್ನು ಆಯ್ಕೆ ಮಾಡಬಹುದಾದರೂ, ಉಳಿದ ಎರಡು ಭಾಷೆಗಳು ಭಾರತೀಯವಾಗಿರಲೇಬೇಕು.

ಆರ್3 ಭಾಷೆಯ ಮೌಲ್ಯಮಾಪನವನ್ನು ಶಾಲಾ ಮಟ್ಟದಲ್ಲೇ ನಡೆಸಲಾಗುತ್ತದೆ. ಅದರ ಅಂಕಗಳು ಸಿಬಿಎಸ್‌ಇ ಪ್ರಮಾಣಪತ್ರದಲ್ಲಿ ದಾಖಲಾಗಲಿದ್ದರೂ, ಕೇಂದ್ರಿಕೃತ ಬೋರ್ಡ್ ಪರೀಕ್ಷೆ ನಡೆಯುವುದಿಲ್ಲ.

ಏಕೆ ಈ ಬದಲಾವಣೆ?: ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಬಹುಭಾಷಾ ಶಿಕ್ಷಣಕ್ಕೆ ವಿಶೇಷ ಒತ್ತು ನೀಡಲಾಗಿದೆ. ವಿದ್ಯಾರ್ಥಿಗಳು ತಮ್ಮ ಮಾತೃಭಾಷೆ, ಭಾರತೀಯ ಭಾಷೆಗಳು ಹಾಗೂ ವಿಭಿನ್ನ ಭಾಷಾ ಸಂಸ್ಕೃತಿಗಳ ಅರಿವು ಹೊಂದಬೇಕು ಎಂಬುದು ಕೇಂದ್ರ ಸರ್ಕಾರದ ಉದ್ದೇಶ. ಈ ಹಿನ್ನೆಲೆ ಸಿಬಿಎಸ್‌ಇ ಹೊಸ ನಿಯಮ ಜಾರಿಗೆ ಮುಂದಾಗಿದೆ.

ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಚೌಕಟ್ಟು ಶಿಫಾರಸುಗಳಿಗೂ ಈ ಕ್ರಮ ಹೊಂದಿಕೆಯಾಗುತ್ತದೆ ಎಂದು ಶಿಕ್ಷಣ ಇಲಾಖೆ ಹೇಳಿದೆ. 'ಭಾಷೆ ಕೇವಲ ಪಾಠವಲ್ಲ, ಅದು ಭಾರತೀಯ ಜ್ಞಾನ ಪರಂಪರೆ ಹಾಗೂ ಸಾಂಸ್ಕೃತಿಕ ವೈವಿಧ್ಯದ ಸೇತುವೆ' ಎಂಬ ಸಂದೇಶವನ್ನು ಕೇಂದ್ರ ಸರ್ಕಾರ ಒತ್ತಿ ಹೇಳುತ್ತಿದೆ.

ಬೆಳ್ಳಿಗೆ ಕೇಂದ್ರದ ನಿರ್ಬಂಧ ಆಮದು ಮೇಲೆ ಮಿತಿ

ಹೊಸದಿಲ್ಲಿ: ಅಮೂಲ್ಯ ಲೋಹಗಳ ಮೇಲಿನ ಆಮದು ಸುಂಕವನ್ನು ಭಾರೀ ಪ್ರಮಾಣದಲ್ಲಿ ಏರಿಸಿದ ಕೆಲವೇ ದಿನಗಳಲ್ಲಿ, ಕೇಂದ್ರ ಸರ್ಕಾರ ಈಗ ಬೆಳ್ಳಿ ಆಮದು ಮೇಲೂ ಕಟ್ಟುನಿಟ್ಟಿನ ನಿಯಂತ್ರಣ ಹೇರಿದೆ.



ಕೇಂದ್ರ ವಾಣಿಜ್ಯ ಸಚಿವಾಲಯದ ಅಧೀನದಲ್ಲಿರುವ ವಿದೇಶಿ ವ್ಯಾಪಾರ ಮಹಾನಿರ್ದೇಶನಾಲಯ ಶನಿವಾರ ಹೊರಡಿಸಿದ ಅಧಿಸೂಚನೆಯಲ್ಲಿ, ಬೆಳ್ಳಿ ಹಾಗೂ ಚಿನ್ನ-ಪ್ಲಾಟಿನಂ ಲೇಪಿತ ಬೆಳ್ಳಿ ಆಮದು ನೀತಿಯನ್ನು "ಮುಕ್ತ" ವರ್ಗದಿಂದ "ನಿರ್ಬಂಧಿತ" ವರ್ಗಕ್ಕೆ ತಕ್ಷಣದಿಂದಲೇ ವರ್ಗಾಯಿಸಲಾಗಿದೆ ಎಂದು ತಿಳಿಸಿದೆ.ಇದರಿಂದ ಇನ್ನುಮುಂದೆ ಬೆಳ್ಳಿ ಆಮದು ಮಾಡಲು ಸರ್ಕಾರದ ಪರವಾನಗಿ ಕಡ್ಡಾಯವಾಗಲಿದೆ. ಈ ಕ್ರಮವು ಬೆಳ್ಳಿ ಆಮದು ಮೇಲಿನ ನಿಯಂತ್ರಣ ಹೆಚ್ಚಿಸುವುದರ ಜೊತೆಗೆ ವಿದೇಶಿ ವಿನಿಮಯ ಹೊರಹರಿವು ಕಡಿಮೆ ಮಾಡುವ ಉದ್ದೇಶ ಹೊಂದಿದೆ ಎನ್ನಲಾಗಿದೆ.ಇದರ ಹಿಂದೆ ಕಳೆದ ಮೇ 13ರಂದು ಕೇಂದ್ರ ಸರ್ಕಾರ ಅಮೂಲ್ಯ ಲೋಹಗಳ ಆಮದು ಸುಂಕವನ್ನು ಶೇ.6ರಿಂದ ನೇರವಾಗಿ ಶೇ.15ಕ್ಕೆ ಏರಿಸಿದ್ದೂ ಪ್ರಮುಖ ಕಾರಣವೆಂದು ವಾಣಿಜ್ಯ ವಲಯ ವಿಶ್ಲೇಷಿಸುತ್ತಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ-ಬೆಳ್ಳಿ ಬೆಲೆ ಏರಿಳಿತ, ದೇಶೀಯ ಬೇಡಿಕೆ ಹೆಚ್ಚಳ ಹಾಗೂ ವ್ಯಾಪಾರ ಅಸಮತೋಲನದ ನಡುವೆಯೇ ಕೇಂದ್ರ ಸರ್ಕಾರದ ಈ ಕ್ರಮ ಗಮನ ಸೆಳೆದಿದೆ.

ಇತಿಹಾಸ ಸರಿಪಡಿಸುವಿಕೆ

2003ರಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ(ಎಎಸ್‌ಐ) ಹೊರಡಿಸಿದ್ದ ವ್ಯವಸ್ಥೆಯನ್ನೂ ಕೋರ್ಟ್ ರದ್ದುಪಡಿಸಿದೆ. ಈ ಆದೇಶದಂತೆ ಶುಕ್ರವಾರ ಮುಸ್ಲಿಮರಿಗೆ ನಮಾಜ್, ಮಂಗಳವಾರ ಹಿಂದೂಗಳಿಗೆ ಪೂಜೆ ಅವಕಾಶ ನೀಡಲಾಗುತ್ತಿತ್ತು. ಈಗ ಆ ವ್ಯವಸ್ಥೆ ನ್ಯಾಯಾಲಯದ ತೀರ್ಪಿನಿಂದ ಅಸ್ತಿತ್ವ ಕಳೆದುಕೊಂಡಿದೆ.

ಸರಸ್ವತಿ ಮೂರ್ತಿ ಎಲ್ಲಿದೆ?

ಸದ್ಯ ಇದೇ ದೇಗುಲದ ಸರಸ್ವತಿ ಮೂರ್ತಿ ಲಂಡನ್‌ನಲ್ಲಿರುವ ಬ್ರಿಟಿಷ್ ಮ್ಯೂಸಿಯಂನಲ್ಲಿದೆ. ವಿಶೇಷವೆಂದರೆ, ಕಾಂಗ್ರೆಸ್ ಸಂಸದ, ಇತಿಹಾಸಕಾರ ಶಶಿತರೂರ್ ಅವರು ಈ ಮ್ಯೂಸಿಯಂ ಅನ್ನು ಸೇರಿಸಿ ಬ್ರಿಟನ್‌ನಲ್ಲಿರುವ ವಸ್ತುಸಂಗ್ರಹಾಲಯಗಳನ್ನು ಚೋರ್ ಬಜಾರ್ ಎಂದಿದ್ದರು. ಇದೇ ಮ್ಯೂಸಿಯಂನಲ್ಲಿ ಸರಸ್ವತಿ ಮಾತೆಯ ಮೂರ್ತಿ ಇದೆ. ಇದನ್ನು ವಾಪಸ್ ತರಲು ಪ್ರಯತ್ನಿಸುವಂತೆಯೂ ಹೈಕೋರ್ಟ್ ಹೇಳಿದೆ.

188 ಕಂಬಗಳ ಮೌನ ಸಾಕ್ಷ್ಯ!

ಈ ಪ್ರಕರಣದಲ್ಲಿ ದೊಡ್ಡ ತಿರುವು ತಂದದ್ದು ಎಎಸ್‌ಐ ವೈಜ್ಞಾನಿಕ ಸಮೀಕ್ಷೆ. ಹೈಕೋರ್ಟ್ ಆದೇಶದ ಮೇರೆಗೆ 2024ರಲ್ಲಿ 98 ದಿನಗಳ ಕಾಲ ಸಮಗ್ರ ಸರ್ವೇ ನಡೆದಿತ್ತು. ಎಎಸ್‌ಐ ತನ್ನ ವರದಿಯಲ್ಲಿ ಹಲವು ಮಹತ್ವದ ಅಂಶಗಳನ್ನು ಉಲ್ಲೇಖಿಸಿತ್ತು. ಇವೆಲ್ಲವನ್ನು ನ್ಯಾಯಾಲಯ ಮಹತ್ವದ ಪುರಾವೆಗಳೆಂದು ಪರಿಗಣಿಸಿದೆ. ಅಂದರೆ,

- 188 ಕಂಬಗಳಲ್ಲಿ ಹಿಂದು ಧಾರ್ಮಿಕ ಚಿಹ್ನೆಗಳು
- ನಾಗರ ಶೈಲಿಯ ದೇವಾಲಯ ವಾಸ್ತುಶಿಲ್ಪ
- ದೇವ-ದೇವಿಯ ಮೂರ್ತಿಗಳ ಅವಶೇಷ
- ಕತ್ತರಿಸಲಾದ ಮೂರ್ತಿಭಾಗಗಳು
- ದೇವಸ್ಥಾನ ಅವಶೇಷಗಳನ್ನು ಮಸೀದಿ ನಿರ್ಮಾಣಕ್ಕೆ ಮರುಬಳಕೆ ಮಾಡಿದ ಸುಳಿವುಗಳು




ಏನು ಈ ಭೋಜಶಾಲೆ?

ಧಾರ ನಗರದ ಐತಿಹಾಸಿಕ ಕೇಂದ್ರದಲ್ಲಿರುವ ಭೋಜಶಾಲೆ 11ನೇ ಶತಮಾನಕ್ಕೆ ಸೇರಿದ ಸ್ಮಾರಕ. ಪರಮಾರ ವಂಶದ ರಾಜ ಭೋಜನು ಇದನ್ನು ಸಂಸ್ಕೃತ ಶಿಕ್ಷಣ ಕೇಂದ್ರವಾಗಿ ನಿರ್ಮಿಸಿದ್ದನೆಂಬ ನಂಬಿಕೆ ಇದೆ. ಇಲ್ಲಿ ವಾಗ್ದೇವಿ ಸರಸ್ವತಿಯ ಆರಾಧನೆ ನಡೆಯುತ್ತಿತ್ತೆಂದು ಹಿಂದೂ ಸಂಘಟನೆಗಳು ಹೇಳುತ್ತವೆ. ಮುಸ್ಲಿಂ ಸಮುದಾಯದ ವಾದ ಬೇರೆ. ಅವರ ಪ್ರಕಾರ ಇದು ಕಮಾಲ್ ಮೌಲಾ ಮಸೀದಿ. ದೆಹಲಿ ಸುಲ್ತಾನರ ಕಾಲದಲ್ಲಿ ಮಸೀದಿಯಾಗಿ ರೂಪಾಂತರಗೊಂಡಿತ್ತೆಂದು ಅವರು ಹೇಳುತ್ತಾರೆ. ಇದೇ ಎರಡು ವಾದಗಳು ದಶಕಗಳಿಂದ ಸಂಘರ್ಷಕ್ಕೆ ಕಾರಣವಾಗಿದ್ದವು.

ಇದು ಭೋಜಶಾಲಾ ದೇಗುಲ

ಮಧ್ಯಪ್ರದೇಶ ಹೈಕೋರ್ಟ್‌ನ ಐತಿಹಾಸಿಕ ತೀರ್ಪು





ಮಧ್ಯಪ್ರದೇಶದ ಧಾರ ಜಿಲ್ಲೆಯ ಭೋಜಶಾಲೆ ದೇಗುಲ ಮತ್ತೆ ರಾಷ್ಟ್ರ ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಚರ್ಚೆಗಳ ಕೇಂದ್ರಬಿಂದುವಾಗಿದೆ. ಹಲವು ದಶಕಗಳಿಂದ ಹಿಂದೂ-ಮುಸ್ಲಿಂ ಸಮುದಾಯಗಳ ಮಧ್ಯೆ ಸಂಘರ್ಷದ ಕಾರಣವಾಗಿದ್ದ ಭೋಜಶಾಲೆ-ಕಮಾಲ್ ಮೌಲಾ ಮಸೀದಿ ವಿವಾದದಲ್ಲಿ ಮಧ್ಯಪ್ರದೇಶ ಹೈಕೋರ್ಟ್ ಮಹತ್ವದ ತೀರ್ಪು ನೀಡಿದ್ದು, ಈ ತಾಣವು ಮೂಲತಃ ವಾಗ್ದೇವಿ (ಸರಸ್ವತಿ) ದೇವಾಲಯ ಹಾಗೂ ಸಂಸ್ಕೃತ ಅಧ್ಯಯನ ಕೇಂದ್ರವಾಗಿತ್ತು ಎಂದು ಸ್ಪಷ್ಟಪಡಿಸಿದೆ.

ಭೋಜಶಾಲೆ ತೀರ್ಪಿನಲ್ಲಿ ಅಯೋಧ್ಯೆ ಮಾದರಿ

ಮಧ್ಯಪ್ರದೇಶ ಹೈಕೋರ್ಟ್ ಭೋಜಶಾಲೆ-ಕಮಾಲ್ ಮೌಲಾ ಮಸೀದಿ ವಿವಾದದಲ್ಲಿ ತೀರ್ಪು ನೀಡುವಾಗ, 2019ರ ಅಯೋಧ್ಯೆ ತೀರ್ಪಿನ 10 ಪ್ರಮುಖ ತತ್ವಗಳನ್ನು ಉಲ್ಲೇಖಿಸಿದೆ. ಭೋಜಶಾಲೆ ಒಂದು ಸರಸ್ವತಿ ದೇವಿಯ ದೇವಸ್ಥಾನ ಎಂಬ ನಿರ್ಣಯಕ್ಕೆ ಬರುವಾಗ ಈ ಅಂಶಗಳನ್ನು ಆಧಾರವನ್ನಾಗಿ ಪರಿಗಣಿಸಲಾಗಿದೆ.

1. ಸಾಕ್ಷ್ಯಕ್ಕೆ ಗಣಿತೀಯ ಖಚಿತತೆ ಬೇಕಿಲ್ಲ
ಇಂತಹ ಧಾರ್ಮಿಕ-ಐತಿಹಾಸಿಕ ವಿವಾದಗಳಲ್ಲಿ 'ನೂರು ಪ್ರತಿಶತ ಸಾಬೀತು' ಅಗತ್ಯವಿಲ್ಲ. ನ್ಯಾಯಾಲಯವು 'ಸಂಭವನೀಯತೆಯ ಪ್ರಾಬಲ್ಯ' ಅಂದರೆ ಹೆಚ್ಚು ಸಾಧ್ಯತೆಯ ಆಧಾರದಲ್ಲಿ ನಿರ್ಧಾರಕ್ಕೆ ಬರಬಹುದು.

2. ನಂಬಿಕೆ ಮತ್ತು ಆರಾಧನೆ ಮುಖ್ಯ
ನ್ಯಾಯಾಲಯದ ಕೆಲಸ ಧಾರ್ಮಿಕ ಕಟ್ಟಡದ 'ತತ್ತ್ವಶಾಸ್ತ್ರೀಯ ಶುದ್ಧತೆ' ಪರಿಶೀಲಿಸುವುದಲ್ಲ. ಜನರ ನಂಬಿಕೆ, ಆರಾಧನೆಯ ನಿರಂತರತೆ, ಧಾರ್ಮಿಕ ಬಳಕೆ, ಐತಿಹಾಸಿಕ ಉಲ್ಲೇಖಗಳೇ ಮುಖ್ಯ.

3. ದೇವತೆ, ಧಾರ್ಮಿಕ ಉದ್ದೇಶದ ರಕ್ಷಣೆ
ಒಂದು ಧಾರ್ಮಿಕ ಸ್ಥಳದ ಮೂಲ ಉದ್ದೇಶ ಮತ್ತು ಅದಕ್ಕೆ ಸಂಬಂಧಿಸಿದ ದೇವತೆಯ ರಕ್ಷಣೆಯೇ ನ್ಯಾಯಾಲಯದ ಮೊದಲ ಆದ್ಯತೆ ಎಂದು ತತ್ವ ಹೇಳುತ್ತದೆ. ಭಕ್ತರು ದೇವರ ಪರವಾಗಿ ಹಕ್ಕು ರಕ್ಷಿಸಬಹುದು.

4. ಧಾರ್ಮಿಕ ಹಕ್ಕು ನಾಶವಾಗುವುದಿಲ್ಲ
ಮೂರ್ತಿ ಇಲ್ಲದಿದ್ದರೂ ಅಥವಾ ಧ್ವಂಸವಾದರೂ ಆ ಸ್ಥಳದ ಧಾರ್ಮಿಕ ಸ್ವರೂಪ ಅಂತ್ಯವಾಗುವುದಿಲ್ಲ. ಧಾರ್ಮಿಕ ಉದ್ದೇಶ ಮುಂದುವರಿಯುತ್ತದೆ.

5. ನಂಬಿಕೆಗೆ ದಾಖಲೆ ಇರಬೇಕೆಂದಿಲ್ಲ
ಧಾರ್ಮಿಕ ನಂಬಿಕೆಗಳು ಯಾವಾಗಲೂ ದಾಖಲೆಗಳ ಮೂಲಕ ಸಾಬೀತಾಗುವುದಿಲ್ಲ. ಜನರ ನಂಬಿಕೆ ಮತ್ತು ಪರಂಪರೆಗೂ ನ್ಯಾಯಾಲಯ ಮಹತ್ವ ಕೊಡಬೇಕು ಎಂದು ಅಯೋಧ್ಯೆ ತೀರ್ಪು ಹೇಳಿತ್ತು.

6. ಗೆಜೆಟ್ ದಾಖಲೆಗಳಿಗೆ ಸಾಕ್ಷ್ಯ ಮೌಲ್ಯ
ಸರ್ಕಾರಿ ಗೆಜೆಟ್, ಗೆಜೆಟಿಯರ್, ಅಧಿಕೃತ ದಾಖಲೆಗಳಿಗೆ ನ್ಯಾಯಾಲಯದಲ್ಲಿ ಸಾಕ್ಷ್ಯ ಮೌಲ್ಯವಿದೆ ಎಂದು ತತ್ವ ಸ್ಪಷ್ಟಪಡಿಸುತ್ತದೆ.

7. ದಾಖಲೆಗಳಲ್ಲಿ ಉಲ್ಲೇಖ ಮಹತ್ವದ್ದು
ಸರ್ಕಾರದ ಪತ್ರವ್ಯವಹಾರ, ಆಡಳಿತಾತ್ಮಕ ದಾಖಲೆಗಳಲ್ಲಿ ಯಾವುದಾದರೂ ಸ್ಥಳವನ್ನು ನಿರಂತರವಾಗಿ ಒಂದು ಧಾರ್ಮಿಕ ಗುರುತಿನೊಂದಿಗೆ ಉಲ್ಲೇಖಿಸಿದ್ದರೆ ಅದು ಪ್ರಮುಖ ಸಾಕ್ಷ್ಯವಾಗಬಹುದು ಎಂದು ಹೇಳಲಾಗಿದೆ.

8. ವಕ್ಫ್ ಬೈ ಯೂಸರ್/ಸ್ವಯಂ ಹಕ್ಕಲ್ಲ
ಒಂದು ಸಮುದಾಯ ದೀರ್ಘಕಾಲ ಬಳಸಿದೆ ಎನ್ನುವುದರಿಂದ ಮಾತ್ರ ಇನ್ನೊಂದು ಸಮುದಾಯದ ಸ್ಥಾಪಿತ ಧಾರ್ಮಿಕ ಹಕ್ಕು ನಾಶವಾಗುವುದಿಲ್ಲ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

9. ಪುರಾತತ್ವ ವರದಿ ದುರ್ಬಲ ಸಾಕ್ಷ್ಯವಲ್ಲ
ಭಾರತೀಯ ಪುರಾತತ್ವ ಇಲಾಖೆ ವರದಿ ಬಹುಶಾಖಾ ಅಧ್ಯಯನದ ಮೇಲೆ ಆಧಾರಿತವಾಗಿರುವುದರಿಂದ ಅದನ್ನು ದುರ್ಬಲ ಸಾಕ್ಷ್ಯ ಎಂದು ತಳ್ಳಿ ಹಾಕಲಾಗುವುದಿಲ್ಲ.

10. ಧಾರ್ಮಿಕ ಚಿಹ್ನೆ ಸಾಕ್ಷ್ಯ
ಶಿಲ್ಪಗಳು, ಶಾಸನಗಳು, ಧಾರ್ಮಿಕ ಚಿಹ್ನೆಗಳು, ವಾಸ್ತುಶೈಲಿ ಮೊದಲಾದ ಪುರಾತತ್ವ ಅಂಶಗಳು ಆ ಸ್ಥಳದ ಮೂಲ ಧಾರ್ಮಿಕ ಸ್ವರೂಪವನ್ನು ತಿಳಿಸುವ ಮಹತ್ವದ ಸಾಕ್ಷ್ಯಗಳಾಗಬಹುದು.



ಕಿರುಸುದ್ದಿ

ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ವಿರುದ್ಧ ಎಫ್‌ಐಆರ್

ಕೋಲ್ಕತಾ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ವೇಳೆ ಪ್ರಚೋದನಾಕಾರಿ ಹೇಳಿಕೆಗಳನ್ನು ನೀಡಿದ ಆರೋಪದ ಮೇಲೆ ತೃಣಮೂಲ ಕಾಂಗ್ರೆಸ್ ಸಂಸದ ಅಭಿಷೇಕ್ ಬ್ಯಾನರ್ಜಿ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ವಿಧಾನಸಭೆ ಚುನಾವಣೆಯ ಫಲಿತಾಂಶ ಪ್ರಕಟವಾದ ಮರುದಿನ, ಅಂದರೆ ಮೇ 5ರಂದು ಸಾಮಾಜಿಕ ಕಾರ್ಯಕರ್ತ ರಾಜೀಬ್ ಸರ್ಕಾರ್ ಉತ್ತರ 24 ಪರಗಣ ಜಿಲ್ಲೆಯ ಬಗುಯಾತಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಅಭಿಷೇಕ್ ಬ್ಯಾನರ್ಜಿ, ಏಪ್ರಿಲ್ 27 ಮತ್ತು ಮೇ 3 ರ ನಡುವೆ ಚುನಾವಣಾ ಕಾರ್ಯಕ್ರಮಗಳಲ್ಲಿ, ಮತ ಎಣಿಕೆ ಪ್ರಕ್ರಿಯೆ ಮತ್ತು ಚುನಾವಣೋತ್ತರ ಹಿಂಸಾಚಾರದ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಸಂಬಂಧಿಸಿದಂತೆ ಪ್ರಚೋದನಾಕಾರಿ ಭಾಷಣ ಮಾಡಿದ್ದರು.

ಇಸ್ರೇಲ್ ದಾಳಿ: ಹಮಾಸ್ ವಿಂಗ್ ಕಮಾಂಡರ್ ವಧೆ

ಕೈರೊ: ಇಸ್ರೇಲ್‌ನ ಶುಕ್ರವಾರದ ದಾಳಿಯಲ್ಲಿ ಹಮಾಸ್ ಮಿಲಿಟರಿ ವಿಂಗ್ ಕಮಾಂಡರ್ ಇಝ್ ಅಲ್-ದಿನ್‌ಅಲ್ -ಹದಾದ್, ಈತನ ಪತ್ನಿ ಮತ್ತು ಪುತ್ರಿ ಸತ್ತಿರುವುದನ್ನು ಹಮಾಸ್‌ನ ಹಿರಿಯ ಅಧಿಕಾರಿ ರಾಯಿಟರ್‌ಗೆ ತಿಳಿಸಿದ್ದಾರೆ. ನಾವು ಹಮಾಸ್ ಮಿಲಿಟರಿ ಮುಖ್ಯಸ್ಥ ಹದಾದ್‌ನನ್ನು ಟಾರ್ಗೆಟ್ ಮಾಡಿ ವೈಮಾನಿಕ ದಾಳಿ ನಡೆಸಿದ್ದೇವೆಂದು ಇಸ್ರೇಲ್ ಘೋಷಿಸಿದ ಮರುದಿನ ಹಮಾಸ್ ಅಧಿಕಾರಿಗಳು ಹದಾದ್ ಸಾವನ್ನು ದೃಢೀಕರಿಸಿದ್ದಾರೆ. ನಾವು ಶುಕ್ರವಾರ ಹದಾದ್‌ನನ್ನು ಟಾರ್ಗೆಟ್ ಮಾಡಿ ವೈಮಾನಿಕ ದಾಳಿ ನಡೆಸಿದ್ದೇವೆ ಎಂದು ಇಸ್ರೇಲ್ ಪ್ರಧಾನಿ ನೆತನ್ಯಾಹು ಮತ್ತು ಇಸ್ರೇಲ್ ರಕ್ಷಣಾ ಸಚಿವ ಕಟ್ಜ್ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದರು.

ಹಿಜ್ಬುಲ್ ಶಂಕಿತನ ಆಸ್ತಿ ವಶಪಡಿಸಿದ ಪೊಲೀಸ್

ಶ್ರೀನಗರ: ಸದ್ಯ ಪಾಕಿಸ್ತಾನದಿಂದ ಸಕ್ರಿಯನಾಗಿದ್ದಾನೆ ಎನ್ನಲಾದ ಹಿಜ್ಬುಲ್ ಮುಜಾಹಿದೀನ್ ಉಗ್ರ ಸಂಘಟನೆಯೊಂದಿಗೆ ಸಂಪರ್ಕದಲ್ಲಿರುವ ಶಂಕಿತನಿಗೆ ಸೇರಿದ ಆಸ್ತಿಯನ್ನು ಶನಿವಾರ ಸ್ಥಳೀಯ ಪೊಲೀಸರು ಮುಟ್ಟುಗೋಲು ಮಾಡಿರುವುದಾಗಿ ತಿಳಿಸಿದ್ದಾರೆ. ಪೊಲೀಸ್ ವಕ್ತಾರರ ಪ್ರಕಾರ, ಶಂಕಿತ ನದಿಹಾಲ್ ರಾಫಿಯಾಬಾದ್ ನಿವಾಸಿ ರಶೀದ್ ಉದ್-ದೀನ್ ಖುರೇಶಿ ಆಗಿದ್ದಾನೆ. ಹೊರಹೋಗುವಿಕೆ ಮತ್ತು ಆಂತರಿಕ ಚಲನೆ ನಿಯಂತ್ರಣ ಸುಗ್ರೀವಾಜ್ಞೆ, 2005 ಕಾಯ್ದೆಯ ಸೆಕ್ಷನ್ 2/3ರ ಅನ್ವಯದಲ್ಲಿ ಪಂಜಲ್ಲಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಮಧ್ಯಸ್ಥಿಕೆ ತೀರ್ಪಿಗೆ ಯಾವುದೇ ಮನ್ನಣೆ ಇಲ್ಲ

ಹೊಸದಿಲ್ಲಿ: ಸಿಂಧೂ ಜಲ ಒಪ್ಪಂದಕ್ಕೆ ಸಂಬಂಧಿಸಿದಂತೆ ಮಧ್ಯಸ್ಥಿಕೆ ನ್ಯಾಯಪೀಠ ನೀಡಿರುವ ಇತ್ತೀಚಿನ ತೀರ್ಪನ್ನು ಭಾರತ ಸರ್ಕಾರ ಶನಿವಾರ ತಳ್ಳಿ ಹಾಕಿದ್ದು, 'ಅಕ್ರಮವಾಗಿ ರಚಿಸಲಾದ ನ್ಯಾಯಪೀಠದ ಯಾವುದೇ ಆದೇಶ ಭಾರತಕ್ಕೆ ಬಾಧ್ಯಕರವಲ್ಲ' ಎಂದು ಸ್ಪಷ್ಟಪಡಿಸಿದೆ. ಜೊತೆಗೆ ಇಂಡಸ್ ಜಲ ಒಪ್ಪಂದವನ್ನು ಅಮಾನತಿನಲ್ಲಿ ಇಡುವ ಭಾರತದ ನಿರ್ಧಾರ ಮುಂದುವರಿಯುತ್ತದೆ ಎಂದೂ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಘೋಷಿಸಿದೆ.

ಪಾಕಿಸ್ತಾನವು ಕಿಶನ್‌ಗಂಗಾ ಹಾಗೂ ರಾಟ್ಲೆ ಜಲವಿದ್ಯುತ್ ಯೋಜನೆಗಳಿಗೆ ಸಂಬಂಧಿಸಿದ ವಿವಾದವನ್ನು ಆಧರಿಸಿ ಮಧ್ಯಸ್ಥಿಕೆ ಪ್ರಕ್ರಿಯೆ ಆರಂಭಿಸಿತ್ತು. ಈ ಹಿನ್ನೆಲೆ 'ಗರಿಷ್ಠ ನೀರು ಸಂಗ್ರಹ ಸಾಮರ್ಥ್ಯ' ಕುರಿತ ಪೂರಕ ತೀರ್ಪನ್ನು ನ್ಯಾಯಪೀಠ ಪ್ರಕಟಿಸಿತ್ತು. ಆದರೆ ಭಾರತ ಇದನ್ನು ಸಂಪೂರ್ಣವಾಗಿ ಅಮಾನ್ಯ ಎಂದು ಘೋಷಿಸಿದೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಪ್ರತಿಕ್ರಿಯಿಸಿ, 'ಈ ನ್ಯಾಯಪೀಠವನ್ನು ಭಾರತ ಯಾವತ್ತೂ ಮಾನ್ಯತೆ ನೀಡಿಲ್ಲ. ಅದರ ಯಾವುದೇ ಕ್ರಮ, ಆದೇಶ ಅಥವಾ ತೀರ್ಪು ಶೂನ್ಯ ಹಾಗೂ ಅಮಾನ್ಯ' ಎಂದು ಹೇಳಿದ್ದಾರೆ.

ಭಾರತವು ಕಳೆದ ವರ್ಷ ಪಹಲ್ಗಾಮ್ ಉಗ್ರ ದಾಳಿಯ ನಂತರ ಇಂಡಸ್ ಜಲ ಒಪ್ಪಂದವನ್ನು ಅಮಾನತಿನಲ್ಲಿ ಇಟ್ಟಿರುವುದಾಗಿ ಘೋಷಿಸಿತ್ತು. ಅದರ ಬಳಿಕ ಪಾಕಿಸ್ತಾನ ಜಾಗತಿಕ ಮಟ್ಟದಲ್ಲಿ ಕಾನೂನು ಹೋರಾಟ ಮುಂದುವರಿಸುತ್ತಿದೆ. ಆದರೆ ಭಾರತ ತನ್ನ ಸಾರ್ವಭೌಮ ಹಕ್ಕುಗಳಿಗೆ ವಿರುದ್ಧವಾದ ಯಾವುದೇ ಹೊರಗಿನ ಮಧ್ಯಸ್ಥಿಕೆಯನ್ನು ಒಪ್ಪುವುದಿಲ್ಲ ಎಂಬ ನಿಲುವನ್ನು ಮರುದೃಢಪಡಿಸಿದೆ.

ನೀಟ್ ಪತ್ರಿಕೆ ಸೋರಿಕೆ: ಉಪನ್ಯಾಸಕಿ ಬಂಧನ

ಹೊಸದಿಲ್ಲಿ: ನೀಟ್-ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿ ಶನಿವಾರ ಪುಣೆಯ ಜೀವಶಾಸ್ತ್ರ ಉಪನ್ಯಾಸಕಿ ಮನೀಶಾ ಗುರುನಾಥ್ ಮಂಧಾರೆ ಅವರನ್ನು ಸಿಬಿಐ ಅಧಿಕಾರಿಗಳು ದಿಲ್ಲಿಯಲ್ಲಿ ಬಂಧಿಸಿದ್ದಾರೆ.

ಪರೀಕ್ಷೆಗೂ ಮುನ್ನ ಜೀವಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಷಯಗಳ ಪ್ರಮುಖ ಪ್ರಶ್ನೆಗಳನ್ನು ಉಪನ್ಯಾಸಕಿ ಮನೀಶಾ ವಿದ್ಯಾರ್ಥಿಗಳ ಜತೆ ಹಂಚಿಕೊಂಡಿದ್ದಾರೆ. ಕೋಚಿಂಗ್ ಕ್ಲಾಸ್‌ಗಳನ್ನು ನಡೆಸಿ ಆಯ್ದ ವಿದ್ಯಾರ್ಥಿಗಳಿಗೆ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಲಾಗಿದೆ ಎಂದು ತನಿಖೆಯಲ್ಲಿ ತಿಳಿದುಬಂದಿದೆ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ), ಮನೀಶಾ ಅವರನ್ನು ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶಾತಿ ಪರೀಕ್ಷೆಗಳಿಗೆ (ಪದವಿಪೂರ್ವ) ವಿಶೇಷಜ್ಞೆಯನ್ನಾಗಿ ನೇಮಿಸಿತ್ತು ಎಂದು ಸಿಬಿಐ ತಿಳಿಸಿದೆ. ಏಪ್ರಿಲ್‌ನಲ್ಲಿ ಮನೀಶಾ ವಾಘ್ಮರೆ ಮತ್ತು ಪುಣೆಯ ಇನ್ನೋರ್ವ ಬಂಧಿತ ಆರೋಪಿ ಜತೆಗೂಡಿ ತಮ್ಮ ನಿವಾಸದಲ್ಲೇ ನಡೆಸಿದ ಕೋಚಿಂಗ್ ಕ್ಲಾಸ್‌ನಲ್ಲಿ ಪ್ರಮುಖ ಪ್ರಶ್ನೆಗಳನ್ನು ಆಯ್ದ ವಿದ್ಯಾರ್ಥಿಗಳಿಗೆ ಬಹಿರಂಗಪಡಿಸಿದ್ದರು. ಹಲವು ಪ್ರಶ್ನೆಗಳು ಸೋರಿಕೆಯಾದ ಹಿನ್ನೆಲೆ ಮೇ 3ರಂದು ನಡೆಯಬೇಕಿದ್ದ ಗೇಸ್ ಪೇಪರ್ ಪರೀಕ್ಷೆಯನ್ನು ಎನ್‌ಟಿಎ ರದ್ದುಗೊಳಿಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ ದಿಲ್ಲಿ, ಜೈಪುರ, ಗುರುಗ್ರಾಮ, ನಾಸಿಕ್, ಪುಣೆ ಮತ್ತು ಅಹಿಲ್ಯಾನಗರ್‌ನಲ್ಲಿ ತಪಾಸಣೆ ನಡೆಸಿದೆ.

10 ದಿನಗಳ ಸಿಬಿಐ ಕಸ್ಟಡಿ: ಪ್ರಮುಖ ಆರೋಪಿಗಳಾದ ಶುಭಂ ಖೈರ್ನಾರ್, ಮನೀಶಾ ವಾಘ್ಮರೆ, ಧನಂಜಯ್ ಲೋಖಂಡೆ, ಪಿ.ವಿ. ಕುಲಕರ್ಣಿ ಅವರನ್ನು ವಿಚಾರಣೆಗೆ ಹಾಜರುಪಡಿಸಿದ ಸಿಬಿಐ 14 ದಿನಗಳ ಕಸ್ಟಡಿಗೆ ಕೋರಿದ್ದು, ನ್ಯಾಯಾಲಯ 10 ದಿನಗಳ ಕಸ್ಟಡಿಗೊಪ್ಪಿಸಿದೆ.

ಟ್ರಂಪ್: ಚೀನಾ ನೆನಪಿನ ಬುತ್ತಿ ಕಸದ ಬುಟ್ಟಿಗೆ!

ಬೀಜಿಂಗ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಅವರ ನಿಯೋಗ ಶುಕ್ರವಾರ ಏರ್‌ಫೋರ್ಸ್ ಒನ್ ವಿಮಾನ ಹತ್ತುವ ಮುನ್ನ ತಮಗೆ ಸಿಕ್ಕಿದ್ದ ಎಲ್ಲಾ ಚೀನೀ ಉಡುಗೊರೆಗಳು ಮತ್ತು ಬ್ಯಾಡ್ಜ್‌ಗಳನ್ನು ರನ್‌ವೇ ಬಳಿಯಿದ್ದ ಕಸದ ಬುಟ್ಟಿಗೆ ಸುರಿದು ಕೈ ತೊಳೆದುಕೊಂಡರು! ಇದರೊಂದಿಗೆ ಅಮೆರಿಕ ಅಧ್ಯಕ್ಷರ ನಾಟಕೀಯ ಚೀನಾ ಪ್ರವಾಸ ಕೊನೆಗೊಂಡಿತು.



ಸೋಯಾಬೀನ್ ಮತ್ತು ಬೋಯಿಂಗ್ ವಿಮಾನಗಳ ಒಪ್ಪಂದಗಳನ್ನಷ್ಟೇ ಮುಗಿಸಿ ಖಾಲಿ ಕೈಯಿಂದ ಹೊರಟ ಅಮೆರಿಕನ್ನರು, ಚೀನಾದ ಗೂಢಚರ್ಯೆಯ ಭೀತಿಯಿಂದ ತಮ್ಮ ಬರ್ನರ್ ಫೋನ್‌ಗಳ ಜತೆಗೆ, ಲ್ಯಾಪೆಲ್ ಬ್ಯಾಡ್ಜ್‌ಗಳು ಮತ್ತು ಪತ್ರಿಕಾ ಆಮಂತ್ರಣ ಪತ್ರಿಕೆಗಳನ್ನು ವಿಮಾನದ ಮೆಟ್ಟಿಲ ಬುಡದಲ್ಲೇ ಎಸೆದರು. ಚೀನಾದ ಕಣ್ಗಾವಲಿನಿಂದ ತಪ್ಪಿಸಿಕೊಳ್ಳಲು ಹೀಗೆ ಮಾಡಲಾಯಿತೆಂದು ಎಂದು ಶ್ವೇತಭವನದ ವರದಿಗಾರ್ತಿ ಎಮಿಲಿ ಗುಡಿನ್ ಬಹಿರಂಗಪಡಿಸಿದ್ದಾರೆ. ತಂತ್ರಜ್ಞಾನ ದೈತ್ಯರಾದ ಎಲಾನ್ ಮಸ್ಕ್ ಮತ್ತು ಎನ್ವಿಡಿಯಾ ಸಿಇಒ ಜೆನ್ಸನ್ ಹುವಾಂಗ್ ಕೂಡ ತಮ್ಮ ವೈಯಕ್ತಿಕ ಗ್ಯಾಜೆಟ್‌ಗಳನ್ನು ಅಮೆರಿಕದಲ್ಲೇ ಬಿಟ್ಟು ಬಂದಿದ್ದರು. ಇಡೀ ಪ್ರವಾಸದಲ್ಲಿ ಸಿಗ್ನಲ್ ಬ್ಲಾಕ್ ಮಾಡುವ 'ಫ್ಯಾರಡೆ ಬ್ಯಾಗ್' ಹಾಗೂ ಅತ್ಯಂತ ಸರಳ ಬರ್ನರ್ ಫೋನ್‌ಗಳನ್ನಷ್ಟೇ ಅವರು ಬಳಸಿದ್ದರು. ನಾವು ಕೂಡ ಅವರ ಮೇಲೆ ಅಷ್ಟೇ ನಿಗಾ ಇಟ್ಟಿರುತ್ತೇವೆ ಎಂದು ಟ್ರಂಪ್ ಉಭಯ ದೇಶಗಳ ನಡುವಿನ ಗುಪ್ತಚರ ಪೈಪೋಟಿಯನ್ನು ಒಪ್ಪಿಕೊಂಡಿದ್ದಾರೆ!

ಭೋಜಶಾಲಾದಲ್ಲಿ ಭಕ್ತರಿಂದ ಪೂಜೆ



ಧಾರ್: ಮಧ್ಯಪ್ರದೇಶ ಹೈಕೋರ್ಟ್ ತೀರ್ಪು ಪ್ರಕಟಿಸಿದ ಮರುದಿನವಾದ ಶನಿವಾರದಂದು ಹಿಂದು ಭಕ್ತರು ಮತ್ತು ಭೋಜ್ ಉತ್ಸವ ಸಮಿತಿಯ ಪದಾಧಿಕಾರಿಗಳು ಭೋಜ್‌ಶಾಲಾ ಸಂಕೀರ್ಣದಲ್ಲಿ ಪೂಜೆ ಸಲ್ಲಿಸಿ ಆರತಿ ಬೆಳಗಿದರು. ವಿವಾದಿತ ಭೋಜಶಾಲಾ ದೇವಸ್ಥಾನ-ಕಮಲ್ ಮೌಲಾ ಮಸೀದಿ ಸಂಕೀರ್ಣ ಸರಸ್ವತಿ ದೇವಿಗೆ ಸಮರ್ಪಿತವಾದ ದೇವಾಲಯ ಎಂದು ಮಧ್ಯಪ್ರದೇಶ ಹೈಕೋರ್ಟ್ ಶುಕ್ರವಾರ ಘೋಷಿಸಿತ್ತು. ಮುಸ್ಲಿಮರಿಗೆ ಶುಕ್ರವಾರದ ನಮಾಜ್‌ಗೆ ಅವಕಾಶ ನೀಡಿ ಮತ್ತು ಹಿಂದುಗಳ ಪೂಜಾ ಹಕ್ಕನ್ನು ನಿಯಂತ್ರಿಸಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) 2003ರಲ್ಲಿ ಹೊರಡಿಸಿದ್ದ ಆದೇಶವನ್ನು ನ್ಯಾಯಾಲಯ ರದ್ದುಗೊಳಿಸಿತು.

ಇನ್ನು ಮುಂದೆ ಆತ ಆಫ್ರಿಕಾ ಜನರನ್ನು ಹೆದರಿಸಲ್ಲ: ಟ್ರಂಪ್
ಐಸಿಸ್ ಕಮಾಂಡರ್ ಅಬು ಹತ್ಯೆ

ವಾಷಿಂಗ್ಟನ್: ಇಸ್ಲಾಮಿಕ್ ಸ್ಟೇಟ್(ಐಸಿಸ್) ಜಾಗತಿಕ ಸಂಪರ್ಕಜಾಲದಲ್ಲೇ 2ನೇ ರ್‍ಯಾಂಕ್‌ನ ಕಮಾಂಡರ್ ಅಬು ಬಿಲಾಲ್ ಅಲ್-ಮಿನುಕಿ(44) ಸಾವಿನ ಸುದ್ದಿಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತೀಯ ಕಾಲಮಾನ ಶನಿವಾರ ಬೆಳಗ್ಗೆ ಘೋಷಿಸಿದ್ದಾರೆ.

ಅಮೆರಿಕ-ನೈಜೀರಿಯಾ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಐಸಿಸ್ ದ್ವಿತೀಯ ರ್‍ಯಾಂಕ್‌ನ ಕಮಾಂಡರ್ ಅಬು ಬಿಲಾಲ್ ಹತನಾಗಿದ್ದಾನೆ. ಇನ್ನು ಮುಂದೆ ಆತ ಆಫ್ರಿಕಾ ಜನರನ್ನು ಹೆದರಿಸಲ್ಲ ಎಂದು ಅಧ್ಯಕ್ಷ ಟ್ರಂಪ್ ಭರವಸೆ ನೀಡಿದ್ದಾರೆ. ವಿಶೇಷ ಕಾರ್ಯಾಚರಣೆ ಆಫ್ರಿಕಾದಲ್ಲಿ ನಡೆದಿದ್ದು, ಜಂಟಿ ಕಾರ್ಯಾಚರಣೆಯಲ್ಲಿ ನೆರವಾದ ಆಫ್ರಿಕಾ ಸರ್ಕಾರಕ್ಕೂ ಅಧ್ಯಕ್ಷ ಟ್ರಂಪ್ ಕೃತಜ್ಞತೆಗಳನ್ನು ತಿಳಿಸಿದ್ದಾರೆ.

ಟ್ರಂಪ್ ಹೇಳಿದ್ದೇನು?: ನನ್ನ ಮಾರ್ಗದರ್ಶನ ಅನ್ವಯ ಅಮೆರಿಕ ಮತ್ತು ಆಫ್ರಿಕಾ ಸಶಸ್ತ್ರ ಪಡೆಗಳು ಜಂಟಿ ಕಾರ್ಯಾಚರಣೆ ನಡೆಸಿವೆ. ಈತ ಆಫ್ರಿಕಾದಲ್ಲಿ ಅಡಗಿದ್ದಾನೆಂದು ತಿಳಿಯಿತು. ನಮ್ಮ ನಿಖರವಾದ ಯೋಜನೆ ಕಾರ್ಯಗತವಾಗಿದ್ದು, ವಿಶ್ವದಲ್ಲೇ ಅತ್ಯಂತ ಸಕ್ರಿಯವಾಗಿದ್ದ ಭಯೋತ್ಪಾದಕನನ್ನು

ಆಫ್ರಿಕಾದಲ್ಲಿ ಅಮೆರಿಕ ಮತ್ತು ನೈಜೀರಿಯಾ ಜಂಟಿ ಕಾರ್ಯಾಚರಣೆ

ಹೊಡೆದುರುಳಿಸಿದ್ದೇವೆ. ಈತನ ಸಾವಿನಿಂದ ಐಸಿಸ್ ಜಾಗತಿಕ ಉಗ್ರ ಚಟುವಟಿಕೆಗಳು ಬಹಳ ಕುಂಠಿತವಾಗಲಿದೆ. ಕಾರ್ಯಾಚರಣೆಗೆ ಬೆಂಬಲಿಸಿದ ನೈಜೀರಿಯಾ ಸರ್ಕಾರಕ್ಕೆ ಧನ್ಯವಾದಗಳು. ಗಾಡ್ ಬ್ಲೆಸ್ ಅಮೆರಿಕ ಎಂದು ಟ್ರುತ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಅಬು ಬಿಲಾಲ್ ಯಾರು?: 1982ರಲ್ಲಿ ನೈಜೀರಿಯಾದ ಬೋರ್ನೊ ಪ್ರದೇಶದಲ್ಲಿ ಬಿಲಾಲ್ ಜನಿಸಿದ್ದ. ಈತನ ಇನ್ನೊಂದು ಹೆಸರು ಅಬು ಬಕರ್ ಇಬಿನ್ ಮುಹಮ್ಮದ್ ಇಬಿನ್ ಅಲಿ ಅಲ್- ಮೈನುಕಿ. ಈತ ಐಸಿಸ್ ಉಗ್ರ ಸಂಘಟನೆಯ ಹಿರಿಯ ನಾಯಕರಲ್ಲೊಬ್ಬ. ಆಫ್ರಿಕಾದ ಸಾಹೇಲ್ ಪ್ರದೇಶದಲ್ಲಿ ಉಗ್ರ ದಾಳಿ ನಡೆಸಿದ್ದ. 2018ರಲ್ಲಿ ಪಶ್ಚಿಮ ಆಫ್ರಿಕಾ ಐಸಿಸ್ ನಾಯಕನಾಗಿದ್ದ. 2023ರಲ್ಲಿ ಈತ ಐಸಿಸ್‌ನ ಹಿರಿಯ ನಾಯಕನೆಂದು ಅಮೆರಿಕ ಗೃಹ ಇಲಾಖೆ ಗುರುತಿಸಿತ್ತು. ಐಸಿಸ್ ಜಾಗತಿಕ ಉಗ್ರ ಚಟುವಟಿಕೆಗಳಲ್ಲಿ ಈತ ಪ್ರಮುಖ ಪಾತ್ರ ವಹಿಸುತ್ತಿದ್ದ.

1871ರಲ್ಲಿ ದ್ವೀಪ ಅಚ್ಚರಿ ಘಟನೆಗೆ ಸಾಕ್ಷಿ | ಸಂಶೋಧನೆ ಬಹಿರಂಗ
5 ಹಸುಗಳಿಂದ 2 ಸಾವಿರದ ಹಿಂಡು!

ಪ್ಯಾರಿಸ್: 1871ರಲ್ಲಿ ನಿರ್ಜನ ದ್ವೀಪವೊಂದರಲ್ಲಿ ಬಿಟ್ಟು ಹೋಗಿದ್ದ ಕೇವಲ ಐದು ಹಸುಗಳು ಆಶ್ಚರ್ಯಕರ ರೀತಿಯಲ್ಲಿ ವಿಕಸನಗೊಂಡು ಸುಮಾರು 2,000 ಪ್ರಾಣಿಗಳ ಬೃಹತ್ ಹಿಂಡಾಗಿ ಬೆಳೆದಿರುವುದನ್ನು ವಂಶವಾಹಿ ಸಂಶೋಧನೆಯೊಂದು ಪತ್ತೆಹಚ್ಚಿದೆ.

ದಕ್ಷಿಣ ಹಿಂದೂ ಮಹಾಸಾಗರದ ಆಮ್‌ಸ್ಟರ್‌ಡ್ಯಾಂ ದ್ವೀಪದಲ್ಲಿ ವಾಸಿಸಲು ಪ್ರಯತ್ನಿಸಿ ವಿಫಲನಾದ ಹರ್ಟಿನ್ ಎಂಬ ಫ್ರೆಂಚ್ ರೈತ, 1871ರಲ್ಲಿ ಅಲ್ಲಿಂದ ಹೊರಡುವಾಗ ಒಂದು ಹೋರಿ, ಎರಡು ಹಸು ಮತ್ತು ಎರಡು ಕರುಗಳನ್ನು ಬಿಟ್ಟು ಹೋಗಿದ್ದ ಎನ್ನಲಾಗಿದೆ. ಜ್ವಾಲಾಮುಖಿಗಳಿಂದ ಕೂಡಿದ, ತೀವ್ರ ಗಾಳಿ ಮತ್ತು ಚಳಿಯಿರುವ ಈ 55 ಚದರ ಕಿಲೋಮೀಟರ್ ವ್ಯಾಪ್ತಿಯ ದ್ವೀಪದಲ್ಲಿ ಈ ಹಸುಗಳು ಬದುಕುಳಿದಿರುವುದು ಮಾತ್ರವಲ್ಲ, ಅಚ್ಚರಿ ಹುಟ್ಟಿಸುವಂತೆ ವಿಕಸನಗೊಂಡಿವೆ.



ಅತಿಹೆಚ್ಚು ಅಂತರ-ಸಂತಾನೋತ್ಪತ್ತಿ: ಸಾಮಾನ್ಯವಾಗಿ ಅಲ್ಪ ಸಂಖ್ಯೆಯ ಪ್ರಾಣಿಗಳಿಂದ ವಂಶವೃದ್ಧಿ ಅಸಾಧ್ಯವೆಂಬ ನಂಬಿಕೆಯಿದ್ದರೂ, 1988ರ ವೇಳೆಗೆ ಇವುಗಳ ಸಂಖ್ಯೆ 2,000ಕ್ಕೆ ಏರಿತ್ತು. ಈ ಹಿಂಡಿನಲ್ಲಿ ದಾಖಲೆ ಮಟ್ಟದ (0.30 ರಷ್ಟು) ಅಂತರ-ಸಂತಾನೋತ್ಪತ್ತಿ ನಡೆದಿದ್ದರೂ, ಇವುಗಳಲ್ಲಿ ಯಾವುದೇ ಆರೋಗ್ಯ ಸಮಸ್ಯೆ ಅಥವಾ ಸಂತಾನೋತ್ಪತ್ತಿ ದೋಷಗಳು ಕಂಡುಬಂದಿಲ್ಲ ಎಂಬ ಅಂಶ ವಿಜ್ಞಾನಿಗಳನ್ನು ಬೆರಗುಗೊಳಿಸಿದೆ.

ವಂಶವಾಹಿ ರಹಸ್ಯ: ವಂಶವಾಹಿ ತಜ್ಞ ಮ್ಯಾಥ್ಯೂ ಗೌಟಿಯರ್ ನೇತೃತ್ವದ ತಂಡ ನಡೆಸಿದ ಡಿಎನ್‌ಎ ವಿಶ್ಲೇಷಣೆಯ ಪ್ರಕಾರ, ಈ ಹಸುಗಳು ಶೇ. 75ರಷ್ಟು ಯುರೋಪಿಯನ್ ಜರ್ಸಿ ಮತ್ತು ಶೇ. 25ರಷ್ಟು ಹಿಂದೂ ಮಹಾಸಾಗರ ಭಾಗದ ಜೆಬು ತಳಿಯ ಮಿಶ್ರಣವಾಗಿವೆ. ದ್ವೀಪದ ವಾತಾವರಣಕ್ಕೆ ತಕ್ಕಂತೆ ಇವುಗಳ ಗಾತ್ರ ಕುಗ್ಗಿಲ್ಲ ಎಂಬುದು ಸಂಶೋಧನೆಯಲ್ಲಿ ದೃಢಪಟ್ಟಿದೆ.

ಪರಿಸರಕ್ಕೆ ಹಾನಿ!: ಈ ಹಸುಗಳು ದ್ವೀಪದ ಅಪರೂಪದ ಫೈಲಿಕಾ ಅರ್ಬೋರಿಯಾ ಮರಗಳನ್ನು ತಿಂದು ಹಾಕಿದ್ದವು ಮತ್ತು ಅಳಿವಿನಂಚಿನಲ್ಲಿರುವ ಅಲ್ಬಟ್ರಾಸ್ ಹಕ್ಕಿಗಳ ಸಂತಾನೋತ್ಪತ್ತಿಗೆ ಅಡ್ಡಿಯಾಗಿದ್ದವು. ಈ ಕಾರಣದಿಂದಾಗಿ ಫ್ರೆಂಚ್ ಸರ್ಕಾರ 1987ರಲ್ಲಿ ದ್ವೀಪಕ್ಕೆ ಬೇಲಿ ಹಾಕಿ, 2010ರ ವೇಳೆಗೆ ಎಲ್ಲಾ ಹಸುಗಳನ್ನು ಹಂತ ಹಂತವಾಗಿ ನಿರ್ಮೂಲನೆ ಮಾಡಿತು. 2019ರಲ್ಲಿ ಈ ದ್ವೀಪವನ್ನು ಯುನೆಸ್ಕೋ ವಿಶ್ವ ಪರಂಪರೆಯ ಪಟ್ಟಿಗೆ ಸೇರಿಸಲಾಗಿದೆ.



• ವಿದ್ವಾನ್ ನರಸಿಂಹ ಭಟ್

ಲಕ್ಷ್ಮಿಯು ಯಾರನ್ನು ವರಿಸುವಳು?

ಆಲಸ್ಯ ರಹಿತನನ್ನು ಮತ್ತು ನೀತಿವಂತನಿಗೆ

ಈ ಪ್ರಶ್ನೋತ್ತರದಲ್ಲಿ ಕಾರ್ಯಕಾರಣಭಾವವಿದೆ. ಲಕ್ಷ್ಮಿಯು ಕಾರ್ಯವಾದರೆ ಉತ್ಸಾಹ ಅಥವಾ ಆಲಸ್ಯವಿಲ್ಲದಿರುವಿಕೆ ಮತ್ತು ನೀತಿ ಕಾರಣ. ಏಕೆಂದರೆ ಲಕ್ಷ್ಮಿಯು ಒಲಿಯಬೇಕಾದರೆ ಯಾವ ಅರ್ಹತೆ ಇರಬೇಕಾಗುತ್ತದೆ ಎಂಬ ವಿಷಯ ಇಲ್ಲಿದೆ. ಆ ವ್ಯಕ್ತಿಯಲ್ಲಿ ಆಲಸ್ಯ ಇರಬಾರದು ಮತ್ತು ಆತ ನೀತಿಯಿಂದ ಕೂಡಿರಬೇಕು ಎಂದು. ಈ ಎರಡು ಗುಣಗಳಿರುವವನನ್ನು ಲಕ್ಷ್ಮಿಯೂ ಬಿಡುವುದಿಲ್ಲ ಎಂದರ್ಥ. ಇಲ್ಲಿ ಲಕ್ಷ್ಮಿ ಎಂದರೆ ಮಹಾವಿಷ್ಣುವಿನ ಮಡದಿ ಎಂಬ ಅರ್ಥ ಮಾತ್ರ ಅಲ್ಲ, ಇದಕ್ಕೆ ಸಂಪತ್ತು ಎಂಬ ಅರ್ಥವನ್ನು ತೆಗೆದುಕೊಳ್ಳಬೇಕು. ಸಂಪಾದಿಸಿದ ಸಂಪತ್ತನ್ನು ಸರಿಯಾಗಿ ಬಳಸಿಕೊಂಡಲ್ಲಿ ಮಹಾಲಕ್ಷ್ಮಿಯ ಪತಿಯಾದ ಮಹಾವಿಷ್ಣು ಸಿಗದಿರನು.

ಯಾವುದೇ ಕಾರ್ಯದ ಫಲಿತವನ್ನು ಇಲ್ಲಿ 'ಲಕ್ಷ್ಮಿ' ಎಂಬುದಾಗಿ ತಿಳಿಯಬೇಕು. ಅಂದರೆ ಒಂದು ಫಲರೂಪವಾದುದರಿಂದ ಲಕ್ಷ್ಮಿಯು ಅನೇಕ ಪ್ರಕಾರವಾಗಿ ಇರುತ್ತಾಳೆ. ಅಷ್ಟಲಕ್ಷ್ಮಿಯರ ರೂಪದಲ್ಲಿ ನಾವು ಲಕ್ಷ್ಮಿಯನ್ನು ಭಾವಿಸುತ್ತೇವೆ. ಯಾವುದೇ ವಿಧವಾದ ಲಕ್ಷ್ಮಿ ನಮಗೆ ಲಭಿಸಬೇಕಾದರೆ ಅದಕ್ಕೆ ಬೇಕಾದ ಪೂರಕವಾದ ಸಾಮಗ್ರಿಗಳು ಇರಬೇಕಾಗುತ್ತವೆ. ಸಾಮಾನ್ಯವಾಗಿ ಒಂದು ಕಾರ್ಯವಾಗಬೇಕಾದರೆ ಅಲ್ಲಿ ಕಾರಣವಿರಬೇಕು. ಮತ್ತು ಆ ಕಾರ್ಯಕ್ಕೆ ಪ್ರತಿಬಂಧಕ ಅಥವಾ ವಿಘ್ನ ಇರಬಾರದು. ಮತ್ತು ಪ್ರತಿಬಂಧಕ ಇದ್ದರೂ ಕಾರ್ಯವನ್ನುಂಟುಮಾಡುವ ಉತ್ತೇಜಕವಾದ ಕಾರಣ ಸಾಮಗ್ರಿ ಇದ್ದರೆ ಕಾರ್ಯಸಂಪನ್ನವಾಗುತ್ತದೆ ಎಂಬುದಾಗಿ ಶಾಸ್ತ್ರವು ಕಾರ್ಯಕಾರಣಗಳಿಗಿರುವ ಸಂಬಂಧವನ್ನು ಹೀಗೆ ವಿವರಿಸುತ್ತದೆ. ಅಂದರೆ ಸಂಪತ್ತು ಬರಬೇಕಾದರೆ ಅದಕ್ಕೆ ಇರುವ ಪ್ರತಿಬಂಧಕವೇ ಆಲಸ್ಯ. ಮತ್ತು ಬಂದ ಫಲವು ಉಳಿಯಬೇಕಾದರೆ ಏನು ಮಾಡಬೇಕು ಎಂಬ ವಿಷಯವೂ ಈ ಉತ್ತರದಲ್ಲಿ ನಿರೂಪಿತವಾಗಿದೆ. ಹಾಗೂ ಹೀಗೂ ಕಷ್ಟಪಟ್ಟು ಲಕ್ಷ್ಮಿಯನ್ನು ಸಂಪಾದಿಸಬಹುದು. ಸಹಜವಾಗಿ ಆಕೆ ಚಂಚಲೆ. ಅವಳನ್ನು ಉಳಿಸಿಕೊಳ್ಳುವುದಕ್ಕೂ ಸಹ ಒಂದು ಜಾಣ್ಮೆಯೇ ಬೇಕು. ಅದಕ್ಕಾಗಿ ಏನು ಬೇಕು ಎಂಬುದನ್ನು ಇಲ್ಲಿ ಹೇಳಲಾಗಿದೆ. ಅಲ್ಲಿ ಒಂದು ನಿಯತ್ತು ಅಥವಾ ನೀತಿ ಬೇಕು. ಬದ್ಧತೆ ಅಥವಾ ಕ್ಷಮತೆ ಇರಬೇಕಾಗುತ್ತದೆ. ಅವಳು ಉಳಿಯಬೇಕಾದರೆ ನಮ್ಮಲ್ಲಿ ಆ ಅರ್ಹತೆಯು ಸದಾ ಜಾಗೃತವಾಗಿರುವಂತೆ ಕಾಪಾಡಿಕೊಳ್ಳಬೇಕಾಗುತ್ತದೆ. ಹಾಗಿದ್ದಾಗ ಬಂದ ಸಂಪತ್ತು ಅಲ್ಲಿ ನೆಲೆಗೊಳ್ಳುತ್ತದೆ. ಹಾಗಾಗಿ ಈ ಎರಡು ಲಕ್ಷಣಗಳಿದ್ದರೆ ಮಾತ್ರ ಮಹಾಲಕ್ಷ್ಮಿ ನೆಲೆಗೊಳ್ಳುತ್ತಾಳೆ ಎಂಬುದಾಗಿ ಈ ಪ್ರಶ್ನೋತ್ತರ ಸಾರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಮಹಾಭಾರತದ ವಿದುರನೀತಿ ಹೀಗೆ ಹೇಳಿದೆ-ಯಾವನಿಗೆ ಮಹಾಲಕ್ಷ್ಮಿ ಅನಾಯಾಸವಾಗಿ ಒಲಿಯುತ್ತಾಳೆ ಎಂದು. ಉತ್ಸಾಹಸಂಪನ್ನಮ್ ಅದೀರ್ಘಸೂತ್ರಂ ಕ್ರಿಯಾವಿಧಿಜ್ಞಂ ವ್ಯಸನೇಷ್ವಸಕ್ತಮ್। ಶೂರಂ ಕೃತಜ್ಞಂ ದೃಢಸೌಹೃದಂ ಚ ಲಕ್ಷ್ಮೀಃ ಸ್ವಯಂ ಯಾತಿ ನಿವಾಸಹೇತೋಃ॥ ಎಂದು. ವ್ಯಕ್ತಿಯಲ್ಲಿ ಸಂಕಲ್ಪಿಸಿದ ಕಾರ್ಯ ಸಿದ್ಧಿಸುವತನಕ ನಿರಂತರ ಉತ್ಸಾಹವಿರಬೇಕು, ವಿಳಂಬವಿರಬಾರದು, ಅರಿತು ಕೆಲಸ ಮಾಡುವವನಾಗಿರಬೇಕು, ಚಟಗಳಲ್ಲಿ ಆಸಕ್ತನಾಗಿರಬಾರದು, ಶೂರನಾಗಿರಬೇಕು, ಕೃತಜ್ಞತೆಯ ಭಾವ ಉಳ್ಳವನಾಗಿರಬೇಕು, ಮಾಡುವ ಕಾರ್ಯದಲ್ಲಿ ತಲ್ಲೀನತೆಯಿರಬೇಕು. ಈ ಏಳು ಗುಣವುಳ್ಳವನನ್ನು ಲಕ್ಷ್ಮಿಯು ತಾನಾಗಿಯೇ ಆತನ ಮನೆಯಲ್ಲಿ ವಾಸಿಸಲು ಇಚ್ಛಿಸುತ್ತಾಳೆ ಎಂಬುದಾಗಿ. ಇದೇ ಅರ್ಥವನ್ನೇ ಇನ್ನೊಂದು ರೀತಿಯಲ್ಲಿ ಈ ಪ್ರಶ್ನೋತ್ತರದಲ್ಲೂ ಹೇಳಲಾಗಿದೆ.



• ಡಾ॥ ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಯುಧಿಷ್ಠಿರನ ಹರ್ಷ; ಕೃಷ್ಣನ ನಿರ್ಗಮನ

ಅಂತೂ ಜರಾಸಂಧ ವಧೆಯಾಯಿತು, ಆತನ ಉತ್ತರಕ್ರಿಯೆಯೂ ಆಯಿತು. ಆತನ ಪುತ್ರನ ಪಟ್ಟಾಭಿಷೇಕವೂ ಆಯಿತು. ಸೆರೆಯಾಗಿದ್ದ ರಾಜರುಗಳ ಬಿಡುಗಡೆಯೂ ಆಯಿತು. ಇತ್ತ ಕೃಷ್ಣನೂ ಅರಸರು ಅರ್ಪಿಸಿದ ಮಹೈಶ್ವರ್ಯವನ್ನು ಹೊಂದಿದವನಾಗಿ, ಅವರಿತ್ತ ಭೂರಿರತ್ನಗಳನ್ನು ತೆಗೆದುಕೊಂಡು, ಭೀಮಾರ್ಜುನರೊಂದಿಗೆ ಅಲ್ಲಿಂದ ಇಂದ್ರಪ್ರಸ್ಥಕ್ಕೆ ಬಂದವನೇ, ಧರ್ಮರಾಜನಲ್ಲಿಗೆ ಬಂದು ಸಂತೋಷದಿಂದ ನುಡಿದನು:

ಯುಧಿಷ್ಠಿರಾ, ಭೀಮನು ಜರಾಸಂಧನನ್ನು ಸಂಹರಿಸಿದನು. ಇದು ನಮ್ಮ ಸೌಭಾಗ್ಯ. ಸೆರೆಯಾಗಿದ್ದ ರಾಜರುಗಳನ್ನೆಲ್ಲಾ ಬಿಡಿಸಿದ್ದಾಗಿದೆ. ಭೀಮಾರ್ಜುನರು ಕುಶಲಿಗಳಾಗಿಯೇ ಹಿಂದಿರುಗಿದ್ದಾರೆ. ಅವರಿಗೆ ಯಾವ ಕ್ಷತಿಯೂ ಉಂಟಾಗಿಲ್ಲ ಎಂದು. ಈ ಮಾತಿಗೆ ಸಂತುಷ್ಟನಾದ ಯುಧಿಷ್ಠಿರನು ಕೃಷ್ಣನನ್ನು ಯಥೋಚಿತವಾಗಿ ಸತ್ಕರಿಸಿದನು. ಹಾಗೂ ಪ್ರಹರ್ಷದಿಂದ ಭೀಮಾರ್ಜುನರನ್ನು ಆಲಿಂಗಿಸಿಕೊಂಡನು. ಜರಾಸಂಧ ನಾಶ ಹಾಗೂ ತನ್ನ ಭ್ರಾತೃಗಳು ಸಾಧಿಸಿದ ವಿಜಯಗಳಿಂದಾಗಿ ಯುಧಿಷ್ಠಿರನಿಗೆ ಅಮಿತ ಸಂತೋಷವಾಯಿತು. ಕೃಷ್ಣನನ್ನು ಕುರಿತು ಹೀಗೆ ಹೇಳಿದನು: ನರಶ್ರೇಷ್ಠನೇ, ಪ್ರತಾಪಶಾಲಿಯೂ ಮದೋನ್ಮತ್ತನೂ ಆದ ಜರಾಸಂಧನನ್ನು ಭೀಮನು ಬೀಳಿಸಲಾದುದು ನೀನು ಜೊತೆಗಿದ್ದೆಯಾದ್ದರಿಂದಲೇ. ಈಗ ಇದೋ ಶ್ರೇಷ್ಠಯಜ್ಞವಾದ ರಾಜಸೂಯವನ್ನು ನಾನು ನಿಶ್ಚಿಂತನಾಗಿ ನೆರವೇರಿಸಬಲ್ಲೆ, ನಿನ್ನ ಬುದ್ಧಿ ಬಲದಿಂದಾಗಿಯೇ ನನಗೆ ಯಾಗವನ್ನು ಮಾಡಲು ಅರ್ಹತೆಯೆಂಬುದು ಬಂದಿರುವುದು. ಜರಾಸಂಧನೊಡನೆ ಮಾಡಿದ ಈ ಯುದ್ಧದಿಂದಾಗಿ, ಭೂಮಿಯ ಮೇಲೆಲ್ಲ ನಿನ್ನ ಕೀರ್ತಿಯು ವ್ಯಾಪಿಸಿರುವುದು. ಜರಾಸಂಧ ವಧದಿಂದಾಗಿ ವಿಪುಲವಾದ ಸಂಪತ್ತನ್ನೂ ಗಳಿಸಿದಂತಾಯಿತು.

ಹೀಗೆ ಹೇಳಿದ ಯುಧಿಷ್ಠಿರನು ಪ್ರಭುವಾದ ಶ್ರೀಕೃಷ್ಣನಿಗೆ ಶ್ರೇಷ್ಠವಾದ ರಥವೊಂದನ್ನಿತ್ತನು. ಅದರೊಳಗೆ ಅರ್ಜುನನೊಂದಿಗೆ ಕುಳಿತ ಜನಾರ್ದನನೂ ಯುಧಿಷ್ಠಿರನ ವಿಷಯದಲ್ಲಿ ಬಹುಸಂತುಷ್ಟನೇ ಆದನು. ಆ ಬಳಿಕ ತನ್ನ ಸಹೋದರರೊಂದಿಗೆ ಯುಧಿಷ್ಠಿರನು ಹೊರಟು ಎಲ್ಲ ರಾಜರನ್ನೂ ಯಥೋಚಿತವಾಗಿ ಸತ್ಕರಿಸಿ ಅವರೆಲ್ಲರನ್ನೂ ಬೀಳ್ಕೊಟ್ಟನು. ಸಂತೋಷಗೊಂಡ ಆ ರಾಜರುಗಳೂ, ಯುಧಿಷ್ಠಿರನ ಅಪ್ಪಣೆಯನ್ನು ಪಡೆದು ತಮ್ಮ ದೇಶಗಳಿಗೆ ಹೊರಟುಬಂದರು.

ನರಶ್ರೇಷ್ಠನೂ ಮಹಾಬುದ್ಧಿಶಾಲಿಯೂ ಆದ ಕೃಷ್ಣನು ಹೀಗೆ ಜರಾಸಂಧ ವಧೆಯನ್ನು ಸಾಧಿಸಿದನಷ್ಟೆ, ಕಾರ್ಯವು ಸಿದ್ಧಿಸಿರಲು, ಇನ್ನೀಗ ಹೊರಟುನಿಂತನು. ಯುಧಿಷ್ಠಿರನನ್ನೇ ಮುಂದಿಟ್ಟುಕೊಂಡು ಆ ಪಾಂಡವರೆಲ್ಲರೂ ಅಕ್ಲಿಷ್ಟಕಾರಿಯಾದ ಕೃಷ್ಣನಿಗೆ ಪ್ರದಕ್ಷಿಣೆ ಮಾಡಿದರು. ಯಾವುದೇ ಕಾರ್ಯವನ್ನು ಅನಾಯಾಸವಾಗಿ, ಎಂದರೆ ಕ್ಲೇಶವಿಲ್ಲದೆ ಮಾಡುವಂತಹವನಿಗೆ ಅಕ್ಲಿಷ್ಟಕಾರಿಯೆನ್ನುವರು. ಯುಧಿಷ್ಠಿರ ಹಾಗೂ ದ್ರೌಪದಿ ಇವರುಗಳ ಆಜ್ಞೆಯನ್ನು ಕೃಷ್ಣನು ಪಡೆದನು. ಹಾಗೆಯೇ ಸುಭದ್ರೆ, ಭೀಮಸೇನ, ಅರ್ಜುನ, ಯಮಳರಾದ (ಅವಳಿ-ಜವಳಿ) ನಕುಲ-ಸಹದೇವರು, ಹಾಗೂ ಧೌಮ್ಯ-ಇವರೆಲ್ಲರ ಅನುಮತಿಯನ್ನು ಪಡೆದು, ಸ್ವನಗರಿಗೆ ಹೊರಟನು. ಅದಕ್ಕಾಗಿ ಆತನು ಬಳಸಿದ ರಥವು ಆಗಷ್ಟೆ ಯುಧಿಷ್ಠಿರನು ಆತನಿಗೆ ಕೊಟ್ಟುದಾಗಿತ್ತು. ಅದು ಮನೋವೇಗದಲ್ಲಿ ಸಂಚರಿಸುವ ರಥ! ತನ್ನ ದಿವ್ಯನಾದದಿಂದ ದಿಕ್ಕುಗಳಲ್ಲೆಲ್ಲ ಪ್ರತಿಧ್ವನಿಯನ್ನು ಉಂಟುಮಾಡುವಂತಹುದು!

ದೇವಕೀಪುತ್ರನಾದ ಕೃಷ್ಣನು ಹೊರಟುಬರಲು, ದೊಡ್ಡ ಜಯವನ್ನು ಸಾಧಿಸಿದಂತಾಗಿದ್ದ ಯುಧಿಷ್ಠಿರನು, ಅಲ್ಲಿ ನೆರೆದಿದ್ದ ರಾಜರಿಗೆಲ್ಲ ಅಭಯವನ್ನಿತ್ತನು. ಆ ಕಾರ್ಯದಿಂದಾಗಿ ಆತನ ಕೀರ್ತಿಯು ಮತ್ತೂ ಹೆಚ್ಚಿತು. ಪಾಂಡವರು ದ್ರೌಪದಿಗೂ ಪರಮ ಸಂತೋಷವನ್ನೇ ತಂದುಕೊಟ್ಟಂತಾಯಿತು. ಹಾಗೂ ಆ ಕಾಲಕ್ಕೆ ಹೇಗೆ ಯುಕ್ತವೋ ಅಂತಹ ಪ್ರಜಾಪಾಲನ ಕಾರ್ಯವನ್ನು ಯುಧಿಷ್ಠಿರನು ಧರ್ಮಾನುಸಾರವಾಗಿ ನೆರವೇರಿಸಿದನು.

ನೆನೆದವರ ಮನದಲ್ಲಿ...



• ಎನ್.ರಾಮನಾಥ್
anakuramanath@gmail.com

ಬಾಲ್ಕನಿಯಲ್ಲಿ ಇರಿಸಿದ್ದ ಕುಂಡವೊಂದರಲ್ಲಿ ತುಂಬಿದ್ದ ಹಿಂದಿನ ರಾತ್ರಿಯ ಮಳೆಯ ನೀರನ್ನು ಸಾಮಾನ್ಯವಾಗಿ ನಿರ್ಜನವಾಗಿರುತ್ತಿದ್ದ ಪಕ್ಕದ ಗಲ್ಲಿಯತ್ತ ಸುರಿದೆ. ಆ ಸಮಯದಲ್ಲಿ ಆ ಗಲ್ಲಿಯು ನಿರ್ಜನವಾಗಿರಲಿಲ್ಲ ಎನ್ನುವುದು ಅಲ್ಲಿಂದ ಹೊರಟ ಚೀತ್ಕಾರ ಮತ್ತು ಜಗತ್ತಿನ ಅತ್ಯಂತ ಕೊಳಕು ಬೈಗುಳಗಳ ಸರಮಾಲೆಯಿಂದ ವೇದ್ಯವಾಯಿತು. ಬಾಲ್ಕನಿಯ ಅಂಚಿಗೆ ನನ್ನ ದೇಹದ ಮೇಲ್ಭಾಗವನ್ನು ಛಜ್ಜಾದಂತಾಗಿಸಿ ಗಲ್ಲಿಯತ್ತ ಇಣುಕಿದೆ. ಕುಂಡದಲ್ಲಿದ್ದ ಮಣ್ಣಿನ ಮಗಳ ಅಮ್ಮನನ್ನು ಕೂಡಿಕೊಂಡಿದ್ದಂತಹ ಭೀಕರ ತಾಯಿಯು ಗಲ್ಲಿಯಲ್ಲಿ ಧಾವಿಸುತ್ತಿದ್ದ ಮಹಿಳೆಯ ಹಿಮಾಲಯದ ಹಿಮಾಚ್ಛಾದಿತ ಬಿಳುಪಿನ ವಸ್ತ್ರವನ್ನು ತುಂಬಿದ ಪೀಕದಾನಿಯ ಬಣ್ಣಕ್ಕೆ ತಿರುಗಿಸಿದ್ದಳು. ತತ್ಪರಿಣಾಮವೇ ಮಹಿಳೆಯ ಜಿಹ್ವೆಗೆ ಸಾನಿಯಾ ಮಿರ್ಜಾಳ ರಾಕೆಟ್ಟಿಂದ ಹೊರಟ ಚೆಂಡಿನ ವೇಗವು ದೊರಕಿತ್ತು ಮತ್ತು ಆಕೆಯ ಚಿತ್ತದಲ್ಲಿ ಅಡಗಿದ್ದ ವಿಶೇಷ ಬೈಗುಳಗಳ ಸುರಿಮಳೆಯ ಮೂಲಕ ನನ್ನ ಪೂರ್ವಿಕರೆಲ್ಲರೂ ಪಾವನರಾಗುತ್ತಿದ್ದರು.

ನೆನೆಯುವುದು ಉರುಫ್ ಒದ್ದೆಯಾಗುವುದು ಹುಟ್ಟಿಗಿಂತ ಮುಂಚಿನಿಂದಲೂ ಆರಂಭವಾಗುವ ಕ್ರಿಯೆ. ಗರ್ಭದಲ್ಲಿ ಇರುವಷ್ಟು ಸಮಯವೂ ದ್ರವದಲ್ಲಿಯೇ ಈಜಾಡುವ ಶಿಶುವು 'ಈಜಬೇಕು, ಈಜಿ ಜಯಿಸಬೇಕು' ಎಂಬ ಕ್ರಮವನ್ನು easyಯಾಗಿ ಪಾಲಿಸುತ್ತದೆ. ನೆನೆದೇ ಹುಟ್ಟಿ, ನೆನೆಯುತ್ತಲೇ ಬೆಳೆಯುವ ಮನುಜ ಕಂತೆ ಒಗೆದು ಕಟ್ಟಿಗೆಯನ್ನು ಏರುವಾಗಲೂ ಒದ್ದೆಯಾಗಿಯೇ ತೆರಳುವುದು. ನೆನೆದಾಗ ಗರ್ಭಸ್ಥ ಮಗುವಿನ ಮನದಲ್ಲಿ, ಚಟ್ಟವೇರುವ ಮುನ್ನ ಶವದ ಮನದಲ್ಲಿ ಏನಾಗುವುದೆಂದು ತಿಳಿಯದಿದ್ದರೂ ಬದುಕಿನ ವಿವಿಧ ಮಜಲುಗಳಲ್ಲಿ ನೆನೆದವರ ಮನದಲ್ಲಿ ಏನಾಗಬಹುದು? ಯಾವ ಭಾವಗಳು ಏಳಬಹುದು? ಇದನ್ನು ತಿಳಿಯಲೆಂದೇ ಆ ಮಳೆಗಾಲದಂದು ಕ್ಯಾಮರಾವನ್ನು ಹೆಗಲಿಗೇರಿಸಿ ಬೀದಿಗೆ ಬಿದ್ದೆ.



ಅನತಿ ದೂರದಲ್ಲಿಯೇ ಒಂದು ಚಲನಚಿತ್ರದ ಮಳೆ ಸೀನಿನ ಶೂಟಿಂಗ್ ನಡೆಯುತ್ತಿತ್ತು. ಛತ್ರನೆ ಷವರ್‌ನಿಂದ ತುಂತುರುತ್ತಿದ್ದ ನೀರಿನ ಕೆಳಗೆ ನಿಂತಿದ್ದ ಹೀರೋಯಿನ್ನನ್ನು "ನೆನೆದವರ ಮನದಲ್ಲಿ ಕಾರ್ಯಕ್ರಮದ ವತಿಯಿಂದ ನಿಮಗೆ ಈ ಪ್ರಶ್ನೆ. ನೆನೆಯುತ್ತಿರುವ ನಿಮ್ಮ ಮನದಲ್ಲಿ ಯಾವ ಭಾವನೆಗಳಿವೆ?" ಎಂದು ಪ್ರಶ್ನಿಸಿದೆ.

"ಸೀನ್ ಮುಗಿಯುವವರೆಗೆ ಸೀನುವುದನ್ನು ತಡೆದುಕೊಳ್ಳುವುದು ಹೇಗೆ ಎನ್ನುವುದೇ ನನ್ನ ಮನದಲ್ಲಿ ಮೂಡಿರುವ ಚಿಂತೆ. ಚಿತ್ರದ ಡೈರೆಕ್ಟರ್ ಮೊದಲು ದೋಸೆ ಹೋಟೆಲ್ ಇಟ್ಟಿದ್ದನಂತೆ. ಬೇಳೆಯನ್ನು ನೆನೆಹಾಕಿ ತನ್ನ ಬೇಳೆ ಬೇಯಿಸಿಕೊಂಡವನಿಗೆ ಎಲ್ಲವನ್ನೂ ನೆನೆಸುವುದರಲ್ಲಿಯೇ ಖುಷಿ" ಎಂದಳು ಲಲನೆ. ಧ್ವನಿಯಲ್ಲಿ ಆಗಲೇ ಥಂಡಿಯ ಗೊರಗೊರ ಸೇರಿತ್ತು.

ಶೀತಲನಾಸಿಕೆಯಿಂದ ಬೀಳ್ಕೊಂಡು ಮುನ್ನಡೆದೆ. ಅಲ್ಲೊಂದು ಪಾಟ್‌ಹೋಲ್; ಇತ್ತಣಿಂದೊಂದು ವಾಹನ ಧಾವಿಸಿ ಪಾಟ್‌ಹೋಲಲ್ಲಿ 'ಧಡ್ಕಿಸಿ' ಮುಂದೋಡಿತು. ಹಳ್ಳದಲ್ಲಿ ತುಂಬಿದ್ದ ವರ್ಷಶೇಷವು ಪಕ್ಕದಲ್ಲಿ ನಿಂತಿದ್ದವನು ವಾಷಿಂಗ್ ಪೌಡರ್ ನಿರ್ಮಾ ಬಳಸಿ ಒಗೆದು ತೊಟ್ಟಿದ್ದ ಹಾಲಿನಂಥ ಬಿಳುಪು ಅಂಗಿಯನ್ನು ಕಮಂಗಿಯಾಗಿಸಿತು.

"ನಮಸ್ಕಾರ. 'ನೆನೆದವರ ಮನದಲ್ಲಿ' ಕಾರ್ಯಕ್ರಮಕ್ಕೆ ನಿಮಗೆ ಸ್ವಾಗತ. ಛಿಳ್ಳನೆ ಹಾರಿದ ನೀರು ಥಳ್ಳನೆ ಹೊಳೆಯುತ್ತಿದ್ದ ಶರ್ಟನ್ನು ತೋಯಿಸಿರುವ ಈ ಸಂದರ್ಭದಲ್ಲಿ ನೆನೆದವರ ಮನದ ಮಾತುಗಳೇನು?" ಎಂದೆ.

ಕಮಂಗಿಯವನು ಗಲ್ಲಿಯವಳು ಓದಿದ ಸ್ಕೂಲಿನಲ್ಲೇ ಓದಿದವನೋ ಏನೋ; ಅವಳು ಬಳಸಿದ ಭಾಷೆಯನ್ನೇ ಒಂದಷ್ಟು 'ಇಂಪ್ರೂವ್' ಮಾಡಿ ಪ್ರಶ್ನಿಸಿದ ನನ್ನನ್ನು, ಕೊಚ್ಚೆ ಹಾರಿಸಿದ ಡ್ರೈವರನ್ನು, ಗುಂಡಿ ಮುಚ್ಚದ ನಗರ ಪಾಲಿಕೆಯನ್ನು, ರಾಜ್ಯ ಸರ್ಕಾರವನ್ನು, ಕಡೆಗೆ ದೇಶದ ಪ್ರಧಾನಿಯನ್ನು ತನ್ನ ಪೊಲೀಸ್ ಸಂಸ್ಕೃತದಲ್ಲಿ ನಿವಾಳಿಸಿ ಎಸೆದ. ಅಷ್ಟರ ಮಧ್ಯೆಯೂ ನಾನು "ನಿಮಗೆ ಹಿಂದಿ ಫಿಲ್ಮ್ ಇಷ್ಟವೇ?" ಎಂದು ಕೇಳಿದೆ.

"ಹೂಂ. ಏಕೆ?"

"ಹಿಂದಿ ಚಿತ್ರಗಳ ಹೀರೋಗಳು ಗುಂಡಿ ಮುಚ್ಚಕೂಡದು ಎಂದು ತೋರಿಸಿಕೊಟ್ಟಿದ್ದಾರೆ. ಅವರ ಶರ್ಟಿನ ಗುಂಡಿಗಳೆಲ್ಲ ತೆರೆದೇ ಇರುತ್ತವೆ. ಇದೂ ಡಿಟ್ಟೋ. ಆದ್ದರಿಂದ ಈ ಗುಂಡಿಗಳನ್ನು ಮುಚ್ಚದ ಕಾಂಟ್ರಾಕ್ಟರ್ ಸಹ ಹಿಂದಿ ಚಿತ್ರಗಳ ಅಭಿಮಾನಿ ಎಂದಾಯಿತು. ಅಲ್ಲಿಗೆ ನೀವಿಬ್ಬರೂ ಒಂದೇ ಬಳ್ಳಿಯ ಹೂಗಳು. ನೀವೇನಂತೀರಿ?" ಎಂದೆ.

ಅವನು ತನ್ನ ಹೊಲಸುಭಾಷಾ ಪದಕೋಶದಿಂದ ಮತ್ತಷ್ಟು ಪದಗಳನ್ನು ಹೆಕ್ಕಿ ನನ್ನತ್ತ ಒಗೆದ. "ಮೆತ್ತಗೆ ಮಾತನಾಡಿದ್ದು ನಿನಗೇ; ಜೋರಾಗಿ ಮಾತನಾಡಿದ್ದು ಗಾಳಿಗೆ" ಎಂಬ ಧೋರಣೆಯನ್ನು ಅನುಸರಿಸುವ ನಾನು ನೆನೆದ ಮತ್ತೊಬ್ಬರನ್ನು ಅರಸುತ್ತಾ ಹೊರಟೆ. ಇದ್ದಕ್ಕಿದ್ದಂತೆ ಕಾರ್ಮೋಡಗಳು ದಟ್ಟೈಸಿದವು. ಕುಂಭದ್ರೋಣ ಮಳೆಗೆ ಹಳ್ಳಕೊಳ್ಳಗಳಲ್ಲದೆ ಕೆಳಪ್ರದೇಶದಲ್ಲಿರುವ ಗುಡಿಸಲು, ವಸತಿಗಳು ಸಹ ತುಂಬಿಕೊಂಡವು.

"ನಿಮ್ಮ ಮನೆಯೆಲ್ಲ ನೆನೆದಿದೆ. ನೀವೂ ನೆನೆದಿದ್ದೀರಿ. 'ನೆನೆದವರ ಮನದಲ್ಲಿ' ಕಾರ್ಯಕ್ರಮದಲ್ಲಿ ನಿಮ್ಮ ಅಭಿಪ್ರಾಯವು ಅಮೂಲ್ಯವೆನಿಸುತ್ತದೆ. ಈಗ ನಿಮ್ಮ ಮನಸ್ಸಿನಲ್ಲಿರುವ ಭಾವನೆಗಳೇನು?" ಎಂದೆ.

"ಸರ್ಕಾರವು ಘೋಷಿಸದೆ ಕೊಟ್ಟಿರುವ ಬಿಟ್ಟಿಭಾಗ್ಯಗಳಲ್ಲಿ ಇದೂ ಒಂದು. ರಾಜಕಾಲುವೆಯನ್ನು ಮುಚ್ಚಿ ಬಹುಮಹಡಿ ಕಟ್ಟಡವನ್ನು ಕಟ್ಟಿದಾಗಿನಿಂದ ನಮಗೆ 'ಇರುವಲ್ಲೇ ಸ್ನಾನ' ಭಾಗ್ಯ ಒದಗಿದೆ. ಇದರಲ್ಲಿ ಒಂದು ಸಂತಸದ ಸಂಗತಿ, ಒಂದು ಬೇಸರದ ಸಂಗತಿಗಳೂ ಇವೆ. ನಮ್ಮೊಡನೆಯೇ ನಮ್ಮ ಮನೆಯ ಪೀಠೋಪಕರಣಗಳು, ಹಾಸಿಗೆ ದಿಂಬುಗಳಿಗೂ ಸ್ನಾನವಾಗುವುದು ಬೇಸರದ ಸಂಗತಿ. ನಮ್ಮ ಮನೆಯ ನಾಯಿಗೆ ಸ್ನಾನ ಮಾಡಿಸುವುದೆಂದರೆ ಹರಸಾಹಸ. ಹೀಗೆ ಮಳೆನೀರು ನುಗ್ಗಿದಾಗ ಅದು ಶ್ರಮವಿಲ್ಲದೆಯೇ ನೆರವೇರುವುದು ಸಂತಸದ ಸಂಗತಿ" ಎಂದನೊಬ್ಬ ಮುಳುಗುಮನೆಯವ.

"ಇಲ್ಲಿಂದ ಒಂದು ಕಿಲೋಮೀಟರ್ ದೂರದಲ್ಲಿ ಕೆರೆಯೊಂದಿದೆ. ಅದರ ತೂಬನ್ನು ಆಗಾಗ್ಗೆ ಸ್ವಲ್ಪ ಸಮಯ ತೆಗೆದು ನಮ್ಮ ಬಡಾವಣೆಗೆ ನೀರನ್ನು ಹರಿಸಿದರೆ ವರ್ಷವಿಡೀ ನಾವು ನೆನೆಯಲು ಅನುಕೂಲವಾಗುತ್ತದೆ. ಅದರಿಂದ ಮಳೆಯಿಲ್ಲದ ತಿಂಗಳುಗಳಲ್ಲಿ ನಾವು ಬಳಸಬೇಕಾದ ಸೋಪಿನ ಖರ್ಚು ಉಳಿತಾಯವಾಗುತ್ತದೆ, ನೆನೆದವರ ಮನದಲ್ಲಿ ಉಳಿತಾಯದ ಸಂತೋಷ ಮೂಡುತ್ತದೆ" ಎಂದ ಮತ್ತೊಬ್ಬ ಮುಳುಗುಗೃಹಸ್ಥ.

"ಸೆಲ್ಫಿ ಏಕೆ ತೆಗೆದುಕೊಳ್ಳಲಿಲ್ಲವಯ್ಯಾ? ಬೇರೆಯವರ ಅವಸ್ಥೆಯನ್ನು ಸೆಲ್ಫಿಯಲ್ಲಿ ಸೆರೆಹಿಡಿದು ರೀಲ್ಸ್ ಮಾಡುವ ನಿಮಗೆ ನಾವು ನೆನೆದಷ್ಟೂ ಖುಷಿಯೇ. ಹಿಡ್ಕೋ ಈ ಬಕೆಟ್ಟನ್ನ, ತುಂಬಿದ ನೀರನ್ನು ಆಚೆ ಸುರಿ ಬಾ" ಎಂದನೊಬ್ಬ ಹಿರೀಕ.

ಅತನಿಂದ ತಪ್ಪಿಸಿಕೊಂಡು ಕೊಳಕು ನೀರಿನಲ್ಲಿಯೇ ಈಜುತ್ತಿದ್ದ ಪೋರನನ್ನು 'ನೆನೆದವನ ಮನದಲ್ಲಿ ಏನೇನು ನಡೆಯುತ್ತಿದೆ?" ಎಂದು ಕೇಳಿದೆ.

"ನಾನು ತುಂಬಾ ಸಾಹುಕಾರ ಅನ್ನಿಸ್ತಿದೆ" ಎಂದನಾ ಪೋರ.

"ಏಕೆ?"

"ಎಲ್ಲರೂ ಮನೆಯಿಂದ ಸ್ವಿಮಿಂಗ್ ಪೂಲ್ಗೆ ಹೋಗುತ್ತಾರೆ. ನನ್ನ ವಿಷಯದಲ್ಲಿ ನಾನಿರುವ ಮನೆಗೇ ಸ್ವಿಮಿಂಗ್ ಪೂಲ್ ಬರುತ್ತದೆ! ಫೀಸಿನ ಕೋಟಲೆ ಇಲ್ಲ, ಟೈಮಿಂಗಿನ ಹಂಗಿಲ್ಲ, ದಿಸ್ ಈಸ್ ಲೈಫ್" ಎನ್ನುತ್ತಾ ಈಜಿ ದೂರ ಸರಿದನವ.

ವಿಶಿಯಾದ ಬುದ್ಧಿಜೀವಿಗೂ ಇದೇ ಪ್ರಶ್ನೆಯನ್ನು ಒಗೆದೆ. "ಇದನ್ನು ಪುಲಕೇಶಿ ನಗರ ಎಂದು ಕರೆಯುತ್ತಿದ್ದಾರೆ. ಕೂಡಲೆ ಇದರ ಹೆಸರನ್ನು ಬದಲಿಸಬೇಕು" ಎಂದನವ.

"ನೆನೆದಾಗ ನಿಮ್ಮ ಮನದಲ್ಲಿ ಬರುವ ಆಲೋಚನೆ ಇದೇ ಏನು?"

"ಹೌದು. ಮನೆಗೆ ನೀರು ನುಗ್ಗಿದರೂ ಪ್ರತಿಭಟಿಸದ ಜನರಿರುವ ಬಡಾವಣೆಗೆ ಪುಲಕೇಶಿಯಂತಹ ವೀರನ ಹೆಸರು ಸರಿಯಲ್ಲ, ಪುಕ್ಕಲೇಶಿ ನಗರ ಎಂದೋ, ಮಳೆಗಾಲದ ಬಂದೊಡನೆ ಎಲ್ಲರೂ ಈಜಲೇಬೇಕಾದ್ದರಿಂದ ಈಜೀಪುರ ಎಂದೋ ಹೆಸರಿಸುವುದು ಸೂಕ್ತ" ಎಂದನವ.

ಮನೆಗೆ ಬಂದೆ. "ನೆನೆದವರ ಮನದಲ್ಲಿ ಏನಿರುತ್ತದೆಂದು ನಿನ್ನ ಅಭಿಪ್ರಾಯ?" ಎಂದು ಮಡದಿಯನ್ನು ಕೇಳಿದೆ.

"ಮತ್ತೆ ನೆನೆಯಬೇಕೆಂಬ ಕಾತುರ ಇರುತ್ತದೆ. ಮೂರು ದಿನದಿಂದ ಕಾರ್ಪೊರೇಷನ್ ನೀರು ಬಂದಿಲ್ಲ, ಸಂಪ್ ಖಾಲಿ ಇದೆ. ವಾಟರ್ ಸಪ್ಲೈ ಡಿಪಾರ್ಟ್ಮೆಂಟಿಗೆ ಹೋಗಿ ಟ್ಯಾಂಕರನ್ನು ಹಿಡಿದುಕೊಂಡು ಬನ್ನಿ, ಮಿಂದ ನಂತರ ನಿಮ್ಮ ಪ್ರಶ್ನೆಗೆ ಉತ್ತರಿಸುತ್ತೇನೆ" ಎಂದಳು ಮಡದಿ.

ಜಲಮಂಡಳಿಗೆ ಬಂದೆ. ಎಲ್ಲೋ ಹೋಗಿರುವ ಟ್ಯಾಂಕರ್ ಇನ್ನೂ ಬಂದಿಲ್ಲ. ಮೂರು ಗಂಟೆಗಳಿಂದ ಬಿರುಬಿಸಿಲಿನಲ್ಲಿ ಬೆವರು ನೆನೆದಿದ್ದೇನೆ. ಬೆವರಿನಿಂದ ನೆನೆದವನ ಮನದಲ್ಲಿ ಮೂಡುತ್ತಿರುವ ಪದಗಳನ್ನು ಶಿಷ್ಟಾಚಾರದ ಕಾರಣ ಬರೆಯಲಾರೆ, ಬರೆಯಲಾರೆ, ಬರೆಯಲಾರೆ.


ಪೆಟ್ರೋಲ್ ಬೆಲೆಯೇರಿಕೆ :ಇಂಧನ ಬಿಕ್ಕಟ್ಟು ವಿವಿಧ ರಾಷ್ಟ್ರಗಳಲ್ಲಿ

ನಾರಾಯಣ ಯಾಜಿ



ಶುಕ್ರವಾರ ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಲೀಟರಿಗೆ ಮೂರು ರೂಪಾಯಿ ಏರಿಸಿದ ಸಂಗತಿ ಅನಿರೀಕ್ಷಿತವೇನೂ ಆಗಿರಲಿಲ್ಲ. ಫೆಬ್ರವರಿ ತಿಂಗಳ ಕೊನೆಯಲ್ಲಿ ಇರಾನಿನ ಮೇಲೆ ಅಮೆರಿಕಾದ ಪ್ರವಾಹ ನಂತರ ಹಾರ್ಮೋಜ್ ಜಲಸಂಧಿಯ ಬಿಕ್ಕಟ್ಟು ಕೇವಲ ಭಾರತಕ್ಕಲ್ಲ, ಜಗತ್ತಿಗೇ ಒಕ್ಕರಿಸಿದೆ. ಇರಾನ್ ಈ ಜಲಸಂಧಿಯ ಮೇಲೆ ತನ್ನ ಹಿಡಿತವನ್ನು ಬಿಗಿಮಾಡಿದೆ. ಉತ್ಸಾಹದಿಂದ ಯುದ್ಧಕ್ಕೆ ಮುನ್ನುಗ್ಗಿದ ಟ್ರಂಪಣ್ಣ ಈಗ ಯುದ್ಧವನ್ನು ನಿಲ್ಲಿಸುವ ಉಪಾಯಕ್ಕಾಗಿ ಚೈನಾಕ್ಕೆ ಹೋಗಿದ್ದಾರೆ. ಜಗತ್ತಿನ ಎಲ್ಲಾ ದೇಶಗಳಿಗೂ ಈ ಯುದ್ಧ ನಿಂತರೆ ಸಾಕಾಗಿದೆ. ಯುದ್ಧ ನಿಂತರೂ ಸಹ ಪರಿಸ್ಥಿತಿ ಸುಧಾರಿಸಲು ಇನ್ನೂ ಒಂದು ವರ್ಷಗಳವರೆಗೆ ಬೇಕಾಗಬಹುದೆಂದು ಅಂತಾರಾಷ್ಟ್ರೀಯ ರಾಜತಾಂತ್ರಿಕರು ಚಿಂತಿತರಾಗಿದ್ದಾರೆ. ಜಾಗತಿಕವಾಗಿ ಶೇ.20ರಷ್ಟು ತೈಲ ಸಾಗಣೆಯ ಹಾರ್ಮೋಜ್ ಜಲಸಂಧಿಯನ್ನು ತೆರವುಗೊಳಿಸುವುದು ಹೇಗೆ ಎನ್ನುವುದೇ ಇಂದು ಜಗತ್ತನ್ನು ಕಾಡುತ್ತಿರುವ ಪ್ರಶ್ನೆ. ಯುದ್ಧ ಪ್ರಾರಂಭವಾಗುವ ಮೊದಲು ಕಚ್ಚಾ ತೈಲದ ಬೆಲೆ ಬ್ಯಾರೆಲ್ಲಿಗೆ 65 ರಿಂದ 70 ಡಾಲರಿನ ಆಸುಪಾಸಿನಲ್ಲಿದ್ದದ್ದು ಇದೀಗ ಒಮ್ಮೆಲೇ 110 ಡಾಲರ್ ದಾಟಿದೆ. ಯುದ್ಧಕ್ಕಿಂತ ಮೊದಲು ರಷ್ಯಾ ಭಾರತಕ್ಕೆ ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ತೈಲವನ್ನು ನೀಡುತ್ತಿತ್ತು. ಇಷ್ಟೆಲ್ಲ ಸಂಕಟದ ನಡುವೆಯೂ ಜಗತ್ತಿನಲ್ಲಿ ಭಾರತ ಮಾತ್ರ ಜನಸಾಮಾನ್ಯರಿಗೆ ಹೊರೆಯಾಗದಂತೆ ಪೆಟ್ರೋಲಿನ ಬೆಲೆಯನ್ನು ಏರಿಸಿರಲಿಲ್ಲ. ಈ ನಡುವೆ ಯುಪಿಎ ಅವಧಿಯಲ್ಲಿ ಪೆಟ್ರೋಲ್ ಬೆಲೆಯೇರಿಕೆಯನ್ನು ತಡೆಯುವ ಹಿನ್ನೆಲೆಯಲ್ಲಿ ತೈಲ ಕಂಪನಿಗೆ ನೀಡಲಾದ ತೈಲ ಬಾಂಡ್ 1.34 ಲಕ್ಷ ಕೋಟಿ ರೂಪಾಯಿಯನ್ನು ಬಡ್ಡಿ ಸೇರಿಸಿ 2.36 ಲಕ್ಷ ಕೋಟಿ ರೂಪಾಯಿಯನ್ನು ಈ ವರ್ಷದ ಮಾರ್ಚ್ ತಿಂಗಳಲ್ಲಿ ತೈಲ ಕಂಪನಿಗೆ ಮರುಪಾವತಿ ಮಾಡುವ ಒತ್ತಡಕ್ಕೂ ಸರ್ಕಾರ ಸಿಲುಕಿತ್ತು. ಈ ಮೊತ್ತವನ್ನು ಸಂಪೂರ್ಣವಾಗಿ ಮರುಪಾವತಿ ಮಾಡಲಾಗಿದೆ ಎಂದು ತಾ. 12.03.2026 ರಂದು ರಾಜ್ಯಸಭೆಯಲ್ಲಿ ಇಂಧನ ಖಾತೆ ರಾಜ್ಯ ಸಚಿವ ಸುರೇಶ ಗೋಪಿ ಉತ್ತರಿಸಿದ್ದಾರೆ. ಇಷ್ಟೆಲ್ಲಾ ಸಂಕಟದ ನಡುವೆಯೂ ಸರ್ಕಾರ ಅಂತಾರಾಷ್ಟ್ರೀಯವಾಗಿ ತೈಲದ ಬೆಲೆ ಏರಿಕೆಯಾದಾಗಲೂ ಭಾರತದಲ್ಲಿ ಏರಿಸಿರಲಿಲ್ಲ, ಬದಲಾಗಿ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ 10ರೂಪಾಯಿ ಅಬಕಾರಿ ಸುಂಕವನ್ನು ಕಡಿಮೆ ಮಾಡಿತ್ತು. ಈ ಹೊರೆಯನ್ನೂ ಸಹ ತೈಲ ಕಂಪನಿಗಳೇ ಭರಿಸಿದ್ದವು ಹೊರತು ರಾಜ್ಯಸರ್ಕಾರಕ್ಕೆ ಇದರಿಂದ ಏನೂ ತೊಂದರೆ ಆಗಿರಲಿಲ್ಲ. ಜೊತೆಗೆ ಜಾಗತಿಕವಾಗಿ ಸುಮಾರು 3000 ಕಾರ್ಗೋ ಹಡಗುಗಳು ಪ್ರತಿ ತಿಂಗಳೂ ಹಾರ್ಮೋಜ್ ಜಲಸಂಧಿಯಿಂದ ದಾಟುತ್ತಿದ್ದರೆ ಈ ಸಂಖ್ಯೆ ಎಪ್ರಿಲ್ ತಿಂಗಳಲ್ಲಿ ಕೇವಲ 191 ತೈಲ ಟ್ಯಾಂಕರುಗಳು ಹಾರ್ಮುಜ್ ಜಲಸಂಧಿಯನ್ನು ದಾಟಿವೆ ಎಂದು CNN ವರದಿ ಮಾಡಿದೆ. ಇದರಲ್ಲಿ ಭಾರತಕ್ಕೆ 10 ಹಡಗುಗಳು ಸೇರಿವೆ. ಪರಿಣಾಮವಾಗಿ ತೈಲ ಕಂಪನಿಗಳು ಪ್ರತಿದಿನವೂ ಸುಮಾರು 1600 ಕೋಟಿ ರೂಪಾಯಿಯಷ್ಟು ನಷ್ಟವನ್ನನುಭವಿಸುತ್ತಿದ್ದವು. ಆದರೂ ತೈಲಬೆಲೆ ಮತ್ತು ಪೂರೈಕೆ ಭಾರತದಲ್ಲಿ ಸ್ಥಿರವಾಗಿತ್ತು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ಬೆಲೆಗಳು ಗಗನಕ್ಕೇರುತ್ತಿದ್ದಂತೆ, ಪೆಟ್ರೋಲ್ ಬೆಲೆಯು ಆಯಾ ದೇಶಗಳ ಆರ್ಥಿಕವಾಗಿ ಸವಾಲುಗಳನ್ನು ತಡೆದುಕೊಳ್ಳುವ ಶಕ್ತಿ (Symbol of the Economic resilence) ಎಷ್ಟಿದೆ ಎಂದು ಪರೀಕ್ಷಿಸುವ ಸಂಕೇತವಾಯಿತು. ಕೆಲವು ದೇಶಗಳಲ್ಲಿ ಪೆಟ್ರೋಲ್ ಬೆಲೆ ರಾತ್ರೋರಾತ್ರಿ ಏರಿಕೆಯಾದರೆ, ಇನ್ನು ಕೆಲವು ದೇಶಗಳು ತಮ್ಮ ನಾಗರಿಕರನ್ನು ರಕ್ಷಿಸಲು ಸಂಕೀರ್ಣವಾದ ಆರ್ಥಿಕ ರಕ್ಷಾಕವಚಗಳನ್ನು ಬಳಸಿಕೊಂಡವು. ಈ ಕುರಿತು ವಿವರವನ್ನು ಗಮನಿಸೋಣ. ಕೆಳಗೆ ಕೊಟ್ಟಿರುವ ಬೆಲೆಯನ್ನು ಭಾರತೀಯ ರೂಪಾಯಿಗೆ ಪರಿವರ್ತಿಸಲಾಗಿದೆ.



ಯುಎಇ

ಐತಿಹಾಸಿಕವಾಗಿ ಅಗ್ಗದ ಇಂಧನಕ್ಕೆ ಹೆಸರಾಗಿದ್ದ ಯುಎಇಯ ಸಹ ತೈಲಬೆಲೆಯನ್ನು ಏರಿಸದೇ ಇರಲು ಸಾಧ್ಯವಾಗಿಲ್ಲ. ಭಾರತೀಯ ರೂಪಾಯಿಯಲ್ಲಿ ಲೆಕ್ಕ ಹಾಕಿದಾಗ, ಅಲ್ಲಿನ ಬೆಲೆ ಸರಿಸುಮಾರು ರೂ.58.87 ರಿಂದ ರೂ.83.19ಕ್ಕೆ ಅಂದರೆ +41.31% ದಷ್ಟು ಏರಿಕೆಯಾಗಿದೆ. ಇಂದು ಯುಎಇ ಪ್ರತಿ ತಿಂಗಳು ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಬೆಲೆಗಳನ್ನು ಸರಿಹೊಂದಿಸುವುದರಿಂದ, ಇದು ಇನ್ನಷ್ಟು ಏರಿಕೆಯಾಗಬಹುದು.

ಅಮೆರಿಕದ ಅಸ್ಥಿರತೆ

ಈ ಬಿಕ್ಕಟ್ಟಿಗೆ ಅತಿ ಹೆಚ್ಚು ಏರಿಸಿದ ದೇಶವೆಂದರೆ ಅಮೆರಿಕ. ಸಂಪೂರ್ಣವಾಗಿ ಮಾರುಕಟ್ಟೆ ಆಧಾರಿತ ವ್ಯವಸ್ಥೆಯನ್ನು ಹೊಂದಿರುವ ಅಮೆರಿಕದಲ್ಲಿ ಚಿಲ್ಲರೆ ಮಾರಾಟದ ಬೆಲೆಗಳು ಸುಮಾರು 60% ರಷ್ಟು ಏರಿಕೆಯಾದವು. ಅಂದರೆ ಬೆಲೆಯು ರೂ.61.79 ರಿಂದ ಗರಿಷ್ಠ ರೂ.98.53 ಕ್ಕೆ ಜಿಗಿದಿದೆ.

ಸಬ್ಸಿಡಿಯ ರಕ್ಷಣೆ ಕೊಟ್ಟ ಸೌದಿ ಅರೇಬಿಯಾ

ಮತ್ತೊಂದೆಡೆ ಸೌದಿ ಅರೇಬಿಯಾ ಸಂಪೂರ್ಣ ವಿಭಿನ್ನವಾದ ಹಾದಿಯನ್ನು ಅನುಸರಿಸಿತು. ಅಲ್ಲಿನ ಸರ್ಕಾರವು ಇಂಧನಕ್ಕೆ ಭಾರಿ ಸಬ್ಸಿಡಿ ನೀಡುವ ಮೂಲಕ ತನ್ನ ದೇಶದ ಆರ್ಥಿಕತೆಯನ್ನು ಜಾಗತಿಕ ಏರಿಳಿತಗಳಿಂದ ಸಂಪೂರ್ಣವಾಗಿ ಮುಕ್ತಗೊಳಿಸಿತು. ಅಲ್ಲಿ ಪೆಟ್ರೋಲ್ ಬೆಲೆ ರೂ.51.87 ಕ್ಕೇ ಸ್ಥಿರವಾಗಿತ್ತು. ಈ ಮಾದರಿಯು ಕೇವಲ ಬೃಹತ್ ಪ್ರಮಾಣದಲ್ಲಿ ತೈಲ ರಫ್ತು ಮಾಡುವ ದೇಶಗಳಿಗೆ ಮಾತ್ರ ಸಾಧ್ಯ.

ಚೀನಾದ 'ಹೈಬ್ರಿಡ್' ಮಾದರಿ ಮತ್ತು ಬೆಲೆ ನಿಯಂತ್ರಣ

ಚೀನಾವು ಅಮೆರಿಕದಂತೆ ಸಂಪೂರ್ಣ ಮುಕ್ತ ಮಾರುಕಟ್ಟೆಯನ್ನಾಗಲಿ ಅಥವಾ ಸೌದಿ ಅರೇಬಿಯಾದಂತೆ ಸಂಪೂರ್ಣ ಸಬ್ಸಿಡಿಯನ್ನಾಗಲಿ ಅವಲಂಬಿಸಿಲ್ಲ. ಬದಲಾಗಿ, ಇದು 'ಪ್ರೈಸ್ ಸೀಲಿಂಗ್' (ಬೆಲೆ ಏರಿಕೆಯ ಗರಿಷ್ಠ ಮಿತಿ) ಎಂಬ ತಂತ್ರವನ್ನು ಬಳಸುತ್ತದೆ. ಯುದ್ಧಕ್ಕೂ ಮೊದಲು ಚೀನಾದಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ ಸರಿಸುಮಾರು 8.20 ಯುವಾನ್ (ಭಾರತೀಯ ರೂಪಾಯಿಯಲ್ಲಿ ಸುಮಾರು 95) ಇತ್ತು. ಯುದ್ಧದ ನಂತರ ಇದು 9.15 ಯುವಾನ್‌ಗೆ (ಸುಮಾರು ರೂ.106.14) ತಲುಪಿತು. ಅಂದರೆ ಬೆಲೆಯಲ್ಲಿ ಸುಮಾರು 11.58% ರಷ್ಟು ಏರಿಕೆಯಾಯಿತು.

ಚೈನಾದ ಬೆಲೆ ನಿಯಂತ್ರಣ ತಂತ್ರ

ಜಾಗತಿಕವಾಗಿ ಕಚ್ಚಾ ತೈಲದ ಬೆಲೆ ಒಂದು ನಿರ್ದಿಷ್ಟ ಮಟ್ಟವನ್ನು (ಬ್ಯಾರೆಲ್‌ಗೆ 130) ದಾಟಿದಾಗ, ಚೀನಾ ಸರ್ಕಾರವು ತನ್ನ ದೇಶದ ಚಿಲ್ಲರೆ ಮಾರಾಟದ ಬೆಲೆಗಳನ್ನು ಏರಿಸದಂತೆ ನಿರ್ಬಂಧ ಹೇರುತ್ತದೆ. ಅಲ್ಲದೆ, ತನ್ನ ಬೃಹತ್ 'ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್'ನಿಂದ ತೈಲವನ್ನು ಬಿಡುಗಡೆ ಮಾಡುವ ಮೂಲಕ ಬೆಲೆಯನ್ನು ನಿಯಂತ್ರಣದಲ್ಲಿಡುತ್ತದೆ.

ಇನ್ನು ಪಾಕಿಸ್ತಾನದಲ್ಲಿ ಪೆಟ್ರೋಲ್ ಬೆಲೆ ಪಾಕಿಸ್ತಾನದ ರೂಪಾಯಿಯಲ್ಲಿ ರೂ. 414 ರೂಪಾಯಿ ದಾಟಿದ್ದು ಭಾರತೀಯ ರೂಪಾಯಿಯಲ್ಲಿ ಅದರ ಮೌಲ್ಯ 179 ರೂಪಾಯಿಗಳಾಗುತ್ತವೆ. ಇನ್ನೊಂದು ಬಹುಮುಖ್ಯವಾದ ವಿಷಯವೆಂದರೆ ಪೆಟ್ರೋಲಿನ ಮೇಲೆ ಲೀಟರೊಂದಕ್ಕೆ ಕೇಂದ್ರ ಅಬಕಾರಿ ಸುಂಕ ರೂ.19.90 (ಸ್ಥಿರ) ವಿದ್ದರೆ ರಾಜ್ಯಗಳು ವಿಧಿಸುವ ಸುಂಕ ಸುಮಾರು ರೂ.15.00-ರೂ.22.00ರಷ್ಟಿದೆ. ಹಾಗಾಗಿ ಬೆಲೆಯೇರಿಕೆಯಲ್ಲಿ ರಾಜ್ಯಗಳ ಪಾಲೂ ಇವೆ ಎನ್ನುವುದನ್ನು ಮರೆಯಬಾರದು.

ಜಾಗತಿಕವಾಗಿ ಈ ಎಲ್ಲ ದೇಶಗಳು ಬೆಲೆಯೇರಿಕೆಯ ಸವಾಲುಗಳನ್ನು ಎದುರಿಸಲು ಸಾಧ್ಯವಾಗದೇ ಬೆಲೆಯೇರಿಕೆಯ ಮಾರ್ಗವನ್ನು ಹಿಡಿದಿರುವುದನ್ನು ಗಮನಿಸಬಹುದು. ಹೆಚ್ಚಿನ ಕಡೆ ಈ ಏರಿಕೆ ಶೇ.40ಕ್ಕಿಂತಲೂ ಹೆಚ್ಚಿರುವಾಗ ಭಾರತದಲ್ಲಿ ಮಾತ್ರ ಕೇವಲ ಶೇ.3.17 ರಷ್ಟು ಏರಿಕೆಯಾಗಿರುವುದಕ್ಕೆ ಕಾರಣ ಈ ದೇಶದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಆಪತ್ಕಾಲಕ್ಕೆಂದು ಪೆಟ್ರೋಲಿನ ದಾಸ್ತಾನನ್ನು ಸುಮಾರು 75 ದಿನಗಳ ತನಕ ಇರುವಂತೆ ನೋಡಿಕೊಂಡಿರುವುದು.

ಇದೀಗ ನಮ್ಮ ದೇಶದಲ್ಲಿ 69ದಿನಗಳ ತನಕ ಸಾಲುವಷ್ಟು ಪೆಟ್ರೋಲ್ ಮತ್ತು 45 ದಿನಗಳ ತನಕ ಸಾಕಾಗುವಷ್ಟು ಅಡುಗೆ ಅನಿಲದ ದಾಸ್ತಾನು ಇರುವುದು ಸಂತಸದ ಮತ್ತು ಸಮಾಧಾನಕರ ಸಂಗತಿ. ಇದನ್ನು ಅತ್ಯಂತ ಜತನದಿಂದ ಉಪಯೋಗಿಸಬೇಕಾದ ಜವಾಬ್ದಾರಿ ಸರ್ಕಾರದ ಮೇಲಿದೆ. ಈ ಕಾರಣದಿಂದ ಸರ್ಕಾರ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಅವಲಂಬಿಸುವ ಸಹಿತವಾಗಿ ಮನೆಯಿಂದಲೇ ಕೆಲಸ ಮೊದಲಾದ ಸಲಹೆಗಳನ್ನು ನೀಡಿರುವುದು. ಅನಿವಾರ್ಯ ಪರಿಸ್ಥಿತಿಯಲ್ಲಿ ಜನಸಾಮಾನ್ಯರಿಗೆ ಹೊರೆಯಾಗದಂತೆ ಅಲ್ಪ ಪ್ರಮಾಣದಲ್ಲಿ ಬೆಲೆಯೇರಿಸಿದ ಸರ್ಕಾರದ ನಿಲುವು ಈ ಕಠಿಣ ಪರಿಸ್ಥಿತಿಯಲ್ಲಿ ಅನಿವಾರ್ಯ ಕೂಡ.

ನುಡಿದಂತೆ ನಡೆವ ಪ್ರಧಾನಿ



ನಮ್ಮ ದೇಶದಲ್ಲಿ ಅತ್ಯಂತ ಸುಲಭದ, ಯಾವುದೇ ರಿಸ್ಕ್ ಇಲ್ಲದ ಕೆಲಸ ಅಂದರೆ ಉಪದೇಶ ಮಾಡುವುದು. ಹಾಗೆ ಮಾಡಬೇಡಿ, ಹೀಗೆ ಮಾಡಬೇಡಿ ಮುಂತಾಗಿ ಸಲಹೆ ನೀಡುವುದು ಸುಲಭ. ಈ ಎಲ್ಲ ಉಪದೇಶಗಳು ನುಡಿದವರ ನಡೆಯಲ್ಲಿ ಇದ್ದೀತೆ ಅಂತ ಕೇಳಿದರೆ ಸರಿಯಾದ ಉತ್ತರ ಸಿಗಲಿಕ್ಕಿಲ್ಲ. ನಮ್ಮ ಹಿರಿಯರೆನ್ನುವವರು, ಅಧಿಕಾರದಲ್ಲಿರುವವರು, ಸಮಾಜದಲ್ಲಿ ಪ್ರತಿಷ್ಠಿತವ್ಯಕ್ತಿಗಳೆನಿಸಿಕೊಂಡವರಲ್ಲಿ ಅನೇಕರು ಕೇವಲ ನುಡಿಯಲ್ಲಷ್ಟೇ ಸುಭಗರು. ಆಚರಣೆಯಲ್ಲಲ್ಲ.

ಆದರೆ, ನಮ್ಮ ಪ್ರಧಾನಿ ಮೋದಿಯವರು ನುಡಿದಂತೆ ನಡೆದುಕೊಳ್ಳುತ್ತಿದ್ದಾರೆ ಎಂಬುದು ಸಂತೋಷಕರ ಮತ್ತು ಸ್ಫೂರ್ತಿದಾಯಕ. ಕೆಲ ದಿನಗಳ ಹಿಂದಷ್ಟೇ ಪಂಚಸೂತ್ರದ ಜಪ ಪಠಿಸಿದಾಗ, ಮುಖ್ಯವಾಗಿ ಕಂಡಿದ್ದು ಮಿತ ಇಂಧನ ಬಳಕೆ. ಸದ್ಯದ ಪರಿಸ್ಥಿತಿಯಲ್ಲಂತೂ ಇದು ತೀರಾ ಆವಶ್ಯಕ. ಅದನ್ನೇ ಮೋದಿಯವರೂ ಅನುಸರಿಸುತ್ತಿದ್ದಾರೆ.ತಮ್ಮ ಬೆಂಗಾವಲು ವಾಹನಗಳ ಸಂಖ್ಯೆ ಕಡಿಮೆ ಮಾಡಿದ್ದಾರೆ. ನೋಡಲು ಇದೇನು ಮಹಾ ಅಂತ ಅನಿಸಿದರೂ, ಅವರ ಈ ನಡೆ ಕೇಂದ್ರ ಮತ್ತು ರಾಜ್ಯ ಸಚಿವರ ಮೇಲೂ ಪರಿಣಾಮ ಬೀರಿದೆ. ಎನ್‌ಡಿಎ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳೂ ಇದೇ ದಾರಿ ತುಳಿಯಲು ನಿರ್ಧರಿಸಿದ್ದಾರೆ. ಇದನ್ನೇ, ಇನ್ನು ಮುಂದೆ, ದೇಶದ ಹಲವಾರು ಉದ್ಯಮಿಗಳು, ಶ್ರೀಮಂತರೂ ಅನುಕರಿಸಬಹುದು. ಮೋದಿ ಕರೆಯ ಬಳಿಕ ಕೆಲವರು ಎಲೆಕ್ಟ್ರಿಕ್ ವಾಹನಗಳನ್ನು ಖರೀದಿಸುತ್ತಿರುವುದು ಕಂಡು ಬಂದಿದೆ. ಇದು ಸಣ್ಣ ವಿಷಯ ಅಲ್ಲವೇ ಅಲ್ಲ, ಹೇಳುವುದೊಂದು; ಮಾಡುವುದು ಇನ್ನೊಂದು ಎಂಬುದು ಹೆಚ್ಚಿನವರ ಜಾಯಮಾನವಾಗಿರುವಾಗ ಪ್ರಧಾನಿ ಮೋದಿಯವರು ಆದರ್ಶ ನಡೆ ಇಟ್ಟಿದ್ದಾರೆ.

ಇಂದು ವಿಶ್ವವೇ ಒಂದು ರೀತಿಯ ಅಸ್ಥಿರತೆಯಲ್ಲಿದೆ. ಅದಕ್ಕೆ ಕಾರಣಗಳನ್ನೂ ವಿವರಿಸಬೇಕಾಗಿಲ್ಲ, ಇಂತಹ ಕಠಿಣ ಸಮಯದಲ್ಲಿ ಕೆಲ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವುದೂ ದೇಶದ ಹಿತ ದೃಷ್ಟಿಯಿಂದ ಒಳಿತೇ. ಪ್ರಧಾನಿಯವರ ದಾರಿಯನ್ನು ದೇಶವಾಸಿಗಳೆಲ್ಲ ತುಳಿದರೆ, ಭಾರತವು ಈಗಿನ ಬಿಕ್ಕಟ್ಟನ್ನು ಸಮರ್ಥವಾಗಿ ನಿಭಾಯಿಸುವುದರಲ್ಲಿ ಸಂಶಯವೇ ಇಲ್ಲ!

-ಶಂಕರನಾರಾಯಣ ಭಟ್, ಮಾಡಗೇರಿ

ರಾಜಕಾರಣಿಗಳ ಸ್ಪಂದನೆ ಇರಲಿ

ಇತ್ತೀಚಿನ ದಿನಗಳಲ್ಲಿ ರಾಜಕಾರಣಿಗಳ ಹೇಳಿಕೆಗಳು ಸಾಮಾಜಿಕ ಮಾಧ್ಯಮಗಳಲ್ಲಿ ಕ್ಷಣಾರ್ಧದಲ್ಲೇ ಲಕ್ಷಾಂತರ ಜನರಿಗೆ ತಲುಪುತ್ತಿವೆ. ಆ ಹೇಳಿಕೆಗಳಿಗೆ ಜನರು ಸಕಾರಾತ್ಮಕವಾಗಿಯೂ, ನಕಾರಾತ್ಮಕವಾಗಿಯೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ.ವಾಸ್ತವವಾಗಿ,ಈಪ್ರತಿಕ್ರಿಯೆಗಳು ಜನಮನದ ನೇರ ಪ್ರತಿಬಿಂಬವಾಗಿದ್ದು, ಆಡಳಿತದ ಯಶಸ್ಸು- ವಿಫಲತೆಗಳನ್ನು ಅಳೆಯುವ ಕನ್ನಡಿ ಎನ್ನಬಹುದು.

ಆದರೆ ವಿಷಾದಕರ ಸಂಗತಿಯೇನೆಂದರೆ, ಬಹುತೇಕ ರಾಜಕಾರಣಿಗಳು ಅಥವಾ ಅವರ ಮಾಧ್ಯಮ ಕಾರ್ಯದರ್ಶಿಗಳು ಜನರ ಕಾಮೆಂಟ್‌ಗಳನ್ನು ಗಮನಿಸಿ ಪ್ರತಿಕ್ರಿಯಿಸುವ ಮನೋಭಾವ ತೋರಿಸುತ್ತಿಲ್ಲ, ಪ್ರೆಸ್ ಮೀಟ್‌ಗಳಲ್ಲಿ ಹೇಳಿಕೆ ನೀಡುವುದು ಮಾತ್ರವೇ ತಮ್ಮ ಕರ್ತವ್ಯ ಎಂದು ಅವರು ಭಾವಿಸಿದಂತಾಗಿದೆ.

ನೇರವಾಗಿ ತಮ್ಮ ಸಮಸ್ಯೆಗಳನ್ನು ಹೇಳಲು ಸಾಧ್ಯವಾಗದ ಅನೇಕ ಸಾಮಾನ್ಯ ಜನರು ಸಾಮಾಜಿಕ ಮಾಧ್ಯಮದ ಕಾಮೆಂಟ್‌ಗಳ ಮೂಲಕವೇ ತಮ್ಮ ನೋವು, ಅಸಮಾಧಾನ ಮತ್ತು ನಿರೀಕ್ಷೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಆದ್ದರಿಂದ ರಾಜಕಾರಣಿಗಳು ತಮ್ಮ ಹೇಳಿಕೆಗಳಿಗೆ ಬಂದ ಪ್ರತಿಕ್ರಿಯೆಗಳನ್ನು ಕೇವಲ ಟೀಕೆ ಎಂದು ತಳ್ಳಿಹಾಕದೇ, ಜನರ ನಾಡಿ ಮಿಡಿತವನ್ನು ಅರಿಯುವ ಅವಕಾಶವಾಗಿ ನೋಡಬೇಕು.

ಜನರ ಅಭಿಪ್ರಾಯಗಳನ್ನು ಆಲಿಸಿ, ಅವುಗಳ ಆಧಾರದ ಮೇಲೆ ತಮ್ಮ ಕಾರ್ಯವೈಖರಿಯನ್ನು ಪರಿಶೀಲಿಸಿ ತಿದ್ದಿಕೊಳ್ಳುವ ರಾಜಕಾರಣಿಗಳೇ ನಿಜವಾದ ಜನನಾಯಕರು ಆಗಲು ಸಾಧ್ಯ. ಸಾಮಾಜಿಕ ಮಾಧ್ಯಮವನ್ನು ಕೇವಲ ಪ್ರಚಾರದ ವೇದಿಕೆಯಾಗಿಯೇ ಅಲ್ಲ, ಜನಸಂಪರ್ಕ ಮತ್ತು ಆತ್ಮಪರಿಶೀಲನೆಯ ಸಾಧನವಾಗಿಯೂ ಬಳಸುವ ಅಗತ್ಯ ಇಂದು ಹೆಚ್ಚಾಗಿದೆ.

- ಜಿ.ನಾಗೇಂದ್ರ ಕಾವೂರು, ಸಂಡೂರು

ಟ್ರಂಪ್‌ನ್ನು ನಂಬಬಾರದು

ಒಬ್ಬ ಜಾಗತಿಕ ಮುಖಂಡ ಹೇಗಿರಬಾರದೋ ಅದಕ್ಕೆ ಉದಾಹರಣೆಯಂತಿದ್ದಾರೆ ಟ್ರಂಪ್. ಟ್ರಂಪ್ ತಮ್ಮ ವೈಯಕ್ತಿಕ ಲಾಭಕ್ಕಾಗಿ ತಮ್ಮ ಸ್ನೇಹಿತರನ್ನೆ ಬಲಿಕೊಡಲು ಸಿದ್ಧರು. ಭಯೋತ್ಪಾದಕ ರಾಷ್ಟ್ರ ಪಾಕಿಸ್ತಾನಕ್ಕೆ ಅವರು ನೀಡುತ್ತಿರುವ ಪ್ರಾಮುಖ್ಯತೆ ಇದನ್ನು ಸಾಬೀತುಪಡಿಸುತ್ತದೆ. ಇದೇವೇಳೆ, ತಮ್ಮ ಲಾಭಕ್ಕಾಗಿ ಅವರು ತೈವಾನನ್ನು ಕಬಳಿಸಲು ಚೀನಾಕ್ಕೆ ಅವಕಾಶ ಮಾಡಿಕೊಡುವ ಸಾಧ್ಯತೆಯೂ ಇದೆ. ಈವರೆಗೆ ತೈವಾನಿನ ರಕ್ಷಣೆಗೆ ಸದಾ ಸಿದ್ಧ ಎಂದು ಅಮೆರಿಕವು ಹೇಳುತ್ತಿದ್ದರೆ, ತೈವಾನಿಗೆ ಚೀನಾದ ವಿರುದ್ಧ ರಕ್ಷಣೆಗಾಗಿ ಸಾಕಷ್ಟು ಶಸ್ತ್ರಾಸ್ತ್ರಗಳನ್ನು ಒದಗಿಸುತ್ತಿದ್ದರೆ, ಟ್ರಂಪ್ ಅದೆಲ್ಲವನ್ನು ಈಗ ಬದಿಗೆ ಸರಿಸುತ್ತಿರುವಂತಿದೆ. ಚೀನಾಕ್ಕೆ ಭೇಟಿ ನೀಡಿ ಬಂದ ಮೇಲೆ ಅವರ ವರಸೆಯೇ ಬದಲಾಗಿದ್ದು, ತೈವಾನ್ ಮೇಲೆ ಚೀನಾ ದಾಳಿ ಮಾಡಿದರೆ ತೈವಾನ್ ರಕ್ಷಣೆಗೆ ಅಮೆರಿಕ ಧಾವಿಸುವ ಸಾಧ್ಯತೆಗಳು ಕ್ಷೀಣವಾಗಿರುವಂತೆ ತೋರಿಬರುತ್ತಿದೆ. ಭಾರತವಂತೂ ಟ್ರಂಪ್‌ರನ್ನು ಎಂದಿಗೂ ನಂಬುವಂತಿಲ್ಲ, ಇರಾನ್ ಮೇಲಿನ ಸಮರದ ನೆಪದಲ್ಲಿ ಟ್ರಂಪ್ ತೆಗೆದುಕೊಳ್ಳುತ್ತಿರುವ ಕೆಲವು ನಿರ್ಧಾರಗಳು ಭಾರತದ ಆರ್ಥಿಕ ಪ್ರಗತಿಯನ್ನು ತಡೆಯುವ ಉದ್ದೇಶವನ್ನೂ ಹೊಂದಿರುವಂತಿದೆ.

-ಚಿದಾನಂದ ರಾವ್, ಕುಂದಾಪುರ

ಕಿರುಸುದ್ದಿ

ಬಸ್ ಪಲ್ಟಿ: 25ಕ್ಕೂ ಹೆಚ್ಚು ಪ್ರಯಾಣಿಕರು ಪಾರು

• **ಹಾಸನ:** ಜಿಲ್ಲೆಯ ಅರಸೀಕೆರೆ ತಾಲೂಕಿನಲ್ಲಿ ಶನಿವಾರ ಮುಂಜಾನೆ ಬಸ್ ಅಪಘಾತವೊಂದು ಸಂಭವಿಸಿದ್ದು, ಅದೃಷ್ಟವಶಾತ್ ಭಾರಿ ಪ್ರಮಾಣದ ಪ್ರಾಣಾಪಾಯ ತಪ್ಪಿದೆ. ಬೆಂಗಳೂರಿಗೆ ತೆರಳುತ್ತಿದ್ದ ಕೆಎಸ್ಆರ್‌ಟಿಸಿ ಬಸ್ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಹೊಲಕ್ಕೆ ಪಲ್ಟಿಯಾಗಿದೆ. ಚಾಲಕನ ನಿಯಂತ್ರಣ ತಪ್ಪಿದ ವಾಹನ ಶನಿವಾರ ಬೆಳಗ್ಗೆ ಎಂದಿನಂತೆ ಪ್ರಯಾಣಿಕರನ್ನು ತುಂಬಿಕೊಂಡು ಬೆಂಗಳೂರಿನತ್ತ ಮುನ್ನಡೆಯುತ್ತಿದ್ದ ಸಾರಿಗೆ ಬಸ್, ಅರಸೀಕೆರೆ ತಾಲೂಕಿನ ಗಡಿ ಗ್ರಾಮವಾದ ಯರೇಹಳ್ಳಿ ಸಮೀಪಿಸುತ್ತಿದ್ದಂತೆ ಚಾಲಕನ ನಿಯಂತ್ರಣ ಕಳೆದುಕೊಂಡಿದೆ. ನಿಯಂತ್ರಣ ತಪ್ಪಿದ ರಭಸಕ್ಕೆ ಬಸ್ ರಸ್ತೆಯಿಂದ ಪಕ್ಕದ ಹೊಲಕ್ಕೆ ಉರುಳಿ ಬಿದ್ದಿದೆ.

25ಕ್ಕೂ ಹೆಚ್ಚು ಪ್ರಯಾಣಿಕರು ಪಾರು : ಅಪಘಾತದ ಸಮಯದಲ್ಲಿ ಬಸ್ಸಿನಲ್ಲಿ 25ಕ್ಕೂ ಹೆಚ್ಚು ಪ್ರಯಾಣಿಕರಿದ್ದರು ಎನ್ನಲಾಗಿದೆ. ಬಸ್ ಪಲ್ಟಿಯಾಗುತ್ತಿದ್ದಂತೆ ಪ್ರಯಾಣಿಕರು ತೀವ್ರ ಆತಂಕಕ್ಕೆ ಒಳಗಾಗಿದ್ದರು. ಆದರೆ, ಸುದೈವವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ, ಸಿಲುಕಿಕೊಂಡಿದ್ದ ಎಲ್ಲಾ ಇಪ್ಪತ್ತೈದಕ್ಕೂ ಹೆಚ್ಚು ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಸ್ಥಳೀಯರಿಂದ ರಕ್ಷಣೆ: ಅಪಘಾತದ ಶಬ್ದ ಕೇಳಿ ತಕ್ಷಣವೇ ಸ್ಥಳಕ್ಕೆ ಧಾವಿಸಿದ ಯರೇಹಳ್ಳಿ ಗ್ರಾಮಸ್ಥರು ಹಾಗೂ ಹಾದಿಹೋಕರು ಬಸ್ಸಿನಲ್ಲಿದ್ದ ಪ್ರಯಾಣಿಕರನ್ನು ಹೊರತರಲು ನೆರವಾದರು. ಅಪಘಾತದಲ್ಲಿ ಕೆಲವು ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ತಕ್ಷಣವೇ ಅವರನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಲಾಗಿದೆ. ಸದ್ಯ ಗಾಯಾಳುಗಳು ಪ್ರಾಣಾಪಾಯದಿಂದ ಹೊರಗಿದ್ದಾರೆ ಎಂದು ತಿಳಿದುಬಂದಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದು, ಅಪಘಾತಕ್ಕೆ ನಿಖರವಾದ ಕಾರಣವೇನೆಂಬುದರ ಬಗ್ಗೆ ತನಿಖೆ ಮುಂದುವರೆದಿದೆ.

ಆತ್ಮಹತ್ಯೆಗೆ ಯತ್ನ: ರಕ್ಷಣೆ

• **ಶ್ರೀರಂಗಪಟ್ಟಣ:** ಕೌಟುಂಬಿಕ ಕಾರಣಕ್ಕೆ ಮನನೊಂದು ನದಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸುತ್ತಿದ್ದ ಸುಮಾರು 75 ವರ್ಷದ ಮಹಿಳೆಯೊಬ್ಬರನ್ನು ಪತ್ರಕರ್ತರೊಬ್ಬರು ರಕ್ಷಿಸಿರುವ ಘಟನೆ ವರದಿಯಾಗಿದೆ.ಅಮೇ 15 ರಂದು ಶುಕ್ರವಾರ ಬೆಳಗ್ಗೆ 10.30ರ ಸುಮಾರಿಗೆ ಪಟ್ಟಣದ ವೆಲ್ಲೆಸ್ಲಿ ಸೇತುವೆ ಬಳಿ ನದಿಗೆ ಹಾರಲು ಯತ್ನಿಸುತಿದ್ದ ವೇಳೆ ಪತ್ರಕರ್ತ ಕೆ.ಜಿ.ಲೋಕೇಶ್ ರವರ ಕಣ್ಣಿಗೆ ಕಂಡು ತಕ್ಷಣ ಆಕೆಯನ್ನು ತಡೆಯಲು ಯತ್ನಿಸಿದ್ದಾರೆ. ಅದೇ ವೇಳೆ ಸ್ಥಳಕ್ಕೆ ಬಂದ ಮತ್ತಿಬ್ಬರು ಸ್ಥಳೀಯರಾದ ದರಸಗುಪ್ಪೆ ಗೋಪಾಲ್, ಬೆಟ್ಟೇಗೌಡ ರವರು ಪತ್ರಕರ್ತ ಲೋಕೇಶ್ ರವರ ಸಹಾಯಕ್ಕೆ ಕೈ ಜೋಡಿಸಿ ರಕ್ಷಿಸಿದರು. ಆಕೆಯನ್ನು ಸ್ಥಳೀಯ ಪೊಲೀಸ್ ಠಾಣೆಗೆ ಕರೆತಂದು ಪೊಲೀಸರಿಗೆ ಒಪ್ಪಿಸಿದ್ದಾರೆ. ನಂತರ ಪೊಲೀಸರು ನಡೆಸಿದ ವಿಚಾರಣೆಯಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದ ಮಹಿಳೆ ಮಹದೇವಮ್ಮ ಲೇಟ್ ಗುರುಸಿದ್ದಯ್ಯ, ಚಾಮರಾಜನಗರ ತಾಲೂಕಿನ ಉಮ್ಮತ್ತೂರು ನವರು ಎಂದು ತಿಳಿದುಬಂದಿತ್ತು.

ವಿಶೇಷ ಪ್ರವಚನ

• **ಕೋಲಾರ:** ರಾಮಾಯಣದಿಂದ ಕಲಿಯಬೇಕಿರುವ ಕೌಟುಂಬಿಕ ಮೌಲ್ಯಗಳು ಹಾಗೂ ಧರ್ಮಾನುಷ್ಠಾನ ಕುರಿತು ವಿಶೇಷ ವೇದಾಂತ ಶ್ರವಣ ಕಾರ್ಯಕ್ರಮವನ್ನು ಇದೇ ಭಾನುವಾರ ಮೇ.17 ರಸಂಜೆ 5 ರಿಂದ 7 ರವರೆಗೆ ನಗರದ ಕೋಟೆಯ ಕೋಲಾರ ಶೃಂಗೇರಿ ಶ್ರೀಶಂಕರ ಮಠದಲ್ಲಿ ಆಯೋಜಿಸಲಾಗಿದೆ ಎಂದು ಮಠದ ಧರ್ಮಾಧಿಕಾರಿ ಜಿ.ಎನ್.ರಾಮಕೃಷ್ಣ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಕೋಲಾರ ಸಂಸ್ಕೃತ ಸಂಘದ ಸ್ಥಾಪಕರು ಹಾಗೂ ಕಾಲೇಜು ಶಿಕ್ಷಣ ಇಲಾಖೆಯ ವಿಶ್ರಾಂತ ಜಂಟಿ ನಿರ್ದೇಶಕರಾದ ಮೈಸೂರಿನ ವಿದ್ವಾನ್ ಟಿ.ಎಸ್. ಪ್ರಭಾಕರರವರು ಉಪನ್ಯಾಸ ನೀಡಲಿದ್ದಾರೆ.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಕುಟುಂಬದ ಪರಿಕಲ್ಪನೆ ಏನು, ಕುಟುಂಬ ವ್ಯವಸ್ಥೆಯ ಮಹತ್ವ ಯಾವುದು ಹಾಗೂ ರಾಮಾಯಣದಲ್ಲಿ ಕೌಟುಂಬಿಕ ಮೌಲ್ಯಗಳು ಮತ್ತು ಧರ್ಮಾಚರಣೆಯನ್ನು ಯಾವ ರೀತಿಯಲ್ಲಿ ನಿರೂಪಿಸಲಾಗಿದೆ ಎಂದು ಮಠದ ಅಧ್ಯಕ್ಷ ಜಯರಾಂ ಹಾಗೂ ಧರ್ಮಾಧಿಕಾರಿ ಜಿ.ಎನ್.ರಾಮಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರದ್ದಾದ ಬಾಲ್ಯವಿವಾಹ: ಹೃದಯಘಾತಕ್ಕೆ ಬಾಲಕನ ತಂದೆ ಸಾವು

• **ಚಿಂತಾಮಣಿ:** ತಾಲೂಕಿನ ಬೈರಬಂಡೆ ಗ್ರಾಮದಲ್ಲಿ ಗುರುವಾರ ರಾತ್ರಿ ಆರತಕ್ಷತೆ ಕಾರ್ಯಕ್ರಮ ನಡೆಯುವ ಸಮಯದಲ್ಲಿ ಪೊಲೀಸರು ಭೇಟಿ ನೀಡಿ ಬಾಲ್ಯವಿವಾಹ ಅಪರಾಧ ಕೂಡಲೇ ಮದುವೆಯನ್ನು ನಿಲ್ಲಿಸಲು ಸೂಚಿಸಿ ಹೊರಟ್ಟಿದ್ದು, ಇದಾದ ನಂತರ ಬಚ್ಚಹಳ್ಳಿ ಪೊಲೀಸರು ಸ್ಥಳಕ್ಕೆ ಧಾವಿಸಿ ಬಾಲ್ಯವಿವಾಹ ಬಗ್ಗೆ ಅರಿವು ಮೂಡಿಸಿ ಹೊರಟ ನಂತರ ವರನ ತಂದೆ ವೆಂಕಟರವಣಪ್ಪರಿಗೆ ಹೃದಯಘಾತವಾಗಿದ್ದು ಹೃದಯಾಘಾತಕ್ಕೆ ಒಳಗಾದ ವ್ಯಕ್ತಿ ವೆಂಕಟರವಣಪ್ಪರನ್ನು ಚಿಂತಾಮಣಿ ಡೆಕ್ಕನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಮಾರ್ಗ ಮಾಧ್ಯದಲ್ಲಿ ವೆಂಕಟರವಣಪ್ಪ ಸಾವನ್ನಪ್ಪಿದರೆ ಇದಕ್ಕೆ ಮುಖ್ಯ ಕಾರಣ ಪೊಲೀಸರೆಂದು ಠಾಣೆಯ ಮುಂದೆ ಶವವಿಟ್ಟು ಪ್ರತಿಭಟನೆ ಮಾಡಲಾಯಿತು.

ಕೆರೆಗೆ ಹೋಟೆಲ್, ಕಲ್ಯಾಣಮಂಟಪದ ತ್ಯಾಜ್ಯ | ದಂಡ ಎಚ್ಚರಿಕೆ ಫಲಕ ಅಳವಡಿಕೆಗೆ ಒತ್ತಾಯ | 98 ಹೆಕ್ಟೇರ್ ವಿಶಾಲ

ಕೆರೆ ಅಂಗಳಕ್ಕೆ ಕಸದ ರಾಶಿ; ನೀರು ಕಲುಷಿತ

▸ ತಾವರೆಕೆರೆ ಟಿ.ನಾಗರಾಜ್

ದಿಗಂತ ವಿಶೇಷ

• **ತಾವರೆಕೆರೆ:** ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯುವ ಪರಿಪಾಠ ನಿಲ್ಲಬೇಕು, ಸಾರ್ವಜನಿಕರು ನಿಗದಿತ ಸ್ಥಳಗಳಲ್ಲಿ ಮಾತ್ರ ಕಸ ಹಾಕಬೇಕು, ಇದನ್ನು ಸಂಬಂಧಪಟ್ಟವರು ವಿಲೇವಾರಿ ಮಾಡಬೇಕು, ಹಾಗಾದಾಗ ಸ್ವಚ್ಛತೆ ಕಾಪಾಡಲು ಸಾಧ್ಯವಾಗುತ್ತದೆ. ಆದರೆ ತಾವರೆಕೆರೆಯ ಗ್ರಾಮೀಣ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿಯ ಇಕ್ಕೆಲಗಳಲ್ಲಿ ತ್ಯಾಜ್ಯ ಹಾಕುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅದರಲ್ಲೂ ಕೆರೆ ಅಂಗಳದಲ್ಲಿ ಕಸ ಹಾಕುತ್ತಿದ್ದು ಇದರಿಂದ ಕೆರೆ ನೀರು ಕಲುಷಿತವಾಗುತ್ತಿದ್ದು, ಜಲಚರಗಳಿಗೆ ಹಾನಿಯಾಗುವುದರ ಜೊತೆಗೆ ಉತ್ತಮ ಪರಿಸರ ಹಾಳಾಗುತ್ತಿದೆ.

ನಂದಗುಡಿ ಹೋಬಳಿ ತಾವರೆಕೆರೆ ಗ್ರಾಮ ಪಂಚಾಯಿತಿಯ ರಾಷ್ಟ್ರೀಯ ಹೆದ್ದಾರಿ 75ರ ಪಕ್ಕದಲ್ಲಿರುವ ಕೆರೆಯ ಅಂಗಳದಲ್ಲಿ ಕಸದ ರಾಶಿ ತುಂಬಿದ್ದು ಇದರಿಂದ ಕೆರೆಯ ನೀರು ಕಲುಷಿತವಾಗುವ ಆತಂಕ ಎದುರಾಗಿದೆ. ಕೆರೆಯ ಪಕ್ಕದಲ್ಲಿ ಪ್ರತಿಷ್ಠಿತ ಹೋಟೆಲ್‌ಯಿದ್ದು ಇದರಲ್ಲಿ ಪಾರ್ಟಿ ಹಾಲ್, ಕೆಲವು ಕಲ್ಯಾಣ ಮಂಟಪಗಳಲ್ಲಿ ಮದುವೆ ಸಮಾರಂಭಗಳು ಕಾರ್ಯಕ್ರಮಗಳು ನಡೆದ ನಂತರ ಊಟ ತಿಂದ ನಂತರ ಎಲೆಗಳ ಜೊತೆಗೆ ಉಳಿದ ಆಹಾರ ಪದಾರ್ಥಗಳ ಜೊತೆಗೆ ಪ್ಲಾಸ್ಟಿಕ್ ಸಮೇತ ಕೆರೆಗೆ ಸುರಿಯುತ್ತಿದ್ದಾರೆ. ಇದರ ಜೊತೆಗೆ ಕೆಲವು ಕಾರ್ಖಾನೆಗಳ ಒಣ ತ್ಯಾಜ್ಯ ವಸ್ತುಗಳನ್ನು ರಾತ್ರಿಯ ವೇಳೆ ತಂದು ಸುರಿಯಲಾಗುತ್ತಿದೆ. ಕಸ ಕೆರೆ ನೀರಿಗೆ ಸೇರುತ್ತಿದೆ.



ಈ ತ್ಯಾಜ್ಯದಲ್ಲಿ ಮನೆಗಳಲ್ಲಿನ ಒಣ ಮತ್ತು ಹಸಿ ಕಸವನ್ನು ಪ್ಲಾಸ್ಟಿಕ್ ಕವರ್‌ಗಳಲ್ಲಿ ತುಂಬಿ ಕೆಲವು ಕಿಡಿಗೇಡಿಗಳು ಇಲ್ಲಿ ಎಸೆದು ಹೋಗುತ್ತಿದ್ದಾರೆ. ಕೆರೆಯ ಕೆಲವು ಭಾಗದಲ್ಲಿ ಹಸಿರು ಹುಲ್ಲು ಎದ್ದುಕಾಣುತ್ತಿದ್ದು, ದನ ಕರುಗಳು, ಕುರಿ ಮೇಕೆಗಳು ಬಂದು ತಿನ್ನುವ ಸಂದರ್ಭದಲ್ಲಿ ಪ್ಲಾಸ್ಟಿಕ್ ಕವರ್ ತಿಂದು ಕೆಲವು ಮೃತಪಟ್ಟಿರುವ ಉದಾಹನೆಗಳು ಉಂಟು.

ಈ ಕೆರೆ ಸುಮಾರು 98 ಹೆಕ್ಟೇರ್ ವಿಶಾಲವಾದ ಜಾಗವನ್ನು ಹೊಂದಿದ್ದು, ಕೆಸಿ ವ್ಯಾಲಿ ನೀರಿನಿಂದ ಕೆರೆ ತುಂಬಿ ತುಳುಕುತ್ತಿದೆ, ಅದರಲ್ಲೂ ಹೊಸಕೋಟೆ ತಾಲೂಕಿನಲ್ಲಿ ದೊಡ್ಡಅಮಾನಿ ಕೆರೆ ಬಿಟ್ಟರೆ ಎರಡನೆಯ ಅತೀ ದೊಡ್ಡ ಕೆರೆ ಇದಾಗಿದೆ. ಇದರಿಂದಾಗಿ

> ಈಗಾಗಲೇ ನಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಕಸವನ್ನು ಟ್ರ್ಯಾಕ್ಟರ್ ಮೂಲಕ ಸಾಗಿಸುತ್ತಿದ್ದೇವೆ. ಎಲ್ಲೆಂದರಲ್ಲಿ ಕಸ ಎಸೆಯದಂತೆ ಜನರಲ್ಲಿ ಜಾಗೃತಿ ಮೂಡಿಸಿ ಕಸ ವಿಲೇವಾರಿಗೆ ಸ್ಥಳ ನಿಗದಿ ಪಡಿಸಿದ್ದೇವೆ ಆದರೂ ಹೋಟೆಲ್, ಪಾರ್ಟಿಹಾಲ್ ಕೆಲವು ಕಲ್ಯಾಣ ಮಂಟಪಗಳು ತ್ಯಾಜ್ಯ ಸುರಿಯುತ್ತಿರುವುದು ನಮ್ಮ ಗಮನಕ್ಕೆ ಬಂದಿರುವುದಿಲ್ಲ, ಕೂಡಲೇ ನಮ್ಮ ಸಿಬ್ಬಂದಿಯನ್ನು ಕಳಿಸಿ ಸ್ಥಳ ಪರಿಶೀಲಿಸಿ ಕಸ ಹಾಕದಂತೆ ಕ್ರಮ ವಹಿಸುತ್ತೇವೆ, ಕೆರೆ ಮಾಲಿನ್ಯವಾಗದಂತೆ ಗಮನಹರಿಸಲಾಗುವುದು.
> ■ ಮುನಿಗಂಗಯ್ಯ, ಪಿಡಿಒ

ಅಂತರ್ಜಲ ಸುತ್ತಮುತ್ತ ಗ್ರಾಮಗಳಲ್ಲಿ ವೃದ್ಧಿಯಾಗಿದ್ದು, ನೀರಿನ ಸಮಸ್ಯೆ ಹಾಗೂ ರೈತರ ತೋಟಗಳಲ್ಲಿ ಬೆಳೆ ಬೆಳೆಯಲು ಅನುಕೂಲವಾಗಿದೆ. ಇದು ಈ ಭಾಗದ ಆಶಾ ಕಿರಣವಾಗಿ ರೈತರ ಪಾಲಿನ ದೈವವಾಗಿದೆ ಎಂದರು ತಪ್ಪಾಗಲಾರದು.

ಇಲ್ಲಿ ಕಸ ಹಾಕುವವರಿಗೆ ದಂಡ ವಿಧಿಸುವುದಾಗಿ ಪಂಚಾಯಿತಿಯಿಂದ ನಾಮಫಲಕ ಅಳವಡಿಸಿದರೆ ಸಮಸ್ಯೆ ಬಗೆಹರಿಯಬಹುದು, ಈ ಬಗ್ಗೆ ಶೀಘ್ರವಾಗಿ ಕ್ರಮಕೈಗೊಳ್ಳಬೇಕು, ಅಲ್ಲದೆ ಹತ್ತಿರದಲ್ಲಿರುವ ಹೋಟೆಲ್, ಕಲ್ಯಾಣ ಮಂಟಪ ಮಾಲೀಕರನ್ನು ಪತ್ತೆ ಹಚ್ಚಿ ನೋಟಿಸ್ ನೀಡಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಸಮಸ್ಯೆ ಬಗೆಹರಿಸದಿದ್ದರೆ ಉಗ್ರ ಹೋರಾಟ ಎಚ್ಚರಿಕೆ



• **ದೊಡ್ಡಬಳ್ಳಾಪುರ:** ಇಲ್ಲಿನ ಕೈಗಾರಿಕಾ ಪ್ರದೇಶದ ಸೀಡೆಕೋಸಾ ಬಯೋಟೆಕ್ ಲಿಮಿಟೆಡ್ ಎಂಬ ಖಾಸಗಿ ಕಂಪನಿಯಿಂದ ದುರ್ವಾಸನೆ ಹೊರಹೊಮ್ಮುತ್ತಿದ್ದು ಸ್ಥಳೀಯ ವರದನಹಳ್ಳಿ ಗ್ರಾಮಸ್ಥರು ದುರ್ವಾಸನೆಯಿಂದ ಮುಕ್ತಿ ಪಡೆಯಲು ಹರಸಾಹಸ ಪಡುವ ಪರಿಸ್ಥಿತಿ ಎದುರಾಗಿದೆ.

ಸೀಡೆಕೋಸಾ ಕಂಪನಿಯು ಸತ್ತಿರುವ ರೇಷ್ಮೆ ಹುಳು ಹಾಗೂ ಇನ್ನಿತರ ವಸ್ತುಗಳಿಂದ ಕೆಮಿಕಲ್ ತಯಾರು ಮಾಡುವ ಕಂಪನಿಯಾಗಿದ್ದು ಸುತ್ತ ಕಂಪನಿಯ ವಸ್ತುಗಳಿಂದ ಬರುವ ದುರ್ವಾಸನೆ ತಡೆಗಟ್ಟಲು ಯಾವುದೇ ರೀತಿಯ ಕ್ರಮಗಳನ್ನು ತಗೆದುಕೊಳ್ಳದೇ ಕಾರ್ಯಮಾಡಿಸುತ್ತಿದ್ದು ಇದರಿಂದ ಸ್ಥಳೀಯವಾಗಿ ಯಾರು ವಾಸನೆಗೆ ತತ್ತರಿಸುವ ಸ್ಥಿತಿ ಎದುರಾಗಿದೆ. ಈ ವಿಷಯವಾಗಿ ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ಮಾಹಿತಿ ತಿಳಿಸಿದರೂ ಅಧಿಕಾರಿಗಳು ಬಾರದೆ ತನಿಖೆ ಮಾಡಲೆಂದು ಸ್ಥಳಕ್ಕೆ ಪೌರಕಾರ್ಮಿಕರನ್ನು ಕಳಿಸಿದ್ದು ಪಟ್ಟಣ ಪಂಚಾಯಿತಿ ಅಧಿಕಾರಿಗಳ ಕಾರ್ಯಪ್ರವೃತ್ತತೆಯನ್ನು ಎತ್ತಿ ತೋರಿಸುತ್ತದೆ. ಘಟನಾ ಸ್ಥಳಕ್ಕೆ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳಾದ ವಿಶಾಲಾಕ್ಷಿಯವರು ಭೇಟಿ ನೀಡಿದ್ದು ಸ್ಥಳ ಪರಿಶೀಲಿಸಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದ್ದಾರೆ. ಘಟನಾ ಸ್ಥಳದಲ್ಲಿ ಬಾಶೆಟ್ಟಿಹಳ್ಳಿ ಪಟ್ಟಣಪಂಚಾಯಿತಿ ಕೌನ್ಸಿಲರ್ ರಾಮಮೂರ್ತಿ ಅಕ್ಷಯ್ ನಂಜೇಶ್ ಮಹೇಶ್ ಸೇರಿದಂತೆ ಬಹಳಷ್ಟು ವರದನಹಳ್ಳಿ ಗ್ರಾಮಸ್ಥರು ಸೇರಿದ್ದು ಅಧಿಕಾರಿಗಳಿಗೆ ಸಮಸ್ಯೆಗಳನ್ನು ಬಗೆಹರಿಸದೇ ಇದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

> ಫ್ಯಾಕ್ಟರಿಯಿಂದ ಹೊರಬರುತ್ತಿರುವ ವಾಸನೆಗೆ ಗ್ರಾಮಸ್ಥರು ಹೈರಾಣ



ಹೊಸಕೋಟೆ ತಾಲೂಕಿನ ದೊಡ್ಡಹುಲ್ಲೂರು ಗ್ರಾಮದ ನೆತ್ತದ ವೀರಾಂಜನೇಯ ದೇವಾಲಯದಲ್ಲಿ ಅಮಾವಾಸ್ಯೆ ಪ್ರಯುಕ್ತ ವಿಶೇಷ ಅಲಂಕಾರ ಮಾಡಲಾಗಿತ್ತು. ಸಾವಿರಾರು ಭಕ್ತರು ದೇವರ ದರ್ಶನ ಪಡೆದರು.

ಕೆಆರ್‌ಎಸ್‌ನಲ್ಲಿ ಮತ್ತೆ ದೇಗುಲ ಗೋಚರ

• **ಪಾಂಡವಪುರ:** ವಿಶ್ವವಿಖ್ಯಾತ ಕೆ.ಆರ್.ಎಸ್. ನೀರಿನ ಮಟ್ಟ 90ರ ಗಡಿ ತಲುಪಿದ್ದು, ಕೆ.ಆರ್.ಸಾಗರ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದ ಶ್ರೀ ನಾರಾಯಣಸ್ವಾಮಿ ದೇಗುಲ ಸಂಪೂರ್ಣ ಗೋಚರವಾಗಿದೆ. ಈ ಹಿಂದೆ 2023ರಲ್ಲಿ ಈ ದೇವಸ್ಥಾನಗೋಚರವಾಗಿತ್ತು.ಕೆ.ಆರ್.ಸಾಗರಹಿನ್ನೀರಿನಚೋರೆ ಆನಂದೂರು ಬಳಿಯ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದ ಶ್ರೀ ನಾರಾಯಣಸ್ವಾಮಿ ದೇವಾಲಯ ಮೂರು ವರ್ಷಗಳ ನಂತರ ಮತ್ತೆ ಸಂಪೂರ್ಣ ಕಾಣಿಸುತ್ತಿದೆ. ಕೆ.ಆರ್.ಸಾಗರ ಅಣೆಕಟ್ಟೆಯ ನಿರ್ಮಾಣ ಸಂದರ್ಭದಲ್ಲಿ ನೂರು ವರ್ಷಗಳ ಹಿಂದೆಯೆ ದೇವರ ಮೂರ್ತಿಯನ್ನು ಸ್ಥಳಾಂತರ ಮಾಡಲಾಗಿತ್ತು. ಉಳಿದಿದ್ದ ಗೋಪುರ ಮತ್ತು ದೇವಸ್ಥಾನ ಕಂಬಗಳು ಈಗ ಕಾಣಿಸಿಕೊಂಡಿವೆ. ಶ್ರೀ ನಾರಾಯಣಸ್ವಾಮಿ ದೇಗುಲವು ಸುತ್ತಮುತ್ತಲಿನ ಹತ್ತು ಗ್ರಾಮಗಳ ಮನೆದೇವರಾಗಿದೆ. ಮಜ್ಜಿಗೆರ ಗ್ರಾಮದಲ್ಲಿ ದೇವಸ್ಥಾನ ನಿರ್ಮಾಣವಾಗಿದ್ದು, ಮೂಲ ದೇವರಾದ ಶ್ರೀ ನಾರಾಯಣಸ್ವಾಮಿ ದೇವರಿಗೆ ನಿತ್ಯ ಪೂಜೆ ಪುನಸ್ಕಾರಗಳು ನಡೆಯುತ್ತಿವೆ. ಚೋರೆ ಆನಂದೂರು ಗ್ರಾಮದ ಬಳಿಯ ಕಗ್ಗಲಿ ಅರಣ್ಯ ವಲಯದ ಪಕ್ಕದ ಕೆ.ಆರ್.ಸಾಗರ ಹಿನ್ನೀರಿನ ಸಮೀಪದಲ್ಲಿ ಈರಣ್ಣ ಮತ್ತು ಸೂರಣ್ಣ ಎಂಬ ಎರಡು ದೇವರ ವಿಗ್ರಹಗಳು ಕಾಣಸಿಗುತ್ತಿದ್ದು, ಈ ಎರಡು ಕಲ್ಲುಗಳಲ್ಲಿ ಶಿವನ ಪೂಜೆ ಮಾಡುತ್ತಿರುವುದು ಮತ್ತು ವಿವಿಧ ಭಂಗಿಗಳಲ್ಲಿ ಕೆತ್ತನೆ ಕಂಡುಬಂದಿದೆ. ಈ ಬಗ್ಗೆ ಹಳೆಗನ್ನಡದಲ್ಲಿ ಬರಹವಿದೆ. ಆದರೆ, ಸತತವಾಗಿ ಹಿನ್ನೀರಿನಲ್ಲಿ ಮುಳುಗಿರುವ ಕಾರಣ ಮಸುಕಾಗಿದೆ.



▸ 2023ರಲ್ಲಿ ಗೋಚರವಾಗಿದ್ದ ದೇವಸ್ಥಾನ
▸ ದೇವಾಲಯಕ್ಕೆ ಇದೆ ಐತಿಹಾಸಿಕ ಹಿನ್ನೆಲೆ
▸ ಕೆ.ಆರ್.ಸಾಗರ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದ ಶ್ರೀ ನಾರಾಯಣಸ್ವಾಮಿ ದೇಗುಲ

ಕಸಬಾ ಹೋಬಳಿ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಬಾಂಬೆ ಶಿವಣ್ಣ ಒತ್ತಾಯ

ಕಸಬಾ ಹೋಬಳಿ ಸಾಲು ಕೆರೆಗಳಿಗೆ ನೀರು ಹರಿಸಿ

• **ಕುಣಿಗಲ್:** ಕಸಬಾ ಹೋಬಳಿಯ ಸಾಲು ಕೆರೆಗಳಿಗೆ ನೀರು ಹರಿಸಬೇಕು ಎಂದು ಕಸಬಾ ಹೋಬಳಿ ನೀರಾವರಿ ಹೋರಾಟ ಸಮಿತಿಯ ಅಧ್ಯಕ್ಷ ಹಾಗೂ ಜೆಡಿಎಸ್ ಮುಖಂಡ ಬಾಂಬೆ ಶಿವಣ್ಣ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ತಾಲೂಕಿನ ಕಸಬಾ ಹೋಬಳಿ ಅರೆಪಾಳ್ಯ ಗ್ರಾಮದ ಕೆರೆಯ ಅಂಗಳದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಶಾಸಕರು ತಾಲೂಕಿಗೆ ಹೇಮಾವತಿ ನೀರು ಹರಿಸಿದ್ದೇವೆ ಎಂದು ಹೇಳುತ್ತಲೇ ಬರುತ್ತಿದ್ದಾರೆ, ಆದರೆ ಪಟ್ಟಣದ ಪಕ್ಕದಲ್ಲಿರುವ ಕಸಬಾ ಹೋಬಳಿಯ ಕಿತ್ತ ನಾಗಮಂಗಲ, ಕಾಡ ಮತ್ತಿಕೆರೆ, ಮೂದೂರು, ಸಂತೆಮಾವತ್ತೂರು, ದೊಡ್ಡಮಾವತ್ತೂರು ಮುಂತಾದ ಕೆರೆಗಳಲ್ಲಿ ನೀರಿಲ್ಲ, ಕೆರೆಗಳು ಬರಿದಾಗಿವೆ. ರೈತರು ತೋಟಗಳನ್ನು ಉಳಿಸಿಕೊಳ್ಳಲು ಪ್ರತಿನಿತ್ಯ ಬೋರ್‌ವೆಲ್ ಕೊರೆಸುತ್ತಲೇ ಇದ್ದಾರೆ ಸಾವಿರ ಅಡಿ ಕೊರೆದರು ನೀರು ಬರುತ್ತಿಲ್ಲ, ವಿಧಿಯಿಲ್ಲದೆ ರೈತರು ಲಕ್ಷಾಂತರ ರೂಪಾಯಿ ಕಳೆದುಕೊಳ್ಳುತ್ತಿದ್ದಾರೆ. ಜನ ಜಾನುವಾರುಗಳು, ಪ್ರಾಣಿ-ಪಕ್ಷಿಗಳು ಜೀವ ಉಳಿಸಿಕೊಳ್ಳಲು ಕುಡಿಯುವ ನೀರು ಅವಶ್ಯಕವಾಗಿದೆ ಕೂಡಲೇ ಕೆರೆಗಳಿಗೆ ನೀರು ಹರಿಸಿ ಎಂದರು. ಹೇಮಾವತಿ ನೀರು ಬಂದು ದೊಡ್ಡ ಕೆರೆ ಸೇರಿದೆ, ದೊಡ್ಡ ಕೆರೆಯಿಂದ ಬೇಗೂರು ಕುಣಿಗಲ್ ಚಿಕ್ಕ ಕೆರೆಗೆ ನೀರು ಹರಿಸಲಾಗಿದೆ. ಕೂಡಲೇ ಬೇಗೂರು ಕೆರೆಯಿಂದ ಕಸಬಾ ಹೋಬಳಿಯ ಸಾಲು ಕೆರೆಗಳಿಗೆ ನೀರು ಹರಿಸಿ, ಇದು ರಾಜಕಾರಣ ಮಾಡುವ ಸಮಯವಲ್ಲ, ಮತ್ತು ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿಯ ಜನಪ್ರತಿನಿಧಿಗಳಿಲ್ಲದಿರುವುದರಿಂದ ಶಾಸಕರೇ ಜವಾಬ್ದಾರಿ ವಹಿಸಿ ಪೈಪ್‌ಲೈನ್ ಮೂಲಕವಾಗಲಿ ಅಥವಾ ಕೆರೆಯಿಂದ ಕೆರೆಗಾಗಲಿ ಅಥವಾ ಇನ್ಯಾವುದೇ ಮೂಲದಿಂದಾಗಲಿ ನೀರು ಹರಿಸಬೇಕು ಎಂದು ಒತ್ತಾಯಿಸಿದರು. ಅಲ್ಪ ಸ್ವಲ್ಪ ನೀರಿರುವ ಬೋರ್‌ವೆಲ್‌ಗಳಿಂದ ತೋಟಗಳನ್ನು ಉಳಿಸಿಕೊಳ್ಳೋಣ ಎಂದರೆ ಬೆಸ್ಕಾಂ ಅಧಿಕಾರಿಗಳು ವಿದ್ಯುತ್ ಸರಬರಾಜು ಸರಿಯಾಗಿ ಮಾಡುತ್ತಿಲ್ಲ, ರಾತ್ರಿ ವೇಳೆ ನಿದ್ದೆ ಇಲ್ಲದೆ ರೈತರು ಹೊಲದ ಹತ್ತಿರ ತೋಟಗಳಿಗೆ ನಿರು ಹಾಯಿಸಲು ವಿದ್ಯುತ್‌ಗಾಗಿ ಇಡೀ ರಾತ್ರಿ ಕಾಯುವ ಪರಿಸ್ಥಿತಿ ಉಂಟಾಗಿದೆ ಎಂದರು.



> ಮಳೆಗಾಲದಲ್ಲಿ ತಿಂಗಳುಗಟ್ಟಲೆ ದೊಡ್ಡಕೆರೆಯ ಕೋಡಿಯಿಂದ ನೀರು ಹೊರ ಹೋಗಿ ತಮಿಳುನಾಡು ಸೇರಿದೆ, ಅದರ ಬದಲು ಮುನ್ನೆಚ್ಚರಿಕೆ ವಹಿಸಿ ಕಸಬಾ ಕೆರೆಗಳಿಗೆ ನೀರು ಹರಿಸಿದರೆ ಇಂದು ನೀರಿಗೆ ಪರದಾಡುವ ಪರಿಸ್ಥಿತಿ ಬರುತ್ತಿರಲಿಲ್ಲ.
> ■ ಬಾಂಬೆ ಶಿವಣ್ಣ, ಅಧ್ಯಕ್ಷ, ಕಸಬಾ ಹೋಬಳಿ ನೀರಾವರಿ ಹೋರಾಟ ಸಮಿತಿ

ಅಂತರ್ಜಲ ಕುಸಿದು ಕುಡಿಯುವ ನೀರಿಗೆ ತೀವ್ರ ಹಾಹಾಕಾರ ಉಂಟಾಗಿದೆ. ಕೆರೆ, ಕಟ್ಟೆ, ಗುಂಡಿ, ಹಳ್ಳ ಕೊಳ್ಳದಲ್ಲಿ ಒಂದು ಹನಿಯೂ ನೀರಿಲ್ಲ, ಕುಡಿಯುವ ನೀರಿನ ಬೋರ್‌ವೆಲ್ ಸೇರಿದಂತೆ ರೈತರ ಬೋರ್‌ವೆಲ್‌ಗಳು ಬತ್ತಿ ಹೋಗುತ್ತಿವೆ. ಕುಡಿಯುವ ನೀರಿಗಾಗಿ ಈಗಾಗಲೇ ಟ್ಯಾಂಕರ್‌ಗಳ ಮೊರೆ ಹೋಗಿದ್ದೇವೆ. ವಿಧಿಯಿಲ್ಲದೆ ತೋಟಗಳನ್ನು ಉಳಿಸಿಕೊಳ್ಳಲು ಟ್ಯಾಂಕರ್ ನೀರಿಗೆ ಮರೆಹೋಗುವಂತಹ ಪರಿಸ್ಥಿತಿಯಲ್ಲಿದ್ದೇವೆ. ದಯವಿಟ್ಟು ಕಸಬಾ ಹೋಬಳಿಯ ಸಾಲು ಕೆರೆಗಳಿಗೆ ನೀರು ಹರಿಸಿ ಕೆರೆಗಳನ್ನು ತುಂಬಿಸಿ ಜನರಿಗೆ ಕುಡಿಯುವ ನೀರು ಕೊಡಿ, ವಿಳಂಬ ಮಾಡಿದರೆ ಜನರೊಂದಿಗೆ ಹೋರಾಟ ಅನಿವಾರ್ಯ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕುಮಾರ ಸ್ವಾಮಿ, ಅಂಜನಪ್ಪ, ಮಂಜಣ್ಣ, ರಾಮಚಂದ್ರಯ್ಯ, ಬ್ರಷ್ಕುಮಾರ್ ಮುಂತಾದವರು ಇದ್ದರು.

ಆಡಳಿತದ ಯಶಸ್ಸಿಗೆ ಪಾರದರ್ಶಕತೆ, ಹೊಣೆಗಾರಿಕೆ ಎರಡು ಕಣ್ಣುಗಳು: ಪ್ರವೀಣ್

ಅಧಿಕಾರಿ, ಸಿಬ್ಬಂದಿಗೆ 1 ದಿನದ ಕಾರ್ಯಾಗಾರ

• **ಕೋಲಾರ:** ಆಡಳಿತದ ಯಶಸ್ಸಿಗೆ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಎರಡು ಕಣ್ಣುಗಳು ಎಂದು ಕೋಲಾರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಪ್ರವೀಣ್ ಪಿ. ಬಾಗೇವಾಡಿ ಅವರು ಅಭಿಪ್ರಾಯಪಟ್ಟರು.

ಇಂದು ಕೋಲಾರ ಜಿಲ್ಲಾಧಿಕಾರಿಗಳ ಕಚೇರಿಯ ಆಡಿಟೋರಿಯಂನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ತರಬೇತಿ ಸಂಸ್ಥೆ ಕೋಲಾರ ಇವರ ಸಹಯೋಗದಲ್ಲಿ ಕೆಟಿಪಿಪಿ ನಿಯಮಗಳಂತೆ ಟೆಂಡರ್ ಪ್ರಕ್ರಿಯೆ ಮಾಡಲು ಮತ್ತು ಜೆಮ್ ಪೋರ್ಟಲ್‌ನಲ್ಲಿ ಖರೀದಿ ಮಾಡಲು ಅನುಸರಿಸಬೇಕಾದ ಕ್ರಮಗಳ ಕುರಿತು ಗ್ರಾಮ ಪಂಚಾಯಿತಿ ಹಾಗೂ ಅವರ ಕಚೇರಿಗಳ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿ, ಸಿಬ್ಬಂದಿಗಳಿಗೆ ಹಮ್ಮಿಕೊಳ್ಳಲಾದ ಒಂದು ದಿನದ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು

ಆಡಳಿತ ವ್ಯವಸ್ಥೆಯಲ್ಲಿ ಸಾರ್ವಜನಿಕ ಹಣದ ಸದುಪಯೋಗ ಹಾಗೂ ಪಾರದರ್ಶಕತೆಯನ್ನು ಖಚಿತಪಡಿಸುವ ನಿಟ್ಟಿನಲ್ಲಿ ಈ ಮಹತ್ವದ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಭ್ರಷ್ಟಾಚಾರ ರಹಿತ ಮತ್ತು ಹೊಣೆಗಾರಿಕೆಯುಳ್ಳ ಆಡಳಿತದ ಅಗತ್ಯತೆಯನ್ನು ಪ್ರತಿಪಾದಿಸಿದ ಅವರು ಇದನ್ನು ಸರ್ಕಾರಿ ಕಚೇರಿಗಳಲ್ಲಿ ಅನುಷ್ಠಾನಕ್ಕೆ ತರಬೇಕು ಎಂದರು. ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ ನಿಯಮಾವಳಿಗಳು ಮತ್ತು ಗವರ್ನಮೆಂಟ್ ಇ-ಮಾರ್ಕೆಟ್ ಪ್ಲೇಸ್ ಪೋರ್ಟಲ್‌ನ ಪರಿಣಾಮಕಾರಿ ಬಳಕೆ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ವಿಶೇಷ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಯಾವುದೇ ಒಂದು ಸರ್ಕಾರಿ ವ್ಯವಸ್ಥೆಯು ಪರಿಣಾಮಕಾರಿಯಾಗಿ ಜನರನ್ನು ತಲುಪಬೇಕಾದರೆ ಅದರಲ್ಲಿ ಮುಖ್ಯವಾಗಿ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಇರಲೇಬೇಕು.



ಇವೆರಡೂ ಇಲ್ಲದಿದ್ದರೆ ಇಲಾಖೆಗಳು ಜನರ ವಿಶ್ವಾಸಗಳಿಸಲು ಸಾಧ್ಯವೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಹಳೆಯ ಮ್ಯಾನುಯಲ್ ಪದ್ಧತಿಯಲ್ಲಿ ಟೆಂಡರ್ ಪ್ರಕ್ರಿಯೆಗಳು ನಡೆಯುವಾಗ ಪಾರದರ್ಶಕತೆಯ ಕೊರತೆಯಿರುತ್ತಿತ್ತು ಮತ್ತು ನೆಪೋಟಿಸಂ (ಬಂಧು-ಬಳಗ ಪ್ರೀತಿ) ಗೆ ಹೆಚ್ಚಿನ ಆಸ್ಪದವಿರುತ್ತಿತ್ತು. ಆದರೆ ಪ್ರಸ್ತುತ ತಂತ್ರಜ್ಞಾನ ಆಧಾರಿತ ಆನ್‌ಲೈನ್ ಪೋರ್ಟಲ್ ವ್ಯವಸ್ಥೆಯಿಂದಾಗಿ ಅರ್ಹತೆಯುಳ್ಳ ಯಾವುದೇ ನಾಗರಿಕ ಅಥವಾ ಸಂಸ್ಥೆಯು ಮುಕ್ತವಾಗಿ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಇದರಿಂದಾಗಿ ವ್ಯವಸ್ಥೆಯಲ್ಲಿ ಆರೋಗ್ಯಕರ ಸ್ಪರ್ಧಾತ್ಮಕತೆ ಹೆಚ್ಚಾಗಲಿದ್ದು, ನಿಯಮಾನುಸಾರ ಗುಣಮಟ್ಟದಸೇವೆಹಾಗೂಕಡಿಮೆದರನಮೂದಿಸಿದ ಅರ್ಹ ಆಕಾಂಕ್ಷಿಗಳಿಗೆ ಪಾರದರ್ಶಕವಾಗಿ ಟೆಂಡರ್ ಲಭ್ಯವಾಗುತ್ತದೆ ಎಂದು ಅವರು ವಿವರಿಸಿದರು.

ನಾವು ಎಷ್ಟೊಂದು ಪಾರದರ್ಶಕವಾಗಿ ಕೆಲಸ ಮಾಡುತ್ತೇವೆಯೋ, ಅಷ್ಟೇ ಉತ್ತಮವಾಗಿ ಜನರಿಗೆ ಆಡಳಿತ ನೀಡಲು ಸಾಧ್ಯವಾಗುತ್ತದೆ. ಅಧಿಕಾರಿಗಳು ಸದಾ ತಮ್ಮ ವೃತ್ತಿಪರ ಕೌಶಲ್ಯಗಳನ್ನು ಕಾಲಕಾಲಕ್ಕೆ ನವೀಕರಿಸಿಕೊಳ್ಳುತ್ತಿರಬೇಕು ಎಂದರು.

ಸಮನ್ವಯ ಕಾಯ್ದುಕೊಂಡು ಅಭಿವೃದ್ಧಿಯತ್ತ ಸಾಗೋಣ: ಜಯರಾಂ

ಉದ್ಯಮಿ ಒಕ್ಕಲಿಗ ಪದಾಧಿಕಾರಿಗಳ ಸಮಾವೇಶ

• **ಕೋಲಾರ:** ತಾಲೂಕಿನ ಸೀತಿ ಗ್ರಾಮದಲ್ಲಿ ಉದ್ಯಮಿ ಒಕ್ಕಲಿಗರ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಪದಾಧಿಕಾರಿಗಳ ಸಭೆ ಹಾಗೂ ಬಂಡಿ ದೇವರ ಕಾರ್ಯಕ್ರಮದ ಪ್ರಯುಕ್ತ ಪೂರ್ವಸಿದ್ಧತೆಗಳ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ರಾಜ್ಯ ಮುಖ್ಯಸ್ಥ ಜಯರಾಮ್ ರೈಪುರ್ ಮತ್ತು ರಾಜ್ಯ ಉದ್ಯಮಿ ಒಕ್ಕಲಿಗರ ಅಧ್ಯಕ್ಷ ಡಾ.ಜಿ.ಮುನಿರಾಜು ಅಧ್ಯಕ್ಷತೆಯಲ್ಲಿ ಎರಡು ಜಿಲ್ಲೆಯ ಪದಾಧಿಕಾರಿಗಳು ಅಧ್ಯಕ್ಷರು ಮತ್ತು ಎಲ್ಲಾ ತಾಲೂಕಿನ ಎಫ್‌ಸಿ ಸರ್ಕಲ್‌ನ ಅಧ್ಯಕ್ಷರುಗಳು ಮತ್ತು ಪದಾಧಿಕಾರಿಗಳು ಉದ್ದಿಮೆದಾರರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಉದ್ಯಮಿ ಒಕ್ಕಲಿಗರ ಯಶಸ್ಸಿಗೆ ಯಾವ ರೀತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂಬುದರ ಬಗ್ಗೆ ಜಯರಾಮು ಮಾತನಾಡಿದರು. ಉದ್ಯಮಿ ಒಕ್ಕಲಿಗ ರಾಜ್ಯಾಧ್ಯಕ್ಷ ಡಾ.ಜಿ.ಮುನಿರಾಜು, ಎರಡು ಜಿಲ್ಲೆಗಳ ಪದಾಧಿಕಾರಿಗಳನ್ನುದ್ದೇಶಿಸಿ ಮಾತನಾಡಿ, ವಿಶೇಷ ಕಾಳಜಿಯಿಂದ ನಮ್ಮ ಜಿಲ್ಲೆಯ ಉದ್ದಿಮೆದಾರರನ್ನು ಬೆಳೆಸುವ ನಿಟ್ಟಿನಲ್ಲಿ ಕೆಲಸ ಆಗಬೇಕು ಸಮುದಾಯಕ್ಕೆ ಸಹಕರಿಸಬೇಕು ಎಂದು ಮನವಿ ಮಾಡಿದರು.



ಕೋಲಾರ ಜಿಲ್ಲೆಯ ಅಧ್ಯಕ್ಷ ಸಿಎಂಆರ್ ಶ್ರೀನಾಥ್ ಮಾತನಾಡಿ, ಉದ್ದಿಮೆ ಒಕ್ಕಲಿಗರು ಪರಸ್ಪರ ಅವಿನಾಭಾವ ದಿಂದ ಸಹಕರಿಸಿದಲ್ಲಿ ಸಮಾಜದಲ್ಲಿ ಉತ್ತಮ ಬೆಳವಣಿಗೆ ಸಾಧ್ಯ ಎಂದು ಅಭಿಪ್ರಾಯಪಟ್ಟರು. ಆದುದರಿಂದ ನಮ್ಮ ಸಮುದಾಯದ ಎಲ್ಲಾ ಉದ್ಯಮಿದಾರರು ಪರಸ್ಪರ ಅಭಿವೃದ್ಧಿಯಕಡೆಗೆಸಹಾಯಹಸ್ತನೀಡಿಉನ್ನತಿಯತ್ತ ಸಾಗಲು ಕೋರಿದ ಅವರು, ಸಮನ್ವಯತೆಯ ಕೊರತೆ ಎದುರಾಗದಂತೆ ಕ್ರಮವಹಿಸಿ ಎಂದರು.

ಜಿಲ್ಲೆಯ ಫಸ್ಟ್ ಸರ್ಕಲ್‌ನ ಪ್ರಧಾನ ಕಾರ್ಯದರ್ಶಿ ಮಾಗೇರಿ ನಾರಾಯಣಸ್ವಾಮಿ ಮಾತನಾಡಿ, ಎಲ್ಲಾ ಸಮುದಾಯದಂತೆ ನಮ್ಮ ಸಮುದಾಯವು ಬೆಳೆಯುವರಿಗೆ ನೆರವು ನೀಡಲು ಹೆಚ್ಚಿಗೆ ಪಾತ್ರ ವಹಿಸಿದೆ ಅದೇ ರೀತಿಯಲ್ಲಿ ನಮ್ಮ ಸಮುದಾಯಕ್ಕೆ ಸಮುದಾಯದವರು ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಿ ಬೆಳವಣಿಗೆಗೆ ಕ್ರಮವಹಿಸಲು ಕೋರಿದರು.

ನಾರಾಯಣ ಸ್ವಾಮಿ ಕುರಿತು ಮಾದಾರ ಚನ್ನಯ್ಯ ಸ್ವಾಮೀಜಿ ಹೇಳಿಕೆ

ರಾಜಕಾರಣದಲ್ಲಿ ಭವಿಷ್ಯವಿದೆ



• **ಆನೇಕಲ್:** ಮಾಜಿ ಸಚಿವ ಎ.ನಾರಾಯಣ ಸ್ವಾಮಿ ಅವರಿಗೆ ರಾಜ್ಯ ರಾಜಕಾರಣದಲ್ಲಿ ಹೆಚ್ಚಿನ ಅವಕಾಶ ಸಿಗಲಿಯೆ ಎಂದು ಚಿತ್ರದುರ್ಗ ಮಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ತಿಳಿಸಿದರು.

ಬಿಜೆಪಿ ವತಿಯಿಂದ ತಾಲೂಕಿನ ರಾಮಕುಟೀರದಲ್ಲಿ ಮಾಜಿ ಸಚಿವ ಎ.ನಾರಾಯಣ ಸ್ವಾಮಿ ಅವರ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಅವರು ನಿರ್ಭೀತಿಯಿಂದ ಕೆಲಸ ಮಾಡುವವರಾಗಿದ್ದಾರೆ. ಅಂತಹವರಿಗೆ ಉನ್ನತ ಸ್ಥಾನಮಾನಗಳು ಸಿಗಲಿಯೆಂದು ತಿಳಿಸಿದರು.

ಗಣ್ಯರಿಂದ ಅಭಿನಂದನೆ ಸ್ವೀಕರಿಸಿ ಕೇಂದ್ರ ಮಾಜಿ ಸಚಿವರಾದ ಎ.ನಾರಾಯಣಸ್ವಾಮಿ ಮಾತನಾಡಿ, ನನ್ನ ಹುಟ್ಟುಹಬ್ಬವನ್ನು ಅಭಿಮಾನಿಗಳು ಸಾಮಾಜಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಅರ್ಥಪೂರ್ಣಗೊಳಿಸಿದ್ದಾರೆ. ಬಿಜೆಪಿಯನ್ನು ಕಟ್ಟಿಬೆಳೆಸಿದ ಹಿರಿಯ ನಿಷ್ಠಾವಂತ ಕಾರ್ಯಕರ್ತರನ್ನು ಹಾಗೂ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದು, ಸಂತಸ ತಂದಿದೆಯೆಂದು ತಿಳಿಸಿದರು. ಇನ್ನು ಆನೇಕಲ್ ಕ್ಷೇತ್ರದ ಕಾರ್ಯಕರ್ತರು ರಾಜ್ಯ ರಾಜಕಾರಣಕ್ಕೆ ಅಪೇಕ್ಷೆ ಮಾಡುತ್ತಿದ್ದಾರೆ. ಅವರ ಕನಸನ್ನು ನನಸು ಮಾಡಲು ಪಕ್ಷದಲ್ಲಿ ಸಕ್ರಿಯವಾಗಿ ತೊಡಗಲಿದ್ದೇನೆ. ಕ್ಷೇತ್ರಾದ್ಯಂತ ಸಂಘಟನೆಗೊಳಿಸಿ ನಾಯಕರ ಮಧ್ಯೆಯಲ್ಲಿರುವ ಸಣ್ಣಪುಟ್ಟ ಗೊಂದಲಗಳನ್ನು ನಿವಾರಿಸುವ ಮೂಲಕ ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತೇನೆಂದು ಅವರು ಹೇಳಿದರು. ಇದೇ ವೇಳೆ ಪೌರಕಾರ್ಮಿಕರಿಗೆ ಆಹಾರ ಕಿಟ್ ನ್ನು ವಿತರಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಿ ಧನಸಹಾಯ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡರಾದ ನರಸಿಂಹ ರೆಡ್ಡಿ, ಎಸ್.ಆರ್.ಟಿ.ಅಶೋಕ್ ರೆಡ್ಡಿ, ಯಂಗಾ ರೆಡ್ಡಿ, ದೊಡ್ಡಹಾಗಡೆ ಶಂಕರ್, ಕಮ್ಮಸಂದ್ರ ಅಗ್ರಹಾರ ಸತೀಶ್, ಬಿ.ಜಿ.ಆಂಜಿನಪ್ಪ, ಪಿ.ರಾಜು, ಎಚ್.ಎನ್.ನಾಗೇಶ್, ರಘು, ಸೋಮಶೇಖರ ರೆಡ್ಡಿ, ಬಬಬ ರಾಜು, ಪುಣ್ಯಕೋಟಿ ಶ್ರೀನಿವಾಸ್, ಟಿ.ವಿ.ಬಾಬು, ಚಿಕ್ಕನಾಗಮಂಗಲ ವೆಂಕಟೇಶ್, ಅತ್ತಿಬೆಲೆ ಸಂತೋಷ್ ರೆಡ್ಡಿ, ಜಯಪ್ರಕಾಶ್ ರೆಡ್ಡಿ, ಮುತ್ತೂರು ನಾರಾಯಣಪ್ಪ, ತಿಲಕ್ ಗೌಡ, ಮುನಿರತ್ನಮ್ಮ ನಾರಾಯಣಪ್ಪ, ವೆಂಕಟೇಶ್ ರೆಡ್ಡಿ, ಬಳ್ಳೂರು ವಸಂತ ರೆಡ್ಡಿ, ಚಂದಾಪುರ ರಾಮಣ್ಣ, ಸಿಡಿಹೊಸಕೋಟೆ ಮುನಿರಾಜು, ಪಿಎಲ್‌ಡಿ ಆಂಜಿನಪ್ಪ, ಬಂಡಾಪುರ ರಾಮಚಂದ್ರ, ಮರಸೂರು ಅನಿಲ್ ರೆಡ್ಡಿ, ಎ.ಉದಯ ಕುಮಾರ್ ಮತ್ತಿತರರಿದ್ದರು.

ರಾಜಕಾರಣದಲ್ಲಿ ಮತ್ತಷ್ಟು ಅವಕಾಶ ಸಿಗಲಿ

ಮಾಜಿ ಉಪ ಮುಖ್ಯಮಂತ್ರಿ, ಗೋವಿಂದ ಕಾರಜೋಳ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರಕಾರದ ಆಡಳಿತದಲ್ಲಿ ಸಚಿವರಾಗಿದ್ದ ಎ.ನಾರಾಯಣ ಸ್ವಾಮಿ ಅವರು ಹತ್ತು ಹಲವು ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ಅವರು ರಾಜ್ಯ ರಾಜಕಾರಣದಲ್ಲಿ ಮತ್ತಷ್ಟು ಅವಕಾಶ ಸಿಗುವಂತಾಗಲಿ ಎಂದು ಆಶಿಸಿದರು.

ನೆಲಕ್ಕುರುಳಿದ 50ಕ್ಕೂ ಹೆಚ್ಚು ಹಳೆಯ ಮರ | ಜನಾಕ್ರೋಶ

ರಸ್ತೆ ಅಗಲೀಕರಣಕ್ಕೆ ಮರಗಳ ಬಲಿ



• **ವಿಜಯಪುರ:** ಪಟ್ಟಣದ ಪ್ರಮುಖ ರಸ್ತೆ ಬದಿಗಳಲ್ಲಿ ಬೃಹದಾಕಾರವಾಗಿ ಬೆಳೆದು ನಿಂತಿದ್ದ ಮರಗಳು ರಸ್ತೆ ಅಗಲೀಕರಣಕ್ಕೆ ಜೀವತೆತ್ತಿವೆ. ದಾರಿ ಹೋಕರಿಗೆ, ಜೀವಸಂಕುಲಕ್ಕೆ ಆಸರೆಯಾಗಿದ್ದ ನೂರಾರು ವರ್ಷದ ಹಳೆಯ ಮರಗಳು ನೆಲಕ್ಕುರುಳಿದ ಪರಿಣಾಮ ರಸ್ತೆಯೆಲ್ಲಾ ಬರಿದಾಗಿ ಕಾಣುತ್ತಿದೆ.

ಈಗಾಗಲೇ ರಸ್ತೆ ಅಗಲೀಕರಣ ಹೊಂದಿರುವ ಪಟ್ಟಣದ ಟೌನ್ ಹಾಲ್ ಸರ್ಕಲ್‌ನಿಂದ ಹಿಡಿದು ಹಾರ್ಡಿಪುರದವರೆಗೂ 50ಕ್ಕೂ ಹೆಚ್ಚು ಬೃಹತ್ ಮರಗಳನ್ನು ಕಡಿಯಲಾಗಿದೆ. ಈಗ ಟೌನ್ ಹಾಲ್ ಸರ್ಕಲ್ ನಿಂದ ಶಿಡ್ಲಘಟ್ಟ ಕ್ರಾಸ್ ವರೆಗೂ 43 ಮರಗಳು ಕಡಿಯಲಾಗುತ್ತಿದೆ.

ಮುಂದಿನ ದಿನಗಳಲ್ಲಿ ಶಿಡ್ಲಘಟ್ಟ ಕ್ರಾಸ್ ನಿಂದ ಹಿಡಿದು ವಿಜಯಪುರ ಅಮಾನಿಕೆರೆವರೆಗೂ ರಸ್ತೆ ಅಗಲೀಕರಣಗೊಂಡರೆ 30ಕ್ಕೂ ಹೆಚ್ಚು ಬೃಹತ್ ಮರಗಳಿಗೆ ಕೊಡಲಿ ಪೆಟ್ಟು ಬೀಳಲಿದೆ. ಈ ಬಿರುಬೇಸಿಗೆಯಲ್ಲಿ ದಾರಿ ಹೋಕರಿಗೆ, ಜೀವಸಂಕುಲಕ್ಕೆ ಆಸರೆಯಾಗಿದ್ದ ವಿವಿಧ ಹಣ್ಣಿನ ಮರಗಳನ್ನು ನಿರ್ದಾಕ್ಷಿಣ್ಯವಾಗಿ ಕಡಿಯುತ್ತಿರುವುದಕ್ಕೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ.

ರಸ್ತೆ ಅಭಿವೃದ್ಧಿ ನೆಪದಲ್ಲಿ ಮರಗಳ ಮಾರಣ ಹೋಮ ನಡೆಯುತ್ತಿದೆ. ನೂರಾರು ವರ್ಷಗಳಿಂದ ಉತ್ತಮ ಗಾಳಿ ಹಾಗೂ ಪಕ್ಷಿ ಸಂಕುಲಕ್ಕೆ ಸಾಕ್ಷಿಯಾಗಿದ್ದ ಮರ ಗಿಡಗಳು ಕಣ್ಮರೆಯಾಗುತ್ತಿರುವುದು ಬೇಸರದ ಸಂಗತಿಯಾಗಿದೆ. ಒಂದು ಮರ ಕಡಿದರೆ ಅದರ ಅಕ್ಕಪಕ್ಕ 10 ಗಿಡಗಳನ್ನು ನೆಡುವುದರ ಮೂಲಕ ಪರಿಸರ ಸಮತೋಲನ ಕಾಪಾಡಬೇಕು ಎಂದು ಪರಿಸರ ಪ್ರೇಮಿ ವಿ.ಪ್ರಶಾಂತ್ ಆಗ್ರಹಿಸಿದ್ದಾರೆ. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂಬ ಮಾತನ್ನು ನಾವು ಬರಿ ಬಾಯಿ ಮಾತಿಗೆ ಹಾಡದೆ ವೃಕ್ಷಗಳ ಹಾಗೂ ಪರಿಸರ ಸಂರಕ್ಷಣೆಯ ಕಾರ್ಯದಲ್ಲಿ ನಾವೆಲ್ಲರೂ ಕಟ್ಟಿಬದ್ಧರಾಗಬೇಕು. ಮರ ಕಡಿದ ನಂತರ ಅದರ ಹತ್ತರಷ್ಟು ಹೆಚ್ಚು ಸಸಿಗಳನ್ನು ಸಾರ್ವಜನಿಕರಿಗೆ ಗೊತ್ತಾಗುವ ರೀತಿಯಲ್ಲಿ ನೆಡಬೇಕು. ಜೊತೆಗೆ ಅದು ಬೆಳೆದು ನಿಲ್ಲುವವರೆಗೂ ಪೋಷಿಸಬೇಕು ಎಂದು ಪರಿಸರ ಪ್ರೇಮಿ ಮ.ಸುರೇಶ್ ಬಾಬು ತಿಳಿಸಿದರು.

ಮರ ಕಡಿಯುವ ಮುನ್ನ ಗಿಡ ನೆಡಿ

ಪಟ್ಟಣ ಕ್ಷಿಪ್ರ ಗತಿಯಲ್ಲಿ ಬೆಳೆಯುತ್ತಿದೆ. ಜನಸಂಖ್ಯೆ ಹೆಚ್ಚುತ್ತಿದೆ, ಇದಕ್ಕೆ ಸರಿಯಾಗಿ ವಾಹನಗಳ ಸಂಖ್ಯೆಯೂ ಹೆಚ್ಚಾಗಿದೆ. ಇದರಿಂದ ಟ್ರಾಫಿಕ್ ಸಮಸ್ಯೆ ಉಂಟಾಗುತ್ತದೆ. ಟ್ರಾಫಿಕ್ ಸಮಸ್ಯೆ ಪರಿಹರಿಸಲು ರಸ್ತೆ ವಿಸ್ತರಣೆ ಅಗತ್ಯ. ಆದರೆ, ಮರ ಕಡಿಯುವ ಮುನ್ನ ಅಕ್ಕಪಕ್ಕ ಗಿಡ ನೆಟ್ಟು ಪೋಷಿಸಬೇಕು ಎಂದು ಬಿಜೆಪಿ ಟೌನ್ ಅಧ್ಯಕ್ಷ ವೆಂಕಟೇಶ್ ಪ್ರಭು ಆರೋಪಿಸಿದ್ದಾರೆ.

ಸಿಂಡಿಕೇಟ್ ಸದಸ್ಯರಾಗಿ ಡಾ. ರಮ್ಯಾ ನೇಮಕ



• **ಬೆಂಗಳೂರು:** ಎಚ್‌ಎಂಆರ್ ಸಮೂಹ ಸಂಸ್ಥೆಗಳ ಸಿಇಒ ಆಗಿರುವ ಡಾ. ಎ.ರಮ್ಯಾ ರಮೇಶ್ ಅವರನ್ನು ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರನ್ನಾಗಿ ರಾಜ್ಯಪಾಲರು ನೇಮಕ ಮಾಡಿದ್ದಾರೆ. ಈ ಬಗ್ಗೆ ರಾಜ್ಯದ ರಾಜ್ಯಪಾಲರ ಸಚಿವಾಲಯವು ಅಧಿಕೃತ ಪ್ರಕಟಣೆ ಹೊರಡಿಸಿದ್ದು, ಈ ನೇಮಕಾತಿಯು ಜುಲೈ 7ರಿಂದ ಜಾರಿಗೆ ಬರಲಿದ್ದು, 3 ವರ್ಷಗಳ ಅವಧಿ ಹೊಂದಿರುತ್ತದೆ ಎಂದು ವಿಶ್ವವಿದ್ಯಾಲಯದ ಕುಲಾಧಿಪತಿಗಳು ಆಗಿರುವ ರಾಜ್ಯಪಾಲರ ಆದೇಶದಲ್ಲಿ ತಿಳಿಸಲಾಗಿದೆ.

ಕಿರುಸುದ್ದಿ

ಕೃಷ್ಣ ಶಿವನಪಾಳ್ಯ ವಾರ್ಡ್ ಅಧ್ಯಕ್ಷ

• **ಕೆಂಗೇರಿ:** ಯಶವಂತಪುರ ವಿಧಾನಸಭಾ ಕ್ಷೇತ್ರದ ಕೆಂಗೇರಿ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಕೆ.ವೈ. ಕೃಷ್ಣ ಅವರು ಶಿವನಪಾಳ್ಯ-19 ವಾರ್ಡ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹನುಮಂತರಾಯಪ್ಪ ನೇಮಕಾತಿ ಆದೇಶಪತ್ರ ನೀಡಿದ್ದಾರೆ. ಆದೇಶ ಪತ್ರ ಸ್ವೀಕರಿಸಿ ಮಾತನಾಡಿದ ಕೆ.ವೈ.ಕೃಷ್ಣ, ಬೆಂಗಳೂರು ಪಶ್ಚಿಮ ಜಿಲ್ಲಾ ಅಧ್ಯಕ್ಷ ಹನುಮಂತರಾಯಪ್ಪ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಶಾಸಕ ಎಸ್ .ಟಿ.ಸೋಮಶೇಖರ್ ಅವರ ನೇತೃತ್ವದಲ್ಲಿ ಪಕ್ಷದ ಹಿರಿಯ ನಾಯಕರ ಮಾರ್ಗದರ್ಶನದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಕಾಂಗ್ರೆಸ್ ಪಕ್ಷದ ಸಂಘಟನೆಯನ್ನು ಮುಖ್ಯವಾಹಿನಿಗೆ ತರಲು ಹಾಗೂ ಪಕ್ಷದ ಸಂಘಟನೆಯನ್ನು ಬಲವರ್ಧನೆಗಾಗಿ ದುಡಿಯುತ್ತೇನೆ ನನ್ನನ್ನು ನಂಬಿ ಪಕ್ಷ ನೀಡಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತೇನೆ ಎಂದು ತಿಳಿಸಿದರು.

ಕೂದಲು, ರಬ್ಬರ್ ತಿಂದಿದ್ದ ಮಗು ರಕ್ಷಿಸಿದ ವೈದ್ಯರು

• **ಮಹದೇವಪುರ:** ಸುಮಾರು 480 ಗ್ರಾಂ ಕೂದಲು ಮತ್ತು ರಬ್ಬರ್ ತಿಂದ ಎರಡು ವರ್ಷದ ಮಗುವಿನ ಜೀವವನ್ನು ಮೆಡಿಕವರ್ ಆಸ್ಪತ್ರೆ ವೈದ್ಯರು ಉಳಿಸಿದ್ದಾರೆ. ಮಕ್ಕಳ ತಜ್ಞೆ ಡಾ.ಲೀನಾ ರೆಡ್ಡಿ ಪ್ರಮುಖ ಪಾತ್ರವಹಿಸಿ ಅಪರೂಪದ ರಪುಂಜಲ್ ಸಿಂಡ್ರೋಮ್ ಎಂಬ ಸ್ಥಿತಿಯನ್ನು ಗುರುತಿಸಿ ಚಿಕಿತ್ಸೆ ನೀಡಿದ್ದಾರೆ. ಮಗು ಬಾಲ್ಯದಿಂದಲೇ ಕೂದಲು, ರಬ್ಬರ್ ಬ್ಯಾಂಡ್‌ಗಳು ಹಾಗೂ ಬಲೂನ್ ತುಂಡುಗಳಂತಹ ಆಹಾರವಲ್ಲದ ವಸ್ತುಗಳನ್ನು ತಿನ್ನುವ ವಿಚಿತ್ರ ಅಭ್ಯಾಸ ಹೊಂದಿತ್ತು. ಇದರಿಂದ ಹೊಟ್ಟೆಯೊಳಗೆ ದೊಡ್ಡ ಪ್ರಮಾಣದ ಕೂದಲಿನ ಗುಡ್ಡೆ ರೂಪಗೊಂಡಿತ್ತು. ಈ ಅಪರೂಪದ ಸ್ಥಿತಿಗೆ ರಪುಂಜಲ್ ಸಿಂಡ್ರೋಮ್ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಇದು ಚಿಕ್ಕ ವಯಸ್ಸಿನ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಎರಡು ವರ್ಷದ ಮಗುವಿನಲ್ಲಿ ಕಂಡುಬಂದಿರುವುದು ಅತ್ಯಂತ ಅಪರೂಪವಾಗಿದೆ. ಕೆಲವು ದಿನಗಳಿಂದ ಮಗುವಿಗೆ ತೀವ್ರ ಹೊಟ್ಟೆನೋವು, ನಿರಂತರ ವಾಂತಿ ಹಾಗೂ ಆಹಾರ ಸೇವನೆ ಕಡಿಮೆಯಾಗಿತ್ತು. ಇದರಿಂದ ಕುಟುಂಬಸ್ಥರು ಆತಂಕಕ್ಕೊಳಗಾಗಿದ್ದರು. ವೈದ್ಯಕೀಯ ತಪಾಸಣೆಯಲ್ಲಿ ಹೊಟ್ಟೆಯಿಂದ ಸಣ್ಣ ಅಂತ್ರದವರೆಗೆ ಹರಡಿರುವ ದೊಡ್ಡ ಕೂದಲಿನ ಗುಡ್ಡೆ ಆಹಾರವನ್ನ ಪಚನಗೊಳ್ಳಲು ಮತ್ತು ಸರಾಗವಾಗಿ ಹೋಗಲು ಕಷ್ಟವಾಗುತ್ತಿತ್ತು. ಎಂಡೋಸ್ಕೋಪಿಯ ಮೂಲಕ ಅದನ್ನು ತೆಗೆಯಲು ಪ್ರಯತ್ನಿಸಿದರು. ಆದರೆ ಗುಡ್ಡೆಯ ಗಾತ್ರ ಮತ್ತು ವ್ಯಾಪ್ತಿ ಹೆಚ್ಚಾಗಿದ್ದರಿಂದ ಶಸ್ತ್ರಚಿಕಿತ್ಸೆ ಅನಿವಾರ್ಯವಾಯಿತು.

ತಾಳ್ಮೆಯ ಪ್ರತೀಕ ತಾಯಿ: ಸುಧೀಂದ್ರ ಕುಮಾರ್



• **ಕೆಂಗೇರಿ:** ಪ್ರೀತಿ, ತ್ಯಾಗ, ಕರುಣೆ, ಮಮತೆ ಹಾಗೂ ತಾಳ್ಮೆಯೇ ತಾಯಿಯ ಪ್ರತೀಕ ಎಂದು ಯಶವಂತಪುರ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಎಸ್.ಸುಧೀಂದ್ರ ಕುಮಾರ್ ಹೇಳಿದರು.

ಕೆಂಗೇರಿ ಉಪನಗರದ ಗುರುರಾಜ ಕಲ್ಯಾಣ ಮಂಟಪದಲ್ಲಿ ಯಶವಂತಪುರ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ ಶಾಸಕ ಎಸ್.ಟಿ.ಸೋಮಶೇಖರ್ ಅವರ ತಾಯಿ ಸೀತಮ್ಮ ಅವರ ನುಡಿ ನಮನ ಕಾರ್ಯಕ್ರಮದಲ್ಲಿ ಸೀತಮ್ಮ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಅವರು, ಮಹಿಳಾ ಶಿಕ್ಷಣ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಿದ ಸೀತಮ್ಮ ಅವರ ಕಾರ್ಯ ಶ್ಲಾಘನೀಯ ಬದುಕಿನ ಮೊದಲ ಗುರು ತಾಯಿ ಮಕ್ಕಳ ಶಕ್ತಿಯಾಗಿ, ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿ ಶಿಸ್ತು ಸಮ್ಯಮವನ್ನು ಕಲಿಸಿ ದೇಶಕ್ಕೆ ಉತ್ತಮ ಪ್ರಜೆಯನ್ನಾಗಿ ಕೊಡುಗೆಯಾಗಿ ನೀಡಿದರು. ಆ ಮೂಲಕ ನಿಲ್ಲುವಳು ತಾಯಿ ಹಾಗೆಯೇ ಶಾಸಕ ಎಸ್.ಟಿ.ಸೋಮಶೇಖರ್ ಅವರ ಸಹಕಾರ ಕ್ಷೇತ್ರ ಹಾಗೂ ರಾಜಕೀಯ ಕ್ಷೇತ್ರದ ಶ್ರೇಯಸ್ಸಿಗೆ ಅವರ ತಾಯಿ ಸೀತಮ್ಮ ಅವರು ಸ್ಫೂರ್ತಿಯಾಗಿ ನಿಂತು ಮಗನ ಶ್ರೇಯಸ್ಸಿಗೆ ಕಾರಣೀಭೂತರಾಗಿದ್ದರು ಎಂದು ತಿಳಿಸಿದರು.

ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ದಿವಂಗತ ಸೀತಮ್ಮ ಅವರ ಪುತ್ರಿ ಎಸ್.ಟಿ.ಸುನಂದ, ರಂಗಭೂಮಿ ಕಲಾವಿದ ನಾಗರಾಜ ಮೂರ್ತಿ, ನಟಿ ಸುನೇತ್ರಾ ಪಂಡಿತ್, ರಮೇಶ್ ಪಂಡಿತ್ ಉಪಸ್ಥಿತರಿದ್ದರು.

ಶ್ರೀವಿಜಯನ ವಿವೇಕ ಪ್ರಸ್ತುತ: ಆಶಾದೇವಿ

• **ಬೆಂಗಳೂರು:** ಮಾನವ ಕುಲ ನಾಶದ ಹಂತಕ್ಕೆ ಹೋಗುತ್ತಿರುವ ಕಾಲಘಟ್ಟದಲ್ಲಿ ಶ್ರೀವಿಜಯನ ವಿವೇಕ ನಮಗೆ ಬೇಕಿದೆ ಎಂದು ವಿಮರ್ಶಕಿ ಡಾ.ಎಂ.ಎಸ್.ಆಶಾದೇವಿ ಅಭಿಪ್ರಾಯಪಟ್ಟರು.

ಜೈನ ಮಿಲನ್, ಬೆಂಗಳೂರು ಸೆಂಟ್ರಲ್ ವತಿಯಿಂದ ಶ್ರೀ ಚಕ್ರೇಶ್ವರಿ ಮಹಿಳಾ ಸಮಾಜದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜೈನ ಸಾಹಿತ್ಯ ಸಿರಿ ಕಾರ್ಯಕ್ರಮದ ತಿಂಗಳ ಉಪನ್ಯಾಸದಲ್ಲಿ ಮಾತನಾಡಿದ ಅವರು, ಮಾನವ ಕುಲ ನಾಶದ ಹಂತಕ್ಕೆ ಹೋಗುತ್ತಿರುವ ಕಾಲಘಟ್ಟದಲ್ಲಿ ಶ್ರೀವಿಜಯನ ವಿವೇಕ ನಮಗೆ ಬೇಕಿದೆ. ಶ್ರೀ ವಿಜಯ ತನ್ನ ಕಾಲದ ಜನ ಸಾಮಾನ್ಯರ ಅಭಿರುಚಿ ಬಗ್ಗೆ ಹೇಳುತ್ತಾ ನನ್ನ ಕನ್ನಡ ನಾಡಿನ ಜನ ಓದಲು ಬರೆಯಲು ಬಾರದಿದ್ದರೂ ಒಂದು ಕಾವ್ಯವನ್ನು ಕೇಳಿ ಅದು ಉತ್ತಮವೋ ಅಲ್ಲವೋ ಎಂದು ನಿರ್ಧರಿಸಬಲ್ಲ ವಿವೇಕಶಾಲಿಗಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತರು ಅಂತಹ ತಾಕತ್ತು ಕನ್ನಡ ಜನಸಾಮಾನ್ಯರಿಗೆ ಇತ್ತು ಎಂದು ತಿಳಿಸಿದ್ದಾನೆ ಎಂದರು. ಈ ವೇಳೆ ಸೆಂಟ್ರಲ್ ಜೈನ್ ಮಿಲನ್‌ನ ಅಧ್ಯಕ್ಷೆ ಮಮತಾ ಕಾಂತರಾಜ್, ಸಂಚಾಲಕಿ ಡಾ.ಪದ್ಮಿನಿ ನಾಗರಾಜು ಉಪಸ್ಥಿತರಿದ್ದರು.



ವಿಮರ್ಶಕಿ ಡಾ.ಎಂ.ಎಸ್.ಆಶಾದೇವಿ ಅಭಿಮತ

ಬಿಜೆಪಿ ಬಲವರ್ಧನೆಗೆ ಯುವಶಕ್ತಿ ಪ್ರೇರಣೆ: ಡಾ.ಆರ್.ಪಿ. ಪ್ರಕಾಶ್



• **ಕೆಂಗೇರಿ:** ಬಿಜೆಪಿ ಬಲವರ್ಧನೆಗೆ ಯುವಶಕ್ತಿ ಪ್ರೇರಣೆಯಾಗಿದೆ ಎಂದು ಯಶವಂತಪುರ ವಿಧಾನಸಭಾ ಕ್ಷೇತ್ರ ಗ್ರಾಮಾಂತರ ಮಂಡಲದ ಅಧ್ಯಕ್ಷ ಡಾ.ಆರ್.ಪಿ.ಪ್ರಕಾಶ್ ಹೇಳಿದರು

ಯಶವಂತಪುರ ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ಮಂಡಲದ ನೂತನ ಪದಾಧಿಕಾರಿಗಳನ್ನು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ನಿರ್ದೇಶನದಂತೆ ಹಾಗೂ ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಹರೀಶ್‌ರವರ ಮಾರ್ಗದರ್ಶನದಲ್ಲಿ ಕ್ಷೇತ್ರದ ಗ್ರಾಮಾಂತರ ಮಂಡಲದ ನೂತನ ಪದಾಧಿಕಾರಿಗಳಾಗಿ ಹಾಗೂ ವಿವಿಧ ಮೋರ್ಚಾಗಳ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳಾಗಿ ಮತ್ತು ಮಹಾಶಕ್ತಿ ಕೇಂದ್ರದ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳಾಗಿ ನೇಮಕ ಮಾಡಲಾಗಿದೆ.

ಆದೇಶ ಪತ್ರ ನೀಡಿ ಮಾತನಾಡಿದ ಅವರು, ಯಶವಂತಪುರ ವಿಧಾನಸಭಾ ಕ್ಷೇತ್ರದ 17 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬಿಜೆಪಿ ಪಕ್ಷ ಬಲಿಷ್ಠವಾಗಿರುವ ಹಿನ್ನೆಲೆಯಲ್ಲಿ ಪಕ್ಷದ ತತ್ವ ಸಿದ್ಧಾಂತಗಳನ್ನು ಮೆಚ್ಚಿ ಯುವ ಸಮೂಹ ಜವಾಬ್ದಾರಿ ವಹಿಸಿಕೊಳ್ಳಲು ಪಕ್ಷದ ಬಲವರ್ಧನೆಗೆ ಸಾಕ್ಷಿಯಾಗಿದೆ. ಕೆಲವು ಪಂಚಾಯಿತಿ ವ್ಯಾಪ್ತಿಯಲ್ಲಿ ಕೆಲವು ನ್ಯೂನತೆಗಳಿದ್ದು ಅಲ್ಲಲ್ಲೇ ಸಭೆ ನಡೆಸಿ ಪಕ್ಷದ ಸಂಘಟನೆ ಒತ್ತು ನೀಡಲಾಗುವುದು ಮತ್ತು ಯಾವುದೇ ಮನಸ್ತಾಪವಿಲ್ಲದೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷದ ಬಲವರ್ಧನೆಗೆ ಹಗಲಿರಲು ಶ್ರಮಿಸಲಾಗುವುದು ಎಂದು ತಿಳಿಸಿದರು.

ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ಹರೀಶ್ ಆರ್, ಯತೀಶ್ ಕುಮಾರ್.ಕೆ, ಜಿಲ್ಲಾ ಮಹಿಳಾ ಉಪಾಧ್ಯಕ್ಷ ಹಂಸವೇಣಿ ಎಸ್ಸಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನರಸಿಂಹಮೂರ್ತಿ, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಯಲ್ಲಪ್ಪ ಜಿಲ್ಲಾ ಯುವ ಮೋರ್ಚಾ ಕೋಶಾಧ್ಯಕ್ಷ ಸಾಗರ್ ಉಪಸ್ಥಿತರಿದ್ದರು.

ಲೋಕಾಯುಕ್ತದಲ್ಲಿ ದೂರು ದಾಖಲು



• **ಬೆಂಗಳೂರು:** ಮಹಾನಗರದಲ್ಲಿ ಕಳೆದ 16 ವರ್ಷಗಳಲ್ಲಿ ನಿರ್ಮಾಣಗೊಂಡಿರುವ ಬೃಹತ್ ವಸತಿ ಹಾಗೂ ವಾಣಿಜ್ಯ ಕಟ್ಟಡಗಳಲ್ಲಿ ಬಹುತೇಕ ಕಟ್ಟಡಗಳಿಗೆ ನಕಲಿ ಒಸಿ ನೀಡಲಾಗಿದೆ ಎಂದು ಬಿಜೆಪಿ ಮುಖಂಡ ಎನ್.ಆರ್.ರಮೇಶ್ ಆರೋಪಿಸಿದರು.

ಜಿಬಿಎ ಕೇಂದ್ರ ಕಚೇರಿ ಆವರಣದಲ್ಲಿ ಹಗರಣಕ್ಕೆ ಸಂಬಂಧಿಸಿದಂತೆ ದಾಖಲೆ ಬಿಡುಗಡೆ ಮಾಡಿ, ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಹಗರಣದಲ್ಲಿ ಭಾಗಿಯಾಗಿರುವ 255 ಅಧಿಕಾರಿಗಳು ಹಾಗೂ 437 ಪ್ರಮುಖ ಬಿಲ್ಡರ್‌ಗಳ ವಿರುದ್ಧ ಇಡಿ ಮತ್ತು ಲೋಕಾಯುಕ್ತದಲ್ಲಿ ದೂರು ದಾಖಲಿಸಲಾಗಿದೆ ಎಂದು ತಿಳಿಸಿದರು. ಬೆಂಗಳೂರು ವ್ಯಾಪ್ತಿಯಲ್ಲಿ ಟೆಕ್ ಪಾರ್ಕ್‌ಗಳು, ಐಟಿ-ಬಿಟಿ ಕಂಪನಿಗಳು, ವಾಣಿಜ್ಯ ಸಂಕೀರ್ಣಗಳು, ಕೈಗಾರಿಕಾ ಕಟ್ಟಡಗಳು ಹೀಗೆ ಲಕ್ಷಾಂತರ ಕಟ್ಟಡಗಳಿದ್ದು, ಬಹುಪಾಲು ಕಟ್ಟಡಗಳಿಗೆ ನಕಲಿ ಒಸಿ ನೀಡಲಾಗಿದೆ ಎಂದು ತಿಳಿಸಿದರು.

ನಗರ ಯೋಜನೆ ಇಲಾಖೆಯ ಅಧಿಕಾರಿಗಳು ನಕಲಿ ಪ್ರಮಾಣ ಪತ್ರಗಳನ್ನು ನೀಡಿದ್ದಾರೆ. ಈ ಸಂಬಂಧ 253 ಮಂದಿ ಅಧಿಕಾರಿಗಳು ಹಾಗೂ 437 ಬಿಲ್ಡರ್‌ಗಳ ವಿರುದ್ಧ 9,700 ಪುಟಗಳ ದಾಖಲೆಯೊಂದಿಗೆ ಜಾರಿ ನಿರ್ದೇಶನಾಲಯ ಮತ್ತು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದೇನೆ. ಜೊತೆಗೆ, ಈ ಹಗರಣವನ್ನು ಸಿಬಿಐ ಅಥವಾ ಸಿಐಡಿ ತನಿಖೆಗೆ ಒಳಪಡಿಸಬೇಕು. ಅಲ್ಲದೆ ಸದ್ಯದಲ್ಲೇ ಈ ಬಗ್ಗೆ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗುವುದು ಎಂದು ಮಾಹಿತಿ ನೀಡಿದರು.

ಪಾಲಿಕೆಯ ನಗರ ಯೋಜನೆ ಇಲಾಖೆಯ ಅಧಿಕೃತ ಮಾಹಿತಿಯ ಪ್ರಕಾರ, ಕಳೆದ 16 ವರ್ಷಗಳಲ್ಲಿ ಕೇವಲ 4,381 ಸಿಸಿ ಹಾಗೂ 4,587 ಕಟ್ಟಡಗಳಿಗೆ ಒಸಿ ನೀಡಲಾಗಿದೆ. 437 ಬಿಲ್ಡರ್ ಸಂಸ್ಥೆಗಳು 50 ಕ್ಕೂ ಹೆಚ್ಚು ಯೂನಿಟ್‌ಗಳನ್ನು ಹೊಂದಿರುವ ಸುಮಾರು 25 ಸಾವಿರಕ್ಕೂ ಅಧಿಕ ವಸತಿ ಸಂಕೀರ್ಣಗಳನ್ನು ನಿರ್ಮಿಸಿರುವುದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ವಸತಿ ಸಂಕೀರ್ಣಗಳಲ್ಲಿ ಅಂದಾಜು 12 ಲಕ್ಷ ಫ್ಲಾಟ್‌ಗಳಿದ್ದು, ಬಹುತೇಕ ಗ್ರಾಹಕರು ನಕಲಿ ದಾಖಲೆಗಳ ಆಧಾರದಲ್ಲಿ ಫ್ಲಾಟ್ ಖರೀದಿಸಿ ಮೋಸಕ್ಕೊಳಗಾಗಿದ್ದಾರೆ ಎಂದು ಆರೋಪಿಸಿದರು.

ಕೋತಿ ಆಂಜನೇಯನಿಗೆ ಪೂಜೆ



• **ಬೆಂಗಳೂರು:** ಬಿಡದಿಯ ಶ್ರೀ ಕೋತಿ ಆಂಜನೇಯಸ್ವಾಮಿ ದೇವಾಲಯದಲ್ಲಿ ಶನಿವಾರ ಅಮಾವಾಸ್ಯೆ ಅಂಗವಾಗಿ ವಿಶೇಷ ಪೂಜೆ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕೋತಿ ಆಂಜನೇಯಸ್ವಾಮಿ ದೇವಾಲಯದಲ್ಲಿ ಅಮಾವಾಸ್ಯೆ ಪ್ರಯುಕ್ತ ಸುದರ್ಶನ ಹೋಮ ಹಾಗೂ ಪೂಜಾ ಕಾರ್ಯಗಳು ನೆರವೇರಿದವು. ಕೋತಿ ಆಂಜನೇಯಸ್ವಾಮಿ ಮೂರ್ತಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಈ ವಿಶೇಷ ದಿನದಂದು ದೇವಾಲಯಕ್ಕೆ ಭಕ್ತಸಾಗರವೇ ಹರಿದುಬಂದಿತ್ತು. ಸರತಿ ಸಾಲಿನಲ್ಲಿ ನಿಂತ ಭಕ್ತಾಧಿಗಳು ಸ್ವಾಮಿಯ ದರ್ಶನ ಪಡೆದು ತಮ್ಮ ಭಕ್ತಿಭಾವ ಸಮರ್ಪಿಸಿಕೊಂಡರು. ದೇಗುಲದಲ್ಲಿ ಪ್ರತಿ ಅಮಾವಾಸ್ಯೆಯ ದಿನದಂದು ಸುದರ್ಶನ ಹೋಮ ನಡೆಯಲಿದ್ದು ಅನೇಕ ಗಣ್ಯರು ಹೋಮ ಹಾಗೂ ಪೂಜಾ ಕೈಂಕರ್ಯಗಳಲ್ಲಿ ಭಾಗವಹಿಸುವುದು ವಾಡಿಕೆಯಾಗಿದೆ.

ಬಿಡದಿ ಪುರಸಭೆ 18ನೇ ವಾರ್ಡ್ ವ್ಯಾಪ್ತಿಯ ಮೇಡನಹಳ್ಳಿ ಗ್ರಾಮದಲ್ಲಿರುವ ಪ್ರಸಿದ್ಧ ಶ್ರೀಶನೇಶ್ವರಸ್ವಾಮಿ ದೇಗುಲದಲ್ಲಿ ಶನಿಜಯಂತೋತ್ಸವ ಹಾಗೂ ಅಮಾವಾಸ್ಯೆ ಪೂಜೆಯು ಶನಿವಾರ ಶ್ರದ್ಧಾಭಕ್ತಿಯಿಂದ ನೆರವೇರಿತು.

ಮೇಡನಹಳ್ಳಿ ಗ್ರಾಮದ ಶ್ರೀಶನೇಶ್ವರಸ್ವಾಮಿ ದೇವಾಲಯದಲ್ಲಿ ನಡೆದ ಅಮಾವಾಸ್ಯೆಯ ವಿಶೇಷ ಪೂಜೆಯಲ್ಲಿ ಸುತ್ತಮುತ್ತಲ ಗ್ರಾಮಗಳಲ್ಲದೆ ದೂರದ ಊರುಗಳಿಂದಲೂ ನೂರಾರು ಭಕ್ತರು ಆಗಮಿಸಿ ಪೂಜೆ ಸಲ್ಲಿಸಿದರು. ದೇಗುಲದ ಆವರಣದಲ್ಲಿ ಭಕ್ತರಿಗಾಗಿ ಪ್ರಸಾದ ವಿತರಣೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಪ್ರಧಾನ ಅರ್ಚಕ ಮುತ್ತುರಾಯಪ್ಪ ಮತ್ತವರ ವರ ಪುತ್ರ ಹಂಸರಾಜ್ ಅವರು ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು. ಭಕ್ತರು ಸರತಿ ಸಾಲಿನಲ್ಲಿ ನಿಂತು ಸ್ವಾಮಿಯ ದರ್ಶನ ಪಡೆದರು.

ಸ್ವಾಮಿಯ ದರ್ಶನಕ್ಕೆ ಹರಿದುಬಂದ ಭಕ್ತಸಾಗರ | ಪ್ರಸಾದ ವಿತರಣೆ

ವಿಜೃಂಭಣೆಯ ಮಧುರೆ ಶನೈಶ್ಚರ ಜಯಂತಿ





• **ದೊಡ್ಡಬಳ್ಳಾಪುರ:** ಶನೇಶ್ವರ ಜಯಂತಿ ಹಾಗೂ ಅಮಾವಾಸ್ಯೆ ಒಂದೇ ದಿನ ಬಂದಿರುವ ಹಿನ್ನೆಲೆ ತಾಲೂಕಿನ ಐತಿಹಾಸಿಕ ಮಧುರೆ ಶನೇಶ್ವರ ದೇವಸ್ಥಾನದಲ್ಲಿ ಅಪಾರ ಭಕ್ತಸಾಗರ ಕಂಡುಬಂದಿತು. ಬೆಳ್ಳಂಬೆಳಗ್ಗೆ ಸಾವಿರಾರು ಭಕ್ತರು ದೇವಸ್ಥಾನಕ್ಕೆ ಆಗಮಿಸಿ ಶನಿದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಅಮಾವಾಸ್ಯೆ ಮತ್ತು ಶನೇಶ್ವರ ಜಯಂತಿ ಸಂಯೋಗವನ್ನು ಅತ್ಯಂತ ಪುಣ್ಯಕರವೆಂದು ಪರಿಗಣಿಸಲಾಗುತ್ತದೆ. ಈ ಹಿನ್ನೆಲೆ ಭಕ್ತರು ಎಳ್ಳೆಣ್ಣೆ ದೀಪ ಹಚ್ಚಿ, ತೈಲಾಭಿಷೇಕ, ಅರ್ಚನೆ ಹಾಗೂ ವಿಶೇಷ ಹೋಮಗಳಲ್ಲಿ ಭಾಗವಹಿಸಿದರು. ದೇವಸ್ಥಾನದಲ್ಲಿ ವಿಶೇಷ ಅಲಂಕಾರ, ಭಜನೆ ಹಾಗೂ ಪ್ರಸಾದ ವಿತರಣೆಯ ವ್ಯವಸ್ಥೆ ಮಾಡಲಾಗಿತ್ತು.

ಭಕ್ತರ ಸಂಖ್ಯೆ ಹೆಚ್ಚಿರುವ ದೇವಸ್ಥಾನದ ಸುತ್ತಮುತ್ತ ಪೊಲೀಸ್ ಬಿಗಿ ಭದ್ರತೆ ಹಾಗೂ ವಾಹನ ಸಂಚಾರ ನಿಯಂತ್ರಣ ವ್ಯವಸ್ಥೆ ಕಲ್ಪಿಸಲಾಗಿದೆ. ಜಿಲ್ಲೆಯ ವಿವಿಧ ಭಾಗಗಳಿಂದ ಭಕ್ತರು ಆಗಮಿಸಿ ಭಕ್ತಿಭಾವದಿಂದ ಪೂಜೆ ಸಲ್ಲಿಸಿದರು.

ಬಾರಿ ವಾಹನಗಳಿಂದ ಬಾರಿ ಟ್ರಾಫಿಕ್ ಸಮಸ್ಯೆ

ದೇವಾಲಯದ ಪಕ್ಕದಲ್ಲಿ ಹಾದು ಹೋಗಿರುವ ಹೆದ್ದಾರಿಯಲ್ಲಿ ಬೃಹತ್ ಲಾರಿಗಳ ಸಂಚಾರ ನಿರಂತರವಾಗಿರುವ ಕಾರಣ ಸಂಚಾರದಟ್ಟಣೆ ಹೆಚ್ಚಾಗಿತ್ತು. ದೇವಾಲಯದಿಂದ ಎರಡು ಕಿಲೋಮೀಟರ್‌ವರೆಗೆ ವಾಹನಗಳ ಟ್ರಾಫಿಕ್ ಹೆಚ್ಚಾಗಿರುವ ಕಾರಣ ಭಕ್ತರು ಗಂಟೆಗಟ್ಟಲೆ ಕಾಯುವ ಪರಿಸ್ಥಿತಿ ಉಂಟಾಗಿತ್ತು. ದೊಡ್ಡಬಳ್ಳಾಪುರ ನೆಲಮಂಗಲ ರಸ್ತೆಯಲ್ಲಿ ಬಾರಿ ವಾಹನಗಳ ಸಂಚಾರ ನಿಷೇಧ ಮಾಡುವಂತೆ ಸ್ಥಳೀಯ ಜನರು ಒತ್ತಾಯಿಸಿದ್ದಾರೆ.

ರಾಜ್ಯ ಸರ್ಕಾರಕ್ಕೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಆಗ್ರಹ

ತಕ್ಷಣವೇ ಟೌನ್‌ಶಿಪ್ ಯೋಜನೆ ಕೈಬಿಡಿ



• **ಬೆಂಗಳೂರು:** ಜನರು ವಿರೋಧ ಮಾಡಿದ್ದಕ್ಕೆ ಅಂದು ಕುಮಾರಸ್ವಾಮಿ ಅವರು ಐದು ಟೌನ್ ಶಿಪ್ ಯೋಜನೆಗಳನ್ನು ಕೈಬಿಟ್ಟರು. ಈಗಲೂ ಕೂಡ ಬಿಡದಿ ಟೌನ್ ಶಿಪ್ ಯೋಜನೆಗೆ ಜನರ ಆಕ್ರೋಶ, ವಿರೋಧ ಇದೆ. ಹೀಗಾಗಿ ಯೋಜನೆಯನ್ನು ತಕ್ಷಣವೇ ಕೈಬಿಡಬೇಕು ಎಂದು ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡರು ಆಗ್ರಹಿಸಿದರು.

ಜೆಡಿಎಸ್ ಪಕ್ಷದ ಕಚೇರಿ ಜೆಪಿ ಭವನದಲ್ಲಿ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಈ ಬಗ್ಗೆ ನಾನು ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದೇನೆ. ಇವತ್ತಿನಿಂದ ನನ್ನ ಹೋರಾಟ ಆರಂಭವಾಗಿದೆ. ಬೆಂಗಳೂರು ಸುತ್ತಮುತ್ತ ಬಡವರ ಜಮೀನನ್ನು ಕಿತ್ತುಕೊಳ್ಳುವ ಶಕ್ತಿಗಳನ್ನು ಮಟ್ಟ ಹಾಕಬೇಕಿದೆ. ಬಿಡಿಎ ಸೇರಿದಂತೆ ಎಲ್ಲೆಲ್ಲಿ ಅಕ್ರಮ ನಡೆದಿದೆಯೋ ಅಲ್ಲೆಲ್ಲ ನಾನು ಹೋರಾಟ ನಡೆಸುತ್ತೇನೆ. ಈ ಬಗ್ಗೆ ಮುಖ್ಯಮಂತ್ರಿಗೆ ಬರೆದಿರುವ ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದೇನೆ ಎಂದರು. ಟೌನ್‌ಶಿಪ್ ಹೆಸರಿನಲ್ಲಿ ಫಲವತ್ತಾದ ಭೂಮಿಯನ್ನು ಹೊಡೆಯಲು ಹೊರಟಿದ್ದಾರೆ. ಭೂಮಿಯನ್ನು ಕಿತ್ತುಕೊಂಡು ಯಾರಿಗೆ ಕೊಡಲು ಹೊರಟಿದ್ದಾರೆ ಎಂಬುದನ್ನು ಸರ್ಕಾರ ಹೇಳಬೇಕು. ನಾನು ಬರುತ್ತೇನೆ, ನೀವು ಬನ್ನಿ. ಸ್ಥಳಕ್ಕೆ ಭೇಟಿ ನೀಡೋಣ. ಈವರೆಗೂ ಸ್ಥಳೀಯ ಶಾಸಕರು, ತಹಸೀಲ್ದಾರರು, ಜಿಲ್ಲಾಧಿಕಾರಿಗಳು ಆ ಜನರ ಸಮಸ್ಯೆಯನ್ನು ಕೇಳಿಲ್ಲ, ಇಲ್ಲಿ ದಂಧೆ ನಡೆಯುತ್ತಿದೆ. ರೈತರ ಭೂಮಿಯನ್ನು ಕಿತ್ತುಕೊಂಡು ದಂಧೆ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಮಾಧ್ಯಮಗೋಷ್ಠಿಯಲ್ಲಿ ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ಗ್ರೇಟರ್ ಬೆಂಗಳೂರು ಜೆಡಿಎಸ್ ಅಧ್ಯಕ್ಷ ಎಚ್.ಎಂ ರಮೇಶ್ ಗೌಡ, ಮಾಜಿ ಶಾಸಕ ಮಂಜುನಾಥ್ ಉಪಸ್ಥಿತರಿದ್ದರು.

ಎಚ್‌ಡಿಕೆ ಕುಟುಂಬದವರಿಂದ ರಿಯಲ್ ಎಸ್ಟೇಟ್: ಡಿಸಿಎಂ

• **ಬೆಂಗಳೂರು:** ರಿಯಲ್ ಎಸ್ಟೇಟ್ ಮೂಲಕ ಆಸ್ತಿ ಮಾಡಿಕೊಂಡಿರುವುದು ಕುಮಾರಸ್ವಾಮಿ ಅವರ ಕುಟುಂಬದವರು. ಪಿಆರ್‌ಆರ್ ರಸ್ತೆ ಭಾಗದಲ್ಲಿ ಹೆದರಿಸಿ ಆಸ್ತಿಗಳನ್ನು ಬರೆಸಿಕೊಳ್ಳುವ ಕೆಲಸವನ್ನು ಅವರ ಅಣ್ಣ ಮಾಡಿದ್ದಾರೆ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ಆರೋಪಿಸಿದ್ದಾರೆ. ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ದೊಡ್ಡ ಗುಬ್ಬಿ, ಚಿಕ್ಕ ಗುಬ್ಬಿ ಭಾಗದಲ್ಲಿ ಕೇಳಿ ನೋಡಿ, ಅವರು ಹೇಗೆ ಜನರನ್ನು ಹೆದರಿಸಿ ಎಲ್ಲಾ ಆಸ್ತಿಗಳನ್ನು 7, 8, 10 ಲಕ್ಷಕ್ಕೆ ಆಸ್ತಿಗಳನ್ನು ನೋಂದಣಿ ಮಾಡಿಸಿಕೊಂಡಿದ್ದಾರೆ ಎಂಬುದನ್ನು ಹೇಳುತ್ತಾರೆ. ಈಗ ಆ ಆಸ್ತಿಗಳೆಲ್ಲ 25, 30, 50 ಕೋಟಿ ರೂ. ಆಸ್ತಿಯಾಗಿದೆ. ಅವರು ಬೇರೆಯವರ ಬಗ್ಗೆ ಮಾತನಾಡುವುದು ಬೇಡ ಗುಡುಗಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಬಿಟಿಎಂ ಲೇಔಟ್ ವಿಭಾಗ, ಬಿಬಿಎಂಪಿ ವಾಣಿಜ್ಯ ಸಂಕೀರ್ಣ, 2ನೇ ಮಹಡಿ, ಲಷ್ಕರ್ ಹೊಸೂರು ರಸ್ತೆ, ಆಡುಗೋಡಿ, ಬೆಂಗಳೂರು-560030.

ಸಂಖ್ಯೆ: ಕಾಪಾಅ(ಬಿಟಿಎಂ)/ಕೆಪಿಪಿಪಿ/04/2026-27 ದಿನಾಂಕ: 16-05-2026

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ
(ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ವೆಬ್‌ಸೈಟ್: https://kppp.karnataka.gov.in

ಕಾರ್ಯಪಾಲಕ ಅಭಿಯಂತರರು, ಬಿಟಿಎಂ ಲೇಔಟ್ ವಿಭಾಗ, ಬೆಂದನಪಾ, ಬೆಂಗಳೂರು ರವರು ಬೆಂದನಪಾ/ಕೆ.ಪಿ.ಡಬ್ಲ್ಯು.ಡಿ/ಸಿ.ಪಿ.ಡಬ್ಲ್ಯು.ಡಿ ಅಥವಾ ಇತರೆ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತರಾಗಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು / ವರ್ಗ
	2ನೇ ಕರೆ
1)	ಮಡಿವಾಳ ಉಪ ವಿಭಾಗದಲ್ಲಿ (ವಾರ್ಡ್ ಸಂಖ್ಯೆ 20, 21 ಮತ್ತು 22) ತಾತ್ಕಾಲಿಕ ಮಾನ್ಸೂನ್ ನಿಯಂತ್ರಣ ಕೊಠಡಿ ಸ್ಥಾಪನೆ. (ಇತರೆ) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 7.50. ಇಎಂಡಿ (ರೂ.ಗಳಲ್ಲಿ): 18,750/-.
2)	ಲಕ್ಕಸಂದ್ರ ಉಪ ವಿಭಾಗದಲ್ಲಿ (ವಾರ್ಡ್ ಸಂಖ್ಯೆ 23, 24 ಮತ್ತು 29) ತಾತ್ಕಾಲಿಕ ಮಾನ್ಸೂನ್ ನಿಯಂತ್ರಣ ಕೊಠಡಿ ಸ್ಥಾಪನೆ. (ಇತರೆ) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 7.50. ಇಎಂಡಿ (ರೂ.ಗಳಲ್ಲಿ): 18,750/-.
3)	ಈಜಿಪುರ ಉಪ ವಿಭಾಗದಲ್ಲಿ (ವಾರ್ಡ್ ಸಂಖ್ಯೆ 25, 26 ಮತ್ತು 27) ತಾತ್ಕಾಲಿಕ ಮಾನ್ಸೂನ್ ನಿಯಂತ್ರಣ ಕೊಠಡಿ ಸ್ಥಾಪನೆ. (ಇತರೆ) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 7.50. ಇಎಂಡಿ (ರೂ.ಗಳಲ್ಲಿ): 18,750/-.
4)	ಕೋರಮಂಗಲ ಉಪ ವಿಭಾಗದಲ್ಲಿ (ವಾರ್ಡ್ ಸಂಖ್ಯೆ 28 ಮತ್ತು 30) ತಾತ್ಕಾಲಿಕ ಮಾನ್ಸೂನ್ ನಿಯಂತ್ರಣ ಕೊಠಡಿ ಸ್ಥಾಪನೆ. (ಇತರೆ) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 5.00. ಇಎಂಡಿ (ರೂ.ಗಳಲ್ಲಿ): 12,500/-.
	3ನೇ ಕರೆ
5)	ವಾರ್ಡ್ ಸಂಖ್ಯೆ 18 ವಿಶ್ವಮಾನವ ಕುವೆಂಪು ವಾರ್ಡ್‌ನ ವ್ಯಾಪ್ತಿ ಪ್ರದೇಶದ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ 2026-27ನೇ ಸಾಲಿನ ವಾರ್ಷಿಕ ನಿರ್ವಹಣೆ. (ಇತರೆ) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 15.00. ಇಎಂಡಿ (ರೂ.ಗಳಲ್ಲಿ): 37,500/-.
6)	ವಾರ್ಡ್ ಸಂಖ್ಯೆ 19 ಹೊಸ ತಾವರೆಕೆರೆ ವಾರ್ಡ್‌ನ ವ್ಯಾಪ್ತಿಯ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ 2026-27ನೇ ಸಾಲಿನ ವಾರ್ಷಿಕ ನಿರ್ವಹಣೆ. (CAT-1) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 15.00. ಇಎಂಡಿ (ರೂ.ಗಳಲ್ಲಿ): 18,750/-.
7)	ವಾರ್ಡ್ ಸಂಖ್ಯೆ 22 ಎಸ್‌ಜಿ ಪಾಳ್ಯ ವಾರ್ಡ್‌ನ ವ್ಯಾಪ್ತಿ ಪ್ರದೇಶದಲ್ಲಿನ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ 2026-27ನೇ ಸಾಲಿಗೆ ವಾರ್ಷಿಕ ನಿರ್ವಹಣೆ. (ಪರಿಶಿಷ್ಟ ಜಾತಿ) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ):15.00. ಇಎಂಡಿ (ರೂ.ಗಳಲ್ಲಿ): 18,750/-.
8)	ವಾರ್ಡ್ ಸಂಖ್ಯೆ 23 ಲಕ್ಕಸಂದ್ರ ವಾರ್ಡ್‌ನ ವ್ಯಾಪ್ತಿ ಪ್ರದೇಶದಲ್ಲಿನ ರಸ್ತೆಗಳು ಮತ್ತು ಫುಟ್‌ಪಾತ್‌ಗಳ 2026-27ನೇ ಸಾಲಿಗೆ ವಾರ್ಷಿಕ ನಿರ್ವಹಣೆ. (ಇತರೆ) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ):15.00. ಇಎಂಡಿ (ರೂ.ಗಳಲ್ಲಿ): 37,500/-.
9)	ವಾರ್ಡ್ ಸಂಖ್ಯೆ 24 ಎ ಆಡುಗೋಡಿ ವಾರ್ಡ್‌ನ ವ್ಯಾಪ್ತಿ ಪ್ರದೇಶದಲ್ಲಿನ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ 2026-27ನೇ ಸಾಲಿಗೆ ವಾರ್ಷಿಕ ನಿರ್ವಹಣೆ. (ಇತರೆ) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ):15.00. ಇಎಂಡಿ (ರೂ.ಗಳಲ್ಲಿ): 37,500/-.
10)	ವಾರ್ಡ್ ಸಂಖ್ಯೆ 26 ಈಜಿಪುರ ವಾರ್ಡ್‌ನ ವ್ಯಾಪ್ತಿ ಪ್ರದೇಶದಲ್ಲಿನ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ 2026-27ನೇ ಸಾಲಿಗೆ ವಾರ್ಷಿಕ ನಿರ್ವಹಣೆ. (ಇತರೆ) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ):15.00. ಇಎಂಡಿ (ರೂ.ಗಳಲ್ಲಿ): 37,500/-.
11)	ವಾರ್ಡ್ ಸಂಖ್ಯೆ 27 ಶ್ರೀ ಲಕ್ಷ್ಮಿದೇವಿ ವಾರ್ಡ್‌ನ ವ್ಯಾಪ್ತಿ ಪ್ರದೇಶದಲ್ಲಿನ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ 2026-27ನೇ ಸಾಲಿಗೆ ವಾರ್ಷಿಕ ನಿರ್ವಹಣೆ. (ಪರಿಶಿಷ್ಟ ಜಾತಿ) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 15.00. ಇಎಂಡಿ (ರೂ.ಗಳಲ್ಲಿ): 18,750/-.
12)	ವಾರ್ಡ್ ಸಂಖ್ಯೆ 28 ಕೋರಮಂಗಲ ಪೂರ್ವ ವಾರ್ಡ್‌ನ ವ್ಯಾಪ್ತಿ ಪ್ರದೇಶದಲ್ಲಿನ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ 2026-27ನೇ ಸಾಲಿಗೆ ವಾರ್ಷಿಕ ನಿರ್ವಹಣೆ. (CAT-II(A) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 15.00. ಇಎಂಡಿ (ರೂ.ಗಳಲ್ಲಿ): 18,750/-.
13)	ಕೋರಮಂಗಲ ಪಶ್ಚಿಮ ವಾರ್ಡ್‌ನ ವ್ಯಾಪ್ತಿ ಪ್ರದೇಶದಲ್ಲಿನ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ 2026-27ನೇ ಸಾಲಿಗೆ ವಾರ್ಷಿಕ ನಿರ್ವಹಣೆ. (CAT-II(A) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 15.00. ಇಎಂಡಿ (ರೂ.ಗಳಲ್ಲಿ): 18,750/-.
14)	ವಾರ್ಡ್ ಸಂಖ್ಯೆ 30 ಚಿಕ್ಕಸಂದ್ರ ವಾರ್ಡ್‌ನ ವ್ಯಾಪ್ತಿ ಪ್ರದೇಶದಲ್ಲಿನ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ 2026-27ನೇ ಸಾಲಿಗೆ ವಾರ್ಷಿಕ ನಿರ್ವಹಣೆ. (ಇತರೆ) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 15.00. ಇಎಂಡಿ (ರೂ.ಗಳಲ್ಲಿ): 37,500/-.

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 25-05-2026 ಸಂಜೆ 4:00 ಗಂಟೆಯವರೆಗೆ. 2) ಟೆಂಡರ್‌ಗಳನ್ನು ತೆರೆಯುವ ದಿನಾಂಕ: 26-05-2026ರ ಸಂಜೆ 4:30 ಗಂಟೆಗೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಬಿಟಿಎಂ ಲೇಔಟ್ ವಿಭಾಗ, ಬೆಂದನಪಾ.

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಮಗಳೂರು-577101

(Autonomous Medical Institution,Government of Karnataka)
Phone: 08262-295347
E-Mail AddressL directorcims2020@gmail.com

ಸಂಖ್ಯೆ:ಸಿಮ್ಸ್/ಸರಬು/ಟೆಂಡರ್/ಪತ್ರಿಕಾ ಪ್ರಕಟಣೆ/01/2026-27
ದಿನಾಂಕ:14-05-2026

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ
(ದ್ವಿಲಕೋಟೆ ಪದ್ಧತಿ)

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆರಳಗುಪ್ಪೆ ಮಲ್ಲೇಗೌಡ ಜಿಲ್ಲಾಆಸ್ಪತ್ರೆಯ ಒಬಿಜಿ ವಿಭಾಗಕ್ಕೆ ಅವಶ್ಯವಿರುವ **Fetal Heart Monitors** ಗಳನ್ನು ಸರಬರಾಜು ಮಾಡಲು ಉತ್ಪಾದಕರವರಿಂದ/ನೋಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ/ ಅರ್ಹ ಉದ್ದಿಮೆದಾರರಿಂದ ದ್ವಿ - ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಮರು ಇ-ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್‌ನ ಅಂದಾಜು ಮೊತ್ತ ರೂ.40.00ಲಕ್ಷಗಳು ಟೆಂಡರ್‌ನ ಇ.ಎಂ.ಡಿ ಮೊತ್ತ. ಇ-ಟೆಂಡರ್ ಅರ್ಜಿ ಸಲ್ಲಿಸುವ ಪ್ರಾರಂಭ ಮತ್ತು ಅಂತಿಮ ದಿನಾಂಕ ಮತ್ತಿತರ ಹೆಚ್ಚಿನ ವಿವರಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/- ನಿರ್ದೇಶಕರು
ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಚಿಕ್ಕಮಗಳೂರು

ತುಮಕೂರು ಮಹಾನಗರ ಪಾಲಿಕೆ ತುಮಕೂರು

ದೂ. : 0816-2272200, ಸಹಾಯವಾಣಿ : 94498 72599,
ಇ-ಮೇಲ್ : ka.tumakuru.cc@gmail.com
ವೆಬ್‌ಸೈಟ್ : www.tumakurucity.mrc.gov.in

ಸಂಖ್ಯೆ : ತು.ಮ.ಪಾ./ಕಂ.ಶಾ./ಮಳಿಗೆ ಹರಾಜು/ಸಿಆರ್/01/2026-27
ದಿನಾಂಕ : 13-05-2026

ವಾಣಿಜ್ಯ ಮಳಿಗೆಗಳ ಬಹಿರಂಗ ಹರಾಜು ಪ್ರಕಟಣೆ

ಸಾರ್ವಜನಿಕ ಈ ಮೂಲಕ ತಿಳಿಯಪಡಿಸುವುದೇನೆಂದರೆ, ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಇ-ಹರಾಜಿನಲ್ಲಿ ವಿಲೇವಾರಿಯಾಗದೆ ಖಾಲಿ ಉಳಿದಿರುವ ಈ ಕೆಳಕಂಡ ಪಟ್ಟಿಯಲ್ಲಿರುವ ಒಟ್ಟು 35 ಮಳಿಗೆಗಳನ್ನು 12 ವರ್ಷಗಳ ಅವಧಿಗೆ ದಿನಾಂಕ : 02-06-2026 ರ ಬೆಳಿಗ್ಗೆ 11.00 ಗಂಟೆಗೆ, ತುಮಕೂರು ಮಹಾನಗರ ಪಾಲಿಕೆಯ ಸಭಾಂಗಣದಲ್ಲಿ ಆಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದಿರುವವರಿಂದ ಬಹಿರಂಗ ಹರಾಜು ಹಮ್ಮಿಕೊಳ್ಳಲಾಗಿರುತ್ತದೆ. ಆದ್ದರಿಂದ ಆಸಕ್ತಿದಾರರು ಸದರಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಮಳಿಗೆಗಳನ್ನು ಪಡೆಯಬಹುದಾಗಿರುತ್ತದೆ.

ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಬೇಕಿರುವ ದಿನಾಂಕ : 18-05-2026 ರಿಂದ 01-06-2026 ರ ಸಂಜೆ 5.00 ಗಂಟೆಯೊಳಗೆ, ಇ.ಎಂ.ಡಿ. ಮೊತ್ತ : ಕೋಷ್ಟಕದಲ್ಲಿ ತಿಳಿಸಿರುವ ಇ.ಎಂ.ಡಿ. ಮೊತ್ತವನ್ನು ಆಯುಕ್ತರು, ಮಹಾನಗರ ಪಾಲಿಕೆ, ತುಮಕೂರು ಇವರ ಹೆಸರಿನಲ್ಲಿ ಡಿ.ಡಿ. ರೂಪದಲ್ಲಿ ಮಾತ್ರ ಪಡೆದು ಪಾವತಿಸುವುದು.

ವಾಣಿಜ್ಯ ಮಳಿಗೆಗಳ ವಿವರ

ವಾಣಿಜ್ಯ ಸಂಕೀರ್ಣದ ಹೆಸರು	ಖಾಲಿ ಇರುವ ಮಳಿಗೆಗಳನ್ನು ಸಂಖ್ಯೆ	ನಿಗದಿಪಡಿಸಿರುವ ಠೇವಣಿ ಮೊತ್ತ	ಕನಿಷ್ಠ ಬಾಡಿಗೆ ಮೊತ್ತ	ಇ.ಎಂ.ಡಿ. ಮೊತ್ತ
ಖಾಸಗಿ ಬಸ್ ನಿಲ್ದಾಣದಲ್ಲಿನ ವಾಣಿಜ್ಯ ಸಂಕೀರ್ಣ	ನೆಲ ಮಹಡಿ - 21, 28 (ಪ.ಜಾ.) 30 (ಪ.ಪಂ.) 25, 26, 27, 29, 31, 32 (ಸಾಮಾನ್ಯ)	ರೂ. 1,93,000/-	ರೂ. 4,950/-	ರೂ. 25,000/-
	ನೆಲ ಮಹಡಿ - 33 (ವಿಶೇಷಚೇತನ) 34 (ಸಾಮಾನ್ಯ) 35 (ಪ.ಜಾ.)	ರೂ. 1,39,000/-	ರೂ. 3,555/-	ರೂ. 25,000/-
	ಮೊದಲ ಮಹಡಿ - 102, 103, 104, 106, 107, 108, 109, 110, 111 (ಸಾಮಾನ್ಯ) 105, 112 (ಪ.ಜಾ.)	ರೂ. 1,90,000/-	ರೂ. 4,860/-	ರೂ. 25,000/-
	ಮೊದಲ ಮಹಡಿ - 113, 114, 115, 116 117, 118, 121 (ಸಾಮಾನ್ಯ) 120 (ಪ.ಪಂ.) 119, 122 (ಪ.ಜಾ.)	ರೂ. 1,47,500/-	ರೂ. 3,393/-	ರೂ. 25,000/-
	ನೆಲ ಮಹಡಿ - 37 (ಸಾಮಾನ್ಯ)	ರೂ. 2,78,000/-	ರೂ. 7,380/-	ರೂ. 25,000/-
ಶಿರಾ ಗೇಟ್ ಬಿಡಿಎಸ್‌ಎಂಟಿ ವಾಣಿಜ್ಯ ಸಂಕೀರ್ಣ	ನೆಲ ಮಹಡಿ - 56 (ಪ.ಪಂ.)	ರೂ. 24,500/-	ರೂ. 963/-	ರೂ. 24,500/-

ಸೂಚನೆ : ಬಹಿರಂಗ ಹರಾಜಿಗೆ ಸಂಬಂಧಿಸಿದಂತೆ ಸಾರ್ವಜನಿಕ ಪ್ರಕಟಣೆಯ ಸಂಪೂರ್ಣ ಮಾಹಿತಿಯ ಬಗ್ಗೆ ಹೆಚ್ಚಿನ ವಿವರಗಳನ್ನು **ಪಾಲಿಕೆ ವೆಬ್‌ಸೈಟ್** : www.tumakurucity.mrc.gov.in ನಲ್ಲಿ ಹಾಗೂ ಪಾಲಿಕೆ ಕಛೇರಿಯ ಸೂಚನಾ ಫಲಕದಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಆಯುಕ್ತರು,
ತುಮಕೂರು ಮಹಾನಗರ ಪಾಲಿಕೆ, ತುಮಕೂರು.

IN THE COURT OF MOTOR ACCIDENT CLAIMS TRIBUNAL AT BANGALORE
MVC No. 6632/2025

BETWEEN:
Pankaj Kumar @ Pankaj Kumar Yadav ...Petitioner
AND:
Shriram Gen Ins Com Ltd., & Ots ...Respondent
Notice to Respondent No.2
1. Mr. K.M Barkathulla,
S/o: Shafulla kathulla K.M, R/At: No.298-2, Venkataswamappa Layout, Near Sai Mandir, Shampura, Bangalore North-560045.

Take notice that the above petitioner had filed the above claim petition against the Respondents for the compensation of Rs.15,00,000/- for the grievous injury sustained by petitioner in RTA, Dated 10-08-2025 at about 06.30 P.M., at B.B Road., Near Kodigehalli Junction, Bangalore. by offending Car Bearing No.KA-02-AE-8524. The Respondent No.2 above named is hereby directed to appear before this Hon'ble Court either in person through the pleader on the **10th day of July 2026** before SCCH:02 **at 11.00 a.m.**, to defend the above case, failing which the matter will be determined as Ex-parte.

Given under my hand & seal of the court on this 7th day of May 2026.

By order of the Court
Sd/- Assistant Registrar
Court of Small Causes, Bengaluru

Advocate for petitioner:
H.V. KUMARASWAMY, Advocate
No.39/2, ASVNV Bhavan, 5th floor, K.G Road, Bangalore -09.

IN THE COURT OF THE 1ST ADDITIONAL SENIOR CIVIL JUDGE AT TUMKUR
MVC:NO:654/2024

PETITIONER: Mohammed Ansar **/VERSUS/ RESPONDENTS:** Manjunatha and another. R1. Manjunatha S/o Swamy Aged about 41 years R/o Word No.13, Vidyanagara, Near Vasavi School, Magadi Taluk, RAMANAGARA DISTRICT. (Owner of Ashoka Leyland bearing Its Reg. No:KA-52. A-2659)

UNDER ORDER 5 RULE 20(1)(a) OF CIVIL PROCEDURE CODE:

Whereas the applicant has instituted a claim against the Respondents No.1 and 2 and others for the reliefs as sought in claim petition.

You are hereby notice to appear in this court in person or by pleader duly entrusted and able to answer all material question relating to the case on 01-07-2026 at 11:00 A.M.

Take notice that, in the event of case not being contested the case will heard and determined as ex-parte.

Given under my hand and seal of this court that the 16/5/2026.

By Order of this court,
Sd/- **Senior Sheristedar,** Senior Civil Judge, C.J.M. Court, TUMAKURU
Sd/- **A.S.Chandrashekaraiah** B.Sc., L.L.B., Advocate, No.7/A, upstairs, New GMS Complex, Opposite to KSRTC Bus stand, Ashoka road, Tumakuru.

ಮಾನ್ಯ ಗೌರವಾನ್ವಿತ 1ನೇ ಅಪರ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕೋಲಾರ
ಓ.ಎಸ್. ನಂ. 134/2024

[illegible]

ಈ ದಿನ ದಿನಾಂಕ 24.02.2026 ರಂದು ಸಹಿ ಮತ್ತು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೇದಾರರು, 1ನೇ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕೋಲಾರ
ವಾದಿಯ ಪರ ವಕೀಲರು : [illegible], ಕೋಲಾರ

IN THE COURT OF THE HONBLE III ADDL CIVIL JUDGE AND JMFC KOLAR
O.S.NO.486/2022

Between: Smt.Anjinamma :PLAINTIFF
AND
Smt.M.Sunithakumari And another :DEFENDANTS

NOTICE UNDER ORDER 5 RULE 20(1A) OF CPC TO DFENDANTS

1.Smt.M.Sunithakumari W/o H.D.Anandkumar D/o K.S.Madevaiah Aged about 41 years R/at No.95, Dayamarga Siddarthanagara. Mysore-011 And also R/at No. 1771, Judicial Layout Yelahanaka, Banglaroe-64
2.Sri. Mohammed Mansor Pasha S/o Arief, Aged about 42 years, R/at No.20, 3rd Cross, Ummar Baig Layout, J.P.Nagara, Bangalore South, Bangalore.

Whereas, the plaintiff have instituted the above suit against the defendants for the relief of permanent injunction and such other relief in respect of the suit schedule property. This Hon'ble court be pleased to issued summons to the Defendants are through court summons and also through RPAD, but same are not Served on you Defendants Hence the Defendants are hereby notice to appeared in this court in person or by advocate on 16.06.2026 at 11 "O" clock, to file your objections/written statement in this suit, you will be default of your appearance on the same day the take as exparte.

Given under my hand seal and signature on this 16th day of May 2026 at Kolar.

By order of the court.
SHERISTEDAR, THE HONBLE III ADDL CIVIL JUDGE AND JMFC KOLAR
Advocate of plaintiff: **N.D.Srinivas,** Advocate, Kolar
Kolar, Date: 16.05.2026

BEFORE THE ASSISTANT COMMISSIONER DODDABALLAPUR SUB-DIVISION, DODDABALLAPUR
R.A.No. 333/2025

BETWEEN : Sri. L. Madhu And others **Appellants**
AND : The Tahsildar And others **Respondents**

NOTICE TO RESPONDENT NO.2 to 07.

2. Mr. Gangadhar. S/O Late Rajappa, Aged About 39 Years, **3. Smt. Renuka** D/O Rajappa, Aged About 35 Years. **4. Smt. Meena,** D/O Late Rajappa, Aged About 25 Years. **5. Smt Muniyamma,** W/O Late Muniyappa, Aged About 69 Years, R-2 to R-5 are R/At No. 25, Thriveni Nagara, Bengaluru North-560036. **6. Sri. Chennarayappa** S/O Late Muniyappa, Aged About 51 Years **7. Sri. Ramappa,** S/O Late Muniyappa, Aged About 46 Years. R6 & 7 are residing at, CT Gollahalli Village, Nandagudi Hobli, Hoskote Taluk, Bengaluru Rural District. ...**Respondents**

Whereas the Appellants above named have filed the above appeal before the Assistant commissioner doddaballpur sub divion under section 136(2) of Karnataka Land Revenue Act against the all of your and the tasildar challenging the mutation entries affected in the name of in MR No._T43/2024-25 in respect of land bearing _Sy o. 111 measuring 2.10 situated at C.T Gollahalli Village, Nandagudi Hobli, Hoskote Taluk, Bangalore Rural Dist and also to affect mutation entries in names of the appellants in respect of land bearing Sy No. 111, measuring 2.10. situated at C.T Gollahalli Village, Nandagudi hobli, Hoskote Taluk, Bangalore Rural Dist are hereby noticed to appear before Assistant commissioner doddaballpur sub divion either in person or through the pleader on the **15/06/2026 at 3.00 P.M.** to answer the same, failing which the matter will be heard ex-parte.

Given under my hand and seal of the Hon'ble court, this 08th day of 05/2026.

By Order of the Court
Sd/- Assistant Commissioner
Doddaballapur Sub-Division, Doddaballapur.
Bangalore Rural District

Advocate for Appellant Shivaranjan. H.

IN THE COURT OF THE DEPUTY COMMISSIONER AT KOLAR
RAP. NO.452/2025

APPELLANT: SM Venkaetshappa
V/S
RESPONDENTS: The AC and another

NOTICE UNDER ORDER 5 RULE 20 OF CPC.

Respondent No.2
Muniyappa S/o Late Kempanna, Aged about 50 Years, R/at Chikkanahalli Village, Vakkaleri Hobli, Kolar Taluk

Whereas, the appellant field this appeal against the respondents to set aside the order passed by the above appeal against the orders passed by the 1st respondent in RA, No 879/2023 dated 24/04/2025 n respect of Sy.No.179 of Chakarasanahalli village, Narasapura Hobli, Kolar Taluk. This Hon'ble court be pleased to issued notice to the respondent No.2 intentionally evading and avoiding to receive the summons issued by this Hon'ble court. Hence you respondent No.2 is hereby notice to appear in this court in person or by an advocate on 09.06.2026 at 3 pm to file objections to the appeal, in default of your appearance on the same day the court take as exparte.

Given under my hand seal and signature on this 5th day May of 2026 at Kolar

By order of the court
Deputy Commissioner Kolar
Advocate of appellant **Y.A. Sarvesh,** Advocate, Kolar

ಜಾಹೀರಾತಿಗಾಗಿ ಸಂಪರ್ಕಿಸಿ:
9845438807, 9611755391

IN THE COURT OF THE 1ST ADDITIONAL SENIOR CIVIL JUDGE AT TUMKUR
MVC:NO:652/2024

PETITIONER: Allabakash **/ VERSUS / RESPONDENTS:** Manjunatha and another. R1. Manjunatha S/o Swamy Aged about 41 years R/o Word No.13, Vidyanagara, Near Vasavi School, Magadi Taluk, RAMANAGARA DISTRICT. (Owner of Ashoka Leyland bearing Its Reg. No:KA-52. A-2659)

UNDER ORDER 5 RULE 20(1)(a) OF CIVIL PROCEDURE CODE:

Whereas the applicant has instituted a claim against the Respondents No.1 and 2 and others for the reliefs as sought in claim petition.

You are hereby notice to appear in this court in person or by pleader duly entrusted and able to answer all material question relating to the case on 01-07-2026 at 11:00 A.M.

Take notice that, in the event of case not being contested the case will heard and determined as ex-parte.

Given under my hand and seal of this court that the 16/5/2026

By Order of this court,
Sd/- **Senior Sheristedar,** Senior Civil Judge, C.J.M. Court, TUMAKURU
Sd/- **A.S.Chandrashekaraiah** B.Sc., L.L.B., Advocate, No.7/A, upstairs, New GMS Complex, Opposite to KSRTC Bus stand, Ashoka road, Tumakuru.

ಮಾನ್ಯ ಗೌರವಾನ್ವಿತ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, [illegible]
ಆರ್.ಎ.ನಂ.38/2022

[illegible]

PUBLIC NOTICE

This is to inform the general public that my client M/s. Regis and Savoy Capital, represented by its Proprietor Mr. Anil Kumar Nahar S/o. Gautham Chand Nahar, is proposing to purchase the Property bearing Residential Vacant BDA Plot bearing No.60, PID No.6000005690, carved out in Sy.No.11, situated at Srinivagilu Amanikere Village, Begur Hobli, Bangalore South Taluk,; measuring East to West: 70 feet and North to South: 100 feet, in all totally measuring 7000 square feet, and bounded on the East by: Plot No.59, West by: Plot No.61, North by: 40 feet Road and South by: Plot No.65, from its present owner Dr. Bindu Harikrishnan W/o. Sri. Harikrishnan, residing at No. C-101 Lands Down Apartment 7th Cross, 100 feet Road, Fly Over Domlur, Benaluru-560 071.

If anybody having any objection for the same or anybody having any claim on the said property, is requested to contact the undersigned within 15 days of the publication of this notice. Any claim made after the period of 15 days will not be binding on my client.

SOMASHEKHARA A.N. Advocate
AASTHI LAW CHAMBERS
No. 21/1, Girls School Street, Kumarapark West, Bengaluru - 560020

PUBLIC NOTICE

This is to inform the general public that my client Mr. Vijayanand Thakur S/o. Netaji Thakur is the absolute owner of the property bearing Site No. 66, E-Khatha PID No. 2263535296, Nirdharana No. 147/66, Old V.P. Property No. 147/66, Situated at Sajjanahalli Village, Vemagal-Kurugal TMC, Vemagal Hobli, Kolar Taluk & District.; Measuring East to West 12.192 Meters and North to South 9.144 Meters, in totally 111.4837 Sq.Mtrs.; and bounded on; East by : Site No. 67, West by : 30 feet Road, North by : 40 feet Road and South by : Site No. 65. While renovating his house, my client has lost the Original Sale Deed dated 03/07/2024, Document No. KLR-1-03253/2024-25, Book-1, SRO, Kolar., pertaining to the said property

In the event any person having the above said original documents, kindly handover the same to the below mentioned address within 07 days of the publication of this notice. The general public are informed not to act on the basis of the said original documents.

SOMASHEKHARA A.N. Advocate
No. 105, 3rd Floor, MR Mansion, 12th 'D' Main Road, Muthyalanagar, Bengaluru - 560 054.

THE KARNATAKA STATE CO-OPERATIVE APEX BANK LTD

[Scheduled Bank]
"UTHUNGA", No.1, Pampamahakavi Road, Chamarajpet, Bengalur- 560 018
Telephone No. 080-22976600, 26983700, 26983722, E-mail: dgmbc@karnatakaapex.bank.in.

NOTICE

EMPANELMENT OF CA FIRMS FOR CONCURRENT AUDIT ASSIGNMENT

The Karnataka State Co-operative Apex Bank Ltd invites applications from **practicing partnership firms of Chartered Accountants in India,** who are willing to have their firms empanelled as Concurrent Auditors in the bank for conducting Concurrent Audit for the period of one year. The application should be submitted in a sealed cover to the Chief Executive Officer, "Uthunga", No.1, Pampamahakavi Road, Chamarajpet, Bengaluru-560018, only through postal service or courier by **01.06.2026 5.30 pm**. The interested firms located specifically in Bangalore may download the application and the job chart from our Bank website **www.karnatakaapex.com**

Sd/-
CHIEF EXECUTIVE OFFICER
K.S.C APEX BANK LTD., BENGALURU

ತುಮಕೂರು ವೀರಶೈವ ಸಹಕಾರ ಬ್ಯಾಂಕ್ ನಿ.,

ಮುಖ್ಯ ಕಛೇರಿ ; ಡಾ॥ ಎಸ್. ರಾಧಾಕೃಷ್ಣನ್ ರಸ್ತೆ, ಎಸ್. ಎಸ್. ಪುರಂ, ತುಮಕೂರು-572102,
ದೂ. 08162254027, ಇ-ಮೇಲ್: tvcbank@gmail.com Website:www.tvcbltd.com

ಬಹಿರಂಗ ಹರಾಜಿನ ಮೂಲಕ ಸ್ಥಿರಾಸ್ತಿಗಳ ಮಾರಾಟ

ಸೆಕ್ಯುರಿಟೈಜೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ 2002ರಲ್ಲಿರುವಂತೆ ಸೆಕ್ಯುರಿಟಿ ಎನ್‌ಫೋರ್ಸ್‌ಮೆಂಟ್‌ನ ಪ್ರಕಾರ ಸ್ಥಿರಾಸ್ತಿ ಸ್ವತ್ತನ್ನು ಹರಾಜು ಮಾಡಲಾಗುವುದು.

ಆದಾಗ್ಯೂ (1) ಮೇ ಸ್ವಾಮಿ ಇಂಜಿನಿಯರಿಂಗ್ ವರ್ಕ್ಸ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ಶಿವಣ್ಣ ಎಸ್ ಬಿನ್ ಲೇಟ್ ಸಿದ್ದಲಿಂಗಪ್ಪ, (2) ಶ್ರೀಮತಿ ನಾಗರತ್ನ ಎಸ್ ಕೋಂ ಶಿವಣ್ಣ ಎಸ್, (3) ಶ್ರೀ ಸಿದ್ದಲಿಂಗ ಸ್ವಾಮಿ ಬಿನ್ ಶಿವಣ್ಣ ಎಸ್, (4) ಶ್ರೀ ಕುಮಾರ ಸ್ವಾಮಿ ಬಿನ್ ಶಿವಣ್ಣ ಎಸ್, ಇವರೆಲ್ಲರ ವಿಳಾಸ : "ರತ್ನ ಮಹಲ್", ಹಳೆಯ ಚೆಕ್ ಪೋಸ್ಟ್ ರಸ್ತೆ, ರಂಗಾಪುರ, ತುಮಕೂರು-572201. ಇವರು **ತುಮಕೂರು ವೀರಶೈವ ಕೋ-ಆಪ್ ಬ್ಯಾಂಕ್ ಲಿಮಿಟೆಡ್, ಅಶೋಕ ನಗರ ಶಾಖೆ, ತುಮಕೂರು** ಯಿಂದ ಪಡೆದ ಸಾಲವನ್ನು ಮರುಪಾವತಿಸಲು ವಿಫಲರಾಗಿರುತ್ತಾರೆ. ಅವರು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಒಪ್ಪಿದ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಪಾವತಿಸಬೇಕಾದ ಮೊತ್ತ **ರೂ. 12,26,01,827/- (ರೂಪಾಯಿ ಹನ್ನೆರಡು ಕೋಟಿ ಇಪ್ಪತ್ತಾರು ಲಕ್ಷದ ಒಂದು ಸಾವಿರದ ಎಂಟುನೂರ ಇಪ್ಪತ್ತೇಳು ಮಾತ್ರ)** ಜೊತೆಗೆ **ದಿನಾಂಕ 16.05.2026** ರಿಂದ ಅನ್ವಯವಾಗುವ ದರದಲ್ಲಿ ಬಡ್ಡಿ ಮತ್ತು ಇತರೆ ವೆಚ್ಚಗಳು.

ಈ ಮೂಲಕ ತಿಳಿಸುವುದೇನೆಂದರೆ, ಬ್ಯಾಂಕ್‌ನ ಸರ್ಫೇಸಿ ಕಾಯ್ದೆ, 2002ರ ಸೆಕ್ಷನ್ 13(2)ರ ಅಡಿಯಲ್ಲಿ ಮತ್ತು ಇದಕ್ಕೆ ಅನುಸಾರವಾಗಿ ಕಾಯ್ದೆಯ ಸೆಕ್ಷನ್ 13(4)ರ ಅಡಿಯಲ್ಲಿ ಈ ಸೂಚನೆ ನೀಡಲಾಗುತ್ತಿದ್ದು, ಅಧಿಕೃತ ಅಧಿಕಾರಿಗಳು ಕೆಳಗೆ ವಿವರವಾಗಿ ವಿವರಿಸಿರುವ ಸ್ವತ್ತುಗಳನ್ನು ಒಳಗೊಂಡಂತೆ ಅಡಮಾನ ಆದ ಸ್ಥಿರಾಸ್ತಿಯನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು ಕೆಳಗೆ ವಿವರಿಸಿರುವ ಆಸ್ತಿಯನ್ನು ಸರ್ಫೇಸಿ ಕಾಯ್ದೆ ಮತ್ತು ಅದಕ್ಕೆ ಸಂಬಂಧಪಟ್ಟ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮಗಳ ಅಡಿಯಲ್ಲಿ ಬ್ಯಾಂಕ್ ಮಾರಾಟ ಮಾಡಲು ನಿರ್ಧರಿಸಿರುತ್ತಾರೆ.

ಆಸ್ತಿಯ ವಿವರ	ಟೆಂಡರ್ ತೆರೆಯುವ ದಿನಾಂಕ, ಸಮಯ ಮತ್ತು ಹರಾಜಿನ ಸ್ಥಳ	ಮೀಸಲು ಬೆಲೆ & ಇಎಂಡಿ ಮೊತ್ತ
ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಪ್ಲಾಟ್ ನಂ.99 (ಸಿಎ) ಅಂತರಸನಹಳ್ಳಿ ಇಂಡಸ್ಟ್ರಿಯಲ್ ಪ್ರದೇಶ, 1ನೇ ಹಂತ, ಈ ಆಸ್ತಿಯು ಸರ್ವೆ ನಂ.14ರ ಭಾಗ, ಲಿಂಗಾಪುರ ಗ್ರಾಮ, ಕಸಬಾ ಹೋಬಳಿ, ತುಮಕೂರು ತಾಲ್ಲೂಕು, ತುಮಕೂರು. ಮಹಾನಗರ ಪಾಲಿಕೆ ಖಾತಾ ನಂ.3822, ಪಿಐಡಿ ನಂ.87024, ವಾರ್ಡ್ ನಂ.1, ತುಮಕೂರಿನಲ್ಲಿದೆ. ಕಟ್ಟಡದ ಜೊತೆಗೆ ಎ.ಸಿ ಶೀಟ್ ಮತ್ತು ಆರ್‌ಸಿಸಿ ರೂಫ್ ಗೋಡೌನ್‌ಗಳನ್ನೊಳಗೊಂಡಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ (40+53)/2 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ (28+34)/2 ಮೀಟರ್, ಒಟ್ಟು ವಿಸ್ತೀರ್ಣ 1897.00 ಚದರ ಮೀಟರ್‌ಗಳು ಮತ್ತು ಚಕ್ಕುಬಂದಿ: ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ KIADB ಆಸ್ತಿ, ದಕ್ಷಿಣಕ್ಕೆ ಖಾಸಗಿ ಆಸ್ತಿ.	06.06.2026 ಬೆಳಿಗ್ಗೆ 11.30 ಘಂಟೆಗೆ ತುಮಕೂರು ವೀರಶೈವ ಕೋ-ಆಪರೇಟಿವ್ ಬ್ಯಾಂಕ್ ಲಿ., ಅಶೋಕ ನಗರ ಶಾಖೆ, ತುಮಕೂರು	ಮೀಸಲು ಬೆಲೆ ರೂ. 8,46,15,300/- (ರೂಪಾಯಿ ಎಂಟು ಕೋಟಿ ನಲವತ್ತಾರು ಲಕ್ಷದ ಹದಿನೈದು ಸಾವಿರದ ಮುನ್ನೂರು ಮಾತ್ರ) ಇಎಂಡಿ: ರೂ. 84,61,530/- (ರೂಪಾಯಿ ಎಂಬತ್ತನಾಲ್ಕು ಲಕ್ಷದ ಅರವತ್ತೊಂದು ಸಾವಿರದ ಐದುನೂರ ಮೂವತ್ತು ಮಾತ್ರ)

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು: - (1) ಟೆಂಡರ್ ಫಾರಂಗಳನ್ನು **ತುಮಕೂರು ವೀರಶೈವ ಸಹಕಾರ ಬ್ಯಾಂಕ್ ನಿ., ಅಶೋಕ ನಗರ ಶಾಖೆ, ತುಮಕೂರು, ಸಿದ್ದಗಂಗಾ ಕಾಂಪ್ಲೆಕ್ಸ್, ಬಿ ಎಚ್ ರಸ್ತೆ, ತುಮಕೂರು-572102- (ph. 0816-2274514/9686114759/9900066754/9686114756)** ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. (2) ಇಚ್ಛಿಸುವ ಬಿಡ್ಡುದಾರರು ಅವರ ಬಿಡ್‌ಗಳನ್ನು ನಿಗದಿತ ಟೆಂಡರ್ ಫಾರಂಗಳಲ್ಲಿ ಮೊಹರಾದ ಲಕೋಟೆಯಲ್ಲಿ ಮೀಸಲು ಬೆಲೆಯ ಶೇ.10% ಮೊತ್ತವನ್ನು **ತುಮಕೂರು ವೀರಶೈವ ಸಹಕಾರ ಬ್ಯಾಂಕ್ ನಿ.,** ಪರವಾಗಿ ಪಡೆದ ಡಿಮ್ಯಾಂಡ್ ಡ್ರಾಫ್ಟ್/ಬ್ಯಾಂಕರ್ಸ್ ಚೆಕ್/ಪೇ ಆರ್ಡರ್/ಆರ್‌ಟಿಜಿಎಸ್ ಗಳನ್ನು ಈ ಟೆಂಡರ್-ಹರಾಜು ಮಾರಾಟ ಸೂಚನೆ ಪ್ರಕಟವಾದ ದಿನಾಂಕದ ನಂತರ ಪಡೆದಿರಬೇಕು. (3) ಅನಿಗದಿತ ರೂಪದಲ್ಲಿರುವ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಇಎಂಡಿಯೊಂದಿಗೆ ಟೆಂಡರ್‌ಗಳನ್ನು **ತುಮಕೂರು ವೀರಶೈವ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಅಶೋಕ ನಗರ ಶಾಖೆ, ತುಮಕೂರು. ದಿನಾಂಕ : 05.06.2026 ರೊಳಗೆ ಸಂಜೆ 4.30 ಗಂಟೆಯೊಳಗೆ** ಸಲ್ಲಿಸಬೇಕು. ಇಎಂಡಿ ರಹಿತವಾದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. (4) ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಮಾರಾಟ ಮಾಡಲಾಗುವುದಿಲ್ಲ. (5) ಒಂದು ವೇಳೆ ಬಿಡ್ಡರ್‌ಗಳು ಯಶಸ್ವಿಯಾಗದಿದ್ದಲ್ಲಿ ಇಎಂಡಿ ಮೊತ್ತವನ್ನು ಬಡ್ಡಿರಹಿತವಾಗಿ ಹಿಂತಿರುಗಿಸಲಾಗುವುದು. (6) ಯಶಸ್ವಿ ಬಿಡ್‌ದಾರರು ಹರಾಜು ಮಾರಾಟದ ನಿಯಮ ಮತ್ತು ನಿಬಂಧನೆಗಳನ್ನು ಪಾಲಿಸಲು ವಿಫಲರಾದಲ್ಲಿ ಇಎಂಡಿ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (7) ಮೊಹರಾದ ಟೆಂಡರ್‌ಗಳನ್ನು ಅಧಿಕೃತ ಅಧಿಕಾರಿಯವರು ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ **ದಿನಾಂಕ: 06.06.2026 ರಂದು ಬೆಳಿಗ್ಗೆ 11.30** ಗಂಟೆಗೆ ತೆರೆಯುವರು. (8) ಟೆಂಡರ್‌ಗಳನ್ನು ತೆರೆದ ನಂತರ, ಉದ್ದೇಶಿತ ಬಿಡ್‌ದಾರರಿಗೆ ಅಧಿಕೃತ ಅಧಿಕಾರಿಯ ವಿವೇಚನೆಯಿಂದ ಆಫರ್ ಬೆಲೆಯನ್ನು ಹೆಚ್ಚಿಸಲು ತಮ್ಮ ನಡುವೆ ತೀವ್ರವಾದ ಬಿಡ್ಡಿಂಗ್ ಮಾಡಲು ಅವಕಾಶ ನೀಡಬಹುದು. (9) ಯಶಸ್ವಿ ಬಿಡ್‌ದಾರರು ಮಾರಾಟದ ಬೆಲೆಯ ಶೇ. 25% (ಇಎಂಡಿ ಹಣವನ್ನು ಸೇರಿ) ಹಣವನ್ನು ತಕ್ಷಣ ಹರಾಜಿನ ದಿನದಂದು ಡಿಮ್ಯಾಂಡ್ ಡ್ರಾಫ್ಟ್/ಬ್ಯಾಂಕರ್ಸ್ ಚೆಕ್/ಪೇ ಆರ್ಡರ್/ಆರ್‌ಟಿಜಿಎಸ್ ರೂಪದಲ್ಲಿ ಪಾವತಿಸಬೇಕು ಮತ್ತು ಬಾಕಿ ಉಳಿದ ಮಾರಾಟದ ಮೊತ್ತವನ್ನು ಮಾರಾಟ ದೃಢೀಕರಣಗೊಂಡ 15 ದಿನಗಳ ಒಳಗೆ ಪಾವತಿಸಬೇಕು. ಒಂದು ವೇಳೆ ಯಶಸ್ವಿ ಬಿಡ್‌ದಾರರು ಹಣ ಪಾವತಿಸದಿದ್ದಲ್ಲಿ ಅವರಿಗೆ ಪಾವತಿಸಿರುವ ಎಲ್ಲಾ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಸ್ತಿಯನ್ನು ಮರುಮಾರಾಟ ಮಾಡಲಾಗುವುದು. (10) ಯಶಸ್ವಿ ಬಿಡ್ಡುದಾರರು ಕಾನೂನು ಬದ್ಧ ವೆಚ್ಚಗಳಾದ ತೆರಿಗೆಗಳು / ವರ್ಗಾವಣೆ ವೆಚ್ಚಗಳಾದ ನೋಂದಣಿ ಮತ್ತು ಮುದ್ರಾಂಕ ಶುಲ್ಕ/ಟಿಡಿಎಸ್ ಅನ್ನು ಅನ್ವಯವಾಗುವ ಕಾನೂನಿನಂತೆ ಪಾವತಿಸಿದಲ್ಲಿ ಆಸ್ತಿಯನ್ನು ಅವರ ಪರವಾಗಿ ವರ್ಗಾಯಿಸಿ ಕೊಡಲಾಗುವುದು. (11) ಅಧಿಕೃತ ಅಧಿಕಾರಿಯವರು ಯಾವುದೇ ಟೆಂಡರ್‌ನ್ನು ಸ್ವೀಕರಿಸುವ/ತಿರಸ್ಕರಿಸುವ ಅಥವಾ ಹರಾಜು ಮಾರಾಟವನ್ನು ಯಾವುದೇ ಕಾರಣಗಳನ್ನು ನೀಡದೆ ಮುಂದೂಡುವ ಅಥವಾ ರದ್ದುಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಯಾವುದೇ ಸೂಚನೆಯನ್ನು ನೀಡದೆ, ಜಾಹಿರಾತಿನಲ್ಲಿ ನೀಡಿರುವ ನಿಯಮ ಮತ್ತು ನಿಬಂಧನೆಗಳನ್ನು ಬದಲಾಯಿಸುವ ಅಧಿಕಾರವು ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಒಳಪಟ್ಟಿದೆ. **(12) ಮಾರಾಟವು ಬ್ಯಾಂಕ್ ದೃಢೀಕರಣಕ್ಕೆ ಒಳಪಟ್ಟಿರುತ್ತದೆ.** (13) ಇಚ್ಛಿಸುವ ಬಿಡ್‌ದಾರರು ಮಾರಾಟದ ಸ್ವತ್ತನ್ನು **ಬೆಳಿಗ್ಗೆ 10.00 ಘಂಟೆಯಿಂದ ಸಂಜೆ 5.00ರವರೆಗೆ,** ಹೆಡ್ಡಿಂಗ್‌ನಲ್ಲಿ ತಿಳಿಸಿರುವ ವಿಳಾಸದಲ್ಲಿ ಅವರ ಸ್ವಂತ ಖರ್ಚಿನಲ್ಲಿ ಪರಿಶೀಲಿಸ ಬಹುದಾಗಿದೆ. (14) ಆಸ್ತಿಯನ್ನು **'ಎಲ್ಲಿ ಹೇಗಿದೆಯೋ ಹಾಗೆ' ಮತ್ತು 'ಎಲ್ಲಿ ಏನಿದೆಯೋ ಹಾಗೆ'** ಆಧಾರದ ಮೇಲೆ ಮಾರಾಟಮಾಡಲಾಗುವುದು. ಇಚ್ಛಿಸುವ ಬಿಡ್‌ದಾರರು ಆಸ್ತಿಯ ಮೇಲಿನ ಋಣಭಾರಗಳು (ಎನ್‌ಕಂಬರೆನ್ಸ್) ಟೈಟಲ್ ಮಾಲೀಕತ್ವ ಶಾಸನಬದ್ಧ ಮಂಜೂರಾತಿಗಳು ಮುಂತಾದವುಗಳನ್ನು ಪರಿಶೀಲಿಸಬೇಕು. (15) ಇಚ್ಛಿಸುವ ಬಿಡ್ಡುದಾರರು ಷೆಡ್ಯೂಲ್ ಸ್ವತ್ತಿನ ಮಾಲೀಕತ್ವ, ಟೈಟಲ್ ಡೀಡ್ಸ್‌ಗಳ ಹಾಗೂ ಇದರ ಋಣಭಾರಗಳ ಪರಿಶೀಲನೆಮಾಡಿ ಸಮಾಧಾನ ಹೊಂದಿ, ಟೆಂಡರ್‌ನಲ್ಲಿ ಭಾಗವಹಿಸುತ್ತಿದ್ದೇನೆಂಬ ಒಪ್ಪಿಗೆ ಪತ್ರವನ್ನು ಟೆಂಡರ್ ಫಾರಂ ಜೊತೆಯಲ್ಲೇ ಸಲ್ಲಿಸಬೇಕಾಗಿರುತ್ತದೆ. (16) ಬಿಡ್ಡುದಾರರು ಒಂದು ಕಂಪನಿಯಾಗಿದ್ದರೆ, ಕಂಪನಿಯ ಪರವಾಗಿ ನಿಜವಾದ ಬಿಡ್ಡುದಾರರು ಹರಾಜಿನಲ್ಲಿ ಭಾಗವಹಿಸಲು ಅಧಿಕಾರ ನೀಡುವ ನಿರ್ದೇಶಕರ ಮಂಡಳಿಯು ಅಂಗೀಕರಿಸಿದ ನಿರ್ಣಯದ ಪ್ರತಿಯನ್ನು ಸಲ್ಲಿಸಬೇಕು.

ಹೆಚ್ಚಿನ ವಿವರಗಳಿಗಾಗಿ ಉದ್ದೇಶಿತ ಬಿಡ್‌ದಾರರು ಅಧಿಕೃತ ಅಧಿಕಾರಿ, ತುಮಕೂರು ವೀರಶೈವ ಸಹಕಾರ ಬ್ಯಾಂಕ್ ನಿ., ತುಮಕೂರು ವೀರಶೈವ ಕೋ-ಆಪ್ ಬ್ಯಾಂಕ್ ಲಿಮಿಟೆಡ್, ಅಶೋಕ ನಗರ ಶಾಖೆ, ತುಮಕೂರು, ಸಿದ್ದಗಂಗಾ ಕಾಂಪ್ಲೆಕ್ಸ್, ಬಿ ಎಚ್ ರಸ್ತೆ, ತುಮಕೂರು -572102 (ದೂರವಾಣಿ 0816-2274514/ 9686114759/9900066754/9686114756 ಆಸ್ತಿಯ ವಿವರಗಳನ್ನು ಪಡೆಯಲು ಮತ್ತು ಆಸ್ತಿ ಪರಿಶೀಲನೆಗಾಗಿ (ದೂರವಾಣಿ .0816-2274514/9686114759) ಇ-ಮೇಲ್: br.0002m@tvcbltd.bank.in ಸಂಪರ್ಕಿಸಬಹುದು.

ದಿನಾಂಕ :16.05.2026
ಸ್ಥಳ: ತುಮಕೂರು

ಸಹಿ/- ಅಧಿಕೃತ ಅಧಿಕಾರಿ
ತುಮಕೂರು ವೀರಶೈವ ಸಹಕಾರ ಬ್ಯಾಂಕ್ ನಿ.,

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ: 1907
ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18
ಕಛೇರಿ ☎ : 26678572 : 26600512 : 26609066 : ಟೆಲಿಫ್ಯಾಕ್ಸ್ : (080) 26617980

ಸ್ಥಿರ ಸ್ವತ್ತುಗಳ ಸ್ವಾಧೀನದ ಬಗ್ಗೆ ಪ್ರಕಟಣೆ (ಸಾಂಕೇತಿಕವಾಗಿ)

ಕೆಳಗೆ ಸಹಿ ಮಾಡಿರುವವರು **ಬೆಂಗಳೂರು ಸಿಟಿ ಕೋ. ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಎ., ನಂ.3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18** ರ ಅಧಿಕೃತ ಅಧಿಕಾರಿಯಾಗಿದ್ದು, ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಸೆಕ್ಯುರಿಟಿ ಬಡ್ಡಿ ಜಾರಿ (ಎರಡನೇ) ಆರ್ಡಿನೆನ್ಸ್, 2002 (2002 ರ ಆದೇಶ 3) ರ ಅಡಿಯಲ್ಲಿ ಮತ್ತು ಸೆಕ್ಯುರಿಟಿ ಬಡ್ಡಿ (ಜಾರಿ) ನಿಯಮಗಳು, 2002 ರ ನಿಯಮ 9 ರೊಂದಿಗೆ ಓದಲಾದ ಸೆಕ್ಷನ್ 13(2) ರ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸುವ ಮೂಲಕ ಹೊರಡಿಸಲಾಗಿದೆ ಮತ್ತು ಕೆಳಗೆ ಸಹಿ ಮಾಡಿದ ಸಾಲಗಾರರು/ಕಾನೂನುಬದ್ಧ ಉತ್ತರಾಧಿಕಾರಿಗಳು ನೋಟಿಸ್ ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ನೋಟಿಸ್‌ನಲ್ಲಿ ಉಲ್ಲೇಖಿಸಲಾದ ಮೊತ್ತವನ್ನು ಮರುಪಾವತಿಸಲು ಕರೆ ನೀಡುವಂತೆ ಒತ್ತಾಯಿಸಲಾಗಿದೆ.

ಸಾಲಗಾರರು/ಕಾನೂನುಬದ್ಧ ಉತ್ತರಾಧಿಕಾರಿಗಳು ಮೊತ್ತವನ್ನು ಮರುಪಾವತಿಸಲು ವಿಫಲರಾಗಿದ್ದು, ಕೆಳಗೆ ಸಹಿ ಮಾಡಿದವರು ಸದರಿ ನಿಯಮದ 9 ನೇ ನಿಯಮದೊಂದಿಗೆ ಓದಲಾದ ಸದರಿ ಅಧ್ಯಾದೇಶದ ಸೆಕ್ಷನ್ 13(4) ರ ಅಡಿಯಲ್ಲಿ ಅವರಿಗೆ ನೀಡಲಾದ ಅಧಿಕಾರವನ್ನು ಚಲಾಯಿಸಿ ಕೆಳಗೆ ವಿವರಿಸಿದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಸಾಲಗಾರರು/ಕಾನೂನುಬದ್ಧ ಉತ್ತರಾಧಿಕಾರಿಗಳು ಮತ್ತು ಸಾರ್ವಜನಿಕರಿಗೆ ಇಲ್ಲಿ ಸೂಚನೆ ನೀಡಲಾಗಿದೆ.

ಸಾಲಗಾರರು / ನಿರ್ದಿಷ್ಟವಾಗಿ ಕಾನೂನುಬದ್ಧ ಉತ್ತರಾಧಿಕಾರಿಗಳು ಮತ್ತು ಸಾರ್ವಜನಿಕರು ಆಸ್ತಿಯೊಂದಿಗೆ ವ್ಯವಹರಿಸದಂತೆ ಇಲ್ಲಿ ಎಚ್ಚರಿಕೆ ನೀಡಲಾಗಿದೆ ಮತ್ತು ಆಸ್ತಿಯೊಂದಿಗಿನ ಯಾವುದೇ ವ್ಯವಹಾರಗಳು ದಿ **ಬೆಂಗಳೂರು ಸಿಟಿ ಕೋ. ಆಪರೇಟಿವ್ ಬ್ಯಾಂಕ್ ಲಿಮಿಟೆಡ್, AO, ನಂ.3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18** ರ ಹಕ್ಕಿಗೆ ಒಳಪಟ್ಟಿರುತ್ತದೆ.

ಕ್ರ.ಸಂ.	ಸಾಲಗಾರರ ಹೆಸರು	ಬಾಕಿ ಇರುವ ಮೊತ್ತ	ಸ್ಥಿರಾಸ್ತಿಗಳ ವಿವರ ಮತ್ತು ಅಳತೆ
ಇಂದಿರಾನಗರ ಶಾಖೆ:			
01	ಶ್ರೀ. ಮೀರ್ ಜಬ್ಬಾರ್ ಅಲಿ ಜಾತಿದಾರರು:- 1. ನೀಲುಫರ್ ಬೇಗಂ	ತಗಾದೆ ನೋಟೀಸ್ ದಿನಾಂಕ: 05.03.2026 ಸ್ವಾಧೀನತೆ ನೋಟೀಸ್ ದಿನಾಂಕ : 11.05.2026 ಬಾಕಿ ಇರುವ ಮೊತ್ತ: 11.05.2026 ರಂದು ರಂತೆ ರೂ. 70,46,318/-	ಆಸ್ತಿ ಮತ್ತು ಅಳತೆ:-ಹೊಸ ಪುರಸಭೆ ಸಂಖ್ಯೆ 58, ಸಂಖ್ಯೆ 75/5 ರಲ್ಲಿದ್ದು, ಮುನೇಗೌಡ ಗಾರ್ಡನ್, ನೀಲಸಂದ್ರ, ಬಿಬಿಎಂಪಿ ವಾರ್ಡ್ ಸಂಖ್ಯೆ 69 ಮತ್ತು ನೀಲಸಂದ್ರದ ಹೊಸ ವಾರ್ಡ್ ಸಂಖ್ಯೆ 116, ಪಿಐಡಿ ಸಂಖ್ಯೆ 69-61-58, ಹೊಸ ಪಿಐಡಿ ಸಂಖ್ಯೆ 116-[illegible] 0187-28, ಬೆಂಗಳೂರು ನಲ್ಲಿದೆ. **ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 60 ಅಡಿ & ಉತ್ತರದಿಂದ ದಕ್ಷಿಣಕ್ಕೆ: 32 ಅಡಿ** **ಪೂರ್ವಕ್ಕೆ** : ಶಾಯಿಪ್ಪ ಮತ್ತು ಗುಂಡಪ್ಪನ ಆಸ್ತಿ, **ಪಶ್ಚಿಮಕ್ಕೆ** : ಸೈ. ಸಂಖ್ಯೆ 59 ಮತ್ತು 60 ರಲ್ಲಿ ನಿರ್ಮಿಸಲಾದ ಖಾಸಗಿ ಆಸ್ತಿ **ಉತ್ತರಕ್ಕೆ** : ರಸ್ತೆ, **ದಕ್ಷಿಣಕ್ಕೆ** : 3 ಅಡಿ ಸಾಮಾನ್ಯ ಹಾದಿ.
ಸಂಜಯನಗರ ಶಾಖೆ			
02	ಶ್ರೀಮತಿ ಸೈರಾ ಖಾನಮ್ ಜಾತಿದಾರರು:- 1. ನೂರುಲ್ಲಾ ಖಾನ್ 2. ಸನಾವುಲ್ಲಾ ಖಾನ್	ತಗಾದೆ ನೋಟೀಸ್ ದಿನಾಂಕ: 02.02.2026 ಸ್ವಾಧೀನತೆ ನೋಟೀಸ್ ದಿನಾಂಕ : 11.05.2026 ಬಾಕಿ ಇರುವ ಮೊತ್ತ: 11.05.2026 ರಂದು ರಂತೆ ರೂ.73,18,623/-	ಆಸ್ತಿ ಮತ್ತು ಅಳತೆ: ಹೊಸ ಪುರಸಭೆ ಸಂಖ್ಯೆ 73, ಹಳೆಯ ಬಿಬಿಎಂಪಿ ಸಂಖ್ಯೆ 73 & 74, (ಹಳೆಯ ಸಂಖ್ಯೆ 65 & 65ಎ), ಸುಲ್ತಾನ್ ಗುಂಟಾ ರಸ್ತೆ, ಸಿವಿಲ್ ಸ್ಟೇಷನ್, ಶಿವಾಜಿನಗರ, ಶಿವಾಜಿನಗರದ ಬಿಬಿಎಂಪಿ ವಾರ್ಡ್ ಸಂಖ್ಯೆ 79, ಪಿಐಡಿ ಸಂಖ್ಯೆ 79-83-73, ಬೆಂಗಳೂರು. **ಅಳತೆ: ಪೂರ್ವ: 45'-0", ಪಶ್ಚಿಮ: 18'-10 ½", 17'-3" ಅಡಿ ಮತ್ತು ಉತ್ತರ: 20'-8", 32'-9", ದಕ್ಷಿಣ: 3'-1", 2, 10'-5", 9'-3", 11'-9" ಮತ್ತು ಎಲ್ಲಾ 1327 ಚದರ ಅಡಿ** **ಪೂರ್ವಕ್ಕೆ** : ಆಸ್ತಿ ಹಳೆಯ ಸಂಖ್ಯೆ 12, ಹೊಸ ಸಂಖ್ಯೆ 16 ನಂತರ ಧರ್ಮರಾಜ ಲೇನ್, **ಪಶ್ಚಿಮಕ್ಕೆ** : ಸುಲ್ತಾನ್ ಗುಂಟಾ ರಸ್ತೆ **ಉತ್ತರಕ್ಕೆ** : ಹಳೆಯ ಆಸ್ತಿ ಸಂಖ್ಯೆ 65/ಬಿ, ಹೊಸ ಸಂಖ್ಯೆ 72, **ದಕ್ಷಿಣಕ್ಕೆ** : ಹಳೆಯ ಆಸ್ತಿ ಸಂಖ್ಯೆ 66, ಹೊಸ ಸಂಖ್ಯೆ 75.
ಚಾಮರಾಜಪೇಟೆ(ಪಶ್ಚಿಮ) ಶಾಖೆ			
03	ಶ್ರೀ. ಮೋಮ್ ಪಾಷಾ.	ತಗಾದೆ ನೋಟೀಸ್ ದಿನಾಂಕ: 02.03.2026 ಸ್ವಾಧೀನತೆ ನೋಟೀಸ್ ದಿನಾಂಕ : 11.05.2026 ಬಾಕಿ ಇರುವ ಮೊತ್ತ: 11.05.2026 ರಂದು ರಂತೆ ರೂ. 37,78,590/-	ಆಸ್ತಿ & ಅಳತೆ :- ಹೊಸ ಪುರಸಭೆ ಸಂಖ್ಯೆ17/1, ಪಿಐಡಿ ಸಂಖ್ಯೆ44-18-17/1, ಹೊಸ ಗೋರಿಪಾಳ್ಯದ 2ನೇ ಕ್ರಾಸ್‌ನಲ್ಲಿದೆ, ಪ್ರಸ್ತುತ ಬೆಂಗಳೂರಿನ ರಾಯಪುರಂನ ಬಿಬಿಎಂಪಿ ವಾರ್ಡ್ ಸಂಖ್ಯೆ44, ಹೊಸ ವಾರ್ಡ್ ಸಂಖ್ಯೆ137 ರ ನ್ಯಾಯವ್ಯಾಪ್ತಿಯಲ್ಲಿ ಬರುತ್ತದೆ. **ಅಳತೆ:ಪೂರ್ವದಿಂದ ಪಶ್ಚಿಮಕ್ಕೆ: 30+35/2 ಅಡಿ & ಉತ್ತರದಿಂದ ದಕ್ಷಿಣಕ್ಕೆ: 22 ಅಡಿ.** **ಪೂರ್ವಕ್ಕೆ**: ಕಮೀಮುನ್ನೀಸಾ ಅವರ ಆಸ್ತಿ, **ಪಶ್ಚಿಮಕ್ಕೆ** : ಕನ್ಸರ್ವೆನ್ಸಿ ರಸ್ತೆ, **ಉತ್ತರಕ್ಕೆ**: ಅಹಮದುಲ್ಲಾ ಖಾನ್ ಅವರ ಆಸ್ತಿ, **ದಕ್ಷಿಣಕ್ಕೆ** : ಅದೇ ಆಸ್ತಿಯ ಉಳಿದ ಭಾಗ.
04	ಶ್ರೀಮತಿ ಹೊನ್ನೂರಮ್ಮ ಜಾತಿದಾರರು:- 1. ವರಲಕ್ಷ್ಮಿ.ಕೆ, 2. ರಾಜು.ಕೆ, 3. ನಾಗೇಂದ್ರ.ಕೆ, 4. ಮಂಗಮ್ಮ, 5. ದೇವಿ, 6. ಮೀನಾ	ತಗಾದೆ ನೋಟೀಸ್ ದಿನಾಂಕ: 02.03.2026 ಸ್ವಾಧೀನತೆ ನೋಟೀಸ್ ದಿನಾಂಕ : 11.05.2026 ಬಾಕಿ ಇರುವ ಮೊತ್ತ: 11.05.2026 ರಂದು ರಂತೆ ರೂ.18,95,903/-	ಆಸ್ತಿ ಮತ್ತು ಅಳತೆ :- ಹೊಸ ಸಂಖ್ಯೆ 08, ಹಳೆಯ ಸಂಖ್ಯೆ 241, 8ನೇ ಮುಖ್ಯರಸ್ತೆ, ವೆಂಕಟಸ್ವಾಮಿ ತೋಟ, ಜಗಜೀವನರಾಮನಗರದ ಬಿಬಿಎಂಪಿ ವಾರ್ಡ್ ಸಂಖ್ಯೆ 44, ರಾಯಪುರದ ಹೊಸ ವಾರ್ಡ್ ಸಂಖ್ಯೆ 137, ಪಿಐಡಿ ಸಂಖ್ಯೆ 44-67-8, ಬೆಂಗಳೂರು. **ಅಳತೆ:ಪೂರ್ವದಿಂದ ಪಶ್ಚಿಮಕ್ಕೆ: 25 ಅಡಿ & ಉತ್ತರದಿಂದ ದಕ್ಷಿಣಕ್ಕೆ: 18 ಅಡಿ** **ಪೂರ್ವಕ್ಕೆ**: ಸೈಟ್ ಸಂಖ್ಯೆ 232, **ಪಶ್ಚಿಮಕ್ಕೆ** : ರಸ್ತೆ **ಉತ್ತರಕ್ಕೆ**: ಸೈಟ್ ಸಂಖ್ಯೆ 242 **ದಕ್ಷಿಣಕ್ಕೆ** : ಸೈಟ್ ಸಂಖ್ಯೆ 240
ರಾಮನಗರಟೌನ್ ಶಾಖೆ			
05	ಶ್ರೀ. ಫಜೀಲ್ ಖಾನ್	ತಗಾದೆ ನೋಟೀಸ್ ದಿನಾಂಕ: 04.03.2026 ಸ್ವಾಧೀನತೆ ನೋಟೀಸ್ ದಿನಾಂಕ : 11.06.2026 ಬಾಕಿ ಇರುವ ಮೊತ್ತ: 11.06.2026 ರಂದು ರಂತೆ ರೂ. 16,40,714/-	ಆಸ್ತಿ ಮತ್ತು ಅಳತೆ:-ಖಾತಾ ನಂ. 5773/3933, 1ನೇ ಅಡ್ಡ ರಸ್ತೆ, ಕೆಲಾಕ್ ನಗರ, ಕನಕಪುರ ಪಟ್ಟಣದ ವಾರ್ಡ್ ನಂ. 8, 1ನೇ ಕ್ರಾಸ್, ಎಚ್ ಕರಿಯಪ್ಪ ರಸ್ತೆ, ಕೆಲಾಕ್ ನಗರ, ಕನಕಪುರ ಪಟ್ಟಣ, ರಾಮನಗರ ಜಿಲ್ಲೆ. **ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 20 ಅಡಿ & ಉತ್ತರದಿಂದ ದಕ್ಷಿಣಕ್ಕೆ: 60 ಅಡಿ** **ಪೂರ್ವಕ್ಕೆ**: ಆಸ್ತಿ ಸೈಯದ್ ಅಬ್ದುಲ್ಲಾ ಅವರಿಗೆ ಸೇರಿದೆ, **ಪಶ್ಚಿಮಕ್ಕೆ** : ಆಸ್ತಿ ಮೊಹಮ್ಮದ್ ಸಲೀಮ್ ಅವರಿಗೆ ಸೇರಿದೆ, **ಉತ್ತರಕ್ಕೆ**: ಕನ್ಸರ್ವೆನ್ಸಿ ಲೇನ್, **ದಕ್ಷಿಣಕ್ಕೆ** : ಮುಖ್ಯವಾದ ರಸ್ತೆ.
ಯಲಹಂಕ ಶಾಖೆ			
06	ಶ್ರೀ. ರಮೇಶ್. ಬಿ	ತಗಾದೆ ನೋಟೀಸ್ ದಿನಾಂಕ: 02.03.2026 ಸ್ವಾಧೀನತೆ ನೋಟೀಸ್ ದಿನಾಂಕ : 11.05.2026 ಬಾಕಿ ಇರುವ ಮೊತ್ತ: 11.05.2026 ರಂದು ರಂತೆ ರೂ. 77,31,927/-	ಆಸ್ತಿ ಮತ್ತು ಅಳತೆ :- ನಂ.45, ಬ್ಯಾಟರಾಯನಪುರ ಪುರಸಭೆ ಖಾತಾ ನಂ. 46, ಬ್ಯಾಟರಾಯನಪುರ ಗ್ರಾಮ, ಬೆಂಗಳೂರು ಉತ್ತರ ತಾಲ್ಲೂಕು, ಬ್ಯಾಟರಾಯನಪುರದ ಬಿಬಿಎಂಪಿ ವಾರ್ಡ್ ನಂ. 07, ಬಿಬಿಎಂಪಿ ಖಾತಾ ನಂ. 46-105-1-45, ಬೆಂಗಳೂರು. **ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 39+34/2 ಅಡಿ & ಉತ್ತರದಿಂದ ದಕ್ಷಿಣಕ್ಕೆ: 40 ಅಡಿ** **ಪೂರ್ವಕ್ಕೆ**: 25 ಅಡಿ ರಸ್ತೆ, **ಪಶ್ಚಿಮಕ್ಕೆ** : ಆಸ್ತಿ ಸಂಖ್ಯೆ 44 **ಉತ್ತರಕ್ಕೆ**: ಆಸ್ತಿ ಸಂಖ್ಯೆ 42, **ದಕ್ಷಿಣಕ್ಕೆ** : ರಾಜಾ ಕಾಲುವೆ.

ಸ್ಥಳ : ಬೆಂಗಳೂರು
ದಿನಾಂಕ : 16.05.2026

ಸಹಿ/- ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಯಲಹಂಕದಲ್ಲಿ ಮೆಗಾ ಕೋಚಿಂಗ್ ಟರ್ಮಿನಲ್

• **ಬೆಂಗಳೂರು:** ಯಲಹಂಕದಲ್ಲಿ ಮೆಗಾ ಕೋಚಿಂಗ್ ಟರ್ಮಿನಲ್ ಮಾಡಲು ಎಫ್‌ಎಲ್‌ಎಸ್ ನಡೆಸಲಾಗಿದೆ, ಯೋಜನೆಗೆ ರೈಲ್ವೆ ಮಂಡಳಿಯಿಂದ ಅನುಮತಿ ಪಡೆದುಕೊಳ್ಳಲಾಗುವುದು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಸೂಚನೆ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸಂಕಲ್ಪ ಹಾಗೂ ರೈಲ್ವೆ ಅಧಿಕಾರಿಗಳ ಕಾರ್ಯದಕ್ಷತೆಯಿಂದ ಕೆಲಸ ಮಾಡಲಾಗುತ್ತದೆ. ವಿಶ್ವದ ಭೂಪಟದಲ್ಲಿ ಇಷ್ಟು ದೊಡ್ಡಮಟ್ಟಿಗೆ ಟರ್ಮಿನಲ್ ಆಗುತ್ತಿರುವುದು ಮೊದಲ ಬಾರಿಗೆ ಆಗಿದೆ. ಇದಕ್ಕೆ ಬೇಕಾಗಿರುವ ಸ್ಥಳ ಕಡಿಮೆಯಿತ್ತು, ಜಿಬಿಎ, ಜಲಮಂಡಳಿ, ರಾಜ್ಯ ಸರ್ಕಾರ ಹಾಗೂ ಖಾಸಗಿ ಜಾಗ ಬೇಕಾಗಿದೆ. ಆದರಿಂದ ಕೂಡಲೇ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟವರಿಗೆ ಪತ್ರ ಬರೆದು ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.


ದೇವನಗೊಂದಿ ಸೇರಿದಂತೆ ಕೆಲವು ಕಡೆಗಳಲ್ಲಿ ಸುಮಾರು ವರ್ಷಗಳಿಂದ ಆರ್‌ಒಬಿ ಕೆಲಸವು ನಿಂತುಹೋಗಿತ್ತು, ಇದನ್ನು ನಾವು ತಕ್ಷಣಕ್ಕೆ ತೆಗೆದುಕೊಳ್ಳುವುದಕ್ಕೆ ಕ್ರಮ ವಹಿಸುತ್ತಿದ್ದೇವೆ. ಆ ಮೂಲಕ ಬೆಂಗಳೂರಿನ ಜನರಿಗೆ ರೈಲ್ವೆಯಿಂದ ಸುಧಾರಣೆ ಆಗಲು ಕ್ರಮ ವಹಿಸಲಾಗುವುದು. ಬೆಂಗಳೂರಿನ 100 ಕಿ.ಮೀ. ವ್ಯಾಪ್ತಿಯಲ್ಲಿ ಸುಮಾರು 100 ಲೆವೆಲ್ ಕ್ರಾಸಿಂಗ್ ಗೇಟ್‌ಗಳಿವೆ. ಅದರಲ್ಲಿ 46 ಲೆವೆಲ್ ಕ್ರಾಸಿಂಗ್ ಗೇಟ್‌ಗಳಿಗೆ ರಸ್ತೆ ಮೇಲ್ಸೇತುವೆ/ಕೆಳಸೇತುವೆಗಳನ್ನು ಈಗಾಗಲೇ ಮಂಜೂರು ಮಾಡಲಾಗಿದೆ, ಇನ್ನೂ 24 ಲೆವೆಲ್ ಕ್ರಾಸಿಂಗ್ ಗೇಟ್‌ಗಳನ್ನು ತೆಗೆದುಹಾಕಲು ಆರ್.ಓ.ಬಿ./ಆರ್.ಯು.ಬಿ. ನಿರ್ಮಾಣಕ್ಕೆ ಡಿಪಿಆರ್ ಸಿದ್ಧ ಪಡಿಸಲಾಗುತ್ತಿದೆ ಮತ್ತು ಉಳಿದ ಗೇಟ್‌ಗಳಿಗೂ ಸಹಾ ಪ್ರಸ್ತಾವನೆಗಳನ್ನು ಸಿದ್ಧಪಡಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕರ್ನಾಟಕದಲ್ಲಿ ಒಟ್ಟು 50,000 ಕೋಟಿ ರೂ.ಗಳಿಗೂ ಅಧಿಕ ಮೌಲ್ಯದ ರೈಲ್ವೆ ಮೂಲಸೌಕರ್ಯ ಯೋಜನೆಗಳು ಪ್ರಸ್ತುತ ಪ್ರಗತಿಯಲ್ಲಿವೆ. ತುಮಕೂರು-ಬೆಂಗಳೂರು ಚತುಷ್ಪಥ ಹಳಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಹಾಗೆಯೇ ಬೆಂಗಳೂರು ಮತ್ತು ಕೋಲಾರ ನಡುವೆ ನೇರ ರೈಲು ಮಾರ್ಗಕ್ಕೂ ಯೋಜನೆಗಳನ್ನು ರೂಪಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.



ಎಕ್ಸ್‌ಪ್ರೆಸ್ ರೈಲು ಸೇವೆಗೆ ಚಾಲನೆ ಇಂದು

ಸಾರ್ವಜನಿಕರ ಬಹುದಿನಗಳ ಬೇಡಿಕೆಯನ್ನು ಈಡೇರಿಸುವ ನಿಟ್ಟಿನಲ್ಲಿ ಎಸ್‌ಎಂವಿಟಿ ಬೆಂಗಳೂರು ಮತ್ತು ಲೋಕಮಾನ್ಯ ತಿಲಕ್ ಟರ್ಮಿನಲ್, ಮುಂಬೈ ನಡುವೆ ಹೊಸ ದ್ವೈ-ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಸೇವೆಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಮೇ 17ರಂದು ಬೆಳಗ್ಗೆ 10 ಗಂಟೆಗೆ ವೀಡಿಯೊ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಲಿದ್ದಾರೆ. ಇನ್ನು ಶೀಘ್ರದಲ್ಲಿಯೇ ಒಂದೇ ಭಾರತ್ ಸ್ಲೀಪರ್‌ಗೆ ಚಾಲನೆ ನೀಡಲಿದ್ದೇವೆ. ಕುಕ್ಕೆ ಸುಬ್ರಮಣ್ಯದಲ್ಲಿ ವಿದ್ಯುತೀಕರಣ ಮಾಡಲು 50 ವರ್ಷವಾಗಿತ್ತು, ನಾವು ಪೂರ್ಣ ಮಾಡಿದ್ದೇವೆ. ಬೆಂಗಳೂರು-ಮಂಗಳೂರು ಒಂದೇ ಭಾರತ್ ಕಾರ್ಯಾಚರಣೆ ಮಾಡಲಿದೆ. ಸಬ್ ಅರ್ಬನ್ ರೈಲ್ವೆಗೆ ಅಡಿಪಾಯ ಹಾಕಿದ್ದು ನಾವೇ, ಇನ್ನು ಈ ವಿಚಾರಕ್ಕೆ ಸಂಬಂಧಿಸಿದಂತೆ ಮುಂದಿನ ವಾರ ಸಭೆ ನಡೆಸುವುದಾಗಿ ವಿ.ಸೋಮಣ್ಣ ತಿಳಿಸಿದರು.



ಅಭಿಯಾನಕ್ಕೆ ಚಾಲನೆ

ಬೆಂಗಳೂರು ಪೂರ್ವ ನಗರ ಪಾಲಿಕೆ ಹೊರಮಾವು ಬಳಿಯ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನಲ್ಲಿ ಶನಿವಾರ ಆರಂಭವಾದ ನನ್ನ ಇ-ಖಾತಾ, ನನ್ನ ಹಕ್ಕು ಅಭಿಯಾನ ಕೇಂದ್ರಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭೇಟಿ ನೀಡಿ, ಪ್ರಕ್ರಿಯೆಯನ್ನು ಪರಿಶೀಲಿಸಿದರು. ಬಳಿಕ ಸಾರ್ವಜನಿಕರಿಗೆ ಸಾಂಕೇತಿಕವಾಗಿ ಇ-ಖಾತಾ ವಿತರಿಸಿದರು. ಈ ಸಂದರ್ಭದಲ್ಲಿ ಶಾಸಕ ಬೈರತಿ ಬಸವರಾಜ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ಒಂದು ರಾಷ್ಟ್ರ, ಒಂದು ಚುನಾವಣೆ ಅಗತ್ಯ: ಚೌಧರಿ

• **ಬೆಂಗಳೂರು:** ಒಂದು ರಾಷ್ಟ್ರ, ಒಂದು ಚುನಾವಣೆ ವ್ಯವಸ್ಥೆ ದೇಶದ ಆಡಳಿತ ಮತ್ತು ಅಭಿವೃದ್ಧಿಗೆ ಪೂರಕವಾಗಿದ್ದು, ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳನ್ನು ಸಮನ್ವಯಗೊಳಿಸುವುದು ಅಗತ್ಯ ಎಂದು ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಪಿ.ಪಿ. ಚೌಧರಿ ಹೇಳಿದರು. ಖಾಸಗಿ ಹೋಟೆಲ್‌ನಲ್ಲಿ ಶನಿವಾರ ಆಯೋಜಿಸಿದ್ದ ಸಂವಿಧಾನ (129ನೇ ತಿದ್ದುಪಡಿ) ಮಸೂದೆ-2024 ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನು (ತಿದ್ದುಪಡಿ) ಮಸೂದೆ-2024 ಕುರಿತು ಜಂಟಿ ಸಂಸದೀಯ ಅಧ್ಯಯನ ಸಮಿತಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆ: ಒಂದು ದೇಶ, ಒಂದು ಚುನಾವಣೆ ಎಂದರೆ ಒಂದೇ ದಿನ ಮತದಾನ ನಡೆಸುವುದು ಅಲ್ಲ, ಚುನಾವಣಾ ಆಯೋಗದ ಅನುಕೂಲಕ್ಕೆ ಅನುಗುಣವಾಗಿ ಹಂತ-ಹಂತವಾಗಿ ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳನ್ನು ನಡೆಸುವುದು ಇದರ ಉದ್ದೇಶವಾಗಿದೆ. ಇದು ದೇಶದ ಭವಿಷ್ಯಕ್ಕೆ ಮಹತ್ವದ ಚುನಾವಣಾ ಸುಧಾರಣೆಯಾಗಲಿದೆ ಎಂದು ಹೇಳಿದರು. ದೇಶದ ವಿವಿಧ ರಾಜ್ಯಗಳಲ್ಲಿ ವರ್ಷಪೂರ್ತಿ ಚುನಾವಣೆಗಳು ನಡೆಯುತ್ತಿರುವುದರಿಂದ ಆಡಳಿತಾತ್ಮಕ ಕಾರ್ಯಗಳಿಗೆ ಅಡಚಣೆ ಉಂಟಾಗುತ್ತಿದೆ. ಮಾದರಿ ನೀತಿ ಸಂಹಿತೆಯಿಂದ ಸರ್ಕಾರದ ಯೋಜನೆಗಳ ಅನುಷ್ಠಾನ ವಿಳಂಬವಾಗುತ್ತಿದ್ದು, ಬಡವರಿಗೆ ತಲುಪಬೇಕಾದ ಸಾಮಾಜಿಕ ನ್ಯಾಯ ಯೋಜನೆಗಳ ಮೇಲೂ ಪರಿಣಾಮ ಬೀರುತ್ತಿದೆ ಎಂದು ಸಂಸದ ಚೌಧರಿ ತಿಳಿಸಿದರು. 2034ರ ವೇಳೆಗೆ ದೇಶದ ಎಲ್ಲಾ ಚುನಾವಣೆಗಳನ್ನು ಏಕಕಾಲಿಕ ಪ್ರಕ್ರಿಯೆಗೆ ತರಲು ಕ್ರಮ ಕೈಗೊಳ್ಳಲಾಗುವುದು. ಇದಕ್ಕಾಗಿ ಅಗತ್ಯವಾದ ಸಾಂವಿಧಾನಿಕ ತಿದ್ದುಪಡಿಗಳನ್ನು ತರಲಾಗುತ್ತದೆ ಎಂದು ತಿಳಿಸಿದರು. ಅವಿಶ್ವಾಸ ನಿರ್ಣಯದಂತಹ ಸಂದರ್ಭಗಳಲ್ಲಿ ಸರ್ಕಾರದ ಸ್ಥಿರತೆಯನ್ನು ಕಾಯ್ದುಕೊಳ್ಳಲು ಜರ್ಮನ್ ಅಥವಾ ಜಪಾನ್ ಮಾದರಿಯ ವ್ಯವಸ್ಥೆಗಳನ್ನೂ ಪರಿಗಣಿಸುವ ಬಗ್ಗೆ ಚರ್ಚೆ ನಡೆಯುತ್ತಿದೆ ಎಂದು ಹೇಳಿದರು.

ಇಬ್ಬರು ಆರೋಪಿಗಳ ಸೆರೆ: ಚಿನ್ನಾಭರಣ ವಶ

• **ಬೆಂಗಳೂರು:** ವ್ಯಕ್ತಿಯೊಬ್ಬರಿಗೆ ಚಾಕು ತೋರಿಸಿ ಬೆದರಿಸಿ, ಚಿನ್ನಾಭರಣ ಹಾಗೂ ಮೊಬೈಲ್ ದೋಚಿದ್ದ ಇಬ್ಬರು ಆರೋಪಿಗಳನ್ನು ಕೆ.ಆರ್.ಪುರ ಪೊಲೀಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ವಿವೇಕ್ ಹಾಗೂ ನಿಖಿಲ್ ಬಂಧಿತರು. ಆರೋಪಿಗಳಿಂದ ಒಟ್ಟು 6 ಲಕ್ಷ ರೂ. ಮೌಲ್ಯದ 47 ಗ್ರಾಂ. ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಿ. ಚನ್ನಸಂದ್ರ ನಿವಾಸಿಯೊಬ್ಬರು ಕಳೆದ ಫೆ. 15 ರಂದು ಕೆಲಸದ ನಿಮಿತ್ತ ಕೆ.ಆರ್.ಪುರ ಪೆಟ್ರೋಲ್ ಬಂಕ್‌ವೊಂದರ ಬಳಿ ಹೋಗಿದ್ದಾಗ ಈ ಘಟನೆ ನಡೆದಿದ್ದು, ಅಲ್ಲಿಗೆ ಬಂದಿದ್ದ ಆರೋಪಿಗಳು ವಿಳಾಸ ಕೇಳುವ ನೆಪದಲ್ಲಿ ಬೈಕ್ ಕೀ ಕಿತ್ತುಕೊಂಡಿದ್ದರು. ಬಳಿಕ ದೂರುದಾರರನ್ನು ದ್ವಿಚಕ್ರ ವಾಹನದಲ್ಲಿ ಬಲವಂತವಾಗಿ ಚನ್ನಸಂದ್ರದ ಅರಣ್ಯ ಪ್ರದೇಶಕ್ಕೆ ಕರೆದೊಯ್ದು, ಚಾಕು ತೋರಿಸಿ ಬೆದರಿಸಿ ಅವರ ಬಳಿಯಿದ್ದ ಚಿನ್ನಾಭರಣ ಮತ್ತು ಅವರ ಬಳಿಯಿದ್ದ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದರು ಎಂದು ಪೊಲೀಸರು ಹೇಳಿದ್ದಾರೆ. ಈ ಸಂಬಂಧ ಫೆ.18 ರಂದು ಕೆ.ಆರ್.ಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಪ್ರಕರಣದ ತನಿಖೆ ಕೈಗೆತ್ತಿಕೊಂಡ ಪೊಲೀಸರು, ಇಬ್ಬರೂ ಆರೋಪಿಗಳನ್ನು ಬಂಧಿಸಿದ್ದಾರೆ. ಪ್ರಕರಣದಲ್ಲಿ ಮತ್ತೋರ್ವ ಆರೋಪಿಯು ತಲೆಮರೆಸಿಕೊಂಡಿದ್ದು, ಆತನಿಗಾಗಿ ಹುಡುಕಾಟ ಮುಂದುವರಿದಿದೆ ಎಂದು ಮಾಹಿತಿ ನೀಡಿದ್ದಾರೆ.


ಬಿಎಸ್‌ಡಬ್ಲ್ಯೂಎಂಎಲ್, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಸಹಯೋಗ

ಕಸ ಸಂಗ್ರಹಣೆ ಆ್ಯಪ್ ಸಿದ್ಧ

• **ಬೆಂಗಳೂರು:** ನಗರದಾದ್ಯಂತ ಬೃಹತ್ ಗಾತ್ರದ ತ್ಯಾಜ್ಯವನ್ನು (ಬಲ್ಕ್ ವೇಸ್ಟ್) ಮನೆ ಬಾಗಿಲ ಬಳಿಯೇ ಬಂದು ಸಂಗ್ರಹಿಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯೂಎಂಎಲ್) ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮುಂದಾಗಿದ್ದು, ಡಿಕ್ಲಟರ್ ಮೊಬೈಲ್ ಆ್ಯಪ್‌ನ್ನು ಸಿದ್ಧಪಡಿಸಿದೆ.

ನಗರದಲ್ಲಿ ಎಲ್ಲೆಂದರಲ್ಲಿ ಬೃಹತ್ ತ್ಯಾಜ್ಯಗಳನ್ನು ಎಸೆಯುವುದನ್ನು ತಡೆಗಟ್ಟಲು ಮತ್ತು ಪರಿಸರವನ್ನು ಸುಸ್ಥಿತಿಯಲ್ಲಿಡಲು ಈ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಸಾರ್ವಜನಿಕರು ತಮ್ಮ ಮನೆಯಲ್ಲಿರುವ ಬೇಡದ ದೊಡ್ಡ ವಸ್ತುಗಳನ್ನು ವಿಲೇವಾರಿ ಮಾಡಲು ಈಗ ಮೊಬೈಲ್ ಆ್ಯಪ್ ಮೂಲಕವೇ ಬುಕ್ಕಿಂಗ್ ಮಾಡಬಹುದು. ಬಿಎಸ್‌ಡಬ್ಲ್ಯೂಎಂಎಲ್ ಸಿಬ್ಬಂದಿಯೇ ಖುದ್ದಾಗಿ ಮನೆ ಬಾಗಿಲಿಗೆ ಬಂದು ವಸ್ತುಗಳನ್ನು ಸಂಗ್ರಹಿಸಲಿದ್ದಾರೆ. ಹಳೆಯ ಪೀಠೋಪಕರಣಗಳು, ಸೋಫಾಗಳು, ಹಾಸಿಗೆಗಳು ಕಪಾಟುಗಳು, ತ್ಯಜಿಸಲಾದ ಬಟ್ಟೆಗಳು, ಒಡೆದ ಸ್ಯಾನಿಟರಿ ಸಿಂಕ್ ಸಾಮಗ್ರಿಗಳು, ಹಳೆಯ ಕಾಮೋಡ್‌ಗಳು, ಚಪ್ಪಲಿ ಹಾಗೂ ಇತರೆ ದೊಡ್ಡ ಗಾತ್ರದ ಗೃಹ ಬಳಕೆಯ ತ್ಯಾಜ್ಯಗಳನ್ನು ಈ ವ್ಯವಸ್ಥೆಯ ಮೂಲಕ ಸಂಗ್ರಹಿಸಲಾಗುತ್ತದೆ.

ಸಂಗ್ರಹಿಸಲಾದ ತ್ಯಾಜ್ಯದಲ್ಲಿ ಮರುಬಳಕೆ ಸಾಧ್ಯವಿರುವ ವಸ್ತುಗಳನ್ನು ಅಧಿಕೃತ ಮರುಬಳಕೆ ಘಟಕಗಳಿಗೆ ಕಳುಹಿಸಲಾಗುವುದು. ಮರುಬಳಕೆ ಅಸಾಧ್ಯವಾದ ಉಳಿದ ತ್ಯಾಜ್ಯವನ್ನು ವೈಜ್ಞಾನಿಕ ವಿಧಾನದಲ್ಲಿ ಸಂಸ್ಕರಿಸಲು ವೇಸ್ಟ್- ಟು-ಎನರ್ಜಿ ಘಟಕಗಳಿಗೆ ರವಾನಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಲ್ಕ್ ತ್ಯಾಜ್ಯವನ್ನು ಸಾರ್ವಜನಿಕರು ರಸ್ತೆ ಬದಿಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ತಂದು ಹಾಕುತ್ತಿದ್ದಾರೆ. ಇದು ಪರಿಸರ ಸಮಸ್ಯೆ ಜೊತೆಗೆ ನಗರದ ಸ್ವಚ್ಛತೆ ಮತ್ತು ಸೌಂದರ್ಯಕ್ಕೂ ಧಕ್ಕೆಯುಂಟುಮಾಡುತ್ತವೆ. ಈ ಸವಾಲನ್ನು ಎದುರಿಸಲು ಬಿಎಸ್‌ಡಬ್ಲ್ಯೂಎಂಎಲ್ ವತಿಯಿಂದ ಪ್ರಾಯೋಗಿಕವಾಗಿ ಟ್ರ್ಯಾಕ್ಟರ್‌ಗಳನ್ನು ನಿಯೋಜಿಸಿ ಬೃಹತ್ ತ್ಯಾಜ್ಯವನ್ನು ಸಂಗ್ರಹಿಸುವ ಕಾರ್ಯ ಕೈಗೊಳ್ಳಲಾಗಿತ್ತು. ಈ ಕಾರ್ಯಾಚರಣೆಯ ವೇಳೆ ವಿವಿಧ ಪ್ರದೇಶಗಳಿಂದ ಸುಮಾರು 6,000 ಮೆಟ್ರಿಕ್ ಟನ್‌ಗಳಷ್ಟು ಬೃಹತ್ ತ್ಯಾಜ್ಯವನ್ನು ಸಂಗ್ರಹಿಸಲಾಗಿರುತ್ತದೆ ಎಂದು ಬಿಎಸ್‌ಡಬ್ಲ್ಯೂಎಂಎಲ್ ಸಿಇಒ ಕರೀಗೌಡ ತಿಳಿಸಿದ್ದಾರೆ.





ಸ್ಥಿರ ಮತ್ತು ನಾಗರಿಕ ಸ್ನೇಹಿ ಪರಿಹಾರ ಒದಗಿಸುವ ಮಹತ್ವದ ಹೆಜ್ಜೆಯಾಗಿ, ಇದೀಗ ಡಿಕ್ಲಟರ್ ಮೊಬೈಲ್ ತಂತ್ರಾಂಶವನ್ನು ಪರಿಚಯಿಸಿದೆ. ಸದರಿ ಆಪ್‌ನಲ್ಲಿ ಬರುವ ಕೋರಿಕೆಯಂತೆ ಹಾಗೂ ತ್ಯಾಜ್ಯದ ಪ್ರಮಾಣ ಹಾಗೂ ಸ್ವರೂಪವನ್ನು ಅವಲಂಬಿಸಿ ವಾರಕ್ಕೆ ಒಮ್ಮೆ ಬೃಹತ್ ತ್ಯಾಜ್ಯ ಸಂಗ್ರಹಣೆ ನಡೆಸಲಾಗುತ್ತದೆ.
■ **ಕರೀಗೌಡ,** ಬಿಎಸ್‌ಡಬ್ಲ್ಯೂಎಂಎಲ್ ಸಿಇಒ

ಡಿಕ್ಲಟರ್ ಕಾರ್ಯ ನಿರ್ವಹಿಸುವ ವಿಧಾನ

- ಗೂಗಲ್ ಸ್ಟೋರ್ ಅಥವಾ ಆಪಲ್ ಸ್ಟೋರ್‌ನಿಂದ ಆಪ್‌ನ್ನು ಡೌನ್‌ಲೋಡ್ ಮಾಡಿಕೊಳ್ಳಿ
- ಪ್ರಾಥಮಿಕ ವಿವರಗಳೊಂಗರೆ ನೋಂದಾಯಿಸಿ
- ವಿಲೇವಾರಿ ಮಾಡಬೇಕಾದ ವಸ್ತುಗಳನ್ನು ಆಯ್ಕೆ ಮಾಡಿ
- ಪಿಕ್ ಅಪ್ ಸಮಯವನ್ನು ನಿಗದಿಪಡಿಸಿ
- ಬಿಎಸ್‌ಡಬ್ಲ್ಯೂಎಂಎಲ್ ತಂಡ ನಿಮ್ಮ ಮನೆ ಬಾಗಿಲಿಗೆ ಬಂದು ಸಂಗ್ರಹಿಸಲಿದೆ.

ಬಿಡಿಎ ಫ್ಲ್ಯಾಟ್ ಮುಂಗಡ ಕಾಯ್ದಿರಿಸುವಿಕೆ ಆರಂಭ



ಫ್ಲ್ಯಾಟ್‌ಗಳ ದರ ಪಟ್ಟಿ

- 1-ಬಿಎಚ್‌ಕೆ ಫ್ಲ್ಯಾಟ್- 635 ಚದರ ಅಡಿ ವಿಸ್ತೀರ್ಣ ಹೊಂದಿದ್ದು, ಇದರ ಆರಂಭಿಕ ಬೆಲೆ 51 ಲಕ್ಷ
- 3-ಬಿಎಚ್‌ಕೆ ಫ್ಲ್ಯಾಟ್- 1,444 ಚದರ ಅಡಿ ವಿಸ್ತೀರ್ಣ ಹೊಂದಿದ್ದು, ಇದರ ಆರಂಭಿಕ ಬೆಲೆ 1.44 ಕೋಟಿ

• **ಬೆಂಗಳೂರು:** ಪೂರ್ವ ಬೆಂಗಳೂರಿನ ವೈಟ್‌ಫೀಲ್ಡ್ ಸಮೀಪದ ಕೋನದಾಸಪುರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸುತ್ತಿರುವ ತನ್ನ ಮಹತ್ವಾಕಾಂಕ್ಷೆಯ ಸ್ಕಂದಗಿರಿ ಅಪಾರ್ಟ್‌ಮೆಂಟ್ಸ್ ವಸತಿ ಯೋಜನೆಯ ಮೊದಲ ಹಂತದ ಮುಂಗಡ ಕಾಯ್ದಿರಿಸುವಿಕೆ ಪ್ರಕ್ರಿಯೆಯನ್ನು ಅಧಿಕೃತವಾಗಿ ಆರಂಭಿಸಿದೆ.

ಮೇ 15 ರಿಂದ ಸಾರ್ವಜನಿಕರ ಮುಂಗಡ ಕಾಯ್ದಿರಿಸುವಿಕೆಗೆ ಅವಕಾಶ ಕಲ್ಪಿಸಲಾಗಿದ್ದು, ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳುವಂತೆ ಬಿಡಿಎ ತಿಳಿಸಿದೆ. ಹಳೆಮದ್ರಾಸ್ ರಸ್ತೆ ಮತ್ತು ವೈಟ್‌ಫೀಲ್ಡ್-ಹೊಸಕೋಟೆ ರಸ್ತೆ ಕಾರಿಡಾರ್ ಮಧ್ಯೆ ಈ ಯೋಜನೆ ಕಾರ್ಯಗತಗೊಳ್ಳುತ್ತಿದೆ. ಒಟ್ಟು 16 ಸ್ವತಂತ್ರ ವಸತಿ ಟವರ್‌ಗಳಲ್ಲಿ 1,488 ಫ್ಲ್ಯಾಟ್‌ಗಳನ್ನು ನಿರ್ಮಿಸಲಾಗುತ್ತಿದೆ. ಈ ಪೈಕಿ ಕೆಲವು ಆರ್ಮಿ ಹೌಸಿಂಗ್ ವೆಲ್ಫೇರ್ ಅಸೋಸಿಯೇಷನ್‌ಗೆ ಸಗಟಾಗಿ ಮಾರಾಟ ಮಾಡಲಾಗಿದೆ. ಇನ್ನುಳಿದ ಫ್ಲಾಟ್‌ಗಳನ್ನು ಹಂತ-ಹಂತವಾಗಿ ಸಾರ್ವಜನಿಕರ ಬುಕಿಂಗ್‌ಗೆ ಮುಕ್ತಗೊಳಿಸಲಾಗಿದೆ. ಈ ವಸತಿ ಸಂಕೀರ್ಣದಲ್ಲಿ ಈಜುಕೊಳ, ಜಿಮ್ನಾಷಿಯಂ ಬ್ಯಾಡ್ಮಿಂಟನ್ ಕೋರ್ಟ್ ಮತ್ತು ಯೋಗ ಕೇಂದ್ರ ಸೇರಿದಂತೆ ಹಲವು ಅತ್ಯಾಧುನಿಕ ಸೌಲಭ್ಯಗಳನ್ನು ಒದಗಿಸುವುದಾಗಿ ಬಿಡಿಎ ಘೋಷಿಸಿದೆ.

ಪ್ರಯಾಣಿಕರ ಸಾಗಣೆ: ಕೆಐಎ ದಾಖಲೆ

• **ಬೆಂಗಳೂರು:** ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಪ್ರಾರಂಭವಾದ ದಿನದಿಂದ ಇಲ್ಲಿಯವರೆಗೆ(ಏಪ್ರಿಲ್) ಒಟ್ಟು ಪ್ರಯಾಣಿಕರ ಸಂಖ್ಯೆ 400 ಮಿಲಿಯನ್ (40ಕೋಟಿ) ದಾಟುವ ಮೂಲಕ ಐತಿಹಾಸಿಕ ಸಾಧನೆ ಮಾಡಿದೆ ಎಂದು ಬಿಐಎಎಲ್ ತಿಳಿಸಿದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ (ಬಿಐಎಎಲ್) ಮಂಡಳಿಯ 134ನೇ ಸಭೆಯಲ್ಲಿ ವಿಮಾನ ನಿಲ್ದಾಣ ಆಡಳಿತ ಮಂಡಳಿ ಈ ವಿಷಯ ಹಂಚಿಕೊಂಡಿದೆ. ಜಾಗತಿಕ ವಾಯುಯಾನ ವಲಯದಲ್ಲಿದ್ದ ಸವಾಲುಗಳ ನಡುವೆಯೂ ಈ ಅತ್ಯುತ್ತಮ ಸಾಧನೆ ಮಾಡಿದೆ ಎಂದು ಬಿಐಎಎಲ್ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಿಇಒ ಅವರನ್ನು ಬಿಐಎಎಲ್ ಆಡಳಿತ ಮಂಡಳಿಯು ಶ್ಲಾಘಿಸಿದೆ.

ಪ್ರಯಾಣಿಕರ ಸಂಚಾರದಲ್ಲಿ ಗಣನೀಯ ವೃದ್ಧಿ

ಹಣಕಾಸು ವರ್ಷ 2025-26ರಲ್ಲಿ ವಿಮಾನ ನಿಲ್ದಾಣವು ಒಟ್ಟು 44.47 ಮಿಲಿಯನ್ ಪ್ರಯಾಣಿಕರನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಒಟ್ಟಾರೆ ಶೇ. 6.2 ರಷ್ಟು ಬೆಳವಣಿಗೆಯಾಗಿದೆ. ಶೇ. 23.9 ರಷ್ಟು ಭಾರಿ ಬೆಳವಣಿಗೆಯೊಂದಿಗೆ 7.23 ಮಿಲಿಯನ್ ಪ್ರಯಾಣಿಕರು ಅಂತಾರಾಷ್ಟ್ರೀಯ ಸಂಚಾರ ನಡೆಸಿದ್ದಾರೆ. ಅಲ್ಲದೇ, ಶೇ. 3.3 ರಷ್ಟು ಪ್ರಗತಿಯೊಂದಿಗೆ 37.24 ಮಿಲಿಯನ್ ಪ್ರಯಾಣಿಕರು ದೇಶೀಯವಾಗಿ ಪ್ರಯಾಣಿಸಿದ್ದಾರೆ.

ಸರಕು ಸಾಗಣೆ ಮತ್ತು ರಫ್ತಿನಲ್ಲಿ ಮುಂಚೂಣಿ

ವರದಿ ಸಾಲಿನಲ್ಲಿ ವಿಮಾನ ನಿಲ್ದಾಣವು 532,000 ಮೆಟ್ರಿಕ್ ಟನ್ ಸರಕನ್ನು ನಿರ್ವಹಿಸಿದ್ದು, ಶೇ. 6 ರಷ್ಟು ವಾರ್ಷಿಕ ಬೆಳವಣಿಗೆ ದಾಖಲಿಸಿದೆ. 15 ಸರಕು ಸಾಗಣೆ ವಿಮಾನ ಸಂಸ್ಥೆಗಳ ಮೂಲಕ ಚಿಕಾಗೊ, ಸಿಂಗಾಪುರ, ಲಂಡನ್ ಮತ್ತು ಫ್ರಾಂಕ್‌ಫರ್ಟ್ ಸೇರಿದಂತೆ 38 ಜಾಗತಿಕ ಹಬ್‌ಗಳಿಗೆ ಸಂಪರ್ಕ ಕಲ್ಪಿಸಲಾಗಿದೆ. ವಿಶೇಷವಾಗಿ ಬೇಗ ಹಾಳಾಗುವ ಸರಕುಗಳ ರಫ್ತಿನಲ್ಲಿ ಬೆಂಗಳೂರು ದೇಶದಲ್ಲೇ ಸತತ ಐದನೇ ವರ್ಷವೂ ಅಗ್ರಸ್ಥಾನ ಕಾಯ್ದುಕೊಂಡಿದೆ. ಈ ಅವಧಿಯಲ್ಲಿ ಸುಮಾರು 60 ಮಿಲಿಯನ್ ಗುಲಾಬಿ ಹೂವು, (ಶೇ. 38 ಹೆಚ್ಚಳ), ಮಾವಿನ ಹಣ್ಣು (ಶೇ. 12 ಹೆಚ್ಚಳ) ಹಾಗೂ ಕೊತ್ತಂಬರಿ ಸೊಪ್ಪಿನ ರಫ್ತು (ಶೇ. 13 ಹೆಚ್ಚಳ) ಅತ್ಯಧಿಕ ಮಟ್ಟದಲ್ಲಿ ದಾಖಲಾಗಿದೆ.

ದೈನಂದಿನ ದಾಖಲೆ

ಒಂದೇ ದಿನದಲ್ಲಿ ಗರಿಷ್ಠ 139,111 ಪ್ರಯಾಣಿಕರನ್ನು ನಿರ್ವಹಿಸುವ ಮೂಲಕ ವಿಮಾನ ನಿಲ್ದಾಣವು ಹೊಸ ದಾಖಲೆ ಬರೆದಿದೆ. ಪ್ರಸ್ತುತ ನಿಲ್ದಾಣವು 78 ದೇಶೀಯ ಮತ್ತು 34 ಅಂತಾರಾಷ್ಟ್ರೀಯ ಸ್ಥಳಗಳಿಗೆ ನೇರ ಸಂಪರ್ಕ ಕಲ್ಪಿಸುತ್ತಿದೆ.

ಆಕ್ರಮಣಕಾರಿ ಮನಸ್ಥಿತಿಗೆ ಹಲವು ಮುಖ

• **ಬೆಂಗಳೂರು:** ಕ್ರಿ.ಶ 711ರಲ್ಲಿ ಆರಂಭವಾದ ಆಕ್ರಮಣಕಾರಿ ಮನಸ್ಥಿತಿಯು ಇಂದು ಕೇವಲ ಯುದ್ಧಕ್ಕೆ ಸೀಮಿತವಾಗಿಲ್ಲ, ಬದಲಾಗಿ ಅದು ಲವ್ ಜಿಹಾದ್, ಲ್ಯಾಂಡ್ ಜಿಹಾದ್ ಮತ್ತು ಇತ್ತೀಚಿನ ಕಾರ್ಪೊರೇಟ್ ಜಿಹಾದ್‌ನಂತಹ ವಿಭಿನ್ನ ರೂಪಗಳನ್ನು ಪಡೆದುಕೊಂಡಿದೆ ಎಂದು ಹಿಂದು ಜನಜಾಗೃತಿ ಸಮಿತಿಯ ರಾಜ್ಯ ವಕ್ತಾರ ಮೋಹನ್ ಗೌಡ ಕಳವಳ ವ್ಯಕ್ತಪಡಿಸಿದರು.

ಹಿಂದು ಜನಜಾಗೃತಿ ಸಮಿತಿಯ ವತಿಯಿಂದ ಬಸವನಗುಡಿಯ ಸತ್ಯಪ್ರಮೋದ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ ಕಾರ್ಪೊರೇಟ್ ಜಿಹಾದ್: ಮಿಥ್ಯ ಮತ್ತು ವಾಸ್ತವ ಕುರಿತು ವಿಶೇಷ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಟಿಸಿಎಸ್ ನಲ್ಲಿ ಕಳೆದ 6 ವರ್ಷಗಳಿಂದ ಅಲ್ಲಿನ ಹಿಂದು ಮಹಿಳಾ ನೌಕರರಿಗೆ ನರಕಯಾತನೆ ನೀಡಲಾಗಿತ್ತು. ಪ್ರಮೋಷನ್‌ಗಾಗಿ ನಮಾಜ್ ಮಾಡುವುದು, ಸಂಬಳ ಹೆಚ್ಚಳಕ್ಕಾಗಿ ಬೀಫ್ ತಿನ್ನುವುದು ಮತ್ತು ಹಿಂದು ದೇವರುಗಳ ಅವಮಾನವನ್ನು ಸಹಿಸುವಂತೆ ಒತ್ತಡ ಹೇರಲಾಗಿತ್ತು. ಹಿಂದು ಸಮಾಜ ಮತ್ತು ಹೆಣ್ಣುಮಕ್ಕಳ ರಕ್ಷಣೆಗಾಗಿ ಬೇಟಿ ಸುರಕ್ಷಾ - ರಾಷ್ಟ್ರ ಸುರಕ್ಷಾ ಅಭಿಯಾನದಡಿ ಜಾಗೃತಿ ಮೂಡಿಸುವುದು ಅನಿವಾರ್ಯವಾಗಿದೆ. ಈ ಬಿಕ್ಕಟ್ಟನ್ನು ಎದುರಿಸಲು ಹಿಂದು ಸಮಾಜಕ್ಕೆ ಎರಡು ಪ್ರಮುಖ ಅರಿವುಗಳ ಅಗತ್ಯವಿದೆ ಎಂದರು.



ಪ್ರತ್ಯೇಕ ಹೆಲ್ಪ್‌ಲೈನ್ ಅಗತ್ಯ

ಸಮಿತಿ ಸದಸ್ಯೆ ಡಾ. ರೂಪ ಮಾತನಾಡಿ, ಇಂದು ಕಚೇರಿಗಳಲ್ಲಿ ಉದ್ಯೋಗಿಗಳ ಮೇಲೆ ಪರೋಕ್ಷ ಧಾರ್ಮಿಕ ಒತ್ತಡ ಹೇರುವುದು, ಅನ್ಯ ಧರ್ಮದ ಆಚರಣೆಗಳನ್ನು ಅನುಸರಿಸಲು ಪ್ರೇರೇಪಿಸುವುದು, ನಮಾಜ್ ಅಥವಾ ಇತರ ಆಚರಣೆಗಳಿಗೆ ಒತ್ತಾಯಿಸುವ ಘಟನೆಗಳು ನಡೆಯುತ್ತಿವೆ. ಇದೇ ವೇಳೆ ಹಿಂದು ದೇವತೆಗಳ ಅಪಹಾಸ್ಯ, ಹಿಂದು ಗುರುಗಳ ವಿರುದ್ಧ ನಕಾರಾತ್ಮಕ ಟೀಕೆ ಹಾಗೂ ಧಾರ್ಮಿಕ ಸಂಸ್ಕೃತಿಯ ಅವಮಾನ ಕಾರ್ಪೊರೇಟ್ ವಾತಾವರಣದಲ್ಲಿ ಹೆಚ್ಚುತ್ತಿರುವುದು ವಿಷಾದನೀಯ. ಉದ್ಯೋಗಿಗಳು ಇಂತಹ ಧಾರ್ಮಿಕ ಕಿರುಕುಳ ಅಥವಾ ತಾರತಮ್ಯಗಳನ್ನು ಸುರಕ್ಷಿತವಾಗಿ ವರದಿ ಮಾಡಲು ಪ್ರತ್ಯೇಕ ಹೆಲ್ಪ್‌ಲೈನ್ ಅಥವಾ ದೂರು ವ್ಯವಸ್ಥೆ ಅಗತ್ಯವಿದೆ ಎಂದರು.

ಡೆಂಘೀ ನಿಯಂತ್ರಣಕ್ಕೆ ಎಲ್ಲರ ಸಹಕಾರವಿರಲಿ

• **ಬೆಂಗಳೂರು:** ಡೆಂಘೀ ನಿಯಂತ್ರಣಕ್ಕೆ ಸಾರ್ವಜನಿಕರ ಸಹಭಾಗಿತ್ವ ಅತ್ಯಗತ್ಯ ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ರಾಷ್ಟ್ರೀಯ ಡೆಂಘೀ ದಿನಾಚರಣೆ ಕುರಿತಾಗಿ ಮಾತನಾಡಿದ ಅವರು, ಮನೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ವಚ್ಛತೆ ಕಾಪಾಡುವುದು, ನೀರು ನಿಲ್ಲದಂತೆ ನೋಡಿಕೊಳ್ಳುವುದು ಮತ್ತು ಸೊಳ್ಳೆಗಳ ಸಂತಾನೋತ್ಪತ್ತಿ ತಡೆಗಟ್ಟುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ತಿಳಿಸಿದರು. ಡೆಂಘೀ ದಿನಾಚರಣೆ ಅಂಗವಾಗಿ ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಆರೋಗ್ಯಾಧಿಕಾರಿಗಳ ನೇತೃತ್ವದಲ್ಲಿ ಉಪ ಆರೋಗ್ಯಾಧಿಕಾರಿಗಳು ಹಾಗೂ ಆರೋಗ್ಯ ವೈದ್ಯಾಧಿಕಾರಿಗಳ ನೇತೃತ್ವದಲ್ಲಿ, ಎಲ್ಲಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ನಮ್ಮ ಕ್ಲಿನಿಕ್ ವೈದ್ಯಾಧಿಕಾರಿಗಳು ಹಾಗೂ ಆರೋಗ್ಯ ಸಿಬ್ಬಂದಿಗಳ ಸಹಯೋಗದೊಂದಿಗೆ ಡೆಂಘೀ, ಚಿಕನ್ ಗುನ್ಯಾ, ಮಲೇರಿಯಾ ಸೇರಿದಂತೆ ಸೊಳ್ಳೆಗಳಿಂದ ಹರಡುವ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಯಿತು. ಪರಿಶೀಲಿಸಿ, ಸ್ವಚ್ಛಗೊಳಿಸಿ ಹಾಗೂ ಮುಚ್ಚಿಡಿ ಎಂಬ ಸಂದೇಶದಡಿ ಸ್ಥಳೀಯ ಸಂಘ ಸಂಸ್ಥೆಗಳು, ಶಾಲಾ ಮಕ್ಕಳು, ಅಂಗನವಾಡಿ ಕಾರ್ಯಕರ್ತರು ಹಾಗೂ ಸಾರ್ವಜನಿಕರ ಸಹಯೋಗದೊಂದಿಗೆ ಅರಿವು ಕಾರ್ಯಕ್ರಮ ಆಯೋಜಿಸಲಾಗುತ್ತಿದೆ.

ಜೀವಹಾನಿ ಆಗದಂತೆ ಎಚ್ಚರ ವಹಿಸಲು ಸೂಚನೆ

ಮುನ್ನೆಚ್ಚರಿಕೆ ಕ್ರಮಗಳ ಪರಿಶೀಲನೆ

• **ಬೆಂಗಳೂರು:** ಮಳೆಗಾಲದ ಮುನ್ನೆಚ್ಚರಿಕೆ ಸಂಬಂಧಿಸಿದಂತೆ ಗೋವಿಂದರಾಜನಗರದ ಬಿಜಿಎಸ್ ಕ್ರೀಡಾಂಗಣದಲ್ಲಿ ಚರಂಡಿಗಳ ಸ್ವಚ್ಛತೆ ಹಾಗೂ ಇತರೆ ಮುನ್ನೆಚ್ಚರಿಗೆ ಕ್ರಮಗಳ ಕಾರ್ಯಕ್ಕೆ ಬಳಸುವ ಉಪಕರಣಗಳು, ವಾಹನಗಳು, ಸಿಬ್ಬಂದಿ ಮತ್ತಿತರ ಸಂಪನ್ಮೂಲಗಳ ಪ್ರದರ್ಶನ ಮತ್ತು ಸಿದ್ಧತೆಯ ಕುರಿತಾಗಿ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ.ಪರಿಶೀಲನೆ ನಡೆಸಿದರು.

ಬಳಿಕ ಮಾತನಾಡಿದ ಅವರು, ಮಳೆಗಾಲದಲ್ಲಿ ಯಾವುದೇ ಅವಘಡ, ಜೀವಹಾನಿ ಆಗದಂತೆ ಎಚ್ಚರ ವಹಿಸಬೇಕು. ಎಲ್ಲಾ ತಂಡಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯಪ್ರವೃತ್ತರಾಗಬೇಕು. ವಿಪತ್ತು ನಿರ್ವಹಣೆಯಲ್ಲಿ ಪೂರ್ವ ಮಾಹಿತಿ ಅತ್ಯಗತ್ಯವಾಗಿದ್ದು, ಸಂಭವನೀಯ ವಿಪತ್ತುಗಳ ಬಗ್ಗೆ ಗುರುತು ಮಾಡಿಕೊಂಡು, ಆದ್ಯತೆ ಮೇರೆಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಜನರ ಜೀವ, ಆಸ್ತಿ ಉಳಿಸುವ ಕೆಲಸ ಮಾಡಬೇಕು ಎಂದು ಸೂಚಿಸಿದರು. ಮಳೆಗಾಲದ ಸಂದರ್ಭದಲ್ಲಿ ಸಿದ್ಧತೆ, ನಿರ್ವಹಣೆಗೆ ಅಗತ್ಯ ಉಪಕರಣ, ಸಲಕರಣೆಗಳು ಸಿದ್ಧವಿವೆಯೇ ಎಂಬ ಬಗ್ಗೆ ಹಾಗೂ ಅವುಗಳ ಸಮರ್ಪಕ ನಿರ್ವಹಣೆ ಬಗ್ಗೆ ಅಧಿಕಾರಿಗಳು ಗಮನಿಸಬೇಕು. ಎಸ್ಕಾ, ಜೆಟ್ಟಿಂಗ್ ಸಿಲ್ಟ್ ಅಂಡ್ ಟ್ರ್ಯಾಕ್ಟರ್ ಸಮರ್ಪಕವಾಗಿ ಬಳಸಿಕೊಳ್ಳಬೇಕು. ಮಳೆ ನೀರುಗಾಲುವೆ, ಪಾದಚಾರಿ ಮಾರ್ಗ ಒತ್ತುವರಿ, ಕಟ್ಟಡ ಕಾಮಗಾರಿ ಭಗ್ನಾವಶೇಷಗಳು, ಪಾದಚಾರಿ ಮಾರ್ಗ ಅನಧಿಕೃತ ಮಾರ್ಪಾಡು, ಶಿಥಿಲ ಕಟ್ಟಡ ಮತ್ತು ಕಾಂಪೌಂಡ್, ಖಾಲಿ ನಿವೇಶನ ನಿರ್ವಹಣೆ, ತೆರೆದ ಚರಂಡಿ, ಒಳಚರಂಡಿ ಇತ್ಯಾದಿ ಬಗ್ಗೆ ಮಾಹಿತಿ ಸಂಗ್ರಹಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು. ಸಿವಿಲ್ ಡಿಫೆನ್ಸ್ ನೆರವನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ವಿಪತ್ತು ನಿರ್ವಹಣೆಯಲ್ಲಿ ಸೈನ್ ಬೋರ್ಡ್ ಗಳು ಅಗತ್ಯವಾಗಿದ್ದು, ಈ ಬಗ್ಗೆ ಕ್ರಮ ಅಗತ್ಯ. ವಿಪತ್ತು ನಿರ್ವಹಣೆಗೆ ಗರಿಷ್ಠ ಪ್ರಮಾಣದಲ್ಲಿ ಸ್ಥಳೀಯ ಸ್ವಯಂಸೇವಕರನ್ನು ಗುರುತಿಸಿ ಸಮರ್ಪಕವಾಗಿ ಪ್ರದೇಶ ನಿರ್ವಹಣೆ ಮಾಡಬೇಕು ಎಂದು ರಾಜೇಂದ್ರ ನಿರ್ದೇಶಿಸಿದರು.



ವೈಟ್‌ಫೀಲ್ಡ್ ನಾಗರಿಕರ ವಾರ್ಡ್ ಸಮಿತಿ ಆರೋಪ

ಕಾನೂನುಬಾಹಿರವಾಗಿ ಮರಗಳ ಹನನ

• **ಬೆಂಗಳೂರು:** ನಗರದ ಪ್ರತಿಷ್ಠಿತ ಕೆರೆಗಳಲ್ಲಿ ಒಂದಾದ ವೈಟ್‌ಫೀಲ್ಡ್ ವ್ಯಾಪ್ತಿಯ ಪಟ್ಟಂದೂರು ಅಗ್ರಹಾರ ಕೆರೆ (ಸರ್ವೆ ನಂಬರ್ 54) ಜಾಗದಲ್ಲಿ ಕಾನೂನುಬಾಹಿರವಾಗಿ ಮರಗಳನ್ನು ಕತ್ತರಿಸುತ್ತಿರುವ ಹಾಗೂ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಲು ಯತ್ನಿಸಲಾಗುತ್ತಿದೆ ಎಂದು ವೈಟ್‌ಫೀಲ್ಡ್ ನಾಗರಿಕರ ವಾರ್ಡ್ ಕಮಿಟಿ ಆರೋಪಿಸಿದೆ.

ಸ್ಥಳೀಯ ಪ್ರತ್ಯಕ್ಷದರ್ಶಿಗಳು ನೀಡಿರುವ ಮಾಹಿತಿ ಪ್ರಕಾರ, ಖಾಸಗಿ ರಿಯಲ್ ಎಸ್ಟೇಟ್ ಗ್ರೂಪ್‌ಗೆ ಸೇರಿದ ವ್ಯಕ್ತಿಗಳು ಯಾವುದೇ ಅನುಮತಿ ಇಲ್ಲದೆ ಸರ್ಕಾರಿ ಜಾಗದಲ್ಲಿದ್ದ ಮರಗಳನ್ನು ಕತ್ತರಿಸುವಾಗ ಸ್ಥಳೀಯರಿಗೆ ಸಿಕ್ಕಿಬಿದ್ದಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿರುವ ಬೆಂಗಳೂರು ನಗರ ಉಪ ಅರಣ್ಯ ಸಂರಕ್ಷಣಾಧಿಕಾರಿ ಮರ ಕತ್ತರಿಸುವುದನ್ನು ತಕ್ಷಣವೇ ನಿಲ್ಲಿಸಲು ಆದೇಶಿಸಲಾಗಿದ್ದು, ಘಟನೆ ಕುರಿತು ಸಮಗ್ರ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದ್ದಾರೆ ಎಂದು ಸ್ಥಳೀಯರು ತಿಳಿಸಿದ್ದಾರೆ.



ಪಟ್ಟಂದೂರು ಅಗ್ರಹಾರ ಕೆರೆಯ ಸುಮಾರು 11 ಎಕರೆ ಜಾಗದ ಒತ್ತುವರಿಗೆ ಸಂಬಂಧಿಸಿದಂತೆ ಸದ್ಯ ನ್ಯಾಯಾಲಯದಲ್ಲಿ ಕಾನೂನು ಹೋರಾಟ ನಡೆಯುತ್ತಿದೆ. ಸರ್ಕಾರದ ಅಧಿಕೃತ ಒತ್ತುವರಿ ವರದಿ ಮತ್ತು ನಕ್ಷೆಯ ಪ್ರಕಾರ, ಕೆರೆಯ ಆಗ್ನೇಯ ಭಾಗದಲ್ಲಿರುವ ಸುಮಾರು 2 ಎಕರೆ ಪ್ರದೇಶವು ಯಾವುದೇ ವಿವಾದಕ್ಕೆ ಒಳಪಡದ ಸಂಪೂರ್ಣ ಸರ್ಕಾರಿ ಸ್ವತ್ತಾಗಿದೆ. ಆದರೆ, ಈಗ ಇದೇ ವಿವಾದ ಮುಕ್ತ ಸರ್ಕಾರಿ ಜಾಗಕ್ಕೆ ಅತಿಕ್ರಮ ಪ್ರವೇಶ ಮಾಡಿ, ರಿಯಲ್ ಎಸ್ಟೇಟ್ ಮಾಫಿಯಾ ಮರಗಳನ್ನು ಕಡಿಯುತ್ತಿದ್ದಾರೆ ಎಂದು ವೈಟ್‌ಫೀಲ್ಡ್ ನಾಗರಿಕರ ವಾರ್ಡ್ ಕಮಿಟಿ ಆರೋಪಿಸಿದೆ.

ಅಷ್ಟೇ ಅಲ್ಲದೆ, ಕಳೆದ ಕೆಲವು ವಾರಗಳಿಂದ ವಿವಾದಿತ ಜಾಗದ ಸುತ್ತಮುತ್ತಲಿನ ಗಡಿಭಾಗದಲ್ಲೂ ಅರಣ್ಯ ಇಲಾಖೆಯ ಅನುಮತಿ ಇಲ್ಲದೆ ನೂರಾರು ಮರಗಳನ್ನು ಕತ್ತರಿಸಲಾಗಿದೆ ಎಂದು ಸ್ಥಳೀಯರು ದೂರಿದ್ದಾರೆ. ಜಿಬಿಎ ಮುಖ್ಯ ಆಯುಕ್ತರು ತಕ್ಷಣವೇ ಮಧ್ಯಪ್ರವೇಶಿಸಿ, ಕೆರೆ ಜಾಗವನ್ನು ತಮ್ಮ ವಶಕ್ಕೆ ಪಡೆದು ರಕ್ಷಿಸಬೇಕು ಹಾಗೂ ಇದನ್ನು ಪುನಃ ಸಜೀವ ಕೆರೆಯನ್ನಾಗಿ ಪರಿವರ್ತಿಸಬೇಕು. ಅರಣ್ಯ ಇಲಾಖೆಯ ಅನುಮತಿ ಇಲ್ಲದೆ ಇಷ್ಟೊಂದು ಪ್ರಮಾಣದಲ್ಲಿ ಮರಗಳನ್ನು ಕತ್ತರಿಸಿದ ಅಪರಾಧಿಗಳು, ಉಸ್ತುವಾರಿ ವಹಿಸಿಕೊಂಡವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕೆಂದು ನಿವಾಸಿಗಳು ಆಗ್ರಹಿಸಿದ್ದಾರೆ.


ಇಂದು ನಗರದಲ್ಲಿ...

- ಅನಘ ಅಜಯ್ ಅವರಿಂದ ಕೂಚುಪುಡಿ ನೃತ್ಯ
- ಸ್ಥಳ: ಕಬ್ಬನ್ ಪಾರ್ಕ್ ಬ್ಯಾಂಡ್ ಸ್ಟ್ಯಾಂಡ್
- ಬೆಳಗ್ಗೆ 8

- ಮಲ್ಲಿಕಾರ್ಜುನ ಅವರಿಗೆ ಅಭಿನಂದನಾ ಕಾರ್ಯಕ್ರಮ
- ಸ್ಥಳ: ಶಾರದ ಸ್ತ್ರೀ ಸಮಾಜ. 1 ನೇ ಮುಖ್ಯ ರಸ್ತೆ, ಚಾಮರಾಜಪೇಟೆ
- ಬೆಳಗ್ಗೆ 10.30

- ಆರ್ಟ್ ಆಫ್ ಗಿವಿಂಗ್ ವತಿಯಿಂದ 13 ನೇ ವಾರ್ಷಿಕೋತ್ಸವ
- ಸ್ಥಳ: ಗಾಂಧಿಭವನ
- ಬೆಳಗ್ಗೆ 11.30

- ಇಂಡೋ ಸಾಮ್ ವೈಜ್ಞಾನಿಕ ತ್ರೈಂಗಪಳೆ ಫೆಲೋಶಿಪ್
- ಸ್ಥಳ: ರಮಣಶ್ರೀ ಹೋಟೆಲ್
- ಮಧ್ಯಾಹ್ನ 3



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ	12	8	4	0	16	+1.065
ಗುಜರಾತ್	12	8	4	0	16	+0.551
ಹೈದರಾಬಾದ್	12	7	5	0	14	+0.331
ಪಂಜಾಬ್	12	6	5	1	13	+0.355
ರಾಜಸ್ಥಾನ	11	6	5	0	12	+0.082
ಚೆನ್ನೈ	12	6	6	0	12	+0.027
ದಿಲ್ಲಿ	12	5	7	0	10	-0.993
ಕೆಕೆಆರ್	11	4	6	1	9	-0.198
ಮುಂಬೈ	12	4	8	0	8	-0.504
ಲಖನೌ	12	4	8	0	8	-0.701

ಅಗ್ರ ಎರಡಲ್ಲೇ ಉಳಿಯಲು ಆರ್‌ಸಿಬಿ ಪಣ | ಪಂಜಾಬ್‌ಗೆ ಗೆಲ್ಲಲೇಬೇಕಾದ ಅನಿವಾರ್ಯತೆ

ಪಂಜಾಬ್‌ಗೆ ಬೆಂಗಳೂರು ಸವಾಲು

• **ಧರ್ಮಶಾಲಾ:** ಪ್ಲೇಆಫ್ ಖಾತ್ರಿಗಾಗಿ ಆರ್‌ಸಿಬಿ ಹಾಗೂ ಟೂರ್ನಿಯಲ್ಲಿ ಉಳಿಯುವುದಕ್ಕಾಗಿ ಪಂಜಾಬ್ ತಂಡಗಳು ಭಾನುವಾರದ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಎರಡನೇ ಪಂದ್ಯದಲ್ಲಿ ರಾಜಸ್ಥಾನ ಮಹತ್ವದ ಪಂದ್ಯದಲ್ಲಿ ದಿಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ. ಆರು ಗೆಲುವಿನ ನಂತರ ಪಂಜಾಬ್ ಸತತ ಐದು ಪಂದ್ಯಗಳನ್ನು ಸೋತಿದೆ. ಆರ್‌ಸಿಬಿ ಅತ್ಯುತ್ತಮ ಪ್ರದರ್ಶನದೊಂದಿಗೆ ಅಗ್ರಸ್ಥಾನದಲ್ಲಿ ಕಾಣಿಸಿಕೊಂಡಿದೆ.

ಎರಡನೇ ಪಂದ್ಯದಲ್ಲಿ ಆಡಲಿರುವ ರಾಜಸ್ಥಾನ ಹಿಂದಿನ ಪಂದ್ಯದಲ್ಲಿ ಸೋಲನುಭವಿಸಿದ್ದು, ದೊಡ್ಡ ಹಿನ್ನಡೆಯೊಂದಿಗೆ ಬಹು ದಿನಗಳ ನಂತರ ಆಡಲಿದೆ. ಅದೇ ದಿಲ್ಲಿ ತಂಡ ಕೊನೆಯ ಹೋಪ್‌ನಲ್ಲಿದ್ದಿದ್ದಲ್ಲದೆ, ಅಭಿಯಾನವನ್ನು ಗೆಲುವಿನೊಂದಿಗೆ ಮುಗಿಸಲು ಅಣಿಯಾಗುತ್ತಿದೆ. ಪ್ಲೇಆಫ್ ವಿಚಾರದಲ್ಲಿ, ಎರಡೂ ಪಂದ್ಯಗಳು ಪ್ರಮುಖ ಪಾತ್ರ ವಹಿಸಲಿವೆ.

ಆರ್‌ಸಿಬಿ ಗೆದ್ದರೆ ಟಾಪ್ 2 ಖಚಿತ: 16 ಅಂಕಗಳನ್ನು ಹೊಂದಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮೊದಲನೇ ಸ್ಥಾನದಲ್ಲಿದೆ. ಲಖನೌ ಸೂಪರ್ ಜೇಂಟ್ಸ್, ಚೆನ್ನೈ ತಂಡವನ್ನು ಸೋಲಿಸಿದ ನಂತರ ಪಂದ್ಯಾವಳಿಯ ಪ್ಲೇಆಫ್ ಲೆಕ್ಕಾಚಾರ ಇನ್ನಷ್ಟು ಕುತೂಹಲ ಮೂಡಿಸಿದೆ. ಆರ್‌ಸಿಬಿಯ ಪ್ಲೇಆಫ್ ಬಹುತೇಕ ಖಚಿತವಾಗಿದೆ. ಈ ಪಂದ್ಯದಲ್ಲಿ ಗೆದ್ದರೆ 18 ಅಂಕಗಳೊಂದಿಗೆ ಆರ್‌ಸಿಬಿ ಅಗ್ರಸ್ಥಾನದಲ್ಲೇ ಉಳಿಯಲಿದೆ. ಅಲ್ಲದೆ, ಟಾಪ್ 2ರಲ್ಲಿ ಮುಗಿಸುವ ಸಾಧ್ಯತೆಗಳೂ ಹೆಚ್ಚಲಿವೆ. ಏಕೆಂದರೆ ಪಂಜಾಬ್ ನಿರಂತರ ಸೋಲುಗಳೊಂದಿಗೆ ಹಿನ್ನಡೆ ಅನುಭವಿಸಿದೆ. ಮೂರನೇ ಸ್ಥಾನದಲ್ಲಿರುವ ಹೈದರಾಬಾದ್ ಎಲ್ಲಾ ಪಂದ್ಯಗಳಲ್ಲಿ ಗೆಲ್ಲಬೇಕಿದೆ.

ಆತ್ಮವಿಶ್ವಾಸದಲ್ಲಿ ಬೆಂಗಳೂರು: ಈ ಆವೃತ್ತಿಯಲ್ಲಿ ಆರ್‌ಸಿಬಿಗೆ ಗೆಲುವಿನ ಹಿಂದಿರುವ ಪ್ರಮುಖ ಶಕ್ತಿಯಾಗಿ ಭುವನೇಶ್ವರ್ ಕುಮಾರ್ ಕಾಣಿಸಿಕೊಂಡಿದ್ದಾರೆ. ಪ್ರತಿ ಪಂದ್ಯದಲ್ಲಿ ಬೌಲಿಂಗ್ ಮೂಲಕ ಎದುರಾಳಿಗೆ ಕಾಡುವ ಅವರು, ಗೆಲುವಿನಲ್ಲಿ ಮಿಂಚುತ್ತಿದ್ದಾರೆ. ದೊಡ್ಡ ದೊಡ್ಡ ಬ್ಯಾಟರ್‌ಗಳನ್ನು ಆರಂಭದಲ್ಲೇ ಕಟ್ಟಿಹಾಕಿರುವ ಅವರು, ಆಡಿರುವ ಪಂದ್ಯಗಳಲ್ಲಿ ಬರೋಬ್ಬರಿ 23 ವಿಕೆಟ್ ಪಡೆದು ಪರ್ಪಲ್ ಕ್ಯಾಪ್ ಪಡೆದವರಾಗಿದ್ದಾರೆ. ಇತ್ತ ಅವರಿಗೆ ಜೋಶ್ ಹ್ಯಾಜೆಲ್ವುಡ್ ಜೋಶ್ ತುಂಬುತ್ತಿದ್ದರೆ, ತಂಡದಲ್ಲಿ ಡಫಿ ಅವರನ್ನು ಸೇರಿಸಿಕೊಂಡಿರುವುದು ವೇಗಕ್ಕೆ ಬಲ ತಂದಿದೆ.

ಒತ್ತಡದಲ್ಲಿ ಪಂಜಾಬ್: ಇತ್ತ ಐದು ಸತತ ಸೋಲುಗಳೊಂದಿಗೆ ಕಂಗೆಟ್ಟಿರುವ ಪಂಜಾಬ್ ಕಿಂಗ್ಸ್ ದೊಡ್ಡ ಹಿನ್ನಡೆ ಅನುಭವಿಸಿದ್ದು, ಪ್ಲೇಆಫ್ ವಿಚಾರದಲ್ಲಿ ಗೆಲ್ಲಲೇಬೇಕಾದ ಒತ್ತಡದಲ್ಲಿದೆ. ಐದು ಸತತ ಸೋಲು ಪಂಜಾಬ್ ತಂಡವನ್ನು ಹೊರಬೀಳಬಹುದಾದ ಸ್ಥಿತಿಗೆ ತಂದಿಟ್ಟಿದೆ. 13 ಅಂಕಗಳೊಂದಿಗೆ 4ನೇ ಸ್ಥಾನದಲ್ಲಿರುವ ಪಂಜಾಬ್ ಸೋತರೆ ತಕ್ಷಣಕ್ಕೆ ಪರಿಣಾಮ ಬೀರದಿದ್ದರೂ ರಾತ್ರಿ ನಡೆಯಲಿರುವ ಪಂದ್ಯದಲ್ಲಿ ರಾಜಸ್ಥಾನ ಗೆಲುವು ಸಾಧಿಸಿದರೆ ಪಂಜಾಬ್ ಐದನೇ ಸ್ಥಾನಕ್ಕೆ ಬೀಳಬಹುದು. ಹೀಗಾದರೆ ಮುಂದಿನ ಪಂದ್ಯಗಳಲ್ಲಿ ಗೆದ್ದರೂ ಪಂಜಾಬ್ ಪ್ರವೇಶ ಅನಿಶ್ಚಿತತೆ ಸೃಷ್ಟಿಯಾಗುತ್ತದೆ.

ದುಬಾರಿ ಬೌಲರ್, ಪಂಜಾಬ್‌ಗೆ ಚಿಂತೆ: ಪಂಜಾಬ ತಂಡದಲ್ಲಿ ಬೌಲರ್‌ಗಳು ದುಬಾರಿಯಾಗಿರುವುದೇ ದೊಡ್ಡ ಹಿನ್ನಡೆಯಾಗಿದೆ. ಹಿಂದಿನ ಪಂದ್ಯಗಳಲ್ಲಿ ಎಲ್ಲಾ ಬೌಲರ್‌ಗಳು ದಂಡಿಸಿಕೊಂಡಿದ್ದಾರೆ. ಮುಂಬೈ ವಿರುದ್ಧದ ಪಂದ್ಯದಲ್ಲಿ ಚಾಹಲ್ ಹೊರತು ಯಾವುದೇ ಬೌಲರ್‌ನಿಂದಲೂ ಹೇಳಿಕೊಳ್ಳುವ ಪ್ರದರ್ಶನ ಮೂಡಿಬಂದಿಲ್ಲ. ಬ್ಯಾಟಿಂಗ್ ವಿಚಾರಕ್ಕೆ ಬಂದರೆ, ಶ್ರೇಯಸ್ ಅಯ್ಯರ್, ಪ್ರಭಸಿಮ್ರನ್ ಸಿಂಗ್ ಬಿಟ್ಟರೆ ಇನ್ನುಳಿದವರು ಲಯಕ್ಕೆ ಬರಬೇಕಿದೆ.



ಪಿಚ್

ಧರ್ಮಶಾಲಾದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಗರಿಗೆ ಲಾಭ ಕೊಡಲಿದ್ದು, ಸ್ಪಿನ್ನರ್‌ಗಳಿಗೂ ಬಲ ತರಲಿದೆ. ಮಳೆ ಸಾಧ್ಯತೆ ಕಡಿಮೆ. ಮೊದಲು ಬೌಲಿಂಗ್ ಮಾಡುವ ತಂಡವೇ ಹೆಚ್ಚು ಬಾರಿ ಗೆದ್ದಿದೆ. ಎರಡನೇ ಪಂದ್ಯ ದಿಲ್ಲಿಯಲ್ಲಿ ನಡೆಯಲಿದ್ದು, ಬ್ಯಾಟಿಗರ ಪ್ರದರ್ಶನ ನಡೆಯಲಿದೆ.

ಬ್ಯಾಟಿಂಗ್ ಪಡೆಗೆ ಕೊಹ್ಲಿ ಬಲ

ವಿರಾಟ್ ಕೊಹ್ಲಿ ಶತಕ ಬಾರಿಸಿದ್ದಲ್ಲದೆ ಲಯಕ್ಕೆ ಮರಳಿರುವುದು ವಿಶ್ವಾಸ ಹೆಚ್ಚಿಸಿದೆ. ಸಾಲ್ಟ್ ಬದಲಿ ಆಟಗಾರರಾಗಿ ಕಣಕ್ಕಿಳಿದಿರುವ ಜೇಕಬ್ ಬೆಥಲ್ ಹೇಳಿಕೊಳ್ಳುವ ಪ್ರದರ್ಶನ ನೀಡಿಲ್ಲ. ಇತ್ತ ಮೂರನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸುವ ಪಡಿಕ್ಕಲ್ ಪ್ರಭಾವ ಮೂಡಿಸಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ನಾಯಕ ಪಾಟಿದಾರ್ ತಮ್ಮ ಲಯದಲ್ಲಿದ್ದು, ಭರ್ಜರಿ ಪ್ರದರ್ಶನದೊಂದಿಗೆ ಮಿಂಚಿದ್ದಾರೆ. ಆದರೆ ಕೆಳಕ್ರಮಾಂಕದಲ್ಲಿ ರನ್ ಬರುತ್ತಿಲ್ಲ, ಡೇವಿಡ್ ಮಿಂಚಿದರೂ, ಜಿತೇಶ್ ಶರ್ಮ ಪರದಾಡುತ್ತಿದ್ದಾರೆ. ಆಲ್‌ರೌಂಡರ್ ಕೃನಾಲ್ ಪಾಂಡ್ಯ ಹೆಚ್ಚುವರಿ ಬ್ಯಾಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ತಂಡಕ್ಕೆ ಆನೆ ಬಲ ತಂದಿದೆ. ವೆಂಕಟೇಶ್ ಅಯ್ಯರ್ ಅವರಿಗೆ ಕಳೆದ ಪಂದ್ಯದಲ್ಲಿ ಅವಕಾಶ ಸಿಕ್ಕರೂ ಬ್ಯಾಟಿಂಗ್ ಮಾಡುವ ಪರಿಸ್ಥಿತಿ ಬಂದಿಲ್ಲ.

ದಿಲ್ಲಿ-ರಾಜಸ್ಥಾನ ಪಂದ್ಯ

ಇನ್ನೊಂದು ಪಂದ್ಯದಲ್ಲಿ ದಿಲ್ಲಿ ಹಾಗೂ ರಾಜಸ್ಥಾನ ತಂಡಗಳು ಎದುರಾಗಲಿವೆ. ಹಿಂದಿನ ಪಂದ್ಯಗಳಲ್ಲಿ ಸೋಲನುಭವಿಸಿರುವ ರಾಜಸ್ಥಾನ ಸೋತರೆ ದೊಡ್ಡ ಹಿನ್ನಡೆ ಅನುಭವಿಸಲಿದೆ. ಐದನೇ ಸ್ಥಾನದಲ್ಲಿರುವ ರಾಜಸ್ಥಾನ ಪ್ಲೇಆಫ್ ವಿಚಾರದಲ್ಲಿ ಗೆಲ್ಲಲೇಬೇಕು. ಹಾಗಾದರೆ, ಆರ್‌ಸಿಬಿ ಪಂಜಾಬ್ ವಿರುದ್ಧ ಗೆದ್ದರೆ, ನಾಲ್ಕನೇ ಸ್ಥಾನಕ್ಕೇರಲಿದೆ. ಇತ್ತ ದಿಲ್ಲಿ ಉಳಿದ ಪಂದ್ಯಗಳಲ್ಲಿ ಗೆದ್ದು ಕಾಯ್ದು ನೋಡುವ ಸ್ಥಾನದಲ್ಲಿದೆ.

ಕಿರುಸುದ್ದಿ



ದಿಗ್ಗಜ ಅಥ್ಲೀಟ್, ಭಾರತೀಯ ಒಲಿಂಪಿಕ್ಸ್ ಸಮಿತಿ ಅಧ್ಯಕ್ಷೆ ಪಿ. ಟಿ. ಉಷಾ ಅವರು, ಕುಟುಂಬ ಸಮೇತ ಶಬರಿಮಲೆಗೆ ಭೇಟಿ ನೀಡಿ ದರ್ಶನ ಪಡೆದರು.

ಸೂಪರ್ ಚೆಸ್: ಪ್ರಜ್ಞಾನಂದಗೆ ಜಯ

• **ಹೊಸದಿಲ್ಲಿ:** ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿರುವ ಸೂಪರ್ ಚೆಸ್ ಕ್ಲಾಸಿಕ್ ರೊಮೇನಿಯಾ 2026 ಟೂರ್ನಿಯ ಎರಡನೇ ಸುತ್ತಿನಲ್ಲಿ ಹಾಲಿ ಚಾಂಪಿಯನ್ ಆರ್. ಪ್ರಜ್ಞಾನಂದ ಎರಡನೇ ಸುತ್ತಿನ ಪಂದ್ಯದಲ್ಲಿ ಗೆಲುವು ಸಾಧಿಸಿದ್ದಾರೆ. ಶುಕ್ರವಾರ ಬುಖಾರೆಸ್ಟ್‌ನಲ್ಲಿ ನಡೆದ ಪಂದ್ಯದಲ್ಲಿ ಅವರು ವಿಶ್ವ ಚಾಂಪಿಯನ್‌ಶಿಪ್ ಸವಾಲುಗಾರ ಜಾವೋಖಿರ್ ಸಿಂದಾರೋವ್ ಅವರನ್ನು ಕಪ್ಪು ಕಾಯಿಗಳಿಂದ ಮಣಿಸಿದರು. ಮೊದಲ ಸುತ್ತಿನಲ್ಲಿ ಅಲಿರೇಝಾ ಫಿರೋಜ್ಜಾ ವಿರುದ್ಧ ಸೋಲಿನ ಅಂಚಿನಿಂದ ಡ್ರಾ ಸಾಧಿಸಿದ್ದ ಪ್ರಜ್ಞಾನಂದ ಇದೀಗ ಎರಡು ಸುತ್ತುಗಳ ಬಳಿಕ 1.5 ಅಂಕಗಳೊಂದಿಗೆ ಆರಂಭಿಕ ಮುಂಚೂಣಿ ಗುಂಪಿನಲ್ಲಿ ಸ್ಥಾನ ಪಡೆದಿದ್ದಾರೆ. ಮೊದಲ ಸುತ್ತಿನ ಎಲ್ಲಾ ಐದು ಪಂದ್ಯಗಳೂ ಡ್ರಾದಲ್ಲಿ ಅಂತ್ಯಗೊಂಡಿದ್ದವು. ಈ ಗೆಲುವು ಪ್ರಜ್ಞಾನಂದಗೆ ಒಂದು ರೀತಿಯ ಪ್ರತೀಕಾರವೂ ಆಗಿತ್ತು. 2026ರ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಸಿಂದಾರೋವ್ ವಿರುದ್ಧ ಆಡಿದ ಎರಡೂ ಪಂದ್ಯಗಳಲ್ಲಿ ಅವರು ಸೋಲು ಕಂಡಿದ್ದರು. 10 ಆಟಗಾರರ ಕ್ಲಾಸಿಕಲ್ ರೌಂಡ್-ರಾಬಿನ್ ಮಾದರಿಯಲ್ಲಿ ನಡೆಯುತ್ತಿರುವ ಈ ಟೂರ್ನಿ, 2026ರ ಗ್ರ್ಯಾಂಡ್ ಚೆಸ್ ಟೂರ್‌ನ ಎರಡನೇ ಪ್ರಮುಖ ಸ್ಪರ್ಧೆಯಾಗಿದೆ.

ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕೆ ಶಿಲಾನ್ಯಾಸ



• **ಗೋರಖಪುರ:** ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ, ಉತ್ತರಪ್ರದೇಶದ ಗೋರಖಪುರದಲ್ಲಿ ನಿರ್ಮಾಣವಾಗಲಿರುವ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿದರು. ಶನಿವಾರ ನಡೆದ ಕ್ರೀಡಾಂಗಣದ ಶಂಕುಸ್ಥಾಪನೆ ಸಮಾರಂಭದಲ್ಲಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಬೆಂಬಲದೊಂದಿಗೆ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಲಾಗುತ್ತಿದೆ.ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ನೆರವಿನೊಂದಿಗೆ ವಾರಣಾಸಿಯಲ್ಲಿ ಮತ್ತೊಂದು ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣವೂ ನಿರ್ಮಾಣವಾಗುತ್ತಿದೆ ಎಂದು ಹೇಳಿದರು.ಗೋರಖ್‌ಪುರದಲ್ಲಿರುವ ಹೊಸ ಕ್ರೀಡಾಂಗಣವು 46 ಎಕರೆಗಳಲ್ಲಿ ಹರಡಿರುವ 30,000 ಆಸನ ಸಾಮರ್ಥ್ಯವನ್ನು ಹೊಂದಿದ್ದು, ಮೀಸಲಾದ ಪಾರ್ಕಿಂಗ್ ಸೌಲಭ್ಯಗಳನ್ನು ಹೊಂದಿದೆ ಎಂದು ಅವರು ಹೈಲೈಟ್ ಮಾಡಿದರು. ಒಳಾಂಗಣ ಆಟಗಳಿಗಾಗಿ ನೆರೆಯ ಕ್ರೀಡಾ ಸಂಕೀರ್ಣಕ್ಕಾಗಿ ಹೆಚ್ಚುವರಿ 60 ಎಕರೆ ಭೂಮಿಯನ್ನು ಮೀಸಲಿಡಲಾಗಿದೆ.

ಥೈಲ್ಯಾಂಡ್ ಓಪನ್ ಬ್ಯಾಡ್ಮಿಂಟನ್ | ಭಾರತಕ್ಕೆ ಪದಕ ಖಚಿತ

ಫೈನಲ್‌ಗೆ ಸಾತ್ವಿಕ್-ಚಿರಾಗ್



ಕೊನೆ ಸೆಟ್

ಮೂರನೇ ಗೇಮ್‌ನಲ್ಲಿ 5-5 ಸಮಬಲದ ಬಳಿಕ ಸಾತ್ವಿಕ್-ಚಿರಾಗ್ ಸಂಪೂರ್ಣ ಮೇಲುಗೈ ಸಾಧಿಸಿದರು. ಸತತ ಆರು ಅಂಕಗಳನ್ನು ಗೆದ್ದು ಅವರು 16-8 ಮುನ್ನಡೆ ಪಡೆದರು. ಆ ಅಂತರವನ್ನು ಮಲೇಷಿಯಾ ಜೋಡಿಗೆ ಮುಚ್ಚಲು ಸಾಧ್ಯವಾಗದೇ, ಭಾರತೀಯ ಜೋಡಿ ಭರ್ಜರಿ ಗೆಲುವಿನೊಂದಿಗೆ ಫೈನಲ್ ಪ್ರವೇಶಿಸಿತು.

• **ಬ್ಯಾಂಕಾಕ್:** ಥೈಲ್ಯಾಂಡ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಅಗ್ರ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಈ ವರ್ಷದ ತಮ್ಮ ಮೊದಲ ಫೈನಲ್‌ಗೆ ಪ್ರವೇಶಿಸಿದ್ದಾರೆ.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ, ಅಗ್ರ ಶ್ರೇಯಾಂಕಿತ ಭಾರತೀಯ ಜೋಡಿ, ಮಲೇಷ್ಯಾದ ಮೂರನೇ ಶ್ರೇಯಾಂಕಿತ ಗೋಹ್ ಸ್ಝೆ ಫೇಯ್ ಮತ್ತು ನೂರ್ ಇಜ್ಜುದ್ದೀನ್ ಜೋಡಿಯನ್ನು 19-21, 22-20, 21-16 ಅಂತರದಲ್ಲಿ ಸೋಲಿಸಿತು. ಈ ಗೆಲುವಿನೊಂದಿಗೆ ಸಾತ್ವಿಕ್-ಚಿರಾಗ್ ತಮ್ಮ ಮುಖಾಮುಖಿ ದಾಖಲೆಯನ್ನು 8-2ಕ್ಕೆ ವಿಸ್ತರಿಸಿದರು.

ವಿಶ್ವ ನಂ. 4 ಸ್ಥಾನದಲ್ಲಿರುವ ಭಾರತೀಯ ಜೋಡಿ ಕೊನೆಯದಾಗಿ 2025ರ ಚೈನಾ ಮಾಸ್ಟರ್ಸ್ ಸೂಪರ್ 750 ಟೂರ್ನಿಯಲ್ಲಿ ಫೈನಲ್ ಆಡಿತ್ತು. ಎರಡು ವರ್ಷಗಳ ಹಿಂದೆ ಇದೇ ಥೈಲ್ಯಾಂಡ್ ಓಪನ್ ಪ್ರಶಸ್ತಿ ಗೆದ್ದ ಬಳಿಕ ಮತ್ತೊಮ್ಮೆ ಚಾಂಪಿಯನ್ ಆಗುವ ಗುರಿಯೊಂದಿಗೆ ಫೈನಲ್‌ಗೆ ಕಾಲಿಟ್ಟಿದ್ದಾರೆ.

ಎರಡು ಬಾರಿ ವಿಶ್ವ ಚಾಂಪಿಯನ್‌ಶಿಪ್ ಕಂಚಿನ ಪದಕ ವಿಜೇತರಾದ ಸಾತ್ವಿಕ್-ಚಿರಾಗ್, ಪ್ರಶಸ್ತಿಗಾಗಿ ಇಂಡೋನೇಷ್ಯಾದ ಲಿಯೋ ರೋಲಿ ಕಾರ್ನಾಂಡೋ ಮತ್ತು ಡೇನಿಯಲ್ ಮಾರ್ಟಿನ್ ಜೋಡಿಯನ್ನು ಎದುರಿಸಲಿದ್ದಾರೆ. 2 ವರ್ಷಗಳ ಬಳಿಕ ಮೊದಲ ಬಾರಿಗೆ ಜೊತೆಯಾಗಿ ಆಡುತ್ತಿರುವ ಇಂಡೋನೇಷ್ಯಾ ಜೋಡಿ ಈಗಾಗಲೇ ಗಮನ ಸೆಳೆದಿದೆ.

ಪಂದ್ಯದಲ್ಲಿ ಏನಾಯ್ತು?: ಒಂದು ಗಂಟೆ 22 ನಿಮಿಷಗಳ ಕಾಲ ನಡೆದ ಸೆಮಿಫೈನಲ್‌ನಲ್ಲಿ, ಆರಂಭಿಕ ಗೇಮ್ ಭಾರೀ ಪೈಪೋಟಿಯಿಂದ ಕೂಡಿತ್ತು. ಆರಂಭದಲ್ಲಿ ಎರಡೂ ಜೋಡಿಗಳು ಮುನ್ನಡೆ ಬದಲಾಯಿಸಿಕೊಂಡರೂ, 7-7 ಸಮಬಲದ ಬಳಿಕ ಮಲೇಶಿಯಾ ಜೋಡಿ ಹಿಡಿತ ಸಾಧಿಸಿತು. ಒಂದು ಹಂತದಲ್ಲಿ ಅವರು 15-9 ಮುನ್ನಡೆ ಪಡೆದರು. ಭಾರತೀಯರು ಅಂತರ ಕಡಿಮೆ ಮಾಡಿ ಎರಡು ಗೇಮ್ ಪಾಯಿಂಟ್ ಉಳಿಸಿಕೊಂಡರೂ, ಕೊನೆಯಲ್ಲಿ ಸಾತ್ವಿಕ್ ನೆಟ್‌ಗೆ ಹೊಡೆದ ಪರಿಣಾಮ ಮೊದಲ ಗೇಮ್ ಕೈ ತಪ್ಪಿತು.

ಎರಡನೇ ಗೇಮ್ ಮತ್ತಷ್ಟು ರೋಚಕವಾಗಿತ್ತು. ಗರಿಷ್ಠ ಮೂರು ಅಂಕಗಳಷ್ಟೇ ಅಂತರ ಕಂಡುಬಂದ ಈ ಹೋರಾಟದಲ್ಲಿ, ಭಾರತೀಯ ಜೋಡಿ 20-18 ಮುನ್ನಡೆಯಲ್ಲಿದ್ದಾಗ ಮಲೇಶಿಯಾ ಜೋಡಿ ಎರಡು ಗೇಮ್ ಪಾಯಿಂಟ್ ಉಳಿಸಿಕೊಂಡಿತು. ಆದರೆ ದೀರ್ಘ ರ್‍ಯಾಲಿಯ ಬಳಿಕ ಭಾರತೀಯರು ಮೂರನೇ ಅವಕಾಶ ಪಡೆದು ಸಮಬಲ ಸಾಧಿಸಿದರು. ಇಜ್ಜುದ್ದೀನ್ ಹೊಡೆದ ತಪ್ಪಾದ ಡೈವ್ ಡಬಲ್ಸ್ ಗಡಿಯಾಚೆ ಹೋಗಿದ್ದರಿಂದ ಪಂದ್ಯ ನಿರ್ಣಾಯಕ ಗೇಮ್‌ಗೆ ತಲುಪಿತು.

ಕರ್ನಾಟಕ ಓಪನ್ ಪಂದ್ಯಾವಳಿ: ಭಾರತೀಯರ ಆರ್ಭಟ

ಸಾಕೇತ್-ಪೂಣಚ್ಚ ಚಾಂಪಿಯನ್



• **ಬೆಂಗಳೂರು:** ಗ್ರಿಗೊರಿ ಲೊಮಾಕಿನ್ ಮತ್ತು ಬಾರ್ ಬಿಯರ್ಕೋವ್ ಚಾಲೆಂಜ್ ಗೆದ್ದ ಭಾರತದ ನಂಬರ್ 1 ಜೋಡಿಗಳಾದ ನಿಕಿ ಪೂಣಚ್ಚ ಮತ್ತು ಸಾಕೇತ್ ಮೈನೇನಿ ಇಲ್ಲಿ ನಡೆದ ಪ್ರತಿಷ್ಠಿತ ಕರ್ನಾಟಕ ಓಪನ್ ಪಂದ್ಯಾವಳಿಯನ್ನು ಗೆದ್ದುಕೊಂಡರು.

ಐಪಿಎಲ್ ಹವಾ ನಡುವೆ ಬೆಂಗಳೂರಿನ ಎಸ್.ಎಮ್. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆದ ಕರ್ನಾಟಕ ಓಪನ್ ಪಂದ್ಯಾವಳಿಗೆ ತೆರೆ ಬಿದ್ದಿತು. ಶನಿವಾರ ಮಧ್ಯಾಹ್ನ ನಡೆದ ಫೈನಲ್ ಪಂದ್ಯದಲ್ಲಿ, ಸರ್ವ್ ಲಾಭ ಪಡೆದಿದ್ದಲ್ಲದೆ, ಸಂಯೋಜಿತ ಆಟ ಪ್ರದರ್ಶಿಸಿದ ನಿಕಿ ಪೂಣಚ್ಚ ಮತ್ತು ಸಾಕೇತ್ ಮೈನೇನಿ 6-2, 6-3ರಿಂದ ಗೆದ್ದರು. ಇದಕ್ಕೂ ಮೊದಲು ೧ ಜೋಡಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತದ ಮನೀಶ್ ಕುಮಾರ್ ಮತ್ತು ಸಿದ್ಧಾರ್ಥ್ ರಾವತ್ ಸೋಲಿಸಿತ್ತು. ಶುಕ್ರವಾರದ ಸೆಮಿಫೈನಲ್ ಪಂದ್ಯದಲ್ಲಿ ಪ್ರಜ್ವಲ್ ದೇವ್, ನಿತಿನ್ ಕುಮಾರ್ ಅವರನ್ನು ಸೋಲಿಸಿತ್ತು. ಅತ್ತ ಫಿಲಿಪ್ ಸೆಕುಲಿಕ್ ಅವರನ್ನು ಮಣಿಸಿರುವ ಕೀಗನ್ ಸ್ಮಿತ್ ಸಿಂಗಲ್ ವಿಭಾಗದ ಚಾಂಪಿಯನ್ ಪಟ್ಟ ಅಲಂಕರಿಸಿದರು.

ಪೂಣಚ್ಚ-ಸಾಕೇತ್ ಪ್ರಾಬಲ್ಯ: ಮಳೆಯ ವಾತಾವಾರಣದ ನಡುವೆ ನಡೆದ ಪಂದ್ಯದಲ್ಲಿ ಭಾರತೀಯರು ಪ್ರಭಾಶಾಲಿಯಾದರು. ಟಾಸ್ ಗೆಲುವಿನೊಂದಿಗೆ ಸರ್ವ್ ಆಯ್ಕೆ ಮಾಡಿಕೊಂಡ ಈ ಜೋಡಿ ಆರಂಭಿಕ ಸೆಟ್‌ನಿಂದಲೂ ಭದ್ರ ಹಿಡಿತ ಸಾಧಿಸಿತು. ಸರ್ವ್ ಮಾಡುವಾಗಲೇ ಶೇ.77ರಷ್ಟು ಅಂಕಗಳನ್ನು ಕಸಿದುಕೊಂಡಿತು. ಸಾಕೇತ್ ಬಿಗಿ ಸರ್ವ್‌ನೊಂದಿಗೆ ಪಂದ್ಯ ಶುರು ಮಾಡಿದರು. ಗ್ರಿಗೊರಿ ಲೊಮಾಕಿನ್ ಮತ್ತು ಬಾರ್ ಬಿಯರ್ಕೋವ್ ಉತ್ತಮ ಡಿಫೆನ್ಸ್ ಆಟವಾಡಿದರೂ ಭಾರತ ಜೋಡಿ ಗ್ಯಾಪ್‌ಗಳ ಮೂಲಕ ಮುನ್ನಡೆ ಸಾಧಿಸಿತು. ಬೆಂಗಳೂರು ಕೋರ್ಟ್‌ನ ಹೆಚ್ಚಿನ ಬೌನ್ಸ್ ಲಾಭ ಪಡೆದ ಸಾಕೇತ್-ಪೂಣಚ್ಚ 3 ಏಸ್ ಪಾಯಿಂಟ್‌ಗಳನ್ನು ದಾಖಲಿಸಿದರು. ಎದುರಾಳಿಗಳು ಎಷ್ಟೇ ಪ್ರಯತ್ನ ಪಟ್ಟರೂ ಎಲ್ಲಾ ಯೋಜನೆಗಳನ್ನು ತಡೆದ ಈ ಜೋಡಿ ಮೊದಲನೇ ಸೆಟ್ ಅನ್ನು 6-2ರಿಂದ ಗೆದ್ದಿತು.

ಎರಡನೇ ಸೆಟ್‌ನಲ್ಲಿ ಸಾಕೇತ್ ಇನ್ನಷ್ಟು ಆಕ್ರಮಣಕಾರಿ ಆಟ ಪ್ರದರ್ಶಿಸಿದರು. ಅತ್ತ ಪೂಣಚ್ಚ ಡಿಫೆನ್ಸ್ ನೋಡಿಕೊಂಡರು. ಒಟ್ಟಿನಲ್ಲಿ ಸಮಯೋಚಿತ ಆಟ ಪ್ರದರ್ಶಿಸಿದ ಈ ಜೋಡಿ ಎದುರಾಳಿಗೆ ಕಂಬ್ಯಾಕ್ ಮಾಡಲು ಬಿಡದೆ ಎರಡನೇ ಸೆಟ್ ಅನ್ನೂ 6-3ರಿಂದ ಗೆದ್ದುಕೊಂಡಿತು.

ಸಿಂಗಲ್ಸ್‌ನಲ್ಲಿ ಸ್ಮಿತ್ ಮಿಂಚು

ವೈಯಕ್ತಿಕ ವಿಭಾಗದಲ್ಲಿ ಕಗೀನ್ ಸ್ಮಿತ್ ಅವರು ಫಿಲಿಪ್ ಮೇಲೆ ಸ್ಪಷ್ಟ ಪ್ರಾಬಲ್ಯ ಸಾಧಿಸಿದರು. ಮೊದಲಿನಿಂದಲೂ ಮುನ್ನಡೆ ಸಾಧಿಸಿದ ಸ್ಮಿತ್ ಸರ್ವ್, ಬ್ರೇಕ್ ಮತ್ತು ಏಸ್‌ನಲ್ಲಿ ಪಾಯಿಂಟ್‌ಗಳನ್ನು ಪಡೆದರು. ಮೊದಲನೇ ಸೆಟ್ 6-2ರಿಂದ ಗೆದ್ದ ನಂತರ ಎರಡನೇ ಸೆಟ್‌ನಲ್ಲಿ ಅಲ್ಪ ಪೈಪೋಟಿ ಎದುರಿಸಿದರು. ಫಿಲಿಪ್ ಬ್ರೇಕ್‌ವರೆಗೂ ಕೊಂಡೊಯ್ದರು. ಆಕ್ರಮಣಕಾರಿ ಆಟ ಪ್ರದರ್ಶಿಸಿದ ಸ್ಮಿತ್ ಅಲ್ಲಿಯೂ 7-5ರಿಂದ ಗೆದ್ದು ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡರು.



ಮುಂದಿನ ತಿಂಗಳಿನಿಂದ ನಡೆಯಲಿರುವ ಮಹಿಳೆಯರ ಟಿ20 ವಿಶ್ವಕಪ್‌ಗಾಗಿ ಸಿದ್ಧತೆ ನಡೆಸಿರುವ ಭಾರತೀಯ ಮಹಿಳಾ ತಂಡವು ಶನಿವಾರದಂದು ಉಜ್ಜೈನಿಯ ಮಹಾಕಾಳೇಶ್ವರ ಜ್ಯೋತಿರ್ಲಿಂಗ ದೇವಾಲಯಕ್ಕೆ ಭೇಟಿ ನೀಡಿ ಭಸ್ಮಾರತಿಗೆ ಹಾಜರಾಯಿತು. ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಶೆಫಾಲಿ ವರ್ಮಾ, ರೇಣುಕಾ ಸಿಂಗ್, ಶ್ರೇಯಾಂಕಾ ಪಾಟೀಲ್, ಕ್ರಾಂತಿ ಗೌಡ, ಭಾರತಿ ಫುಲ್ಮಾಲಿ, ಅರುಂಧತಿ ರೆಡ್ಡಿ, ದೀಪ್ತಿ ಶರ್ಮ ಸೇರಿದಂತೆ ಪ್ರಮುಖರು ಪೂಜೆ ವೇಳೆ ಹಾಜರಿದ್ದರು.

ಆಲೆನ್, ರಘುವಂಶಿ ಆರ್ಭಟ

• **ಕೋಲ್ಕತ್ತಾ:** ಫಿನ್ ಆಲೆನ್(93), ಅಂಗ್‌ಕ್ರಿಶ್ ರಘುವಂಶಿ(82★) ಮತ್ತು ಕ್ಯಾಮರನ್ ಗ್ರೀನ್(52) ಅಬ್ಬರಕ್ಕೆ ಗುಜರಾತ್ ಬೌಲರ್‌ಗಳು ತತ್ತರಿಸಿದ್ದು, ಇಲ್ಲಿ ನಡೆದ ಪಂದ್ಯದಲ್ಲಿ ಕೋಲ್ಕತ್ತಾ ದೊಡ್ಡ ಗುರಿ ನೀಡಿದೆ. ಪಂದ್ಯದ ಮೊದಲ ಇನ್ನಿಂಗ್ಸ್ ಮಾತ್ರದಲ್ಲಿ ಕೆಕೆಆರ್ 22 ಸಿಕ್ಸರ್ ಬಾರಿಸಿತು. ಪವರ್‌ಪ್ಲೇನಲ್ಲಿ 56, ಮಧ್ಯಮ ಓವರ್‌ನಲ್ಲಿ 136 ಮತ್ತು ಡೆತ್ ಓವರ್‌ನಲ್ಲಿ 55 ರನ್ ಬಾರಿಸಿದ್ದು, ಬರೋಬ್ಬರಿ 247 ರನ್ ಗಳಿಸಿತು. ಗುಜರಾತ್ ಕೇವಲ 2 ವಿಕೆಟ್ ಪಡೆದುಕೊಂಡಿತು.

ಆಲೆನ್-ರಘು ಅಬ್ಬರ: ಟಾಸ್ ಸೋತ ಕೆಕೆಆರ್ ಬ್ಯಾಟಿಂಗ್ ಆಹ್ವಾನ ಪಡೆಯಿತು. ಆಲೆನ್ ಯಥಾಸ್ಥಿತಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಆದರೆ ಅಜಿಂಕ್ಯಾ ರಹಾನೆ ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಲಿಲ್ಲ, 14 ರನ್‌ಗೆ ಅವರು ವಿಕೆಟ್ ಕೊಟ್ಟ ನಂತರ 44ಗೆ ಕೆಕೆಆರ್ ಮೊದಲ ವಿಕೆಟ್ ಕಳೆದುಕೊಂಡಿತು. ಮೂರನೇ ವಿಕೆಟ್‌ಗೆ ಅಂಗ್‌ಕ್ರಿಶ್ ರಘುವಂಶಿ ಹಾಗೂ ಫಿನ್ ಆಲೆನ್ ಒಂದಾಗಿ ಗುಜರಾತ್ ಟೈಟಾನ್ಸ್ ತಂಡವನ್ನು ದಂಡಿಸಲಾರಂಭಿಸಿದರು.

5ನೇ ಓವರ್‌ನಲ್ಲಿ ಶುರುವಾದ ಈ ಜೋಡಿಯ ಆರ್ಭಟ 12ನೇ ಓವರ್‌ವರೆಗೂ ನಡೆಯಿತು. ಬರೋಬ್ಬರಿ 10 ಸಿಕ್ಸರ್, 4 ಬೌಂಡರಿ ಬಾರಿಸಿದ ಫಿನ್ ಆಲೆನ್ 35 ಬಾಲ್ ಮಾತ್ರದಲ್ಲಿ 93 ಚಚ್ಚಿದರು. ಇತ್ತ ಅಂಗ್‌ಕ್ರಿಶ್ ಅಬ್ಬರವೇನು ಕಡಿಮೆ ಇರಲಿಲ್ಲ, 7 ಸಿಕ್ಸರ್ ನಾಲ್ಕು ಬೌಂಡರಿ ಬಾರಿಸಿದ ಅವರು 44 ಬಾಲ್‌ಗಳಲ್ಲಿ ಔಟಾಗದೆ 82 ರನ್ ಬಾರಿಸಿದರು. ಕೊನೆಯ ಓವರ್‌ಗಳಲ್ಲಿ ಗ್ರೀನ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿದರು. 28 ಬಾಲ್ ಎದುರಿಸಿದ ಅವರು, 3 ಸಿಕ್ಸರ್, 4 ಬೌಂಡರಿಗಳೊಂದಿಗೆ ಔಟಾಗದೆ 52 ರನ್ ಬಾರಿಸಿದರು. ಮೂವರ ಬ್ಯಾಟಿಂಗ್‌ನೊಂದಿಗೆ ಕೆಕೆಆರ್ 247 ರನ್ ಬಾರಿಸಿದೆ.

ಸೆಂಥಿಲ್‌ಕುಮಾರ್-ಜೋಶ್ನಾ ಚಾಂಪಿಯನ್ಸ್

• **ಚೆನ್ನೈ:** ಇಲ್ಲಿನ ಇಂಡಿಯನ್ ಸ್ಕ್ವಾಷ್ ಅಕಾಡೆಮಿಯಲ್ಲಿ ನಡೆದ ಮೂರನೇ ಎಚ್‌ಸಿಎಲ್ ರಾಷ್ಟ್ರೀಯ ಡಬಲ್ಸ್ ಸ್ಕ್ವಾಷ್ ಚಾಂಪಿಯನ್‌ಶಿಪ್‌ನಲ್ಲಿ ವೆಲವನ್ ಸೆಂಥಿಲ್ಕುಮಾರ್ ಮತ್ತು ಜೋಶ್ನಾ ಚಿನಪ್ಪ ಡಬಲ್ ಕಿರೀಟ ಗೆದ್ದು ಮಿಂಚಿದರು. ಪುರುಷರ ಹಾಗೂ ಮಹಿಳೆಯರ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದ ಬಳಿಕ, ಇಬ್ಬರೂ ಮಿಶ್ರ ಡಬಲ್ಸ್ ವಿಭಾಗದಲ್ಲೂ ಚಾಂಪಿಯನ್ ಆಗಿದರು.

ಮೊದಲು ಮಹಿಳೆಯರ ಫೈನಲ್‌ನಲ್ಲಿ, ಅಗ್ರ ಶ್ರೇಯಾಂಕಿತ ಜೋಶ್ನಾ ಚಿನಪ್ಪ ಮತ್ತು ರಥಿಕಾ ಸೀಲನ್ ಜೋಡಿ, ಶ್ರೇಯಾಂಕವಿಲ್ಲದ ಜಾನೆಟ್ ವಿಧಿ ಮತ್ತು ಪೂಜಾ ಆರ್ತಿ ವಿರುದ್ಧ 11-8, 11-4 ಅಂತರದಲ್ಲಿ ಸುಲಭ ಜಯ ಸಾಧಿಸಿ ಪ್ರಶಸ್ತಿ ಗೆದ್ದಿತು.

ವೆಲವನ್-ಅಭಯ್ ಚಾಂಪಿಯನ್: ಪುರುಷರ ವಿಭಾಗದಲ್ಲಿ ವೆಲವನ್ ಮತ್ತು ಅಭಯ್ ಸಿಂಗ್ ಜೋಡಿ ಸತತ ಮೂರನೇ ಬಾರಿ ಚಾಂಪಿಯನ್ ಪಟ್ಟಕ್ಕೇರಿತು. ಫೈನಲ್‌ನಲ್ಲಿ, ಸುರಜ್ ಕುಮಾರ್ ಚಂದ್ ಮತ್ತು ರಾಹುಲ್ ಬೈಠಾ ವಿರುದ್ಧ ಮೊದಲ ಗೇಮ್‌ನ್ನು 11-8 ಅಂತರದಲ್ಲಿ ಗೆದ್ದ ಭಾರತೀಯ ಜೋಡಿ ಆರಂಭದಲ್ಲೇ ಹಿಡಿತ ಸಾಧಿಸಿತು. ಎರಡನೇ ಗೇಮ್‌ನಲ್ಲಿ ಅಭಯ್‌ನ ನಿಖರ ಡ್ರಾಪ್ ಶಾಟ್‌ಗಳು ಮತ್ತು ವೆಲವನ್‌ನ ಬಲಿಷ್ಠ ಬ್ಯಾಕ್‌ಹ್ಯಾಂಡ್ ಹೊಡೆತಗಳು ಜೋಡಿಗೆ 5-2 ಮುನ್ನಡೆ ತಂದವು. ಸುರಜ್ ಮತ್ತು ರಾಹುಲ್ ಕೆಲಕಾಲ ಹೋರಾಟ ನೀಡಿದರೂ, ಅಭಯ್ ಹಾಗೂ ವೆಲವನ್ ಪಂದ್ಯವನ್ನು 11-5 ಅಂತರದಲ್ಲಿ ಮುಗಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.



ಜೋಶ್ನಾ-ವೆಲವನ್ ಜೋಡಿಗೆ ಪದಕ: ಮಿಶ್ರ ಡಬಲ್ಸ್ ಫೈನಲ್‌ನಲ್ಲಿ, ಜೋಶ್ನಾ ಮತ್ತು ವೆಲವನ್ ಜೋಡಿ, ಅಭಯ್ ಸಿಂಗ್ ಮತ್ತು ರಥಿಕಾ ಸೀಲನ್ ವಿರುದ್ಧ 11-7, 11-9 ಅಂತರದಲ್ಲಿ ಗೆದ್ದು ಚಾಂಪಿಯನ್ ಆಯಿತು. ಮೊದಲ ಗೇಮ್‌ನಲ್ಲಿ ಆರಂಭದಿಂದಲೇ ಮುನ್ನಡೆ ಸಾಧಿಸಿದ ಜೋಶ್ನಾ-ವೆಲವನ್ ಜೋಡಿ 11-7 ಅಂತರದಲ್ಲಿ ಜಯ ಸಾಧಿಸಿತು. ಎರಡನೇ ಗೇಮ್‌ನಲ್ಲಿ ಅಭಯ್ ಮತ್ತು ರಥಿಕಾ 7-4 ಮುನ್ನಡೆ ಪಡೆದು ಪಂದ್ಯವನ್ನು ನಿರ್ಣಾಯಕ ಗೇಮ್‌ಗೆ ಕೊಂಡೊಯ್ಯುವ ಲಕ್ಷಣ ತೋರಿದರು. ಆದರೆ ಜೋಶ್ನಾ ಮತ್ತು ವೆಲವನ್ ಅದ್ಭುತ ಮರಳಾಟ ನೀಡಿ 9-9 ಸಮಬಲ ಸಾಧಿಸಿದರು. ಅಂತಿಮ ಎರಡು ಅಂಕಗಳನ್ನು ಗೆದ್ದು 11-9 ಅಂತರದಲ್ಲಿ ಪಂದ್ಯ ಮತ್ತು ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಪದಬಂಧ 5986

» ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ತಾನೇ ಬರೆದ ಆತ್ಮಕಥೆ (5)
4.ದಾರದ ನಡುವಿನ ನೀರಡಿಕೆ ತಲೆಕೆಳಗಾಗಿದೆ (3)
5.ಕಡಲೆ ಹಿಟ್ಟು- ಈರುಳ್ಳಿ ಕಲಸಿ ಮಾಡಿದ ಕರಿದ ತಿಂಡಿ (3)
6.ಕುದುರೆಯಲ್ಲಿ ತಿರುಗಿ ಕಾಣುತ್ತಿದೆ (2)
8.ಪಲಾಯನ ಮಾಡುವಿಕೆ ಎಂಬರ್ಥದ ಶಬ್ದ (4)
10.ಲಿಂಗ ಇಟ್ಟುಕೊಳ್ಳುವ ಸಣ್ಣ ಪೆಟ್ಟಿಗೆ (4)
12.ರೀತಿ-ಬಗೆಗಳಲ್ಲಿ ತಿರುಗಿ ಕಾಣುತ್ತಿವೆ (2)
14. ಕೊಳಲಿಗೆ ಬಳಸಿದ ಬೊಂಬಿನ ಗಿಡ (3)
15. ದೀಪಾವಳಿಯ ಸಿಡಿಮದ್ದು (3)
16.ಮುಚ್ಚುಮರೆಯಿಲ್ಲದ ಹೃದಯ (5)

ಮೇಲಿನಿಂದ ಕೆಳಕ್ಕೆ
1.ವರಮಾನ-ಸಂಪಾದನೆ (3)
2.ಶಿವನಿಗೆ ಪ್ರಿಯವಾದ ಎಲೆ ತಲೆಕೆಳಗಾಗಿದೆ (4)
3.ಅಸಮ್ಮತಿ ಸೂಚಿಸಿದ ಬೇಟೆಗಾರ (2)
4.ಯುದ್ಧ ಮಾಡಬೇಕೆಂಬ ಬಯಕೆ (5)
7.ಹಗೆಯ ನಡುವೆ ಅನೇಕ ತರಹದವುಗಳಿವೆ (4)
8.ಅಫಘಾನಿಸ್ತಾನದ ಐತಿಹಾಸಿಕ ನಗರ (4)
9.ಹಸ್ತದ ಕೊನೆಯ ಅಂಗುಲಿ ತಲೆಕೆಳಗಾಗಿದೆ (5)
11.ಉಲ್ಟಾ ಆಡಿದ ಸಿಟ್ಟಿನ ಮಾತುಗಳು (4)
13.ದೇವರ ಕುರಿತ ಕಠಿಣ ಧ್ಯಾನ (3)
14.ಶೂನ್ಯತೆ ಸೂಚಿಸುವ ಅನುಕರಣ ಶಬ್ದ (2)

5985 ಉತ್ತರ

ಎಡದಿಂದ ಬಲಕ್ಕೆ:
2.ತಾಡಪತ್ರಿ 4.ದಯೆ
5.ಕೆಸರು 6.ಶಂಕುಸ್ಥಾಪನೆ
8.ತುಂತುರು 10.ಬಿಡಿಸು
11.ಸುರಸಂತಾನ
13.ಅತನು 15.ದಾನಿ
16.ನಗೆಗೇಡಿ

ಎಡದಿಂದ ಬಲಕ್ಕೆ:
1.ಅಂಕೆ 2.ತಾರುಮಾರು
3.ತ್ರಿಶಂಕುಸ್ವರ್ಗ 4.ದದರ
7.ನೆನಪಿಸು 8.ತುಂಡರಸು
9.ಕರತಾಡನ
10.ಬಿಡುಮುಡಿ 12.ರಜನಿ
14.ಅಜ್ಜಿ

ಹೊಸ ದಿಗಂತ

ಮಾರ್ನಿಂಗ್ ಶೋ

ಭಾನುವಾರ 17 ಮೇ 2026, ಬೆಂಗಳೂರು



ಶನಿವಾರ ಸಂಜೆ ಬೇಲ್ ಚಿತ್ರದ ಟೀಸರ್‌ನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆ ಮಾಡಲಾಗಿದೆ. ಶಿವಣ್ಣ ಅವರ ಅದ್ಭುತ ಅಭಿನಯ ಇರುವ ಈ ಟೀಸರ್ ರಿಲೀಸಾದ ಕೆಲವೇ ಗಂಟೆಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಣೆಯಾಗಿದೆ, ನಿರ್ಮಾಪಕ ವೆಂಕಟ್ ಕೆ. ನಾರಾಯಣ್, ನಟ ಶಿವರಾಜ್ ಕುಮಾರ್ ಹಾಗೂ ನಿರ್ದೇಶಕ ಪವನ್ ಒಡೆಯರ್ ಈ ಮೂವರ ಕಾಂಬಿನೇಶನ್‌ನಲ್ಲಿ ಮೂಡಿಬರುತ್ತಿರುವ ಬೇಲ್ ಚಿತ್ರದ ಟೈಟಲ್ ಹಾಗೂ ಟೀಸರ್ ಗ್ಲಿಂಪ್ಸ್ ಸಾಕಷ್ಟು ಕುತೂಹಲಗಳನ್ನು ಹುಟ್ಟು ಹಾಕಿದೆ.

ಬೇಲ್ ಟೀಸರ್ ಗ್ಲಿಂಪ್ಸ್ ಬಿಡುಗಡೆ

ಇದೇ ಮೊದಲ ಬಾರಿಗೆ ಪವನ್ ಒಡೆಯರ್-ಶಿವರಾಜ್ ಕುಮಾರ್ ಕಾಂಬಿನೇಶನ್

ದಕ್ಷಿಣ ಭಾರತದ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ ಎನಿಸಿಕೊಂಡ ಕೆ.ವಿ.ಎನ್. ಪ್ರೊಡಕ್ಷನ್ಸ್ ಇದೇ ಮೊದಲಬಾರಿಗೆ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅವರ ಜೊತೆ ಕೈ ಜೋಡಿಸಿ ಬೇಲ್ ಎಂಬ ಚಿತ್ರವನ್ನು ನಿರ್ಮಾಣ ಮಾಡುತ್ತಿದೆ, ಈ ಚಿತ್ರಕ್ಕೆ ನಟಸಾರ್ವಭೌಮ ಖ್ಯಾತಿಯ ಪವನ್ ಒಡೆಯರ್ ಅವರು ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಶನಿವಾರ ಸಂಜೆ ಬೇಲ್ ಚಿತ್ರದ ಟೀಸರ್‌ನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆ ಮಾಡಲಾಗಿದೆ. ಶಿವಣ್ಣ ಅವರ ಅದ್ಭುತ ಅಭಿನಯ ಇರುವ ಈ ಟೀಸರ್ ರಿಲೀಸಾದ ಕೆಲವೇ ಗಂಟೆಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಣೆಯಾಗಿದೆ, ನಿರ್ಮಾಪಕ ವೆಂಕಟ್ ಕೆ. ನಾರಾಯಣ್, ನಟ ಶಿವರಾಜ್ ಕುಮಾರ್ ಹಾಗೂ ನಿರ್ದೇಶಕ ಪವನ್ ಒಡೆಯರ್ ಈ ಮೂವರ ಕಾಂಬಿನೇಶನ್‌ನಲ್ಲಿ ಮೂಡಿಬರುತ್ತಿರುವ ಬೇಲ್ ಚಿತ್ರದ ಟೈಟಲ್ ಹಾಗೂ ಟೀಸರ್ ಗ್ಲಿಂಪ್ಸ್ ಸಾಕಷ್ಟು ಕುತೂಹಲಗಳನ್ನು ಹುಟ್ಟು ಹಾಕಿದೆ.



ಈ ಚಿತ್ರವನ್ನು ವೆಂಕಟ್ ಕೆ. ನಾರಾಯಣ್ ಅವರು ಕೆ.ವಿ.ಎನ್. ಪ್ರೊಡಕ್ಷನ್ ಬ್ಯಾನರ್ ನಡಿ ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಗೋವಿಂದಾಯ ನಮಃ, ಗೂಗ್ಲಿ, ರಣವಿಕ್ರಮ, ನಟಸಾರ್ವಭೌಮ, ರೆಮೋ ಸೇರಿದಂತೆ ಅನೇಕ ಸೂಪರ್ ಹಿಟ್ ಚಲನಚಿತ್ರಗಳನ್ನು ಕನ್ನಡಿಗರಿಗೆ ನೀಡಿರುವ ಪವನ್ ಒಡೆಯರ್ ಅವರು ಬೇಲ್ ಚಿತ್ರದ ಮೂಲಕ ಇದೇ ಮೊದಲಬಾರಿಗೆ ಶಿವರಾಜ್‌ಕುಮಾರ್ ಅವರಿಗೆ ಆಕ್ಷನ್ ಕಟ್ ಹೇಳುತ್ತಿದ್ದು, ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ.

ಈ ಬಗ್ಗೆ ಮಾತನಾಡಿದ ನಿರ್ದೇಶಕ ಪವನ್ ಒಡೆಯರ್, ಇದು ನನ್ನ ಮತ್ತು ಕೆವಿಎನ್ ನಿರ್ಮಾಣ ಸಂಸ್ಥೆಯ ನಿರ್ಮಾಣದಲ್ಲಿ ಮೂಡಿಬರುತ್ತಿರುವ ಪ್ರಥಮ ಚಿತ್ರ. ಶಿವಣ್ಣ ಅಭಿಮಾನಿಗಳು ಹಾಗೂ ಕನ್ನಡ ಚಿತ್ರ ಪ್ರೇಕ್ಷಕರಿಗಾಗಿ ನಾವು ಈ ಚಿತ್ರದಲ್ಲಿ ಬಹಳಷ್ಟು ವಿಶೇಷತೆಗಳನ್ನು ನೀಡುತ್ತಿದ್ದೇವೆ, ಶಿವಣ್ಣ ಅವರೊಂದಿಗೆ ಕೆಲಸ ಮಾಡುವುದು ನನ್ನ ಬಹುದಿನಗಳ ಕನಸಾಗಿದ್ದು, ಆ ಕನಸು ಈ ಚಿತ್ರದ ಮೂಲಕ ಈಡೇರಿದೆ. ಶಿವಣ್ಣ ಅವರು ದಶಕಗಳಿಂದ ಐಕಾನ್ ಆಗಿದ್ದಾರೆ, ಮತ್ತು ಪ್ರೇಕ್ಷಕರು ಈ ಹಿಂದೆಂದೂ ನೋಡದ ರೀತಿಯಲ್ಲಿ ಶಿವರಾಜ್‌ಕುಮಾರ್ ಅವರನ್ನು ತೋರಿಸುತ್ತಿದ್ದೇವೆ. ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಲ್ಲಿ ಬೇಲ್ ಚಿತ್ರದ ಬಹುಪಾಲು ಚಿತ್ರೀಕರಣ ಬೆಂಗಳೂರಿನಲ್ಲಿ ನಡೆಯಲಿದೆ. ಉಳಿದಂತೆ ಮಂಡ್ಯ, ಸಕಲೇಶಪುರ, ಕರ್ನಾಟಕದ ಕರಾವಳಿ ಭಾಗದಲ್ಲಿ, ಅಲ್ಲದೆ ಹೈದರಾಬಾದ್, ಮುಂಬೈ, ಹಿಮಾಚಲ ಪ್ರದೇಶ ಸೇರಿದಂತೆ ಹಲವು ಲೊಕೇಶನ್ ಗಳಲ್ಲಿ ಚಿತ್ರೀಕರಣ ನಡೆಸಲು ಯೋಜನೆ ಹಾಕಿಕೊಳ್ಳಲಾಗಿದೆ. ಶಿವಣ್ಣ ಅವರ ಈಗಿನ ಏಜ್, ಲುಕ್‌ಗೆ ಹೊಂದುವಂತಹ ಪಾತ್ರ ಇದಾಗಿದ್ದು, ಇದರ ಜತೆಗೆ ಒಂದು ಸರ್‌ಪ್ರೈಸ್ ಕೂಡ ಇರಲಿದೆ. ಮುಂದಿನ ವರ್ಷದ ಮೊದಲಾರ್ಧದಲ್ಲಿ ಬೇಲ್ ಚಿತ್ರವನ್ನು ತೆರೆಗೆ ತರುವ ಪ್ಲಾನ್ ಇದೆ ಎಂದು ಹೇಳಿದ್ದಾರೆ. 'ಬೇಲ್' ಒಂದು ವಿಶೇಷವಾದ ಕಾನ್ಸೆಪ್ಟ್ ಒಳಗೊಂಡ ಚಿತ್ರವಾಗಿದೆ, ಪವನ್ ಒಡೆಯರ್ ಅವರಂತಹ ಯಶಸ್ವೀ ಹಾಗೂ ಅನುಭವೀ ಕಥೆಗಾರರೊಂದಿಗೆ ಕೈ ಜೋಡಿಸಿರುವುದು ಮತ್ತು ಶಿವಣ್ಣ ಅವರಂತಹ ಐಕಾನ್ ಜೊತೆಗೆ ಕೆಲಸ ಮಾಡುತ್ತಿರುವುದು ಕೆ.ವಿ.ಎನ್. ಸಂಸ್ಥೆಯ ಹೆಗ್ಗಳಿಕೆಯಾಗಿದೆ, ಪ್ರೇಕ್ಷಕರಿಗೆ ಒಂದು ಅರ್ಥಪೂರ್ಣ ಸಿನಿಮಾವನ್ನು ನೀಡುವ ನಮ್ಮ ಉದ್ದೇಶದೊಂದಿಗೆ ಈ ಚಿತ್ರದ ನಿರ್ಮಾಣಕ್ಕೆ ಕೈ ಹಾಕಿದ್ದೇವೆ, ಪ್ರೇಕ್ಷಕರು ಇಲ್ಲಿಯವರೆಗೆ ನೋಡಿರದ ಹೊಸ ದೃಷ್ಟಿಕೋನದಲ್ಲಿ ನಟ ಶಿವಣ್ಣ ಅವರನ್ನು ತೋರಿಲು ನಾವು ಎದುರು ನೋಡುತ್ತಿದ್ದೇವೆ ಎಂದು ನಿರ್ಮಾಪಕ ವೆಂಕಟ್ ಕೆ. ನಾರಾಯಣ್ ಅವರು ಹೇಳಿದ್ದಾರೆ. ಇನ್ನು ಈ ಚಿತ್ರಕ್ಕೆ ಅಜನೀಶ್ ಬಿ.ಲೋಕನಾಥ್ ಅವರ ಸಂಗೀತ ಸಂಯೋಜನೆ, ವೈದ್ಯ ಎಸ್. ಅವರ ಛಾಯಾಗ್ರಹಣ, ಶಶಾಂಕ್ ನಾರಾಯಣ ಅವರ ಸಂಕಲನ, ಗುಣ ಅವರ ಕಲಾನಿರ್ದೇಶನ ಈ ಚಿತ್ರಕ್ಕಿದೆ.

ಸೈಬರ್ ಕ್ರೈಮ್ ಸುತ್ತ ಗೀಕ್

ಕನ್ನಡ ಚಿತ್ರರಂಗದಲ್ಲಿ ಈವರೆಗೆ ವಿವಿಧ ಬಗೆಯ ಕಥಾಹಂದರವಿರುವ ನೂರಾರ ಸಿನಿಮಾಗಳು ತೆರೆಗೆ ಬಂದು ಹೋಗಿವೆ. ಆದರೆ ಸೈಬರ್ ಕ್ರೈಂ ಜಾನರ್ ಹೊಂದಿರುವ ಸಿನಿಮಾಗಳು ತೀರಾ ವಿರಳ. ಅದರ ಜಾಗವನ್ನು ತುಂಬಲು ಗೀಕ್ ಎಂಬ ಸಿನಿಮಾ ತಯಾರಾಗುತ್ತಿದೆ. ತನ್ನ ಟೈಟಲ್‌ನಿಂದಲೇ ಕುತೂಹಲ ಮೂಡಿಸಿರುವ ಈ ಚಿತ್ರವು, ಸಾಕಷ್ಟು ಗಮನ ಸೆಳೆದಿದೆ. ಹಾಗೆಯೇ ಗೀಕ್ ಎಂಬ ಪದದ ಅರ್ಥವೇನು ಎಂಬುದರ ಕುರಿತು ಚರ್ಚೆ ಸಹ ನಡೆಯುತ್ತಿದೆ. ಯುವ ನಿರ್ದೇಶಕ ಡಿ.ಹರಿಪ್ರಕಾಶ್ ಅವರು ಕಥೆ, ಚಿತ್ರಕಥೆ



ಬರೆದು ಆಕ್ಷನ್ ಕಟ್ ಹೇಳಿರುವ ಈ ಸಿನಿಮಾ ಸದ್ಯ ತನ್ನ ಶೂಟಿಂಗ್ ಮುಗಿಸಿಕೊಂಡು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಬಹಳ ದಿನಗಳ ನಂತರ ನಟ ಪ್ರವೀಣ್ ತೇಜ್ ಅವರು ಈ ಚಿತ್ರದ ಮೂಲಕ ತೆರೆಮೇಲೆ ಬರುತ್ತಿದ್ದಾರೆ. ಚೈತ್ರಾ ಆಚಾರ್ ಚಿತ್ರದ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಈ ಸಿನಿಮಾದ ಫಸ್ಟ್ ಝಲಕ್ ತೋರಿಸಲು ಟೀಸರನ್ನು ಡಿ ಬೀಟ್ಸ್ ಯೂ ಟ್ಯೂಬ್ ಚಾನಲ್ ಮೂಲಕ ಬಿಡುಗಡೆ ಮಾಡಿದೆ ಚಿತ್ರತಂಡ. ಚಂದನವನದ 50ಕ್ಕೂ ಹೆಚ್ಚು ಸೆಲೆಬ್ರಿಟಿಗಳು ಈ ಚಿತ್ರದ ಕಾನ್ಸೆಪ್ಟ್ ಮೆಚ್ಚಿ ಸಿನಿಮಾದ ಟೀಸರನ್ನು ಡಿಜಿಟಲ್ ಲಾಂಚ್ ಮಾಡುವ ಮೂಲಕ ಚಿತ್ರತಂಡಕ್ಕೆ ಸಾಥ್ ನೀಡಿದ್ದಾರೆ. ಇದರಲ್ಲಿ ಪಾತ್ರ ಪರಿಚಯದ ಜತೆಗೆ ಗೀಕ್ ಪದದ ಕುರಿತಾದ ತುಣುಕೊಂದು ಕಾಣಸಿಗುತ್ತದೆ. ಇದೊಂದು ಕಂಟೆಂಟ್ ಇರುವಂಥ ಚೊಕ್ಕ ಸಿನಿಮಾ ಎಂಬುದು ಟೀಸರ್‌ನಲ್ಲಿ ಗೋಚರವಾಗುತ್ತದೆ. ಇತ್ತೀಚೆಗೆ ಮೊಬೈಲ್ ಸಂಬಂಧಿತ ಆಪ್‌ಗಳು ಹಾಗೂ ಡೇಟಾ ದುರುಪಯೋಗಪಡಿಸಿಕೊಳ್ಳುತ್ತಿರುವ ಕುರಿತ ಕಥಾಹಂದರ ಹೊಂದಿರುವ ಸಿನಿಮಾ ಇದಾಗಿದ್ದು, ಇದಕ್ಕೆ ಸೈಬರ್ ಕ್ರೈಂ, ಸಸ್ಪೆನ್ಸ್-ಥ್ರಿಲ್ಲರ್ ಅಂಶವನ್ನು ಸೇರಿಸಲಾಗಿದೆ. ಕಂಟೆಂಟ್ ಜತೆಗೆ ಸಸ್ಪೆನ್ಸ್, ಥ್ರಿಲ್ ನೀಡಬೇಕು ಎಂಬ ನಿಟ್ಟಿನಲ್ಲಿ ಈ ಸಿನಿಮಾ ತಯಾರಾಗಿದೆ. ಬಹುತೇಕ ಬೆಂಗಳೂರಿನ ಸುತ್ತಮುತ್ತ ಈ ಚಿತ್ರದ ಚಿತ್ರೀಕರಣವನ್ನು ನಡೆಸಿದ್ದೇವೆ. ಟೆಕ್ನಿಕಲಿ ಸೌಂಡ್ ಜೋರಾಗಿರಬೇಕು ಎಂಬ ಕಾರಣಕ್ಕೆ ನುರಿತ ತಂತ್ರಜ್ಞರೇ ಸೇರಿಕೊಂಡು ಈ ಚಿತ್ರವನ್ನು ಮಾಡಿದ್ದೇವೆ ಎಂದು ನಿರ್ದೇಶಕ ಹರಿಪ್ರಕಾಶ್ ಹೇಳಿದ್ದಾರೆ. ಮೂಲತಃ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಹರಿಪ್ರಕಾಶ್, ಈ ಹಿಂದೆ ಕಿರುಚಿತ್ರವೊಂದನ್ನು ನಿರ್ದೇಶಿಸಿದ್ದಾರೆ. ಅದಕ್ಕೆ ಸಾಕಷ್ಟು ಮೆಚ್ಚುಗೆ, ಪ್ರಶಸ್ತಿ ಸಹ ಲಭಿಸಿವೆ. ಕಿರುಚಿತ್ರ ಮಾಡಿದ ಅನುಭವ ಹಾಗೂ ಸಿನಿಮಾರಂಗದ ಮೇಲಿನ ಆಸಕ್ತಿಯಿಂದಾಗಿ ಮೊದಲ ಚಿತ್ರದಲ್ಲೇ ಹೊಸತನ್ನೇನೋ ಕೊಡುವ ತುಡಿತ ಅವರಲ್ಲಿದೆ ಎಂಬುದಕ್ಕೆ ಗೀಕ್ ಚಿತ್ರದ ಟೀಸರ್ ಸಾಕ್ಷಿ.



- ಪ್ರವೀಣ್ ತೇಜ್ -ಚೈತ್ರಾ ಆಚಾರ್ ನಟನೆ
- 50 ಸೆಲೆಬ್ರಿಟಿಗಳಿಂದ ಟೀಸರ್ ಅನಾವರಣ

ಪ್ರವೀಣ್ ತೇಜ್, ಚೈತ್ರಾ ಆಚಾರ್, ಕಿರಣ್ ಶ್ರೀನಿವಾಸ್, ವಿರಾನಿಕಾ ಶೆಟ್ಟಿ ಈ ಚಿತ್ರದ ಪ್ರಮುಖ ಭೂಮಿಕೆಯಲ್ಲಿದ್ದಾರೆ. ಎಸ್.ವಿ.ಎಂ. ಪ್ರೊಡಕ್ಷನ್ಸ್ ಹಾಗೂ ಹರಿಪ್ರಕಾಶ್ ಫಿಲಂಸ್ ಬ್ಯಾನರ್ ಅಡಿಯಲ್ಲಿ ಸಂದೀಪ್ ನಾಗರಾಜ್ ಹಾಗೂ ಪ್ರಿಯಾಂಕಾ ಅವರುಗಳು ಜಂಟಿಯಾಗಿ ಈ ಸಿನಿಮಾಕ್ಕೆ ಬಂಡವಾಳ ಹೂಡಿದ್ದಾರೆ. ಯೋಗೀಶ್ ರಾಜ್ ಚಿತ್ರದ ಕಾರ್ಯಕಾರಿ ನಿರ್ಮಾಪಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಕೀರ್ತನ್ ಪೂಜಾರಿ ಅವರ ಛಾಯಾಗ್ರಹಣ, ಜೋ ಕೋಸ್ಟಾ ಅವರ ಸಂಗೀತ ಸಂಯೋಜನೆ, ಶಶಾಂಕ್ ನಾರಾಯಣ್ ಅವರ ಸಂಕಲನ, ಲಿಜು ಪ್ರಭಾಕರ್ ಅವರ ಡಿಐ ಹಾಗೂ ಅರುಣ್ ಅವರ ಸೌಂಡ್ ಡಿಸೈನಿಂಗ್ ಈ ಚಿತ್ರಕ್ಕಿದೆ.

ಅನಂತ ಪದ್ಮನಾಭನ ಬೆಡಗಿ ಅಂಜಲಿ ಅನೀಶ್



ಸಂಭಾಷಣೆಗಾರರು, ಸಾಹಿತಿಗಳು ನಿರ್ದೇಶನಕ್ಕಿಳಿಯುವುದು ಸಾಮಾನ್ಯ, ಬರವಣಿಗೆ ಗೊತ್ತಿರೋರಿಗೆ ನಿರ್ದೇಶನ ಮಾಡುವುದು ಅಂಥಾ ಕಷ್ಟವೇನಲ್ಲ, ಈಗಾಗಲೇ ಎಂ.ಎಸ್. ರಮೇಶ್, ರಾಮ್ ನಾರಾಯಣ್, ನಾಗೇಂದ್ರ ಪ್ರಸಾದ್, ಆನಂದಪ್ರಿಯಾ ಸೇರಿದಂತೆ ಹಲವಾರು ಸಾಹಿತಿಗಳು ನಿರ್ದೇಶಕರಾಗಿ ತಮ್ಮ ಛಾಪು ಮೂಡಿಸಿದ್ದಾರೆ. ಇದೀಗ ಅವರ ಸಾಲಿಗೆ ಮತ್ತೊಂದು ಸೇರ್ಪಡೆ ಎಂದರೆ ಪ್ರಶಾಂತ್ ರಾಜಪ್ಪ, ಶರಣ್ ಅಭಿನಯದ ಅಧ್ಯಕ್ಷ, ವಿಕ್ಟರಿ, ರನ್ನ, ಪೊಗರು, ತೀರ್ಥರೂಪ ತಂದೆಯವರಿಗೆ, ಅಣ್ಣ ಫ್ರಂ ಮೆಕ್ಸಿಕೋ ಸೇರಿದಂತೆ ಹಲವಾರು ಸಿನಿಮಾಗಳಿಗೆ ಡೈಲಾಗ್ ರೈಟರ್ ಆಗಿ ಸೈ ಎನಿಸಿಕೊಂಡಿರುವ ಸಾಹಿತಿ, ಸಂಭಾಷಣೆಗಾರ ಪ್ರಶಾಂತ್ ರಾಜಪ್ಪ ಅವರು ನಿರ್ದೇಶನಕ್ಕಿಳಿದಿದ್ದಾರೆ, ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಪ್ರಥಮ ಚಿತ್ರದ ಹೆಸರು ಅನಂತ ಪದ್ಮನಾಭ. ಈ ಸಿನಿಮಾದಲ್ಲಿ ರಾಮನ ಅವತಾರ ಖ್ಯಾತಿಯ ನಟ ರಿಷಿ ಹಾಗೂ ಹಿರಿಯ ಕಲಾವಿದ ಪ್ರಕಾಶ್ ಬೆಳವಾಡಿ ಅವರುಗಳು ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಈಗಾಗಲೇ ವಿಶೇಷ ಟೈಟಲ್ ವಿಡಿಯೋ ಕಂಟೆಂಟ್ ಬಿಡುಗಡೆ ಮಾಡುವ ಮೂಲಕ ಸಿನಿಮಾ ಬಗ್ಗೆ ಕ್ಯೂರಿಯಾಸಿಟಿ ಮೂಡಿಸಿರುವ ನಿರ್ದೇಶಕ ಪ್ರಶಾಂತ್ ರಾಜಪ್ಪ ಅವರು, ಇದೀಗ ಚಿತ್ರದ ನಾಯಕಿಯ ಆಯ್ಕೆ ಬಗ್ಗೆ ಮತ್ತೊಂದು ವೀಡಿಯೋ ರಿಲೀಸ್ ಮಾಡಿದ್ದಾರೆ. ರಿಷಿ ನಾಯಕನಾಗಿ ಅಭಿನಯಿಸುತ್ತಿರುವ ಅನಂತ ಪದ್ಮನಾಭ ಸಿನಿಮಾದಲ್ಲಿ ಪ್ರಕಾಶ್ ಬೆಳವಾಡಿ ಅವರದ್ದು ವಿಶೇಷ ಪಾತ್ರ. ಇನ್ನು ಈ ಚಿತ್ರದಲ್ಲಿ ನಾಯಕಿಯಾಗಿ ಬೆಡಗಿ ಅಂಜಲಿ ಅನೀಶ್ ಅವರು ಕಾಣಿಸಿಕೊಂಡಿದ್ದಾರೆ.

ಈ ಚಿತ್ರಕ್ಕಾಗಿ ಎರಡು ಜನರೇಷನ್ ಬಗ್ಗೆ ಹೇಳುವ ಕಾನ್ಸೆಪ್ಟ್ ರೆಡಿ ಮಾಡಿಕೊಂಡಿರುವ ನಿರ್ದೇಶಕರು ಈ ಕಥೆಯಲ್ಲಿ ಜೀವನದ ಮೌಲ್ಯಗಳ ಬಗ್ಗೆಯೂ ಹೇಳಿದ್ದಾರಂತೆ. ವಿಭಿನ್ನ ಕಾಮಿಡಿ ಡ್ರಾಮಾ ಒಳಗೊಂಡಿರೋ ಅನಂತ ಪದ್ಮನಾಭ ಸಿನಿಮಾವನ್ನ ಅಮ್ರೇಜ್ ಸೂರ್ಯವಂಶಿ ಅವರು ನಿರ್ಮಾಣ ಮಾಡುತ್ತಿದ್ದಾರೆ. ಅನಂತ ಪದ್ಮನಾಭ ಚಿತ್ರತಂಡ ಈಗಾಗಲೇ ಮಾತಿನ ಭಾಗದ ಚಿತ್ರೀಕರಣ ಮುಗಿಸಿಕೊಂಡಿದ್ದು, ಇದೀಗ ಚಿತ್ರದ ನಾಯಕಿಯನ್ನು ಪರಿಚಯಿಸಿದೆ.

ಅನಂತ ಪದ್ಮನಾಭ ಚಿತ್ರಕ್ಕೆ ಬೆಂಗಳೂರು ಅಲ್ಲದೆ ಮಲೆನಾಡಿನ ಸಾಗರ, ತೀರ್ಥಹಳ್ಳಿಯ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಪ್ರಶಾಂತ್ ರಾಜಪ್ಪ ಅವರೇ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಅನಂತ ಪದ್ಮನಾಭ ಸಿನಿಮಾಗೆ ಅಶ್ವಿನ್ ಪಿ. ಕುಮಾರ್ ಅವರು ಸಂಗೀತ ಸಂಯೋಜನೆ ಮಾಡಿದ್ದು, ವೀನಸ್ ನಾಗರಾಜ್‌ಮೂರ್ತಿ ಅವರು ಕ್ಯಾಮೆರಾ ವರ್ಕ್ ನಿಭಾಯಿಸಿದ್ದಾರೆ. ನಾಯಕಿ ಅಂಜಲಿ ಅನೀಶ್ ಅವರನ್ನು ಪರಿಚಯಿಸಿರುವ ಅನಂತ ಪದ್ಮನಾಭ ಚಿತ್ರತಂಡ ಆದಷ್ಟು ಬೇಗನೇ ಕೆಲಸಗಳನ್ನು ಮುಗಿಸಿಕೊಂಡು ಚಿತ್ರವನ್ನು ತೆರೆಗೆ ತರಲಿದೆ.





ಪೆದ್ದಿಯಲ್ಲಿ ಗೌರ್ ನಾಯ್ಡು ಆದ ಶಿವಣ್ಣ

ಗ್ಲೋಬಲ್‌ಸ್ಟಾರ್ ರಾಮ್‌ಚರಣ್ ನಟನೆಯ ಬಹುನಿರೀಕ್ಷಿತ ಪೆದ್ದಿ ಸಿನಿಮಾ ಜೂನ್ 4ರಂದು ಅದ್ದೂರಿಯಾಗಿ ಬಿಡುಗಡೆಯಾಗ್ತಿದೆ. ಈಗಾಗಲೇ ರಿಲೀಸ್ ಆಗಿರುವ ಈ ಚಿತ್ರದ ಒಂದಷ್ಟು ಗ್ಲಿಂಪ್ಸ್‌ನಲ್ಲಿ ರಾಮ್‌ಚರಣ್ ಅವರ ಅವತಾರ ನೋಡಿದ ಫ್ಯಾನ್ಸ್ ಎಕ್ಸೈಟ್ ಆಗಿದ್ದಾರೆ. ಇನ್ನು ಪೆದ್ದಿ ಚಿತ್ರದಲ್ಲಿ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅವರು ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ, ಇದೀಗ ಈ ಚಿತ್ರದಲ್ಲಿ ಶಿವಣ್ಣ ಅವರ ಲುಕ್ ಹೇಗಿರಲಿದೆ ಎಂಬ ಕುತೂಹಲಕ್ಕೆ ತೆರೆ ಬಿದ್ದಿದೆ. ಗೌರ್‌ನಾಯ್ಡು ಎಂಬ ಪಾತ್ರದಲ್ಲಿ ನಟ ಶಿವಣ್ಣ ಅವರು ಅಭಿನಯಿಸಿದ್ದಾರೆ. ಕುಸ್ತಿ ಅಖಾಡದಲ್ಲಿ ಅವರು ಕಾಣಿಸಿಕೊಂಡಿರುವುದು ಚಿತ್ರದ ಮೇಲಿನ ನಿರೀಕ್ಷೆಯನ್ನು ಹೆಚ್ಚು ಮಾಡಿದೆ. ಮೇಕಿಂಗ್ ವಿಡಿಯೋದಲ್ಲಿ ಶಿವಣ್ಣ-ರಾಮ್‌ಚರಣ್ ಒಟ್ಟಿಗೆ ಕಾಣಿಸಿಕೊಂಡಿದ್ದು, ಅಭಿಮಾನಿಗಳು ಇವರಿಬ್ಬರನ್ನು ನೋಡಿ ಥ್ರಿಲ್ ಆಗಿದ್ದಾರೆ. ಈ ಹಿಂದೆ ಉಪ್ಪೆನ ಸಿನಿಮಾವನ್ನು ನಿರ್ದೇಶಿಸಿದ್ದ ಬುಚ್ಚಿಬಾಬು ಸನಾ ಅವರು ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಪೆದ್ದಿ ಸಿನಿಮಾದಲ್ಲಿ ರಾಮ್‌ಚರಣ್ ಜತೆ ಬಾಲಿವುಡ್ ನಟಿ ಜಾನ್ವಿ ಕಪೂರ್ ನಾಯಕಿಯಾಗಿ ನಟಿಸುತ್ತಿದ್ದಾರೆ. ಹ್ಯಾಟ್ರಿಕ್ ಹೀರೋ ಶಿವರಾಜಕುಮಾರ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇನ್ನುಳಿದಂತೆ, ಜಗಪತಿಬಾಬು, ದಿವೇಂದು ಶರ್ಮಾ ಮುಂತಾದವರು ಇತರೆ ಪಾತ್ರಗಳಲ್ಲಿ ನಟಿಸಿದ್ದಾರೆ. ಈ ಚಿತ್ರಕ್ಕೆ ಎ.ಆರ್.ರೆಹಮಾನ್ ಅವರು ಸಂಗೀತ ನಿರ್ದೇಶನ ಮಾಡುತ್ತಿದ್ದು, ವೃದ್ಧಿ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ವೆಂಕಟ ಸತೀಶ್ ಕಿಲಾರು ಅವರು ನಿರ್ಮಾಣ ಮಾಡುತ್ತಿದ್ದಾರೆ. ಮೈತ್ರಿ ಮೂವೀ ಮೇಕರ್ಸ್ ಮತ್ತು ಸುಕುಮಾರ್ ರೈಟಿಂಗ್ಸ್ ಬ್ಯಾನರ್‌ಗಳು ಈ ಚಿತ್ರಕ್ಕೆ ಬೆಂಬಲವಾಗಿ ನಿಂತಿವೆ. ಆರ್ ರತ್ನವೇಲು ಅವರ ಛಾಯಾಗ್ರಹಣ, ನವೀಲ್ ನೂಲಿ ಅವರ ಸಂಕಲನ ಪೆದ್ದಿ ಚಿತ್ರಕ್ಕಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26